ಪಂಪ ರಾಮಾಯಣ



ವಿದ್ವಾನ್ ರಾಮಚಂದ್ರ ಉಚ್ಚಿಲ್

ಪಂಪ ರಾಮಾಯಣ

ಗದ್ಯ ಕಥಾನಕ

(ನಾಗಚಂದ್ರ ಕವಿಯ ಹಳಗನ್ನಡ ಕಾವ್ಯ ರಾಮಚಂದ್ರ ಚರಿತ ಪುರಾಣದ ಗದ್ಯರೂಪ)

ವಿದ್ವಾನ್ ರಾಮಚಂದ್ರ ಉಚ್ಚಿಲ್

ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಪ್ರಕಾಶಕರು

ಕಲಾಗಂಗೋತ್ರಿ ಯಕ್ಷಗಾನ ಅಧ್ಯಯನ ಕೇಂದ್ರ (ರಿ.)

ಅಂಚೆ : ಸೋಮೇಶ್ವರ, ಉಚ್ಚಿಲ

ಮಂಗಳೂರು, ದ.ಕ.

PAMPA RAMAYANA:

Prose form of Nagachandra's Poet work - Ramachandra Charita Puranam - by Late Vidwan Ramachandra Uchil.

Edited by Dr. Shrinivasa Havanoor.

Published by 'Kalagangothri' Yakshagana Adhyayana Kendra (R), P.O. Someshwar, Uchil, Mangalore - D.K. - 575 023.

First Impression : 2007

Pages : xxii + 89

Price : Rs. 45/-

Cover Design : John Chandran, Mangalore.
Type set at: Prasadhan Computers, Bharathinagar, Bejai, Mangalore.
Printed at : Manorama Offset Printers, Bejai, Mangalore.

ಮುನ್ನುಡಿ

ದಿವಂಗತ ರಾಮಚಂದ್ರ ಉಚ್ಚಿಲರು ೧೯೪೭ರಿಂದ ನನಗೆ ಆತ್ಮೀಯ ಪರಿಚಿತರು. ಅಷ್ಟೊಂದು ದೀರ್ಘ ಕಾಲದ ಸ್ನೇಹವನ್ನು ಅವರೂ ನಾನೂ ಏಕಪ್ರಕಾರವಾಗಿ ಉಳಿಸಿಕೊಂಡಿದ್ದೆವು. ಮುಂಬಯಿಯ 'ನುಡಿ' ವಾರಪತ್ರಿಕೆಯ ಐದು ಜನ ಅಧ್ವರ್ಯುಗಳಲ್ಲಿ ಅವರೂ ಒಬ್ಬರಾಗಿದ್ದ ಕಾಲವದು.

ಇಸವಿ ಸನ್ ೧೯೨೦ರಲ್ಲಿ ಜನಿಸಿದ ರಾಮಚಂದ್ರ ಉಚ್ಚಿಲರು ಐವತ್ತು ವರ್ಷಕ್ಕೆ ಮೇಲ್ಪಟ್ಟು, ಕನ್ನಡದ ಕಾರಣದಿಂದಾಗಿ ಮತ್ತು ಇನ್ನೂ ಹಲವಾರು ರೀತಿಯಲ್ಲಿ ಸೇವೆ ಸಲ್ಲಿಸಿದವರು. 'ನುಡಿ' ಪತ್ರಿಕೆಯಲ್ಲಿ ಮೊದಲ ಬಾರಿಗೆ ಆಟೋಟದ ಪುಟವನ್ನು (Sports page) ಆರಂಭಿಸಿದರು. (೧೯೪೬). ಆ ಮುಂಚೆ ಒಳನಾಡಿನ ಯಾವ ಕನ್ನಡ ಪತ್ರಿಕೆಯಲ್ಲಿಯೂ ಆ ಕಾಲಮ್ ಇರಲಿಲ್ಲ. ಮುದ್ದಣ ಹಾಗೂ ಯಕ್ಷಗಾನ - ಈ ವಿಷಯಗಳಲ್ಲಿಯಂತೂ ಅವರಲ್ಲಿ ಅನೂಹ್ಯ ರೀತಿಯ ಅಭಿಮಾನವಿದ್ದಿತು. ಮುಂಬಯಿಯಲ್ಲಿ ಅವರು ಇದ್ದಷ್ಟು ವರ್ಷಗಳಲ್ಲಿಯೂ ರಾತ್ರಿ ಶಾಲೆಗಳಲ್ಲಿ ಕನ್ನಡವನ್ನು ಬೋಧಿಸಿದರು. ಕನ್ನಡದ ಬಗ್ಗೆ ಮಕ್ಕಳಲ್ಲಿ ಅಭಿಮಾನವನ್ನು ಪ್ರೇರಿಸಿದರು. ಮುದ್ದಣ ಜಯಂತಿಯನ್ನು ಪ್ರತಿವರ್ಷವೂ ಅವರಿಂದಲೇ ಮಾಡಿಸುತ್ತಿದ್ದರು. ಸ್ವಸ್ಥಾನಕ್ಕೆ ಬಂದ ಮೇಲೆ ಸ್ಥಳೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಇಂಥ ಧೀಮಂತ ವ್ಯಕ್ತಿಗೆ ದಿನಾಂಕ ೬.೧೧.೨೦೦೫ರಂದು ಅವರ ಹುಟ್ಟೂರಲ್ಲಿ ವಿಶೇಷ ಸನ್ಮಾನ ಸಮಾರಂಭ ಏರ್ಪಟ್ಟಿತ್ತು. ಅಂದು 'ವಜ್ರಕುಸುಮ' ಎಂಬ ಗೌರವಗ್ರಂಥವನ್ನು ಅವರಿಗೆ ಅರ್ಪಿಸಲಾಯಿತು. ಅದಾದ ಕೆಲವೇ ತಿಂಗಳಲ್ಲಿ ದಿನಾಂಕ ೧೫.೮.೨೦೦೬ರಂದು ಉಚ್ಚಿಲರು ಕಣ್ಣು ಮುಚ್ಚಿದರು. ಆದರೆ ಅವರು ಮಾಡಿದ ಕನ್ನಡದ ಹಾಗೂ ಸಾಮಾಜಿಕ ಕೈಂಕರ್ಯಗಳು ಮುಂದಿನ ಹಲವಾರು ದಶಕಗಳವರೆಗಾದರೂ ಮರೆಯದಂತಹವು.

ಮುಂಬಯಿಗೆ ಅವರು ಬಂದದ್ದು ಹೊಟ್ಟೆಪಾಡಿಗಾಗಿ. ವಿದೇಶೀಯ ಬ್ಯಾಂಕ್ ಒಂದರಲ್ಲಿ ನೌಕರಿ. ಆ ಸುರುವಿನ ದಿನಗಳಲ್ಲಿ ಮದ್ರಾಸದ ಕನ್ನಡ ವಿದ್ವಾನ್ ಪರೀಕ್ಷೆಗೆ ಓದಲೆಂದರು. ಆಗ ಅವರಿಗೆ ಅಂಟಿಕೊಂಡ ಹಳಗನ್ನಡ ಕಾವ್ಯದ ಆಸ್ಥೆಯು ಅನೇಕ ಪ್ರೌಢ ಕಾವ್ಯಗಳನ್ನು ಆಳವಾಗಿ ಅಭ್ಯಸಿಸುವಂತೆ ಪ್ರೇರಿಸಿತು. ಪಂಪ, ಕುಮಾರವ್ಯಾಸ ಹಾಗೂ ಮುದ್ದಣ ಇವರ ಕಾವ್ಯಗಳನ್ನಂತೂ ಅವರು ಕರತಲಾಮಲಕವಾಗಿ ಮಾಡಿಕೊಂಡಿದ್ದರು. ಹಳಗನ್ನಡ ವ್ಯಾಕರಣದಲ್ಲಿಯೂ ಎತ್ತಿದ ಕೈ.

ಆದರೆ ತಮ್ಮ ವ್ಯಾಸಂಗದಲ್ಲಿ ಕಂಡು ಹಿಡಿದ ಹೊಸ ಅಂಶಗಳನ್ನು ಕುರಿತು ಲೇಖ ಬರೆಯಲು ಮನಸ್ಸು ಮಾಡಿದವರಲ್ಲ. ನನ್ನಂಥವರ ಒತ್ತಾಯದಿಂದ ಕೆಲವನ್ನು ಬರೆದದ್ದಿದೆ. 'ಓವೋ ಕಾಲಪುರುಷಂಗೆ ಗುಣಮಣಮಿಲ್ಲಂ' ಎಂದು ಮುದ್ದಣನು ತನ್ನ ರಾಮಾಶ್ವಮೇಧವನ್ನು ಆರಂಭಿಸಿದನಷ್ಟೇ. ' ಗುಣಮಣಮಿಲ್ಲಂ', 'ಶಬ್ದಮಣಿದರ್ಪಣ'ದ ಮೂಲೆಯೊಂದರಲ್ಲಿ ಹುದುಗಿದ್ದ ವಿಶಿಷ್ಟ ಪ್ರಯೋಗವದು- ಎಂದು ತೋರಿಸಿದರು. ಕರ್ನಾಟಕ ಸರಕಾರವು ಅನೇಕ ವರ್ಷಗಳ ಹಿಂದೆ ೨ ರೂ. ಬೆಲೆಗೆ 'ಕುಮಾರವ್ಯಾಸ ಭಾರತ'ವನ್ನು ಸಮಗ್ರವಾಗಿ ಪ್ರಕಟಿಸಿತಷ್ಟೆ. ಅದರಲ್ಲಿಯ ತಪ್ಪು ತಡೆಗಳಿಂದ, ಮತ್ತು ಕೈಬಿಟ್ಟ ಭಾಗಗಳಿಂದ ಕಾವ್ಯಕ್ಕೆ ಆದ ಅನ್ಯಾಯವನ್ನು, ಸಂಪಾದಕರೆಂದು ಹಿರಿಯ ಸಾಹಿತಿಗಳಿದ್ದರೂ ಗಣನೆಗೆ ತಾರದೇ ಕಟುವಾಗಿ ವಿಮರ್ಶಿಸಿ ಲೇಖಗಳನ್ನು ಬರೆದರು.

"ಪಂಪ ರಾಮಾಯಣವು, ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿದ್ದು ಅದರ ಕಥಾಸಾರವಾದರೂ ಸಾಮಾನ್ಯ ವಾಚಕನಿಗೆ ಗೊತ್ತಾಗಬೇಕು. ಅದರಿಂದ ಕಾವ್ಯದ ರಸಾಸ್ವಾದನೆಗೆ ಸಹಾಯವಾಗುತ್ತದೆ. ಇಲ್ಲವಾದರೆ 'ಇದೆಂಥ ರಾಮಾಯಣ?' ಎಂಬ ಅಪದೃಷ್ಟಿಗೆ ಕಾರಣವಾಗಬಾರದು" ಎಂದು ಯೋಚಿಸಿ ಕನ್ನಡದ ಒಬ್ಬ ಮಹಾನ್ ಕವಿಯ ಪ್ರೌಢ ಕಾವ್ಯದ ಮೇಲ್ಮೆಯನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಅದನ್ನು ಗದ್ಯದಲ್ಲಿ ಬರೆದರು. ಆಮೇಲೆ ಮರೆತು ಬಿಟ್ಟಿದ್ದರು!

ನಿವೃತ್ತರಾಗಿ ಅವರು ಸೋಮೇಶ್ವರ ಉಚ್ಚಿಲ ಸ್ವಗ್ರಾಮದಲ್ಲಿ ವಾಸಿಸುತ್ತಿದ್ದಾಗ ನಾನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗದಲ್ಲಿದ್ದೆ. ಮೇಲಿಂದ ಮೇಲೆ ಭೆಟ್ಟಿಯಾಗುತ್ತಿದ್ದೆವು. ಸಾಹಿತ್ಯಕ್ಕೆ ಸಂಬಂಧಿಸಿದ, ವಿಶೇಷತಃ ಯಕ್ಷಗಾನ ಪ್ರಸಂಗಗಳು ಹಾಗೂ ಅದರ ಕಲಾಂಶದ ಬಗ್ಗೆ ಇದಮಿತ್ಥಂ ರೀತಿಯಲ್ಲಿ ಹೇಳುತ್ತಿದ್ದರು. ಅನೇಕ ರೀತ್ಯಾ ಅವು ನಾವೀನ್ಯದಿಂದ ಕೂಡಿದವುಗಳಾಗಿದ್ದವು. ಆದರೆ ಪಟ್ಟು ಹಿಡಿದು ಲೇಖ ಬರೆಯುವ ಸ್ವಭಾವದವರಲ್ಲ. "ನುಡಿ ಪತ್ರಿಕೆಗೆ ವಾರವಾರವೂ ಬರೆಯುತ್ತಿದ್ದಿರಲ್ಲ?" ಎಂದು ಆಪ್ತ ಮಿತ್ರರು ಆಕ್ಷೇಪಿಸಿದಾಗ ಮುಂಬಯಿಯ ಕನ್ನಡ ವಾರಪತ್ರಿಕೆಯ - 'ಕರ್ನಾಟಕ ಮಲ್ಲ'ಕ್ಕೆ ಈಚೆಗೆ ಅಂಕಣವನ್ನು ಬರೆಯತೊಡಗಿದ್ದರು.

ಆದರೆ ಈ ಪಂಪ ರಾಮಾಯಣ? ಅದನ್ನು ಹೊರ ತೆಗೆಯಿಸಿ, ಒಂದಿಷ್ಟು ಕೈಯಾಡಿಸಬೇಕೆಂದು ಡಾ. ನಾ. ದಾಮೋದರ ಶೆಟ್ಟಿಯವರೂ ನಾನೂ ಕಾಡಿ ಬೇಡಿದೆವು. ಎಷ್ಟೆಂದರೂ ೮೫ ದಾಟಿದ ಇಳಿವಯಸ್ಸು. ಆದರೂ ನಮ್ಮನ್ನು ಆಕ್ಷೇಪಿಸುತ್ತ ಆ ಕೆಲಸವನ್ನು ಮಾಡಿ ಮುಗಿಸಿದರು.

ಡಾ. ಎಸ್. ವಿ. ಸುಜಾತಾ ನನ್ನ ಆತ್ಮೀಯ ಪರಿಚಯದವರಲ್ಲಿ ಒಬ್ಬರು. ಇಂಥದೇನಾದರೂ ಕೆಲಸ ಹೇಳಿದರೆ ಶ್ರದ್ಧೆಯಿಂದ ಮತ್ತು ಸಮಯಕ್ಕೆ ಸರಿಯಾಗಿ ಅದನ್ನು ಮುಗಿಸಬೇಕೆನ್ನುವ ಪ್ರವೃತ್ತಿಯವರು. "ನೀವು ಈ ಗ್ರಂಥಕ್ಕೆ ಪ್ರಸ್ತಾವನೆ ಬರೆಯಬೇಕು" ಎಂದು

ಕೇಳಿಕೊಂಡೆ. ತಡವಿಲ್ಲದೆ ಒಪ್ಪಿಕೊಂಡು ಸಮರ್ಪಕವಾಗಿ ಮಾಡಿಕೊಟ್ಟಿದ್ದಾರೆ; ಕವಿ ಪರಿಚಯದ ಪ್ರಸ್ತಾವನೆಯನ್ನೂ ಬರೆದಿದ್ದಾರೆ.

ಚ. ರಾ. ಅವರು ಬದುಕಿದ್ದಾಗಲೇ ಈ ಪಂಪ ರಾಮಾಯಣ ಸಾರವನ್ನು ಹೊರ ತರುವುದಾಗಿ ಅವರಿಗೆ ಮಾತು ಕೊಟ್ಟಿದ್ದೆ. ಅದು ಕೈಗೂಡಲಿಲ್ಲ. ಆಮೇಲಾದರೂ ಕನ್ನಡಿಗರ ಗಮನಕ್ಕೆ ಅದನ್ನು ತರಬೇಕೆಂದದ್ದು ಕೈಗೂಡಿತೆಂಬ ಸಮಾಧಾನವಿದೆ.

ಡಾ. ಶ್ರೀನಿವಾಸ ಹಾವನೂರ

'ಆಶ್ರಯ' ಅಪಾರ್ಟ್‌ಮೆಂಟ್,
ನಂ. 36, ವಿನಾಯಕ ಲೇಔಟ್,
ವಿಜಯನಗರ III,
ಬೆಂಗಳೂರು - 40 (ಫೋನ್ : 23384529)

ಪ್ರಸ್ತಾವನೆ

ಕವಿ, ಕಾವ್ಯ ವಿಚಾರ

ನಾಗಚಂದ್ರ ೧೧ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರ ಆಶ್ರಯದಲ್ಲಿದ್ದ ಕವಿ. ತನ್ನ ಕೃತಿಗಳಲ್ಲಿ ತನ್ನ ಸ್ಥಳ, ಕಾಲಗಳ ಬಗ್ಗೆ ಏನೂ ಹೇಳಿಕೊಂಡಿಲ್ಲ. ಆದರೆ ಕವಿ ಸ್ತುತಿಸಿರುವ ಜೈನ ಮುನಿಗಳ ಪರಂಪರೆ, ಕವಿಯ ಹಾಗೂ ಕವಿಯ ಮನೆತನದವರಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ದೊರಕುವ ಉಲ್ಲೇಖಗಳು, ಕವಿಯ ಬಗ್ಗೆ ಮುಂದಿನ ಕವಿಗಳ ಕಾವ್ಯಗಳಲ್ಲಿ ದೊರಕುವ ಪ್ರಶಂಸೆ ಇತ್ಯಾದಿಗಳನ್ನು ಆಧರಿಸಿ ಡಾ. ಹಂಪನಾ ಅವರು ಕವಿಯ ಜನನ ೧೦೪೪, ಮಲ್ಲಿನಾಥಪುರಾಣದ ರಚನೆ ೧೦೭೦, ರಾಮಚಂದ್ರಚರಿತ ಪುರಾಣದ ರಚನೆ ೧೦೮೫, ಮರಣ ಸು. ೧೧೧೦ ಎಂದು ನಿರ್ಣಯಿಸಿದ್ದಾರೆ.*

ನಾಗಚಂದ್ರನ ಸ್ಥಳವು ವಿಜಾಪುರದ ಸುತ್ತಮುತ್ತಲ ಪ್ರದೇಶವಾಗಿದ್ದಿತು. ಆತ ಪ್ರಸಿದ್ಧನಾಗುವವರೆಗೆ ಬದುಕಿದ್ದುದು ಪೊಟ್ಟಳಗೆರೆಯಲ್ಲಿ (ಈಗಿನ ಹೈದರಾಬಾದ್‌ನ ಹತ್ತಿರ). ಈ ಪ್ರದೇಶವು ಆದಿಕವಿ ಪಂಪನು ಬದುಕಿದ್ದ ಪ್ರದೇಶದ ವ್ಯಾಪ್ತಿಯ ಅಂಚಿನಲ್ಲಿರುವುದರಿಂದ ಹಾಗೂ ಪಂಪ ಮತ್ತು ನಾಗಚಂದ್ರ ಒಂದೇ ಗೋತ್ರಕ್ಕೆ ಸೇರಿದವರಾಗಿರುವುದರಿಂದ ಇಬ್ಬರೂ ಸಮೀಪ ಬಂಧುಗಳೂ ಆಗಿರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ನಾಗಚಂದ್ರ ತನ್ನನ್ನು ಅಭಿನವ ಪಂಪ ಎಂದು ಕರೆದುಕೊಂಡಿರುವುದು ಅರ್ಥಪೂರ್ಣವೆನ್ನಿಸುತ್ತದೆ. ಕವಿ ತಾನು ಬದುಕಿದ್ದ ಕಾಲದಲ್ಲೇ ತನ್ನ ಹೆಸರಿಗಿಂತ ಅಭಿನವ ಪಂಪನೆಂಬ ಹೆಸರಿನಿಂದಲೇ ಖ್ಯಾತನಾಗಿದ್ದು ಇಂದಿಗೂ ಅದೇ ಉಳಿದುಕೊಂಡು ಬಂದಿದೆ. ಅವನ ರಾಮಚಂದ್ರ ಚರಿತಪುರಾಣವು ಪಂಪರಾಮಾಯಣ ಎಂದೇ ಪ್ರಸಿದ್ಧವಾಗಿದೆ.

ನಾಗಚಂದ್ರನಿಗೆ ಹಲವಾರು ಬಿರುದುಗಳಿದ್ದವು - ಚತುರ ಕವಿಜನಾಸ್ಥಾನರತ್ನಪ್ರದೀಪ, ಭಾರತೀಕರ್ಣಪೂರ, ಕವಿತಾಮನೋಹರ, ಸಾಹಿತ್ಯವಿದ್ಯಾಧರ, ಸಾಹಿತ್ಯ ಸರ್ವಜ್ಞ, ಸೂಕ್ತಿಮುಕ್ತಾವತಂಸ ಇತ್ಯಾದಿ.

---

* ನಾಗಚಂದ್ರನ ಕಾಲ, ಸ್ಥಳ - ಡಾ. ಹಂಪನಾ - ಅನುಗ್ರಹ ಪ್ರಕಾಶನ, ೧೯೭೮

ನಾಗಚಂದ್ರನ ಕೃತಿಗಳು ಎರಡು. ಮೊದಲನೆಯದು ಮಲ್ಲಿನಾಥ ಪುರಾಣ. ೧೯ನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆ ಈ ಕಾವ್ಯದ ವಸ್ತು. ೧೪ ಆಶ್ವಾಸಗಳ ಚಂಪೂಕಾವ್ಯ. ಮಲ್ಲಿನಾಥ ತೀರ್ಥಂಕರರ ಮೂರು ಭವಗಳ ಕಥೆ, ಪಂಚಕಲ್ಯಾಣಗಳ ವರ್ಣನೆ ಸಾಂಪ್ರದಾಯಿಕವಾಗಿದೆ.

ರಾಮಚಂದ್ರಚರಿತಪುರಾಣವು ಶ್ರೀರಾಮನ ಕಥೆಯನ್ನು ವರ್ಣಿಸುವ ಕಾವ್ಯ. ೧೬ ಆಶ್ವಾಸಗಳಿಂದ ಕೂಡಿದ ಚಂಪೂ ಗ್ರಂಥ. ಕನ್ನಡದಲ್ಲಿ ದೊರಕಿರುವ ಜೈನ ರಾಮಾಯಣಗಳಲ್ಲಿ ಇದೇ ಮೊದಲನೆಯದು. ಹಿರಿದಾಗಿರುವ ರಾಮಕಥೆಯನ್ನು ಸಂಗ್ರಹವಾಗಿ ಹೇಳಿದ್ದೇನೆ ಎಂದು ಕವಿ ತನ್ನ ಕಾವ್ಯದಲ್ಲಿ ಹೇಳಿಕೊಂಡಿದ್ದಾನೆ. ೬೩ ಜನ ತ್ರಿಷಷ್ಟಿಶಲಾಕಾಪುರುಷರ ವರ್ಗಕ್ಕೆ ಸೇರುವ ಬಲದೇವ, ವಾಸುದೇವ ಮತ್ತು ಪ್ರತಿವಾಸುದೇವರಲ್ಲಿ ರಾಮ, ಲಕ್ಷ್ಮಣ ಮತ್ತು ರಾವಣರು ಎಂಟನೆಯವರು. ೨೦ನೆಯ ತೀರ್ಥಂಕರರಾದ ಮುನಿಸುವ್ರತರ ತೀರ್ಥಕಾಲದಲ್ಲಿ ಇದ್ದವರು. ಇವರ ಕಥೆಯನ್ನು ನಿರೂಪಿಸುವಲ್ಲಿ ಕವಿ ಜೈನಸಂಪ್ರದಾಯವನ್ನು ಅನುಸರಿಸಿದ್ದಾನೆ. ಪ್ರಮುಖವಾಗಿ ವಿಮಲಸೂರಿಯ ಪ್ರಾಕೃತ ಕಾವ್ಯ 'ಪಉಮಚರಿಯ' ಹಾಗೂ ಅದನ್ನನುಸರಿಸಿ ರಚಿತವಾಗಿರುವ ರವಿಷೇಣನ ಸಂಸ್ಕೃತ 'ಪದ್ಮಪುರಾಣ' ಕಾವ್ಯಗಳನ್ನು ಅನುಸರಿಸಿದ್ದಾನೆ. ಆದರೆ ಕಥಾವಿವರಗಳು, ಸನ್ನಿವೇಶಗಳು ಪಾತ್ರಗಳ ವ್ಯಕ್ತಿತ್ವ ಇವುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಸ್ವಂತಿಕೆಯನ್ನು ಮೆರೆದಿದ್ದಾನೆ.

ನಾಗಚಂದ್ರನ ಶೈಲಿ ಸರಳ ಹಾಗೂ ಆಕರ್ಷಕವಾಗಿದೆ. 'ಅರುಹನ ಮೂರುತಿಯಂತೆ ನಿರಾಭರಣ ಸಹಜ ಸೌಂದರ್ಯ'ದಿಂದ ಕೂಡಿದೆ. ಇಂಪಾದ, ಬಿಡಿಬಿಡಿಯಾದ ಪದಪ್ರಯೋಗಗಳು ಹೆಚ್ಚಾಗಿವೆ. ಅಲಂಕಾರಗಳಲ್ಲಿ ಅರ್ಥಾಂತರನ್ಯಾಸಾಲಂಕಾರವನ್ನು ಧಾರಾಳವಾಗಿ ಬಳಸಿದ್ದಾನೆ. 'ಕಿಡಿಮಸಿಯಾದವೋಲ್', ' ವಿಷಯಲೋಭದಿನೆನ್ನರುಮೇಳಿದರಾಗದಿರ್ಪರೇ', 'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ' 'ಬಿದಿಯಂ ಮೀಱುಗುಮೆ ಪೆಱರ ಪೇಟ್ದುಪದೇಶಂ', 'ಜನ್ಮಾರಣ್ಯದೊಳ್ ಮಿಕ್ಕರನಟಲಿಸದೇ ಮೋಹದಾವಾಗ್ನಿದಾಹಂ' ಇತ್ಯಾದಿ.

ನಾಗಚಂದ್ರನನ್ನು ನಂತರದ ಕೆಲವು ಕವಿಗಳು ಸ್ಮರಿಸಿದ್ದಾರೆ. ಪೂಜ್ಯಪಾದರ ೧೦೫ ಸಂಸ್ಕೃತ ಶ್ಲೋಕಗಳ ಸಮಾಧಿಶತಕಕ್ಕೆ ಕನ್ನಡ ವ್ಯಾಖ್ಯಾನ ರಚಿಸಿರುವ ಮೇಘಚಂದ್ರ ಮುನಿಯು ನಾಗಚಂದ್ರ ಹಾಗೂ ಆತನ ಮಗ ಶಾಂತಿಗೆ ಗುರುವಾಗಿದ್ದವನು. 'ವಿತತ ಯಶೋನಿಧಿ ಪಂಪನ ಸುತಂಗೆ ತಿಳಿವಂತು ಪೊಚ್ಚಪೊಸ ಕನ್ನಡದಿಂ' ಹೇಳಿದ್ದೇನೆ ಎಂದು ಹೇಳಿಕೊಂಡಿದ್ದಾನೆ. ನಾಗಚಂದ್ರನ ಸ್ಮರಣಾರ್ಥ ಶಾಸ್ತ್ರದಾನವಾಗಿ ಈ ಕೃತಿಯನ್ನು ಶಾಂತಿ ಹೇಳಿಸಿರಬಹುದೆಂದು ಡಾ. ಹಂಪನಾ ಅಭಿಪ್ರಾಯಪಟ್ಟಿದ್ದಾರೆ.* ಕ್ರಿ.ಶ. ೧೧೬೫ರಲ್ಲಿದ್ದ ಕರ್ಣಪಾರ್ಯ ತನ್ನ ನೇಮಿನಾಥಪುರಾಣದಲ್ಲಿ ನಾಗಚಂದ್ರ ಆದ್ಯತನನಾಗಿ ಕೀರ್ತಿತನಾಗಿದ್ದ ಎಂದು ಹೇಳಿದ್ದಾನೆ. ಸು. ೧೧೭೫ರಲ್ಲಿದ್ದ ಬ್ರಹ್ಮಶಿವ

---

* ಹಿಂದಿನದೇ

ತನ್ನ ಸಮಯ ಪರೀಕ್ಷೆಯಲ್ಲಿ ನಾಗಚಂದ್ರನನ್ನು ಹೀಗೆ ಸ್ತುತಿಸಿದ್ದಾನೆ.

ವಿತ್ತಂ ಸತ್ಪಾತ್ರಕ್ಕಾ
ಯತ್ತಂ ನಿಜವಾಣಿ ತೀರ್ಥಕರ ಕೀರ್ತನೆಗಾ
ಯತ್ತಂ ವ್ರತಕ್ಕೆ ತಮವಾ
ಯತ್ತವೆನಲ್ ನಾಗಚಂದ್ರ ಬುಧನೆ ಕೃತಾರ್ಥಂ ||

ತನ್ನನ್ನು 'ಸುಕವಿ ಪಂಪರಾಜನ ಮೊಮ್ಮಂ' ಎಂದೂ ಕರೆದುಕೊಂಡಿದ್ದಾನೆ.

ಜೈನ ರಾಮಾಯಣ ಪರಂಪರೆ

ರಾಮಾಯಣದ ಕಥೆ ಅತ್ಯಂತ ಪ್ರಾಚೀನ ಕಾಲದಿಂದಲೂ ಜನಪದರಲ್ಲಿ ಆಖ್ಯಾನರೂಪದಲ್ಲಿ ಪ್ರಚಲಿತವಾಗಿತ್ತು. ಪ್ರಾಕೃತ ಭಾಷೆಯಲ್ಲಿದ್ದ ಈ ರಚನೆಗಳನ್ನು ಜನಪದ ಗಾಯಕರು ಹಾಡುತ್ತಿದ್ದರು. ಪ್ರಾದೇಶಿಕ ಹಾಗೂ ಮತೀಯ ಭಿನ್ನತೆಯನ್ನೂ ವೈಶಿಷ್ಟ್ಯವನ್ನೂ ಹೊಂದಿದ್ದ ಈ ಕಥಾನಕದ ವಿವಿಧ ಪರಂಪರೆಗಳಿದ್ದವು. ಅವುಗಳಲ್ಲಿ ಔತ್ತರೇಯ, ದಾಕ್ಷಿಣಾತ್ಯ, ಜೈನ, ಬೌದ್ಧ, ಹಿಂದೂ ಪರಂಪರೆ ಇತ್ಯಾದಿ ಪ್ರಭೇದಗಳನ್ನು ಗುರುತಿಸಬಹುದು. ಈ ಜನಪದ ಸಾಹಿತ್ಯ ರೂಪಗಳನ್ನು ಕ್ರಿ.ಪೂ. ೩ನೇ ಶತಮಾನದ ಸುಮಾರಿಗೆ ಶಿಷ್ಟಕವಿಗಳು ಲಿಪಿಬದ್ಧಗೊಳಿಸಿ ಶ್ರೇಷ್ಠ ಕಾವ್ಯಗಳನ್ನು ರಚಿಸಿದರು. ವಾಲ್ಮೀಕಿ ರಾಮಾಯಣವೂ ಸುಮಾರು ಇದೇ ಕಾಲದಲ್ಲಿ ರಚಿತವಾಗಿರಬಹುದೆಂದೂ ಮೂಲಕೃತಿಯಲ್ಲಿ ಅಯೋಧ್ಯಾಕಾಂಡದಿಂದ ಯುದ್ಧಕಾಂಡದವರೆಗೆ ೫ ಕಾಂಡಗಳು ಮಾತ್ರ ಇದ್ದುವೆಂದೂ ನಂತರ ಬಾಲಕಾಂಡ ಮತ್ತು ಉತ್ತರಕಾಂಡಗಳು ಸೇರಿಕೊಂಡವೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.*

ಕೆಲವು ಬೌದ್ಧ ತ್ರಿಪಿಟಕಗಳಲ್ಲಿ ರಾಮಕಥೆ ನಿರೂಪಣೆಗೊಂಡಿದೆ. ಮಹಾಭಾರತದ ಅರಣ್ಯಕ ಪರ್ವದಲ್ಲಿ ದೊರೆಯುವ ರಾಮೋಪಾಖ್ಯಾನವು ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾಗಿದ್ದು ಆಖ್ಯಾನಕಾರನು ಬಹುಶಃ ತನ್ನ ಪ್ರಾಂತ್ಯದಲ್ಲಿ ಜನಪದ ಸಾಹಿತ್ಯದ ರೂಪದಲ್ಲಿ ಕಂಠಸ್ಥವಾಗಿದ್ದ ಆಖ್ಯಾನವನ್ನು ಲಿಪಿಬದ್ಧಗೊಳಿಸಿರಬೇಕೆಂದು ಡಾ. ಯಾಕೋಬಿ, ಬಿ.ಎಸ್. ಸುಕ್ತಂಕರ್ ಮುಂತಾದ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವಾಲ್ಮೀಕಿಯು ಕೂಡ ಇಂಥ ಆಖ್ಯಾನದಿಂದಲೇ ಪ್ರೇರಣೆ ಪಡೆದು ತನ್ನ ಕಾವ್ಯವನ್ನು ರಚಿಸಿರಬಹುದು. ಅದೇ ರೀತಿ ಬೌದ್ಧ ತ್ರಿಪಿಟಕಕಾರರು, ವಿಮಲ ಸೂರಿ ಮುಂತಾದವರು ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಚುರವಾಗಿದ್ದ ರಾಮಕಥೆಗಳನ್ನು ಲಿಪಿಬದ್ಧಗೊಳಿಸಿದರು. ಹೀಗಾಗಿ ವಿವಿಧ ರಾಮಾಯಣಗಳು ಸೃಷ್ಟಿಯಾದವು. ಎಲ್ಲ ರಾಮಾಯಣಗಳಿಗೂ ವಾಲ್ಮೀಕಿ ರಾಮಾಯಣವೇ ಮೂಲವೆಂದಾಗಲೀ, ಅದನ್ನು ಇತರರು ತಮ್ಮ ತಮ್ಮ ಮತಧರ್ಮಗಳಿಗೆ ಅನುಸಾರವಾಗಿ ವಿರೂಪಗೊಳಿಸಿಕೊಂಡರು ಎಂದಾಗಲೀ ಹೇಳುವುದು ಸರಿಯಲ್ಲ.*

---

* ರವಿಷೇಣನ ರಾಮಾಯಣ - ಅನು; ಮಿರ್ಜಿ ಅಣ್ಣಾರಾಯ (ಪೀಠಿಕೆ) ಶಾಂತಿಸೇವಾಸದನ, ಸೇಡಬಾಳ, ೧೯೬೮

ಜೈನ ಪರಂಪರೆಯಲ್ಲಿ ಸಮವಾಯಾಂಗ ಮತ್ತು ತಿಲೋಯಪಣ್ಣತ್ತಿಯಲ್ಲಿ ಮೊತ್ತಮೊದಲಿಗೆ ೬೩ ಜನ ಶಲಾಕಾಪುರುಷರ ಹೆಸರುಗಳನ್ನೂ ಸಂಕ್ಷಿಪ್ತವಾಗಿ ಅವರ ಬದುಕಿನ ಪ್ರಮುಖ ಘಟನೆಗಳನ್ನೂ ನಿರೂಪಿಸಲಾಗಿದೆ. ನಂತರ ಅವುಗಳನ್ನು ವಿಸ್ತರಿಸಿ ಅನೇಕ ಕಾವ್ಯಗಳು, ಚರಿತೆಗಳು, ಪುರಾಣಗಳು ರಚನೆಯಾದವು. ರಾಮಕಥೆಯನ್ನು ಮೊದಲಿಗೆ ರಚಿಸಿದವನು ಕ್ರಿ.ಶ. ೧ನೇ ಶತಮಾನದಲ್ಲಿದ್ದ ವಿಮಲಸೂರಿ. ಕಾವ್ಯ ಪಉಮಚರಿಯ. ಏಳು ಅಧಿಕಾರ, ೧೧೮ ಉದ್ದೇಶಗಳಿಂದ ಕೂಡಿದೆ. ಸಮವಾಯಾಂಗದಲ್ಲಿರುವ ನಾಮಾವಲಿ ಮತ್ತು ಆಚಾರ್ಯಪರಂಪರಾಗತವಾಗಿ ಬಂದ ಕಥೆಯನ್ನು ತಾನು ಈ ಚರಿತೆಯಾಗಿ ರಚಿಸಿದ್ದೇನೆಂದು ಹೇಳಿಕೊಂಡಿದ್ದಾನೆ.

ಪ್ರಾಕೃತದ ಪ್ರಮುಖ ಪ್ರಭೇದಗಳಲ್ಲೊಂದಾದ ಅಪಭ್ರಂಶ ಭಾಷೆಯಲ್ಲಿಯೂ ಮೊದಲಿಗೆ ರಚನೆಯಾಗಿರುವುದು ಪಉಮಚರಿಯ. ಕರ್ತೃ ಸ್ವಯಂಭೂ. ಕಾಲ ಕ್ರಿ.ಶ. ೮ನೇ ಶ. ನಂತರ ೧೫ನೇ ಶ.ದ ರಇಧು ಕವಿಯ ಪದ್ಮಪುರಾಣ ಪ್ರಸಿದ್ಧವಾಗಿದೆ.

ಸಂಸ್ಕೃತದಲ್ಲಿ ರವಿಷೇಣನ ಪದ್ಮಪುರಾಣಮ್ ಕ್ರಿ.ಶ. ೬೭೮ರಲ್ಲಿ ರಚಿತವಾಗಿದೆ. ೧೬ನೇ ಶತಮಾನದಲ್ಲಿ ದೇವವಿಜಯಗಣಿ ಗದ್ಯದಲ್ಲಿ ರಾಮಚರಿತ ರಚಿಸಿದ್ದಾನೆ.

೧೩ನೇ ಶತಮಾನದ ಹಸ್ತಿಮಲ್ಲ ಕವಿ ಮೈಥಿಲೀ ಕಲ್ಯಾಣ ಮತ್ತು ಅಂಜನಾಪವನಂಜಯ ಎಂಬ ಎರಡು ನಾಟಕಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ.

ಇತ್ತ ಭಾರತದ ವಿವಿಧ ಪ್ರಾಂತೀಯ ಭಾಷೆಗಳಲ್ಲಿ ಜೈನ ರಾಮಾಯಣಗಳು ರಚನೆಯಾಗಿವೆ. ಹಿಂದಿಯಲ್ಲಿ ರಾಮಸೀತಾಚರಿತ್ರ, ಹನುಮಂತಚರಿತ್ರ, ಪದ್ಮಪುರಾಣ, ಮುಂತಾದ ಗ್ರಂಥಗಳೂ ಗುಜರಾತಿಯಲ್ಲಿ ಪದ್ಮಚರಿತ್ರ, ಅಂಜನಾಸುಂದರೀಪ್ರಬಂಧ, ರಘುವಂಶವೃತ್ತಿ ಇತ್ಯಾದಿ ಕೃತಿಗಳೂ ದೊರಕಿವೆ.

ಕನ್ನಡದಲ್ಲಿಯೂ ಜೈನರಾಮಾಯಣ ಪರಂಪರೆ ಬೆಳೆದು ಬಂದಿದೆ. ಮೊದಲಿಗೆ ನಾಗಚಂದ್ರನ ರಾಮಚಂದ್ರಚರಿತಪುರಾಣ (ಚಂಪೂ) ನಂತರ ೧೬ನೇ ಶತಮಾನದ ಕುಮುದೇಂದುವಿನ ರಾಮಾಯಣ (ಷಟ್ಪದಿ), ದೇವಪ್ಪಕವಿಯ ರಾಮವಿಜಯಚರಿತ (ಸಾಂಗತ್ಯ), ೧೮ನೇ ಶತಮಾನದ ದೇವಚಂದ್ರನ ರಾಮಕಥಾವತಾರ (ಚಂಪೂ), ೧೯ನೇ ಶತಮಾನದ ಚಂದ್ರಸಾರವರ್ಣಿಯ ಜಿನರಾಮಾಯಣ (ಷಟ್ಪದಿ) ಕೃತಿಗಳು ಉಪಲಬ್ಧವಾಗಿವೆ.

ಜೈನ ಸಂಪ್ರದಾಯದ ಅನುಸಾರ ರಾಮ, ಲಕ್ಷ್ಮಣರು ಮುನಿಸುವ್ರತ ತೀರ್ಥಂಕರರ ತೀರ್ಥಕಾಲದಲ್ಲಿದ್ದ ಬಲದೇವ, ವಾಸುದೇವರಾದ್ದರಿಂದ ತ್ರಿಷಷ್ಟಿ ಶಲಾಕಾಪುರುಷರ ಚರಿತೆಗಳಲ್ಲಿ ಮುನಿಸುವ್ರತ ತೀರ್ಥಂಕರರ ಕಥೆಯ ಅಂಗವಾಗಿ ರಾಮಕಥೆಯನ್ನು ನಿರೂಪಣೆ ಮಾಡಲಾಗಿದೆ. ಕನ್ನಡದಲ್ಲಿ ಚಾವುಂಡರಾಯನ ತ್ರಿಷಷ್ಟಿಲಕ್ಷಣ ಮಹಾಪುರಾಣ ಹಾಗೂ ಬಂಧುವರ್ಮನ ಜೀವಸಂಬೋಧನೆ, ನಾಗರಾಜನ ಪುಣ್ಯಾಸ್ರವ ಚಂಪೂ ಮುಂತಾದ ಅನೇಕ ಗ್ರಂಥಗಳಲ್ಲಿ ಪ್ರಾಸಂಗಿಕವಾಗಿ ರಾಮಕಥೆಯು ಸಂಕ್ಷಿಪ್ತವಾಗಿ ಅಥವಾ ಕೆಲವು ಪ್ರಸಂಗಗಳು ನಿರೂಪಿತವಾಗಿದೆ.

ಜೈನರಾಮಾಯಣಗಳಲ್ಲಿ ಪ್ರಮುಖವಾಗಿ ಎರಡು ಸಂಪ್ರದಾಯಗಳನ್ನು ಗುರುತಿಸಬಹುದು. ಒಂದು ವಿಮಲಸೂರಿಯದು. ಮತ್ತೊಂದು ಗುಣಭದ್ರರದು. ಈ ಎರಡು ಸಂಪ್ರದಾಯಗಳಲ್ಲಿ ಕೆಲವು ವ್ಯತ್ಯಾಸಗಳಿವೆ. ಗುಣಭದ್ರರ ಸಂಪ್ರದಾಯದಂತೆ ಸೀತೆ, ರಾವಣ ಮತ್ತು ಮಂಡೋದರಿಯರ ಮಗಳು. ರಾಮ, ಲಕ್ಷ್ಮಣರು ತಮ್ಮ ಪೂರ್ವಜರ ಕಾಲದಲ್ಲಿ ತಮ್ಮ ವಶದಲ್ಲಿದ್ದ ವಾರಾಣಾಸೀ ನಗರವನ್ನು ಪುನಃ ತಮ್ಮ ವಶಪಡಿಸಿಕೊಂಡರು. ನಾರದನು ರಾವಣನಿಗೆ ಸೀತೆಯ ರೂಪ ವರ್ಣನೆ ಮಾಡಿ ಅವನಲ್ಲಿ ಕಾಮನೆಯನ್ನು ಬಿತ್ತಿದನು. ಸೀತೆಯಲ್ಲಿ ತನ್ನ ಬಗ್ಗೆ ಪ್ರೀತಿಯನ್ನು ಉಂಟು ಮಾಡಲು ಶೂರ್ಪನಖಿಯನ್ನು ರಾವಣನು ಕಳುಹಿಸಿದನು. ಆದರೆ ಅವಳು ವಿಫಲಳಾದಳು. ರಾವಣನ ಆಜ್ಞೆಯಂತೆ ಮಾರೀಚನು ಚಿನ್ನದ ಜಿಂಕೆಯ ರೂಪ ತಳೆದು ರಾಮನು ತನ್ನನ್ನು ಆಕಾಶದಲ್ಲಿ ಬೆನ್ನಟ್ಟುವಂತೆ ಮಾಡಿದನು. ರಾವಣ ರಾಮನ ರೂಪ ತಾಳಿ ಸೀತೆಯನ್ನು ಅಪಹರಿಸಿದನು. ನಾರದನ ಸೂಚನೆಯ ಮೇರೆಗೆ ಸುಗ್ರೀವ, ಹನುಮರು ತಾವಾಗಿಯೇ ರಾಮನ ಬಳಿಗೆ ಬಂದರು. ರಾಜ್ಯದ ಆಸೆಗಾಗಿ ತಮ್ಮನನ್ನು ಓಡಿಸಿದ್ದ ವಾಲಿಯು, ರಾಮನು ರಾವಣನೊಂದಿಗೆ ಯುದ್ಧಕ್ಕೆ ಹೋಗುವಾಗ ತನ್ನನ್ನು ಸ್ನೇಹಿತನನ್ನಾಗಿ ಅಂಗೀಕರಿಸಿ ಸುಗ್ರೀವನನ್ನು ದೂರ ಮಾಡಬೇಕೆಂದು ಸೂಚಿಸಿದನು. ಲಕ್ಷ್ಮಣನ ಸೇನಾಧಿಪತ್ಯದಲ್ಲಿ ವಾಲಿಯ ವಧೆಯಾಯಿತು. ಕೊನೆಯಲ್ಲಿ ಲಕ್ಷ್ಮಣನು ಮಹಾವ್ಯಾಧಿ ಉಂಟಾದುದರ ಪರಿಣಾಮವಾಗಿ ಸತ್ತು ನರಕಕ್ಕೆ ಹೋದನು. ರಾಮನು ಮಕ್ಕಳಿಗೆ ರಾಜ್ಯ ಕೊಟ್ಟು ಮುನಿದೀಕ್ಷೆ ವಹಿಸಿದನು.

ವಾಲ್ಮೀಕಿ ರಾಮಾಯಣ - ನಾಗಚಂದ್ರ ರಾಮಾಯಣ - ವ್ಯತ್ಯಾಸಗಳು

ನಾಗಚಂದ್ರನ ಕಾವ್ಯ ವಿಮಲಸೂರಿಯ ಪರಂಪರೆಯನ್ನನುಸರಿಸಿದೆ. ಅಲ್ಲಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾನೆ. ವಾಲ್ಮೀಕಿ ರಾಮಾಯಣಕ್ಕೂ ನಾಗಚಂದ್ರನ ಕಾವ್ಯಕ್ಕೂ ವಿಶೇಷವಾದ ವ್ಯತ್ಯಾಸಗಳು ಕಂಡುಬರುತ್ತವೆ. ಅವುಗಳನ್ನು ಕಥಾವಸ್ತು, ರಚನೆ, ಪಾತ್ರಚಿತ್ರಣ, ಸನ್ನಿವೇಶ ನಿರೂಪಣೆ, ಇತರೆ ವಿವರ - ಹೀಗೆ ವರ್ಗೀಕರಿಸಿಕೊಳ್ಳಬಹುದು. ಕೆಲವು ಪ್ರಮುಖ ವ್ಯತ್ಯಾಸಗಳನ್ನು ಸ್ಥೂಲವಾಗಿ ಕೆಳಗೆ ನೀಡಲಾಗಿದೆ. (ವಾಲ್ಮೀಕಿ ರಾಮಾಯಣದ ವಿವರಗಳು ಎಲ್ಲರಿಗೂ ಪರಿಚಿತವಾಗಿರುವುದರಿಂದ ನಾಗಚಂದ್ರನ ಕಾವ್ಯದ ನಿರೂಪಣೆಯನ್ನು ಮಾತ್ರ ವಿವರಿಸಲಾಗಿದೆ.)

ಕಥಾವಸ್ತು ಮತ್ತು ರಚನೆ

ವಾಲ್ಮೀಕಿ ರಾಮಾಯಣವು ಶ್ಲೋಕ ಛಂದಸ್ಸಿನಲ್ಲಿ ರಚಿತವಾಗಿದೆ. ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ, ಯುದ್ಧಕಾಂಡ ಎಂಬ ಆರು ಕಾಂಡಗಳಿವೆ. ಶ್ರೀರಾಮನ ಜನನದಿಂದ ಆರಂಭವಾಗಿ ವನವಾಸದಿಂದ ಹಿಂದಿರುಗಿ ಬಂದ ಶ್ರೀರಾಮನ ಪಟ್ಟಾಭಿಷೇಕದೊಂದಿಗೆ ಕಾವ್ಯ ಮುಕ್ತಾಯವಾಗುತ್ತದೆ. ಆದರೆ ಪಂಪರಾಮಾಯಣದಲ್ಲಿ ಇಕ್ಷ್ವಾಕುವಂಶದ ಮೂಲದಿಂದ ಆರಂಭಗೊಳ್ಳುವ ಕಾವ್ಯ ಕೊನೆಗೆ ರಾಮಚಂದ್ರನ

ಪರಿನಿರ್ವಾಣದೊಂದಿಗೆ ಮುಕ್ತಾಯಗೊಳ್ಳುತ್ತದೆ. ೧೬ ಆಶ್ವಾಸಗಳ ಚಂಪೂಕಾವ್ಯದಲ್ಲಿ ಜೈನಸಂಪ್ರದಾಯದ ಲಕ್ಷಣಗಳಿಗನುಸಾರವಾಗಿ ಅನೇಕರ ಭವಾವಳಿಗಳು ವಿವರವಾಗಿ ನಿರೂಪಣೆಗೊಂಡಿವೆ.

ಪಾತ್ರಚಿತ್ರಣ

ಪಂಪರಾಮಾಯಣದಲ್ಲಿ ಎಲ್ಲ ಪ್ರಮುಖ ಪಾತ್ರಗಳೂ ಜೈನಧರ್ಮಾನುಯಾಯಿಗಳೇ. ದಶರಥ, ರಾಮ, ಸೀತೆ, ವಾಲಿ, ಕುಂಭಕರ್ಣ ಮುಂತಾದವರು ಕೊನೆಯಲ್ಲಿ ದೀಕ್ಷೆ ವಹಿಸಿ ತಪಗೈದು ಕೇವಲಿಗಳಾಗುತ್ತಾರೆ. ರಾವಣ ವಿದ್ಯಾಧರ ವಂಶಕ್ಕೆ ಸೇರಿದವನು. ಸುಗ್ರೀವ, ಹನುಮಂತ ಮುಂತಾದವರು ವಾನರರಲ್ಲ. ಕಪಿಧ್ವಜರು ಮಾತ್ರ. ಇವರು ರಾವಣನ ಬಂಧುಗಳು ಕೂಡ. ಸುಗ್ರೀವನ ತಂಗಿ ಶ್ರೀಪ್ರಭೆಯನ್ನು ರಾವಣನು ವಿವಾಹವಾಗಿರುತ್ತಾನೆ. ರಾವಣನ ತಂಗಿ ಚಂದ್ರನಖಿ ಖರನ ಪತ್ನಿ. ಶಂಬುಕನು ಇವರ ಪುತ್ರ, ಪುತ್ರಿ ಅನಂಗಪುಷ್ಪೆಯನ್ನು ಹನುಮನು ವಿವಾಹವಾಗಿರುತ್ತಾನೆ. ವಾಲಿ, ರಾವಣರ ಪಾತ್ರ ಉದಾತ್ತವಾದುದು. ರಾವಣನ ಪೂರ್ವವಂಶಜರ ವೃತ್ತಾಂತವೂ ದೀರ್ಘವಾಗಿದೆ.

ವಾಲ್ಮೀಕಿ ರಾಮಾಯಣದಲ್ಲಿ ಪ್ರಮುಖವಾದ ವಿಶ್ವಾಮಿತ್ರ, ವಸಿಷ್ಠ, ಮತ್ತಿತರ ಋಷಿಗಳು, ಮಂಥರೆ, ತಾಟಕಿ, ಗುಹ, ಅಹಲ್ಯೆ, ಶಬರಿ, ಮುಂತಾದ ಕೆಲವು ಪಾತ್ರಗಳು ಇಲ್ಲಿಲ್ಲ. ಆದರೆ ಕೆಲವು ಹೊಸ ಪಾತ್ರಗಳು ಪ್ರಮುಖ ಪಾತ್ರ ವಹಿಸಿವೆ. ಸೀತೆಯ ಅವಳಿ ಸೋದರ ಪ್ರಭಾಮಂಡಲ, ಪಾತಾಳಲಂಕೆಯ ನಿಜವಾದ ಹಕ್ಕುದಾರನಾಗಿದ್ದ ವಿರಾಧಿತ, ನಳಕೂಬರನ ಪತ್ನಿ ಉಪರಂಭೆ, ಗರ್ಭಿಣಿ ಸೀತೆಗೆ ಕಾಡಿನಲ್ಲಿ ಆಶ್ರಯವಿತ್ತ ವಜ್ರಜಂಘ, ಮಾಯಾಸುಗ್ರೀವ ಮುಂತಾದ ಪಾತ್ರಗಳನ್ನು ಗಮನಿಸಬಹುದು.

ಇನ್ನು ಪಂಪರಾಮಾಯಣದ ಪ್ರಮುಖ ಪಾತ್ರಗಳ ವ್ಯಕ್ತಿತ್ವ ಹಾಗೂ ವಿಶೇಷ ಸಂದರ್ಭಗಳಲ್ಲಿ ಅವರು ಪ್ರತಿಕ್ರಿಯಿಸುವ ರೀತಿ ಇವುಗಳು ಹೇಗೆ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವೆಂಬುದನ್ನು ಸ್ಥೂಲವಾಗಿ ಇಲ್ಲಿ ಗಮನಿಸಬಹುದು.

ಶ್ರೀರಾಮಚಂದ್ರ : ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮ ವಿಷ್ಣುವಿನ ಅವತಾರವಾಗಿದ್ದರೆ ಇಲ್ಲಿ ಒನೆಯ ಬಲದೇವ. ಅವನಿಗೆ ಪದ್ಮನೆಂಬ ಹೆಸರೂ ಇತ್ತು.* ಇಲ್ಲಿ ರಾಮ ಏಕಪತ್ನೀವ್ರತಸ್ಥನಲ್ಲ. ಸೀತೆಯನ್ನಲ್ಲದೆ, ಸುಗ್ರೀವನ ಹಲವಾರು ಹೆಣ್ಣು ಮಕ್ಕಳನ್ನು, ಗಂಧರ್ವನೆಂಬ ಖೇಚರನ ಮೂವರು ಪುತ್ರಿಯರನ್ನು, ವಿವಾಹವಾಗುತ್ತಾನೆ. ಪ್ರಭಾವತಿ, ರತಿಶ್ರೀಕಾಂತೆ ಎಂಬ ಮಹಾದೇವಿಯರಲ್ಲದೆ ೮೦೦೦ ಮಂದಿ ಅಂತಃಪುರ ಸ್ತ್ರೀಯರನ್ನು ಹೊಂದಿರುತ್ತಾನೆ. ಆದರೆ ಎಲ್ಲರಿಗಿಂತ ಸೀತೆಯ ಮೇಲೆ

---

* ಆದುದರಿಂದಲೇ ರಾಮನ ಕಥೆಯನ್ನು ವರ್ಣಿಸುವ ಕಾವ್ಯಗಳಿಗೆ ಪದ್ಮಚರಿತ, ಪದ್ಮಪುರಾಣ ಎಂದು ಹೆಸರು.

ಹೆಚ್ಚು ಪ್ರೀತಿ. ರಾಮ ಪರಾಕ್ರಮಿಯಾದರೂ ರಾವಣನನ್ನು ವಧಿಸುವುದಿಲ್ಲ. ಲಕ್ಷ್ಮಣನಿಂದ ರಾವಣ ವಧೆಯಾಗುತ್ತದೆ.

ಅಂತ್ಯದಲ್ಲಿ ಲಕ್ಷ್ಮಣನ ಮೇಲಿನ ಅತೀವ ಮೋಹದಿಂದ ಉಂಟಾಗಿದ್ದ ವಿಕಲತೆಯನ್ನು ಜಟಾಯು ಮತ್ತು ಕೃತಾಂತವಕ್ತ್ರ ದೇವರುಗಳ ಉಪಾಯದಿಂದ ಕಳೆದುಕೊಡು, ನಿರ್ವಾಣ ಹೊಂದಿ ಸಿದ್ಧಪದವಿಯನ್ನು ಪಡೆಯುತ್ತಾನೆ. ಕವಿ ರಾಮನನ್ನು ಹೆಚ್ಚಾಗಿ ಉದಾತ್ತ ರಾಘವ ಎಂದೇ ನಿರ್ದೇಶಿಸಿದ್ದಾನೆ. ತನ್ನ ಇರುವಿಕೆಯಿಂದಲೇ ಎಲ್ಲರನ್ನೂ ಸಂತೋಷಗೊಳಿಸುತ್ತಾ ಶಿಷ್ಟರಕ್ಷೆ, ದುಷ್ಟಶಿಕ್ಷೆಗಳನ್ನು ಸಾಧಿಸಿ, ತನ್ನ ಸುತ್ತಲಿನ ಸಮಾಜವನ್ನು ಸುವ್ಯವಸ್ಥಿತಗೊಳಿಸಿ, ಯುಗಪುರುಷನಾಗಿ ಜನಮನದಲ್ಲಿ ನೆಲೆಸಿದ ಮಹಾ ಪಾತ್ರ ಶ್ರೀರಾಮನದು.

ಲಕ್ಷ್ಮಣ : ಪಂಪರಾಮಾಯಣದಲ್ಲಿ ಲಕ್ಷ್ಮಣ ಲನೆಯ ವಾಸುದೇವ. ಅಣ್ಣನಾದ ಬಲಭದ್ರ ಶ್ರೀರಾಮನ ಬಗ್ಗೆ ಅಪಾರ ಗೌರವ, ಪ್ರೀತಿ. ಅಯೋಧ್ಯೆಯನ್ನು ತೊರೆದು ರಾಮ, ಸೀತೆಯರೊಂದಿಗೆ ದೇಶಾಟನೆ ಹೊರಟ ನಂತರ ಅನೇಕ ಸಾಹಸದ ಪ್ರಕರಣಗಳನ್ನು ಎದುರಿಸುತ್ತಾನೆ. ತನ್ನ ಪರಾಕ್ರಮದಿಂದ ದುಷ್ಟರನ್ನು ಸೋಲಿಸಿ, ಅನ್ಯಾಯಕ್ಕೊಳಗಾದವರಿಗೆ ನ್ಯಾಯವನ್ನು ದೊರಕಿಸಿಕೊಡುತ್ತಾನೆ. 'ತಲೆ ಬಾಗದಿದ್ದರೆ ದಂಡನೆಯನ್ನೂ ಬಾಗಿದರೆ ಉನ್ನತಿಯನ್ನೂ ನೀಡುವ ವಿಚಿತ್ರನಿಧಿ' ಎಂದು ಕವಿ ಬಣ್ಣಿಸಿದ್ದಾನೆ. ಸಿಂಹೋದರನನ್ನು ಗೆದ್ದು ವಜ್ರಕರ್ಣನಿಗೂ ಅವನಿಗೂ ನಾಡುಬೀಡುಗಳನ್ನು ಹಂಚಿಕೊಟ್ಟುದು, ಅತಿವೀರ್ಯನನ್ನು ಸೋಲಿಸಿದುದು ಇತ್ಯಾದಿ ಪ್ರಸಂಗಗಳು ಇದಕ್ಕೆ ನಿದರ್ಶನಗಳಾಗಿವೆ. ಪರಾಕ್ರಮದೊಂದಿಗೆ ಪುಣ್ಯದ ಫಲವಾಗಿ ಹಲವಾರು ವಿದ್ಯೆಗಳನ್ನು, ಸಾಗರಾವರ್ತ, ಚಂದ್ರಹಾಸ ಮುಂತಾದ ಆಯುಧಗಳನ್ನು ಪಡೆಯುತ್ತಾನೆ. ಜೊತೆಗೆ ಪ್ರತಿಫಲವಾಗಿ ಸುಂದರ ಕನ್ಯೆಯರನ್ನು ವಿವಾಹವಾಗುತ್ತಾನೆ. ವಾಲಖಿಲ್ಯನ ಮಗಳು ವನಮಾಲೆ, ರಾವಣನ ಶಕ್ತ್ಯಾಯುಧದಿಂದ ಮೂರ್ಛಿತನಾಗಿದ್ದಾಗ ತನ್ನನ್ನು ಎಚ್ಚರಿಸಿದ ವಿಶಲ್ಯಾಸುಂದರಿ, ಇನ್ನೂರು ಯುವತಿಯರು ಮುಂತಾದವರು ಅವನನ್ನು ವರಿಸುತ್ತಾರೆ.

ರಾವಣನೊಂದಿಗಿನ ಯುದ್ಧದಲ್ಲಿ ರಾವಣ ಲಕ್ಷ್ಮಣನ ಮೇಲೆ ಚಕ್ರರತ್ನವನ್ನು ಪ್ರಯೋಗಿಸಿದಾಗ ಅದು ಲಕ್ಷ್ಮಣನನ್ನು ಬಲವಂದು ಅವನ ಬಲಭುಜದ ಬಳಿ ನಿಂತುಕೊಳ್ಳುತ್ತದೆ. ಅದೇ ಚಕ್ರರತ್ನದಿಂದ ಲಕ್ಷ್ಮಣ ರಾವಣನನ್ನು ಕೊಲ್ಲುತ್ತಾನೆ.

ಅಣ್ಣನ ಬಗ್ಗೆ ಗಾಢವಾದ ಪ್ರೀತಿ ಹೊಂದಿದ್ದ ಲಕ್ಷ್ಮಣ ಕೊನೆಯಲ್ಲಿ ದೇವತೆಗಳು ಮಾಯೆಯಿಂದ ನಿರ್ಮಿಸಿದ ಉಸಿರಾಡದ ರಾಮನ ಆಕೃತಿಯನ್ನು ನೋಡಿ ಎದೆಯೊಡೆದು ಗತಪ್ರಾಣನಾಗುತ್ತಾನೆ. ಇಂಥ ಪರಾಕ್ರಮಿ ಕೊನೆಗೆ ಈ ವಧೆಗಳ ಪರಿಣಾಮದಿಂದಾಗಿ ನರಕಕ್ಕೆ ಹೋಗುತ್ತಾನೆ. ಹೀಗೆ ಸೋದರಪ್ರೀತಿ, ಶೌರ್ಯ, ಉತ್ಸಾಹ, ಆವೇಶಗಳ ಪ್ರತಿಮೂರ್ತಿಯಾಗಿದ್ದಾನೆ ಲಕ್ಷ್ಮಣ.

ರಾವಣ : ನಾಗಚಂದ್ರನ ಕಾವ್ಯದಲ್ಲಿ ಚಿತ್ರಿತನಾಗಿರುವ ರಾವಣನ ಪಾತ್ರ ವಾಲ್ಮೀಕಿ ರಾಮಾಯಣಕ್ಕಿಂತ ತುಂಬ ಭಿನ್ನವಾಗಿದೆ. ಇಲ್ಲಿನ ರಾವಣನ ವ್ಯಕ್ತಿತ್ವ ಉನ್ನತವಾದುದು. ಆತ ನಿಜವಾಗಿ ದಶಶಿರನಲ್ಲ. ಆತ ಹುಟ್ಟಿದಾಗ ನವರತ್ನಗಳಲ್ಲಿ ಅವನ ಮುಖ ಪ್ರತಿಬಿಂಬಿತವಾದ್ದರಿಂದ ದಶಮುಖ ಎಂದು ಹೆಸರಿಟ್ಟಿರುತ್ತಾರೆ. ಜೈನಮುನಿಗಳ ಬಗ್ಗೆ ಅವನಿಗೆ ಅಪಾರ ಭಕ್ತಿ, ಗೌರವ. ಅನಂತ ವೀರ್ಯ ಕೇವಲಿಗಳ ಬಳಿ ಪರನಾರೀವಿರತಿ ವ್ರತವನ್ನು ಕೈಗೊಳ್ಳುತ್ತಾನೆ. ಅದರ ಪಾಲನೆಗಾಗಿ ತನ್ನನ್ನು ಮೋಹಿಸಿ ಬಂದ ನಳಕೂಬರನ ಪತ್ನಿ ಉಪರಂಭೆಯನ್ನು 'ನೀನು ನನ್ನ ತಾಯಿಯ ಸಮಾನ' ಎಂದು ಗೌರವ ತೋರಿ ಪತಿಯೊಂದಿಗೆ ಸುಖವಾಗಿರು ಎಂದು ಸಲಹೆ ನೀಡುತ್ತಾನೆ. ತನ್ನ ಜೈತ್ರಯಾತ್ರೆಯ ಸಂದರ್ಭದಲ್ಲಿ ರಾಜಪುರದ ಅರಸನಾದ ಮರುತ್ತು ಯಜ್ಞಗಳನ್ನು ಮಾಡುತ್ತ ಪ್ರಾಣಿಬಲಿ ಕೊಡುತ್ತಿರುವನೆಂಬುದನ್ನು ತಿಳಿದು ಯಜ್ಞಶಾಲೆಗೆ ಬಂದು ಪ್ರಾಣಿಗಳನ್ನು ಬಿಡಿಸಿ ಬಲಿಗಂಬಗಳನ್ನು ಕಡಿಯುತ್ತಾನೆ. ಮತ್ತು ಇನ್ನೆಂದೂ ಯಜ್ಞ ಮಾಡುವುದಿಲ್ಲವೆಂದು ಆಶ್ವಾಸನೆ ನೀಡುತ್ತಾನೆ. ರಾವಣನು ಹಿರಿಯರಿಗೆ ತುಂಬ ಗೌರವ ಕೊಡುತ್ತಿದ್ದನೆಂಬುದು ಕೆಲವು ಪ್ರಸಂಗಗಳಲ್ಲಿ ಸ್ಪಷ್ಟವಾಗುತ್ತದೆ. ಸಹಸ್ರಬಾಹುವನ್ನು ಸೆರೆಹಿಡಿದಾಗ ಆತನ ತಂದೆ ಶತಬಾಹುಗಳೆಂಬ ಚಾರಣರು ಬಂದು ಅವನನ್ನು ಬಿಡಬೇಕೆಂದು ಕೇಳಿದಾಗ ಅವನನ್ನು ಮುಕ್ತನನ್ನಾಗಿಸಿ ರಾಜ್ಯವನ್ನೂ ಹಿಂದಿರುಗಿಸುತ್ತಾನೆ. ಇಂದ್ರನನ್ನೂ ಅವನ ಮಗ ಜಯಂತನನ್ನೂ ಸೆರೆ ಹಿಡಿದಿದ್ದರೂ ಇಂದ್ರನ ತಂದೆ ಸಹಸ್ರಾರನ ಕೋರಿಕೆಯಂತೆ ಅವರನ್ನು ಬಿಡುಗಡೆ ಮಾಡಿ ರಾಜ್ಯವನ್ನು ಮರಳಿಸುತ್ತಾನೆ. ವರುಣನನ್ನು ಗೆದ್ದು ಅವನ ರಾಜ್ಯವನ್ನು ಹಿಂದಿರುಗಿಸಿ ಅವನ ಮಗಳಾದ ಸತ್ಯವತಿಯನ್ನು ವಿವಾಹವಾಗುತ್ತಾನೆ. ಕಿಷ್ಕಿಂಧಾಪುರವನ್ನು ವಾಲಿಯ ತಂದೆ ಸೂರ್ಯಜನಿಗೆ ಮರಳಿ ದೊರಕಿಸಿ ಕೊಟ್ಟಿರುತ್ತಾನೆ.

ತನ್ನ ತಂಗಿ ಚಂದ್ರನಖಿಯ ಮಗ ಶಂಬೂಕನನ್ನು ಕೊಂದ ಲಕ್ಷ್ಮಣನ ಮೇಲೆ ಪ್ರತೀಕಾರ ಮಾಡಲು ಹೊರಡುತ್ತಾನೆ. ಆದರೆ ಸೀತೆಯನ್ನು ಕಂಡಕೂಡಲೇ

> ಬಲೆ ದೃಷ್ಟಿಗೆ ಪಜ್ಜದ
> ಸಂಕಲೆ ಹೃದಯಕ್ಕೆನಿಪ ನಿಜ ರೂಪವತಿ ಜಾನಕಿ ಕ
> ಣ್ಣೊಲದೋಳಿರೆ ಪದ್ಮ ಪತ್ರದ
> ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ ||

"ವಿಷಾಹಿಯ ಹೆಡೆಯ ಮಣಿಶಲಾಕೆಗೆ ಕಯ್ ನೀಡುವ ಗಾಂಪನಂತೆ" ಸೀತೆಗೆ ಕೈಚಾಚುತ್ತಾನೆ. ಅವಲೋಕಿನೀ ವಿದ್ಯೆಯ ಹಿತವಚನಕ್ಕೂ ಕಿವಿಗೊಡುವುದಿಲ್ಲ. ಮಹಾಪುರುಷನಾಗಿ ಬಾಳಿದ ರಾವಣ ಇಂಥ ಅವಿವೇಕಕ್ಕೆ ಮನಸ್ಸು ಮಾಡಿದುದನ್ನು ಕವಿ 'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ" ಎಂಬ ದೃಷ್ಟಾಂತದ ಮೂಲಕ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾನೆ. ಸೀತೆಯನ್ನು ಅಪಹರಿಸಿ ಸೆರೆಯಲ್ಲಿಟ್ಟು, ಅವಳನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆಲವೊಮ್ಮೆ

ನಯವಾದ ಮಾತುಗಳಿಂದ, ಕೆಲವೊಮ್ಮೆ ಪ್ರಲೋಭನೆಯಿಂದ, ಕೆಲವೊಮ್ಮೆ ಬೆದರಿಕೆಯಿಂದ. ಈ ದೋಷವನ್ನು ಬಿಟ್ಟರೆ ರಾವಣನ ವ್ಯಕ್ತಿತ್ವದಲ್ಲಿ ಬೇರಾವ ದೋಷವೂ ಕಂಡುಬರುವುದಿಲ್ಲ.

ಯುದ್ಧದಲ್ಲಿ ತನ್ನ ದಿವ್ಯಾಸ್ತ್ರದಿಂದ ಮೂರ್ಛೆ ಬಿದ್ದ ಲಕ್ಷ್ಮಣನನ್ನು 'ಬಿದ್ದವನನ್ನು ಕೊಲಲಾಗದು' ಎಂಬ ನಿಯಮಪಾಲಕನಾಗಿ ರಾವಣನು ಅವನನ್ನು ಕೊಲ್ಲದೆ ಹಿಂದಿರುಗುತ್ತಾನೆ. ಬಹುರೂಪಿಣಿ ವಿದ್ಯೆಯನ್ನು ಸಾಧಿಸುವ ಸಂದರ್ಭದಲ್ಲಿ ತನ್ನ ನಾಡಿನಲ್ಲಿ ಯಾವುದೇ ರೀತಿಯ ಹಿಂಸೆ ನಡೆಯಬಾರದೆಂದೂ ಪ್ರತಿದಿನ ಜಿನಪೂಜೆ ನಡೆಯಬೇಕೆಂದೂ ಆದೇಶ ನೀಡುತ್ತಾನೆ. ಮಂಡೋದರಿ ಮುಂತಾದ ಸ್ತ್ರೀಯರು ತಮಗಾದ ಹಿಂಸೆಯ ಬಗ್ಗೆ ಗೋಳಿಟ್ಟರೂ ವಿಚಲಿತನಾಗದೆ ಪ್ರತಿಹಿಂಸೆ ಮಾಡಬಾರದೆಂದು ಸೂಚಿಸಿ ತಾನು ಧ್ಯಾನಸ್ಥನಾಗಿ ಬಹುರೂಪಿಣೀ ವಿದ್ಯೆಯನ್ನು ಸಿದ್ಧಿಸಿಕೊಳ್ಳುತ್ತಾನೆ.

ಅನಂತರ ಸೀತೆಯ ಬಳಿ ಬಂದು ತನ್ನನ್ನು ಇನ್ನು ಯಾರೂ ಸೋಲಿಸಲಾರರು, ತನ್ನನ್ನು ಒಪ್ಪಿಕೊ ಎಂದು ಹೇಳಿದಾಗ ಸೀತೆ ಪ್ರಜ್ಞಾಶೂನ್ಯಳಾಗಿ ಬೀಳುತ್ತಾಳೆ. ಅದನ್ನು ಕಂಡು ರಾವಣನ ಮನ ಕರುಣೆಯಿಂದ ಕರಗುತ್ತದೆ. ಕರ್ಮವಶದಿಂದ ಸೀತೆಯನ್ನು ರಾಮನಿಂದ ಅಗಲಿಸಿ ಪಾಪ ಮಾಡಿದೆ, ತನ್ನಿಂದ ಕುಲದ ಪೆಂಪು ಅಳಿಯಿತು ಎಂದು ಪಶ್ಚಾತ್ತಾಪ ಪಡುತ್ತಾನೆ. ಈಗಲೇ ತಾನು ಸೀತೆಯನ್ನು ರಾಮನಿಗೆ ಒಪ್ಪಿಸಿದರೆ ಇದುವರೆಗೆ ತಾನು ತೋರಿಸಿದ ಪರಾಕ್ರಮ ವ್ಯರ್ಥವಾಗುತ್ತದೆ. ಆದುದರಿಂದ ಎರಡೂ ಸೇನೆಯವರು ತನ್ನನ್ನು ಹೊಗಳುವಂತೆ ಯುದ್ಧ ಮಾಡಿ ಸೌಮಿತ್ರಿ, ರಾಘವರನ್ನು ವಿರಥರಾಗಿಸಿ ಸೆರೆಗೈದು ತಂದು, ನಂತರ ಒಪ್ಪಿಸುತ್ತೇನೆ ಎಂದು ನಿರ್ಧರಿಸುತ್ತಾನೆ.

ಇಂಥ ರಾವಣನ ಪಾತ್ರವನ್ನು ಬಿ.ಎಂ.ಶ್ರೀ ಮುಂತಾದ ವಿಮರ್ಶಕರು ದುರಂತನಾಯಕ ಎಂದು ಬಣ್ಣಿಸಿದ್ದಾರೆ.

ವಾಲಿ : ವಾಲ್ಮೀಕಿ ರಾಮಾಯಣದಲ್ಲಿ ಖಳನಾಗಿ ಚಿತ್ರಣಗೊಂಡು ರಾಮನಿಂದ ಸಾವು ಪಡೆದ ವಾಲಿಯ ಪಾತ್ರ ಇಲ್ಲಿ ತುಂಬ ಉದಾತ್ತ ವ್ಯಕ್ತಿತ್ವವುಳ್ಳ ಪಾತ್ರವಾಗಿ ರೂಪುಗೊಂಡಿದೆ. ವಾಲಿ ಕಿಷ್ಕಿಂಧೆಯ ರಾಜ. ಜೈನಮುನಿಗೂ, ಜಿನಪದಕ್ಕೂ ಅಲ್ಲದೆ ಉಳಿದವಕ್ಕೆ ಕೈಮುಗಿಯೆ ಎಂಬ ವ್ರತಾಚರಣೆಯನ್ನು ಪಾಲಿಸುತ್ತಿರುತ್ತಾನೆ. ತನ್ನ ತಂಗಿ ಶ್ರೀಪ್ರಭೆಯನ್ನು ವಿವಾಹವಾಗಲು ಬಯಸಿ ರಾವಣನು ಓಲೆ ಕಳುಹಿಸಿದಾಗ ತಾನು ಅದಕ್ಕೆ ಸಮ್ಮತಿಸುವುದಿಲ್ಲವೆಂದು ಅವರ ಬಹುಕಾಲದಿಂದ ವಿದ್ಯಾಧರ ಹಾಗೂ ವಾನರ ವಂಶಗಳ ನಡುವೆ ಬೆಳೆದುಬಂದ ಗೆಳೆತನವನ್ನು ಹಾಳಾಗಲು ಬಿಡಲಾರದೆ, ಈ ಸಂದಿಗ್ಧದಿಂದ ತಪ್ಪಿಸಿಕೊಳ್ಳಲು ದೀಕ್ಷೆ ಪಡೆದು ತಪಸ್ಸಿಗೆ ತೆರಳುತ್ತಾನೆ. ಕೈಲಾಸಪರ್ವತದಲ್ಲಿ ತಪಸ್ಸು ಮಾಡುತ್ತಿದ್ದಾಗ ಮೇಲೆ ಆಕಾಶದಲ್ಲಿ ಹೋಗುತ್ತಿದ್ದ ರಾವಣನ ವಿಮಾನ ನಿಂತುಬಿಡುತ್ತದೆ. ಆಗ ತನ್ನ ಮೇಲಿನ ಕೋಪಕ್ಕೆ ವಾಲಿ ಹೀಗೆ ಮಾಡಿರಬಹುದೆಂದು ಯೋಚಿಸಿ ರಾವಣ ತನ್ನ ವಿದ್ಯಾಬಲದಿಂದ ವಾಲಿಯನ್ನು ಪರ್ವತದ ಸಮೇತ ಸಮುದ್ರಕ್ಕೆ ಎಸೆಯುವೆನೆಂದು ರಸಾತಳಕ್ಕಿಳಿದು ಪರ್ವತವನ್ನು ಎತ್ತುತ್ತಾನೆ. ಆಗ ಅದರ ಮೇಲಿದ್ದ ರತ್ನಮಯ

ಜಿನಾಲಯಗಳನ್ನು ಉಳಿಸಲೆಂದು ವಾಲಿ ಭಟ್ಟಾರಕ ತನ್ನ ಉಂಗುಟದಿಂದ ಕೆಳಕ್ಕೆ ಪರ್ವತವನ್ನು ಒತ್ತುತ್ತಾನೆ. ಆದರೆ ರಾವಣನ ಪತ್ನಿ ಮಂಡೋದರಿಯ ಕೋರಿಕೆಯಂತೆ ಅವನನ್ನು ಕ್ಷಮಿಸುತ್ತಾನೆ. ಚರಮಶರೀರಿಯಾದ ವಾಲಿ ಕೊನೆಗೆ ಮುಕ್ತಿ ಪಡೆಯುತ್ತಾನೆ. ಹೀಗೆ ಸ್ವಾಭಿಮಾನ, ಆಧ್ಯಾತ್ಮಿಕತೆಗಳ ಹೊಸ ಆಯಾಮ ವಾಲಿಯ ಪಾತ್ರಚಿತ್ರಣದಲ್ಲಿ ಕಂಡುಬರುತ್ತದೆ.

ಹನುಮಂತ : ಪಂಪರಾಮಾಯಣದಲ್ಲಿ ಹನುಮ ಬ್ರಹ್ಮಚಾರಿಯೂ ಅಲ್ಲ, ವಾನರನೂ ಅಲ್ಲ. ಅಂಜನಾ, ಪವನಂಜಯರ ಪುತ್ರ, ಹನುಮ ದ್ವೀಪದ ಒಡೆಯ. ವರುಣನ ಮೇಲೆ ಯುದ್ಧಕ್ಕೆ ಹೊರಟಾಗ ತಂದೆಯ ಆಣತಿಯಂತೆ ರಾವಣನಿಗೆ ಸಹಾಯ ಮಾಡಲು ವಾನರ ರೂಪ ತಾಳಿ ರಿಪುಸೇನೆಯನ್ನು ಧ್ವಂಸ ಮಾಡುತ್ತಾನೆ. ಅವನ ಪರಾಕ್ರಮಕ್ಕೆ ಮೆಚ್ಚಿ ರಾವಣನು ತನ್ನ ತಂಗಿ ಚಂದ್ರನಖಿಯ ಮಗಳಾದ ಅನಂಗಪುಷ್ಪೆಯನ್ನು ಕೊಟ್ಟು ವಿವಾಹ ಮಾಡುತ್ತಾನೆ. ಕರ್ಣಕುಂಡಲಪುರದ ಆಧಿಪತ್ಯವನ್ನು ನೀಡುತ್ತಾನೆ. ಹನುಮನು ಸಹಸ್ರ ಮಂದಿ ಕನ್ಯೆಯರಿಗೆ ವಲ್ಲಭನಾಗಿ, ಸುಗ್ರೀವ, ಸುತಾರೆಯರ ಮಗಳಾದ ಪದ್ಮರಾಗೆಯನ್ನು ವಿವಾಹವಾಗುತ್ತಾನೆ. ಲಂಕೆಯ ದ್ವಾರಪಾಲಕನಾದ ವಜ್ರಮುಖನನ್ನು ಕೊಂದು ಅವನ ಮಗಳಾದ ಲಂಕಿಣಿಯಿಂದ ವಿದ್ಯೆಗಳನ್ನು ಕಲಿತುಕೊಂಡು ಅವಳ ಕೋರಿಕೆಯಂತೆ ಅವಳನ್ನು ಮದುವೆಯಾಗುತ್ತಾನೆ. ಆಂಜನೇಯನು ಅನೇಕ ವಿದ್ಯೆಗಳನ್ನು ಕಲಿತವನಾಗಿದ್ದರೂ ಸಮುದ್ರವನ್ನು ದಾಟಿ ಲಂಕೆಗೆ ಬರುವುದು ವಿಮಾನದಲ್ಲಿಯೇ. ಕೊನೆಯಲ್ಲಿ ತನ್ನ ಅರಮನೆಯ ಮಣಿಮಾಡದಲ್ಲಿದ್ದಾಗ ಉಲ್ಕೆಯು ಆಗಸದಿಂದ ಉರುಳಿ ಬಿದ್ದುದನ್ನು ಕಂಡು ವೈರಾಗ್ಯಪರನಾಗಿ ದೀಕ್ಷೆ ಪಡೆದು ತಪಸ್ಸನ್ನು ಕೈಗೊಂಡು ಘಾತಿ, ಅಘಾತಿಕರ್ಮಗಳನ್ನು ಕ್ಷಯಿಸಿ ನಿರ್ವಾಣ ಪಡೆಯುತ್ತಾನೆ.

ಸೀತೆ : ಸೀತೆ ಇಲ್ಲಿ ಅಯೋನಿಜೆಯಲ್ಲ. ರಾಮನೊಂದಿಗೆ ದೇಶಾಂತರ ಹೊರಡುವುದು ರಾಮನ ತಾಯಿ ಅಪರಾಜಿತೆಯ ಸೂಚನೆಯ ಮೇರೆಗೆ. ಅಂತ್ಯದಲ್ಲಿ ಸೀತೆಯ ಪಾತ್ರ ಲೌಕಿಕವನ್ನು ಮೀರಿ ಆಧ್ಯಾತ್ಮದ ನೆಲೆಗೇರುತ್ತದೆ. ಪ್ರಜೆಗಳ ದೋಷಾರೋಪಣೆಯಿಂದಾಗಿ ರಾಮ ತನ್ನನ್ನು ಕಾಡಿಗಟ್ಟಿದರೂ ವಜ್ರಜಂಘನ ಆಶ್ರಯದಲ್ಲಿ ಕುಶ, ಲವರನ್ನು ಹೆತ್ತು ಬೆಳೆಸಿ, ಅವರು ಯುದ್ಧದಲ್ಲಿ ರಾಮಲಕ್ಷ್ಮಣರನ್ನು ಸೋಲಿಸಿದಾಗ ರಾಮನು ಸೀತೆಯನ್ನು ಮರಳಿ ಕರೆಸಿಕೊಳ್ಳಬೇಕೆಂದು ಎಲ್ಲರೂ ಒತ್ತಾಯ ಮಾಡುತ್ತಾರೆ. ಆಗ ದಿವ್ಯದ ಮೂಲಕ ಶುದ್ಧಳಾಗಿ ಬರಲೆಂಬ ರಾಮನ ಆದೇಶದಂತೆ ಸೀತೆ ಅಗ್ನಿಪ್ರವೇಶ ಮಾಡಿ ತನ್ನ ಪುಣ್ಯದ ಪ್ರಭಾವದಿಂದ ಯಾವ ಹಾನಿಗೂ ಒಳಗಾಗದೆ ಉಳಿದುಕೊಳ್ಳುತ್ತಾಳೆ. ರಾಮನು ಆಕೆಯನ್ನು ಮರಳಿ ಬಾ ಎಂದು ಆಹ್ವಾನಿಸಿದಾಗ ಸೀತೆ 'ಕೇಡುಳ್ಳ ಸಂಸಾರದೊಳಪ್ಪುದೇಂ, ಕೇಡಿಲ್ಲದೆ ಮೋಕ್ಷಸುಖಕ್ಕೆ ಕಾರಣಮಪ್ಪ ತಪಮಂ ಕಯ್ಕೊಳ್ವೆಂ' ಎಂದು ಸಕಲಭೂಷಣ ಕೇವಲಿ ಭಟ್ಟಾರಕರ ಸಭೆಯಲ್ಲಿ ದೀಕ್ಷೆ ಪಡೆದು ಆರ್ಯಿಕೆಯಾಗುತ್ತಾಳೆ.

ಮಂಡೋದರಿಯ ಪಾತ್ರ ಪಂಪರಾಮಾಯಣದಲ್ಲಿ ಸ್ವಲ್ಪ ಭಿನ್ನವಾಗಿ ಚಿತ್ರಣಗೊಂಡಿದೆ. ಪತಿವ್ರತೆಯಾದ ಆಕೆ ರಾವಣ ಸೀತೆಯ ಬಗ್ಗೆ ಮೋಹ ತಳೆದಿರುವುದನ್ನು ತಿಳಿದಾಗ, ಅವಳು ತನ್ನ ವಶವಾಗದಿದ್ದಲ್ಲಿ ತನ್ನ ಪ್ರಾಣ ಹೋಗುವುದೆಂದು ರಾವಣ ವ್ಯಾಕುಲಗೊಂಡಾಗ, ಸೀತೆಯಲ್ಲಿ

ರಾವಣನ ಬಗ್ಗೆ ಮೋಹ ಹುಟ್ಟಿಸಲು ತಾನೇ ಮುಂದಾಗುತ್ತಾಳೆ. ಆದರೆ ಸೀತೆ ಅವಳ ಮಾತಿಗೆ ಕೋಪಗೊಳ್ಳುತ್ತಾಳೆ. ಹನುಮಂತ ಸೀತೆಗೆ ರಾಮನ ಸಂದೇಶ ಹೊತ್ತುತಂದಾಗ ಮಂಡೋದರಿಯೂ ಅಲ್ಲೇ ಇರುತ್ತಾಳೆ. ತಮ್ಮ ಬಂಧುವಾದ ಹನುಮ ಈಗ ರಾವಣನ ಶತ್ರುವಾದ ರಾಮನ ಪರವಾಗಿ ಬಂದಿರುವುದನ್ನು ಕೇಳಿ ಕನಲುತ್ತಾಳೆ. ಹನುಮ, ಸುಗ್ರೀವರನ್ನು ರಾವಣ ಕೊಲ್ಲದೆ ಮಾಣನು ಎಂದು ಆತ್ಮವಿಶ್ವಾಸದಿಂದ ನುಡಿದಾಗ, ಸೀತೆ ರಾಮನು ಲಂಕೆಗೆ ಶೀಘ್ರವಾಗಿ ಬಂದು ರಾವಣನನ್ನು ಕೊಂದು ಮಂಡೋದರಿಗೆ ಅಪಾರ ದುಃಖ ಉಂಟುಮಾಡುತ್ತಾನೆಂದು ನುಡಿಯುತ್ತಾಳೆ. ಅದನ್ನು ಕೇಳಿ ಮಂಡೋದರಿ ಚಂಡಿಕೆಯಾಗುತ್ತಾಳೆ.

ಕೇಸುರಿ ಸೂಸೆ ತನ್ನ ಮೊಗದಿಂ ಕಿಡಿ ಜೀಟ್ಟೆರೆ ತನ್ನ ಕಣ್ಗಳಿಂ
ದಾಸುರಮಾಗೆ ದಾಡೆಗಳೊಡಲ್ ಬಳೆದಂಬರಮಂ ತಱುಂಬೆ ತ
ನ್ನಾಸುಕರಂ ಕರಂ ದೆಸೆಗಗುರ್ವಿಸೆ ಕಯ್ಗಳನೆತ್ತಿ ಪೊಯ್ದಳ್

ಎಂದು ಕವಿ ಅವಳ ಭೀಕರ ರೂಪವನ್ನು ವರ್ಣಿಸುತ್ತಾನೆ. ಆದರೆ ಸ್ವಭಾವತಃ ಮಂಡೋದರಿ ಸುಸಂಸ್ಕೃತಳೇ ಆಗಿದ್ದುದರಿಂದ ಕೊನೆಗೆ ರಾವಣ ಯುದ್ಧದಲ್ಲಿ ಹತನಾದ ನಂತರ ಆರ್ಯಿಕಾದೀಕ್ಷೆ ಕೈಗೊಂಡು ಕಾಯಕ್ಲೇಶ ಸಹಿಸಿ ತಪಸ್ಸನ್ನು ಮಾಡಿ ವಿಹರಿಸುತ್ತಾ ಧರ್ಮಧ್ಯಾನದಿಂದ ಮುಡಿಪಿ ಈಶಾನಕಲ್ಪವನ್ನು ಸೇರುತ್ತಾಳೆ.

ಶೂರ್ಪನಖಿ: ವಾಲ್ಮೀಕಿ ರಾಮಾಯಣದಲ್ಲಿ ಅವಿವಾಹಿತೆ. ರಾವಣ, ಖರ ದೂಷಣರ ತಂಗಿ. ರಾಮನಲ್ಲಿ ಮೋಹಿತನಾಗಿ ಲಕ್ಷ್ಮಣನಿಂದ ಕಿವಿ, ಮೂಗುಗಳನ್ನು ಕೊಯ್ಯಿಸಿಕೊಂಡು ಕ್ರೋಧದಿಂದ ಪ್ರತೀಕಾರ ಮನೋಭಾವವನ್ನು ಹೊಂದಿ ಸೀತೆಯ ಅಪಹರಣಕ್ಕೆ ಕಾರಣಳಾಗುತ್ತಾಳೆ. ಪಂಪರಾಮಾಯಣದಲ್ಲಿ ಈ ಪಾತ್ರದ ಹೆಸರು ಕೂಡಾ ಬದಲಾಗಿದೆ. ಚಂದ್ರನಖಿ ಎಂದು. ಈಕೆ ಖರನ ಪತ್ನಿ. ಇವರ ಪುತ್ರ ಶಂಬುಕ. ಸೂರ್ಯಹಾಸ ಖಡ್ಗವನ್ನು ಸಾಧಿಸಿಕೊಳ್ಳಲು ಘೋರ ತಪಸ್ಸು ಮಾಡಿ ಇನ್ನೇನು ಫಲಪ್ರದವಾಯಿತೆನ್ನುವಾಗ ಆ ಖಡ್ಗವು ಲಕ್ಷ್ಮಣನ ಕೈಸೇರಿ ಅದರಿಂದಲೇ ಶಂಬುಕನು ಹತನಾಗುತ್ತಾನೆ. ತನ್ನ ಮಗನನ್ನು ಕೊಂದವನನ್ನು ನಾಶಗೈಯಲೆಂದು ಹೆಜ್ಜೆಗುರುತನ್ನು ಅನುಸರಿಸಿ ರಾಮ, ಲಕ್ಷ್ಮಣರಿದ್ದ ಸ್ಥಳಕ್ಕೆ ಬರುತ್ತಾಳೆ. ಲಕ್ಷ್ಮಣನ ಆಕರ್ಷಕ ರೂಪವನ್ನು ನೋಡಿ ಕಾಮವಿಕಾರಕ್ಕೊಳಗಾಗುತ್ತಾಳೆ. ಲಕ್ಷ್ಮಣನಿಂದ ನಿರಾಕರಿಸಲ್ಪಟ್ಟು ದುಃಖದಿಂದ ಹಿಂದಿರುಗಿ ಪತಿಯಲ್ಲಿ ರಾಮ, ಲಕ್ಷ್ಮಣರ ಬಗ್ಗೆ ದೂರುತ್ತಾಳೆ. ಖರ, ದೂಷಣರು ಯುದ್ಧದಲ್ಲಿ ಸತ್ತ ನಂತರ ರಾವಣನಲ್ಲಿಗೆ ಬಂದು ಸೀತೆಯನ್ನು ಅವನಿಗೆ ಪತ್ನಿಯಾಗಿ ತರುವ ಪ್ರಯತ್ನದಲ್ಲಿ ತನಗೀ ಗತಿ ಬಂತೆಂದು ಸುಳ್ಳು ಹೇಳುತ್ತಾಳೆ. ಕಾಮವಿಕಾರ ತಾಯ್ತನದ ಭಾವನೆಯನ್ನೂ ಮೀರಿ ಸ್ತ್ರೀಯನ್ನು ಎಂಥ ನೀಚಮಟ್ಟಕ್ಕೆ ಇಳಿಸಬಹುದೆಂಬುದಕ್ಕೆ ಚಂದ್ರನಖಿಯ ಪಾತ್ರ ಒಂದು ನಿದರ್ಶನವಾಗಿದೆ.

ಸನ್ನಿವೇಶ ನಿರೂಪಣೆ

ಕಥಾ ಚೌಕಟ್ಟು ಸಮಾನವಾಗಿದ್ದರೂ, ಎರಡೂ ಕಾವ್ಯಗಳಲ್ಲಿ ಕೆಲವು ಘಟನೆಗಳ, ಸನ್ನಿವೇಶಗಳ ನಿರೂಪಣೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಒಂದೇ ಘಟನೆ ಬೇರೆ ಬೇರೆ ರೀತಿಯಲ್ಲಿ ವರ್ಣಿಸಲ್ಪಟ್ಟಿದೆ ಅಥವಾ ಕೆಲವು ಘಟನೆಗಳು ಬಿಟ್ಟುಹೋಗಿವೆ ಇಲ್ಲವೇ ಹೊಸ ಘಟನೆ/ ಸನ್ನಿವೇಶ ಚಿತ್ರಣಗೊಂಡಿದೆ.

ರಾಮನ ಜನನ ಸಂದರ್ಭವನ್ನು ಗಮನಿಸಿದಲ್ಲಿ ವಾಲ್ಮೀಕಿ ರಾಮಾಯಣದ ಅನುಸಾರ ದಶರಥ ಪುತ್ರಕಾಮೇಷ್ಟಿ ಯಾಗ ಮಾಡಿ ಪ್ರಸಾದವಾಗಿ ಸ್ವೀಕರಿಸಿದ ಪಾಯಸವನ್ನು ಪತ್ನಿಯರಿಗೆ ಹಂಚಿ ನಾಲ್ಕು ಮಕ್ಕಳನ್ನು ಪಡೆಯುತ್ತಾನೆ. ಪಂಪ ರಾಮಾಯಣದಲ್ಲಿ ಯಾಗದ ಪ್ರಸ್ತಾಪವಿಲ್ಲ. ಸಹಜವಾಗಿ ರಾಮ ಮತ್ತು ಅವನ ಸೋದರರ ಜನನವಾಗುತ್ತದೆ.

ಪಂಪರಾಮಾಯಣದ ಅನುಸಾರ ಸೀತೆ ಅಯೋನಿಜೆಯಲ್ಲ. ಜನಕನಿಗೆ ವಿದೇಹಿಯಲ್ಲಿ ಸೀತೆ ಮತ್ತು ಪ್ರಭಾಮಂಡಲ ಎಂಬ ಅವಳಿ ಮಕ್ಕಳು ಜನಿಸುತ್ತಾರೆ.

ತಾಟಕಾಸಂಹಾರದ ಘಟನೆ ಪಂಪರಾಮಾಯಣದಲ್ಲಿ ಇಲ್ಲ. ಬದಲಿಗೆ ಜನಕ ಶಬರಕುಲವನ್ನೂ ಕಿರಾತರ ಕಾಟವನ್ನೂ ನಿವಾರಿಸಲು ದಶರಥನ ಸಹಾಯ ಕೋರುತ್ತಾನೆ. ರಾಮ, ಲಕ್ಷ್ಮಣರು ಆ ಕೆಲಸಕ್ಕೆ ತಾವೇ ಹೋಗುತ್ತೇವೆಂದು ತಂದೆಯ ಅನುಮತಿ ಪಡೆದು ಹೋಗುತ್ತಾರೆ. ಶತ್ರುಗಳ ಕಾಟ ನಿವಾರಿಸಿದ ಅವರ ಉಪಕಾರಕ್ಕೆ ಪ್ರತಿಯಾಗಿ ಜನಕ ಸೀತೆಯನ್ನು ರಾಮನಿಗೆ ವಿವಾಹ ಮಾಡಿಕೊಡಲು ನಿಶ್ಚಯಿಸುತ್ತಾನೆ. ಆದರೆ ಹುಟ್ಟುತ್ತಲೇ ವಿದ್ಯಾಧರನಿಂದ ಅಪಹೃತನಾಗಿದ್ದ ಪ್ರಭಾಮಂಡಲ ತನ್ನ ತಂಗಿ ಎಂಬುದನ್ನರಿಯದೆ ಸೀತೆಯನ್ನು ವಿವಾಹವಾಗಲು ಅಪೇಕ್ಷಿಸಿದಾಗ ಅವನ ಸಾಕುತಂದೆ ಇಂದುಗತಿಯ ಸೂಚನೆಯಂತೆ ಧನುರ್ಭಂಗ ಮಾಡುವ ಸ್ಪರ್ಧೆ ಏರ್ಪಡುತ್ತದೆ. ರಾಮ ಆ ಸ್ಪರ್ಧೆಯಲ್ಲಿ ಜಯಶಾಲಿಯಾಗಿ ಸೀತೆಯನ್ನು ವರಿಸುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿ ಸೀತೆಯ ಅಪಹರಣ ಪೂರ್ವ ನಿಯೋಜಿತ. ರಾವಣ ಸನ್ಯಾಸಿಯ ವೇಷ ಧರಿಸಿ ಸೀತೆಯನ್ನು ಅಪಹರಿಸುತ್ತಾನೆ. ಪಂಪ ರಾಮಾಯಣದಲ್ಲಿ ರಾವಣನು ತನ್ನ ತಂಗಿ ಚಂದ್ರನಖಿಯ ಮಗನನ್ನು ಕೊಂದವನನ್ನು ನಾಶ ಮಾಡಲೆಂದು ಬಂದವನು ರಾಮನ ಪಕ್ಕದಲ್ಲಿದ್ದ ಸೀತೆಯನ್ನು ಕಂಡು ಮೋಹವಶನಾಗುತ್ತಾನೆ. ಅವಲೋಕಿನೀ ವಿದ್ಯೆಯ ಸಹಾಯದಿಂದ ರಾಮನು ಸೀತೆಯನ್ನು ಅಗಲಿ ಲಕ್ಷ್ಮಣನ ಬಳಿ ಹೋಗುವಂತೆ ಮಾಡಿ ಸೀತೆಯನ್ನು ಅಪಹರಿಸುತ್ತಾನೆ.

ಪಂಪ ರಾಮಾಯಣದಲ್ಲಿ ರಾವಣನ ವಂಶವೃತ್ತಾಂತ ದೀರ್ಘವಾಗಿದೆ. ಅವನ ಪೂರ್ವಜರ, ವಿದ್ಯಾಧರರ, ರಾಕ್ಷಸರ ರಾಜ್ಯಗಳು, ರಾವಣನ ದಿಗ್ವಿಜಯಗಳು, ಅವನ ಔದಾರ್ಯ, ಸೌಶೀಲ್ಯ,

ಪರಾಕ್ರಮ ಇವುಗಳನ್ನು ನಿರೂಪಿಸುವ ಘಟನಾವಳಿಗಳು, ಆಕರ್ಷಕ ಉಪಾಖ್ಯಾನಗಳಾಗಿ ಚಿತ್ರಣಗೊಂಡಿವೆ.*

ರಾಮನು ವನವಾಸಕ್ಕೆ ಹೊರಟ ಕಾರಣ ಎರಡೂ ಕಾವ್ಯಗಳಲ್ಲಿ ಸ್ವಲ್ಪ ಬೇರೆಯಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ಮಂಥರೆಯ ದುರ್ಬೋಧನೆಯಿಂದ ಕೈಕೇಯಿ ಭರತನಿಗೆ ರಾಜ್ಯವನ್ನೂ ರಾಮನಿಗೆ ಹದಿನಾಲ್ಕು ವರ್ಷ ವನವಾಸವನ್ನೂ ದಶರಥನಿಂದ ವರವಾಗಿ ಪಡೆಯುತ್ತಾಳೆ. ಪಂಪರಾಮಾಯಣದ ಅನುಸಾರ ದಶರಥನು ರಾಮನಿಗೆ ಪಟ್ಟಗಟ್ಟಿ ತಾನು ದೀಕ್ಷೆ ಪಡೆಯಲು ನಿರ್ಧರಿಸುತ್ತಾನೆ. ಆಗ ಭರತನೂ ವೈರಾಗ್ಯಭಾವ ತಳೆದು ತಾನೂ ದೀಕ್ಷೆ ಪಡೆಯುವೆನೆಂದು ಹೇಳುತ್ತಾನೆ. ಮಗನನ್ನು ಲೌಕಿಕ ಜೀವನದಲ್ಲಿ ಉಳಿಸಿಕೊಳ್ಳಲು ಕೈಕೇಯಿ ಅವನಿಗಾಗಿ ಹದಿನಾಲ್ಕು ವರ್ಷ ರಾಜ್ಯ ಬೇಡುತ್ತಾಳೆ. ಲಕ್ಷ್ಮಣನೂ ಪ್ರಜೆಗಳೂ ಇದನ್ನು ವಿರೋಧಿಸಿ ಪ್ರತಿಭಟಿಸಿದಾಗ ರಾಮನೇ ತಾನು ಅಲ್ಲೇ ಇದ್ದರೆ ಪರಿವಾರ ಸುತ್ತುಗಟ್ಟಿ ತನ್ನ ಗುಣ ಹಾನಿಯಾಗುತ್ತದೆ, ಆದುದರಿಂದ ತಾನು ದೇಶಾಂತರ ತಿರುಗುತ್ತ ತನ್ನ ಬಾಹುಬಲದಿಂದ ಅಹಿತರನ್ನೂ ಬಲಿಷ್ಠರನ್ನೂ ಗೆಲ್ಲುತ್ತೇನೆ ಎಂದು ನಿರ್ಧರಿಸಿ ಅಯೋಧ್ಯೆಯನ್ನು ತೊರೆದು ಹೋಗುತ್ತಾನೆ. ಇಲ್ಲಿ ಅವನು ಹೊರಟದ್ದು ವನವಾಸಕ್ಕಾಗಿ ಅಲ್ಲ. ಆದುದರಿಂದ ಮುಂದೆ ಅವನು ತನ್ನ ಪ್ರಯಾಣದಲ್ಲಿ ನಗರಗಳಲ್ಲೂ ತಂಗಿ, ರಾಜರುಗಳ ಸ್ನೇಹ ಬೆಳೆಸುತ್ತಾನೆ. ತಪ್ಪು ಮಾಡಿದವರನ್ನು ನಿಗ್ರಹಿಸಿ ಶಿಷ್ಟರಿಗೆ ನೆರವಾಗುತ್ತಾನೆ.

ಸೀತೆಯು ಸ್ವತಃ ರಾಮನನ್ನು ಅನುಸರಿಸಿ ಕಾಡಿಗೆ ಹೋಗಲು ನಿಶ್ಚಯಿಸಿದಳೆಂದು ವಾಲ್ಮೀಕಿಯ ನಿರೂಪಣೆಯಾಗಿದ್ದರೆ ಇಲ್ಲಿ ರಾಮನ ತಾಯಿ ಅಪರಾಜಿತೆ ಸೀತೆಯೂ ರಾಮನೊಂದಿಗೆ ದೇಶಾಂತರ ಹೊರಡುತ್ತಾಳೆ ಎಂದು ಸೂಚಿಸುತ್ತಾಳೆ.

ವಾಲ್ಮೀಕಿ ರಾಮಾಯಣದಲ್ಲಿ ಕಬಂಧನ ಸೂಚನೆಯಂತೆ ರಾಮಲಕ್ಷ್ಮಣರು ಋಷ್ಯಮೂಕ ಪರ್ವತಕ್ಕೆ ಬಂದು ಸುಗ್ರೀವ, ಹನುಮಂತರನ್ನು ಭೇಟಿಯಾಗುತ್ತಾರೆ, ವಾಲಿಯನ್ನು ವಧಿಸಿ ಸುಗ್ರೀವನ ಸಖ್ಯ ಬೆಳೆಸುತ್ತಾರೆ. ಪಂಪರಾಮಾಯಣದಲ್ಲಿ ಸುಗ್ರೀವನನ್ನು ರಾಜ್ಯದಿಂದ ಓಡಿಸಿದ್ದು ವಾಲಿಯಲ್ಲ, ಸುಗ್ರೀವನ ರೂಪವನ್ನೇ ಧರಿಸಿದ ಸಾಹಸಗತಿ ಎಂಬುವನು. ಅವನನ್ನು ಕೊಂದು ರಾಮನು ಸುಗ್ರೀವನ ಸ್ನೇಹ ಬೆಳೆಸುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿ ರಾವಣನ ಮಗ ಇಂದ್ರಜಿತು ಹಾಗೂ ತಮ್ಮ ಕುಂಭಕರ್ಣ ಯುದ್ಧದಲ್ಲಿ ಮೃತರಾದರೆ ಪಂಪರಾಮಾಯಣದಲ್ಲಿ ಸೆರೆಯಾಗುತ್ತಾರೆ. ರಾಮನು ಅವರನ್ನು ಬಿಡುಗಡೆ ಮಾಡುತ್ತಾನೆ. ಕೊನೆಗೆ ಅವರು ದೀಕ್ಷೆ ಪಡೆದು ತಪಗೈದು ಕೇವಲಿಗಳಾಗುತ್ತಾರೆ.

---

* 'ರವಿಷೇಣನ ರಾಮಾಯಣ' ಕೃತಿಯ ಪ್ರಸ್ತಾವನೆಯಲ್ಲಿ ಮಿರ್ಜಿ ಅಣ್ಣಾರಾಯರು ಪುರಾಣೋಕ್ತ ವಿವಿಧ ರಾಜವಂಶಗಳ ಪರಂಪರೆ ಹಾಗೂ ರಾಮಾಯಣ ಕಾಲದ ಭೌಗೋಳಿಕ ವಿವರಗಳನ್ನು ವಿವರವಾಗಿ ಚರ್ಚಿಸಿ ಕುತೂಹಲಕರ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ.

ರಾವಣನ ದಿವ್ಯಾಸ್ತ್ರದಿಂದ ಮೂರ್ಛಿತನಾದ ಲಕ್ಷ್ಮಣನಿಗಾಗಿ ಹನುಮಂತನು ಹಾರಿಹೋಗಿ ಸಂಜೀವನಿ ಮೂಲಿಕೆಗಾಗಿ ಪರ್ವತವನ್ನೇ ಹೊತ್ತುತಂದನೆಂದು ವಾಲ್ಮೀಕಿ ರಾಮಾಯಣದ ನಿರೂಪಣೆ. ನಾಗಚಂದ್ರನಲ್ಲಿ ಈ ಪ್ರಸಂಗ ಬೇರೆ ರೀತಿಯಲ್ಲಿ ನಿರೂಪಿತಗೊಂಡಿದೆ. ಲಕ್ಷ್ಮಣನ ಸುತ್ತ ಸುಗ್ರೀವನು ತನ್ನ ವಿದ್ಯಾಬಲದಿಂದ ಏಳು ಸುತ್ತು ಪೌಳಿಗಳನ್ನು ನಿರ್ಮಿಸಿ ವಿದ್ಯಾಧರರನ್ನು ಕಾವಲಿರಿಸಿ ಪ್ರಭಾಮಂಡಲ ಹಾಗೂ ಅತಿಚಂದ್ರರ ಸೂಚನೆಯಂತೆ ಹನುಮಂತನನ್ನು ಸಾಕೇತನಗರಕ್ಕೆ ಕಳುಹಿಸುತ್ತಾನೆ. ಸರ್ವೌಷಧಿಪ್ರಾಪ್ತೆಯಾದ ವಿಶಲ್ಯಾಸುಂದರಿಯನ್ನು ಕರೆಯಿಸುತ್ತಾನೆ. ಅವಳು ಲಕ್ಷ್ಮಣನನ್ನು ಸ್ಪರ್ಶಿಸಿ ಸುರಭಿಸಲಿಲವನ್ನು ಅವನ ಮೇಲೆ ಪ್ರೋಕ್ಷಿಸಿ ಎಚ್ಚರಿಸುತ್ತಾಳೆ.

ರಾವಣನು ತನ್ನ ಮೇಲೆ ಪ್ರಯೋಗಿಸಿದ ಚಕ್ರಾಯುಧವನ್ನು ಅವನ ಮೇಲೇ ಪ್ರಯೋಗಿಸಿ ಲಕ್ಷ್ಮಣನು ರಾವಣನನ್ನು ಕೊಲ್ಲುತ್ತಾನೆ.

ರಾಮನು ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗಿದ ನಂತರ ಭರತನು ದೇಶಭೂಷಣ ಮುನಿಗಳಿಂದ ತನ್ನ ಭವಾವಳಿಯನ್ನು ಕೇಳಿ ತಿಳಿದು ದೀಕ್ಷೆ ಸ್ವೀಕರಿಸಿ ತಪಗೈದು ನಿರ್ವಾಣ ಹೊಂದುತ್ತಾನೆ. ಕೈಕೇಯಿಯೂ ಆರ್ಯಿಕೆಯಾಗಿ ತಪವನ್ನಾಚರಿಸಿ ಸ್ವರ್ಗ ಪಡೆಯುತ್ತಾಳೆ.

ವಾಲ್ಮೀಕಿ ರಾಮಾಯಣದಲ್ಲಿ ಸೀತೆಯ ಅಗ್ನಿಪ್ರವೇಶದ ಪ್ರಸಂಗ ರಾವಣನ ವಧೆಯಾದ ಕೂಡಲೇ ಜರುಗುತ್ತದೆ. ರಾಮನು ತನ್ನ ವಂಶದ ಗೌರವವನ್ನು ಉಳಿಸಲಿಕ್ಕಾಗಿ, ತನ್ನ ಚಾರಿತ್ರ್ಯಕ್ಕೆ ತಗುಲಬಹುದಾದ ಕಳಂಕವನ್ನು ನಿವಾರಿಸಲಿಕ್ಕಾಗಿ ಮಾತ್ರ ತಾನು ರಾವಣನನ್ನು ವಧಿಸಿದೆನೆಂದೂ ಸೀತೆಯು ತನ್ನ ಮುಂದಿನ ಬದುಕನ್ನು ಯಾರಲ್ಲಿಯಾದರೂ ಕಳೆಯಬಹುದೆಂದು ಹೇಳಿದಾಗ ಸೀತೆ ಅಪವಾದವನ್ನು ಸಹಿಸಲಾರದೆ ಅಗ್ನಿಪ್ರವೇಶ ಮಾಡುತ್ತಾಳೆ. ಪಂಪ ರಾಮಾಯಣದಲ್ಲಿ ರಾಮ, ಸೀತಾ, ಲಕ್ಷ್ಮಣರು ಅಯೋಧ್ಯೆಗೆ ಹಿಂದಿರುಗಿ ಸುಖವಾಗಿ ರಾಜ್ಯಭಾರ ಮಾಡುತ್ತಿದ್ದಾಗ ರಾಮನ ಕೆಲವರು ಪ್ರಜೆಗಳು ಅವನಲ್ಲಿಗೆ ನೇರವಾಗಿ ಬಂದು ರಾವಣನ ಮನೆಯಲ್ಲಿದ್ದ ಸೀತೆಯನ್ನು ಮರಳಿ ರಾಣಿಯಾಗಿ ಇರಿಸಿಕೊಂಡಿದ್ದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾರೆ. ರಾಮನು ಅವರ ಮಾತಿಗೆ ಮನ್ನಣೆ ಕೊಟ್ಟು ಸೀತೆಯನ್ನು ಕೃತಾಂತವಕ್ತ್ರನೆಂಬ ಚಾರನ ಜೊತೆ ಕಾಡಿಗಟ್ಟುತ್ತಾನೆ.

ಪಂಪರಾಮಾಯಣದಲ್ಲಿ ಸೀತೆಗೆ ಆಶ್ರಯ ನೀಡುವವನು ವಜ್ರಜಂಘ. ಇಲ್ಲಿ ಲವಕುಶರು ತಂದೆಯನ್ನು ಭೇಟಿ ಮಾಡುವ ಸಂದರ್ಭವೂ ಬೇರೆಯಾಗಿದೆ. ಇಲ್ಲಿ ಅಶ್ವಮೇಧ ಯಾಗದ ಪ್ರಸಂಗವಿಲ್ಲ. ನಾರದರಿಂದ ತಮ್ಮ ತಂದೆಯ ವಿಚಾರ ತಿಳಿದ ಲವ, ಕುಶರು ಅಯೋಧ್ಯೆಯ ಮೇಲೆ ದಂಡೆತ್ತಿ ಹೋಗಿ ಜಯ ಗಳಿಸುತ್ತಾರೆ. ರಾಮನ ಆದೇಶದಂತೆ ಸೀತೆ ದಿವ್ಯದ ಮೂಲಕ ತನ್ನ ಪಾವಿತ್ರ್ಯವನ್ನು ಸಿದ್ಧ ಮಾಡಿದರೂ ಮರಳಿ ರಾಮನ ಜೊತೆ ಹೋಗುವುದಿಲ್ಲ. ದೀಕ್ಷೆ ಪಡೆಯುತ್ತಾಳೆ.

ರಾಮನ ಮುಂದಿನ ಬದುಕಿನ ಚಿತ್ರಣ ಪಂಪರಾಮಾಯಣದಲ್ಲಿ ಮಾತ್ರ ನಿರೂಪಣೆಗೊಂಡಿದೆ. ರಾಮ, ಲಕ್ಷ್ಮಣರ ಗಾಢವಾದ ಮೋಹದಿಂದ ರಾಮನು ಇನ್ನೂ

ವೈರಾಗ್ಯಪರನಾಗಿಲ್ಲವೆಂದು ದೇವತೆಗಳು ಮಾಯೆಯಿಂದ ರಾಮನ ಸಾವು ಉಂಟಾಗದಂತೆ ಲಕ್ಷ್ಮಣನಿಗೆ ಭ್ರಾಂತಿಯುಂಟು ಮಾಡುತ್ತಾರೆ. ಲಕ್ಷ್ಮಣ ಅಣ್ಣನ ಸಾವಿನ ಶೋಕ ತಾಳಲಾರದೆ ಗತಪ್ರಾಣನಾಗುತ್ತಾನೆ. ರಾಮನು ತಮ್ಮನ ಮೇಲಿನ ಮೋಹದಿಂದ ಅವನ ಹೆಣವನ್ನು ಸಂಸ್ಕಾರ ಮಾಡಲು ಕೊಡದೆ ಹೆಗಲ ಮೇಲೆ ಹೊತ್ತುಕೊಂಡು ತಿರುಗುತ್ತಿರುತ್ತಾನೆ. ಆಗ ಜಟಾಯು, ಕೃತಾಂತವಕ್ತ್ರ ದೇವರುಗಳು ಅವನಿಗೆ ಅನೇಕ ದೃಷ್ಟಾಂತಗಳನ್ನು, ಹೋಲಿಕೆಗಳನ್ನು ಕೊಟ್ಟು ಅವನ ಮೋಹಾಂಧಕಾರವನ್ನು ಕಳೆಯುತ್ತಾರೆ. ರಾಮನು ಲಕ್ಷ್ಮಣನ ಹೆಣಕ್ಕೆ ಯಥಾವಿಧಿ ಸಂಸ್ಕಾರ ಮಾಡಲು ಕೊಟ್ಟು, ತಾನು ದೀಕ್ಷೆ ವಹಿಸಿ ತಪವನ್ನಾಚರಿಸಿ ಕರ್ಮಕ್ಷಯ ಮಾಡಿಕೊಂಡು ನಿರ್ವಾಣ ಹೊಂದುತ್ತಾನೆ.

ಇತರೆ : ವಾಲ್ಮೀಕಿ ರಾಮಾಯಣದಲ್ಲಿರುವಂತೆ ಇಲ್ಲಿ ಅವತಾರದ ಕಲ್ಪನೆ ಇಲ್ಲ. ಇಲ್ಲಿ ಎಲ್ಲರೂ ಮನುಷ್ಯರೇ. ಆದರೆ ಸತ್ವಶಾಲಿಗಳು. ಕೇವಲಿಗಳಾಗುವ ಸಾಮರ್ಥ್ಯವುಳ್ಳವರು. ಅಲ್ಲಿ ಖಳರಾಗಿರುವವರು ಇಲ್ಲಿ ಶೂರರಾಗಿ ಪುರುಷಶ್ರೇಷ್ಠರಾಗಿ ಚಿತ್ರಿತಗೊಂಡಿರುವುದು ಕಾವ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿದೆ. ಒಂದು ವ್ಯಕ್ತಿ, ಅಥವಾ ಸನ್ನಿವೇಶದ ಬೇರೆ ಬೇರೆ ಮುಖಗಳನ್ನು ಸಾಧ್ಯವಾದಷ್ಟೂ ಪೂರ್ಣವಾಗಿ ಗ್ರಹಿಸಲು, ಸಮನ್ವಯ ಸಾಧಿಸಲು ಸಾಧ್ಯವಾಗಿದೆ. ಜೈನಧರ್ಮದ ಅನೇಕಾಂತವಾದದ ಹಿನ್ನೆಲೆಯಲ್ಲಿ ಪಾತ್ರಗಳ ವಿಭಿನ್ನ ಮುಖಗಳನ್ನು ಅರ್ಥೈಸಿಕೊಂಡು ಸೂಕ್ತವಾಗಿ ಅನಾವರಣಗೊಳಿಸಿರುವುದು ನಾಗಚಂದ್ರನ ವೈಶಿಷ್ಟ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಓದುಗರು ಈ ಸಂಗ್ರಹಾನುವಾದವನ್ನು ಓದಿ ಕಾವ್ಯದ ಸ್ವಾರಸ್ಯವನ್ನು ಆಸ್ವಾದಿಸಿ ಮೂಲಕೃತಿಯನ್ನು ಓದಬೇಕೆಂಬ ಆಸಕ್ತಿ ಮೂಡಿದರೆ ಈ ಪ್ರಯತ್ನ ಸಾರ್ಥಕ.

ಕನ್ನಡ ಸಾಹಿತ್ಯದ ಈ ಪ್ರೌಢಕಾವ್ಯವನ್ನು ಸಾಮಾನ್ಯ ಓದುಗರೂ ಗ್ರಹಿಸಲು ಸುಲಭವಾಗುವಂತೆ ಸಿದ್ಧಮಾಡಿರುವ ಹಿರಿಯ ವಿದ್ವಾಂಸರಾದ ದಿವಂಗತ ರಾಮಚಂದ್ರ ಉಚ್ಚಿಲ ಅವರ ಈ ಸರಳ ಸಂಗ್ರಹಕ್ಕೆ ಪ್ರಸ್ತಾವನೆ ಬರೆಯಲು ಅನುವು ಮಾಡಿಕೊಟ್ಟ ಡಾ. ಶ್ರೀನಿವಾಸ ಹಾವನೂರ ಅವರಿಗೆ ಗೌರವಪೂರ್ವಕ ಕೃತಜ್ಞತೆಗಳು.

ಡಾ. ಎಸ್.ವಿ. ಸುಜಾತ

ಪ್ರಕಾಶಕೀಯ

ನಾಡಿನ ಹಿರಿಯ ಸಾಹಿತಿಗಳಲ್ಲಿ ಒಬ್ಬರಾಗಿದ್ದ ವಿದ್ವಾನ್ ರಾಮಚಂದ್ರ ಉಚ್ಚಿಲರ ಎಂಬತ್ತೈದರ ಹಿರಿಹರೆಯದಲ್ಲಿ, ಅವರು ಬಹುಕಾಲ ನಂಟು ಹೊಂದಿದ್ದ ಸೋಮೇಶ್ವರ ಉಚ್ಚಿಲದ ಕಲಾಗಂಗೋತ್ರಿ ಯಕ್ಷಗಾನ ಅಧ್ಯಯನ ಕೇಂದ್ರವು ರೂಪೀಕರಿಸಿದ ಅಭಿನಂದನ ಸಮಿತಿಯ ವತಿಯಿಂದ ದಿನಾಂಕ ೬.೧೧.೨೦೦೫ರಂದು ಹುಟ್ಟೂರ ಸನ್ಮಾನವನ್ನು ಏರ್ಪಡಿಸಿ, 'ವಜ್ರಕುಸುಮ' ಎಂಬ ಗೌರವ ಗ್ರಂಥವನ್ನು ಅವರಿಗೆ ಅರ್ಪಿಸಲಾಗಿತ್ತು. ಈ ಕಾರ್ಯಕ್ರಮದ ಮೂಲಕ 'ಕಲಾಗಂಗೋತ್ರಿ'ಯು ಸಾರ್ಥಕ ಭಾವದಿಂದ ಸಂಭ್ರಮಿಸಿತ್ತು.

ರಾಮಚಂದ್ರ ಉಚ್ಚಿಲರು ಬಹುಕಾಲದ ಹಿಂದೆಯೇ ಬರೆದಿಟ್ಟಿದ್ದ ಈ 'ಪಂಪರಾಮಾಯಣ' ಗದ್ಯ ಕಥಾನಕವು ಅವರು ಅಗಲಿ ಒಂದು ವರ್ಷ ತುಂಬುವ ಈ ಹೊತ್ತಿಗೆ ಕಲಾಗಂಗೋತ್ರಿಯ ಮೂಲಕ ಬೆಳಕಿಗೆ ಬರುತ್ತಿದೆ. ಇದು ಪ್ರಕಟವಾಗಲು ಮುಖ್ಯ ಕಾರಣಕರ್ತರೆಂದರೆ ಉಚ್ಚಿಲರ ನಿಡುಗಾಲದ ಆಪ್ತಮಿತ್ರ ಡಾ. ಶ್ರೀನಿವಾಸ ಹಾವನೂರರು. ಈ ಪ್ರಕಟಣ ಯೋಜನೆಗೆ ಪ್ರೇರಣೆ, ಮಾರ್ಗದರ್ಶನ ಅವರದೇ. ಅದಕ್ಕಾಗಿ ಕಲಾಗಂಗೋತ್ರಿ ಅವರಿಗೆ ಅತ್ಯಂತ ಆಭಾರಿಯಾಗಿದೆ.

ಈ ಕೃತಿಗೆ ವಿದ್ವತ್‌ಪೂರ್ಣ ಪ್ರಸ್ತಾವನೆಯನ್ನು ಬರೆದ ಡಾ. ಎಸ್.ವಿ. ಸುಜಾತ, ಬೆಂಗಳೂರು ಇವರಿಗೆ ಕೃತಜ್ಞರಾಗಿದ್ದೇವೆ. ಅಕ್ಷರ ಸಂಯೋಜನೆ ಮಾಡಿದ ಪ್ರಸಾಧನ್ ಕಂಪ್ಯೂಟರ್ಸ್ ಇವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಮನೋರಮಾ ಆಫ್‌ಸೆಟ್ ಪ್ರಿಂಟರ್ಸ್ ಇವರಿಗೆ ವಂದನೆಗಳು.

ರಾಮಚಂದ್ರ ಉಚ್ಚಿಲರ ಹಳಗನ್ನಡ ಸಾಹಿತ್ಯದ ಫಲಶ್ರುತಿಯಾದ ಈ ವಿಶಿಷ್ಟ ಕೃತಿ ಸಾಹಿತ್ಯ ಪ್ರಿಯರಿಗೆ ಇಷ್ಟವಾಗುತ್ತದೆಂದು ನಂಬುತ್ತೇವೆ.

ಕೆ. ಸದಾಶಿವ
ಅಧ್ಯಕ್ಷ,
ಕಲಾಗಂಗೋತ್ರಿ

ಪರಿವಿಡಿ

ಪಂಪ ರಾಮಾಯಣದ ಗದ್ಯ ಕಥಾನಕ

ಮಂಗಲಾಚರಣ

ಅರ್ಹಂತರಲ್ಲಿ ಮೋಕ್ಷ ಲಕ್ಷ್ಮೀಕಾಂತನಾಗಿರುವ ಮುನಿ ಸುವ್ರತರು ನಮಗೆ ಇಷ್ಟಾರ್ಥಸಿದ್ಧಿಯನ್ನು ಒದಗಿಸಲಿ.

ಕಾವ್ಯರಸವನ್ನು ಉತ್ಪಾದಿಸುವ ನವೀನ ಸೃಷ್ಟಿಯೂ ವಿದ್ವಾಂಸರ ಹರ್ಷವನ್ನು ಆಕರ್ಷಿಸುವ ರಚನೆಯೂ ಇದಾಗುವಂತೆ ಸರಸ್ವತೀ ದೇವಿ ಈ ಕಾವ್ಯರಂಗದಲ್ಲಿ ನಲಿಯಲಿ.

ಕಥಾನಾಯಕನು ಅನ್ಯನಾಗಿದ್ದರೆ ಕೃತಿ ಖ್ಯಾತವಾಗದು. ಉದಾತ್ತ ರಾಘವನು ನಾಯಕನಾಗಿರುವ ಕಥೆ ಲೋಕವಿಖ್ಯಾತವಾಗುವುದು ಆಶ್ಚರ್ಯವಲ್ಲ.

ವಿಪುಲಾಚಲದಲ್ಲಿ ವೀರಜಿನೇಶ್ವರನ ಪಕ್ಕದಲ್ಲಿದ್ದು ಜನರ ವೈಶಿಷ್ಟ್ಯಗಳನ್ನು ಗುಣಾಗ್ರಣಿಯಾದ ಮಗಧಾಧಿಪತಿಗೆ ಹೇಳಿದ ಈ ರಾಮಕಥೆಯನ್ನು ಇಲ್ಲಿ ಹೇಳಲಿರುವೆನು.

ಕಥಾರಂಭ

ನಾಡುಗಳಲ್ಲಿ ಕೌಶಲದೇಶ, ಪಟ್ಟಣಗಳಲ್ಲಿ ಸಾಕೇತ ನಗರ - ಇವೇ ಶ್ರೇಷ್ಠವೆಂದು ತಿಳಿದು ದೇವೇಂದ್ರನು ಅದನ್ನು ಮನ್ಮಥನಿಂದ ಪಡೆದು, ಎರಕ ಹೊಯ್ಯಿಸಿ ನಾಭಿರಾಜನಿಗೆ ಕೊಟ್ಟನು. ಇಂಥ ನಾಡನ್ನು, ಬೀಡನ್ನು ಒಂದು ನಾಲಗೆಯಿಂದ ವರ್ಣಿಸುವುದು ಸಾಧ್ಯವೆ? ಹೀಗೆ ನಾಡೆಂಬ ವಿಲಾಸಿಗೆ ರತ್ನಖಚಿತವಾದ ಕನ್ನಡಿ ಎನಿಸಿದ ಅಯೋಧ್ಯೆಯಲ್ಲಿ ನಾಭಿಯೂ, ಅವನ ಮಗನಾದ ಆದಿಬ್ರಹ್ಮ, ಅಲ್ಲಿಂದ ಷಟ್ಖಂಡ ಭೂಪತಿಯಾದ ಭರತ, ಆತನ ಮಗ ಅರ್ಕಕೀರ್ತಿ, ಇವರು ವಿಖ್ಯಾತರಾಗಿ ಆಳಿದಂಥ ಇಕ್ಷ್ವಾಕು ವಂಶವು ಸದ್ಗುಣ ಪತಾಕೆಯೆನ್ನುವಂತೆ ಪ್ರಸಿದ್ಧಿಯನ್ನು ಪಡೆಯಿತು.

ಆ ವಂಶದಲ್ಲಿ ವಿನೀತಪುರವನ್ನು ಆಳಿದ ಅನರಣ್ಯನೆಂಬ ಅರಸನು ಆಗಿ ಹೋದನು. ಅವನ ವಲ್ಲಭೆ ಸೌಂದರ್ಯವಲ್ಲಿಯು ಸೌಂದರ್ಯದಲ್ಲಿ ರತಿದೇವಿಗೆ ಎಣೆ. ಗಂಡನಿಗೆ ಹಿರಿಯ ಹೆಂಡತಿಯಾದ ಅವಳಿಗೆ ಅನಂತರಥ, ದಶರಥರೆಂಬ ಇಬ್ಬರು ಮಕ್ಕಳು.

ಜಗತ್ತಿಗೆ ಬೆಳಕು ಕೊಡುವ ಸೂರ್ಯನು ರಾಹುವಿಗೆ ಸೋತಂತೆ ಸೂರ್ಯಸಮ ಪರಾಕ್ರಮಿ ಮಾಹೀಷ್ಮತಿ ವಲ್ಲಭ ಸಹಸ್ರ ಕಿರಣನು ದಶಾನನನಿಗೆ ಯುದ್ಧದಲ್ಲಿ ಸೋತನು ಎಂಬ ವರ್ತಮಾನ ಕೇಳಿ ಗೆಳೆಯನಾದ ಅನರಣ್ಯನು ಸಂಸಾರದಲ್ಲಿ ಹುರುಳಿಲ್ಲವೆಂದು ವ್ಯಥಿಸಿ ಹಿರಿಮಗನಾದ ಅನಂತರಥನನ್ನು ಕರೆದು –

'ಮಗನೆ ನಿನ್ನಂಥ ವೀರಪುತ್ರನನ್ನು ಪಡೆದೆನು. ಮುಂದೆ ನೀನು ರಾಜ್ಯದ ಅರಸನಾಗಿ ಅಧಿಕಾರದ ಭಾರವನ್ನು ಹೊರಬೇಕು' ಎನ್ನಲು – ಅನಂತರಥನು 'ಅಪ್ಪಾ, ನಿಮ್ಮ ಚಿತ್ತಕ್ಕೆ ಎಡರಾದ ಈ ಅಧಿಕಾರವು ನನಗೆ ಬೇಡ. ನಾನು ಈ ಕೂಡಲೆ ನಿರ್ವಾಣ ಮಾರ್ಗವನ್ನು ಹಿಡಿಯುವೆನು – ನಿಮಗೆ ಬೇಡವಾದ ಈ ನೆಲ ನನಗೂ ಬೇಡ' ಎಂದುಸುರಿ ತಂದೆಯೊಡನೆ ತಪಸ್ಸಿಗೆ ಒಡಂಬಟ್ಟು, – ಒಂದು ತಿಂಗಳ ಮಗುವಾದ ದಶರಥನಿಗೆ ಪಟ್ಟವನ್ನು ಕಟ್ಟಿ ಇಬ್ಬರೂ ಮುಕ್ತಿಶ್ರೀಯನ್ನು ಸೇರಿದರು.

ಇತ್ತ ದಶರಥನು ಬೆಳೆಯುತ್ತ ಬಾಲಸೂರ್ಯನಂತೆ ಬೆಳಗಿದನು; ಬೆಳದಿಂಗಳ ಬೆಳಕಿನಂತೆ ತಂಪನ್ನಿತ್ತನು. ಸಕಲ ಧರಿತ್ರೀ ತಳವನ್ನು ಎರಗಿಸಿಕೊಂಡು ಭಗೀರಥನಂತೆ ಪ್ರಸಿದ್ಧನಾದನು. ಅರಗಿಳಿಯು ನಾವು ಹೇಳಿದ್ದನ್ನು ಕಲಿತು ಧರ್ಮಶಾಸ್ತ್ರವನ್ನು ಹೇಳಿದರೆ ಏನು ಬಂತು? ದಶರಥನಂತೆ ಓದಿದ್ದನ್ನು ಸರಿಯಾಗಿ ತಿಳಿದುಕೊಂಡು ಧರ್ಮವನ್ನು ನಡೆಸಿದವರು, ನಡೆದವರು ಯಾರು?

ದಶರಥನ ಆಳ್ವಿಕೆಯಲ್ಲಿ ವೈರಿಗಳ ಮನಸ್ಸು ಕಿರಿದಾಯಿತು. ಜ್ಞಾನಿಗಳು ಅವನನ್ನು ಆಶ್ರಯಿಸಿದಾಗ ಅವನ ಬಲಗೈಯಲ್ಲಿರುವ ಜಯಲಕ್ಷ್ಮಿಗೂ, ಅವನ ಮಾತಿನ ಪ್ರೌಢಿಮೆಗೂ ಪರಿಪೂರ್ಣ ಯೌವನ ಪ್ರಾಪ್ತವಾಯಿತು. ಅದರ ಗುರುತಾಗಿ ಅಪರಾಜಿತೆ, ಸುಮಿತ್ರೆ, ಸುಪ್ರಭೆಯರೆನ್ನುವ ರಾಣಿಯರನ್ನು ಮದುವೆಯಾದನು. ಆದರೆ ನೀರಲ್ಲಿದ್ದರೂ ನೀರನ್ನು ಅಂಟಿಸಿಕೊಳ್ಳದೆ ದಶರಥನಂತೆ ಸಂಸಾರದಲ್ಲಿದ್ದೂ ಇಂದ್ರಿಯಜಯವನ್ನು ಸಾಧಿಸಿದವರು ಯಾರು?

ಕುಲಪರ್ವತಗಳಿಗೆ ಮಾಣಿಕ್ಯಪ್ರಭೆಯ ಎಳೆ ಬಿಸಿಲಂತೆ, ದಿಗ್ಗಜಗಳ ಕುಂಭಸ್ಥಳದ ಸಿಂಧೂರದಂತೆ, ಗಂಗಾನದಿಯ ಕೆಂಪು ತಾವರೆಯಂತೆ, ಸಮುದ್ರದ ಹವಳದಂತೆ ದಶರಥನ ಪ್ರತಾಪವೆಂಬ ತೇಜಸ್ಸು ಹಬ್ಬಿ ಆತ ರಾಜ್ಯವಾಳುತ್ತಿದ್ದ.

ಒಂದು ದಿನ ಆಕಾಶಮಾರ್ಗದಿಂದ ದಶರಥನ ಆಸ್ಥಾನಕ್ಕೆ ನಾರದನೆಂಬ ಋಷಿಯು ಇಳಿದುಬಂದನು. ತಾವರೆಯ ನಾಳದ ಕಟಿಸೂತ್ರ, ಹೊಸಬಟ್ಟೆಯ ಕೋವಣ, ಕೈಯಲ್ಲಿ ಕಮಂಡಲ ಶೋಭಿಸುತ್ತಿತ್ತು. ಯಾವುದೋ ಒಂದು ಚಾಡಿಯೊಡನೆ ಆಸ್ಥಾನವನ್ನು ಹೊಕ್ಕನು. ಅವನಿಗೆ ಅರ್ಘ್ಯ

ಪಾದ್ಯವನ್ನಿತ್ತು ದಶರಥನು "ಪೂಜ್ಯರೆ, ತಾವು ಬಂದ ಬರವೇನು, ಎಲ್ಲಿಂದ ಬಂದಿರಿ" ಎಂದು ಕೇಳಲು ಆತನು ನಗುತ್ತ "ನಾನು ಈ ಜಂಬೂದ್ವೀಪದ - ಪೂರ್ವ ವಿದೇಹದ ಪುಂಡರೀಕಿಣೀಪುರದ ಸೀಮಂಧರ ಸ್ವಾಮಿಗಳ ಪರಿನಿಷ್ಕ್ರಮಣ ಕಲ್ಯಾಣ ವೈಭವವನ್ನು ನೋಡಿ ಬಂದೆನು" ಎಂದು ಹೇಳುತ್ತ ಸಭೆಯನ್ನು ಕಣ್ಸನ್ನೆಯಿಂದ ತೊಲಗಿಸಿ ದಶರಥನಿಗೆ ಏಕಾಂತದಲ್ಲಿ ಹೀಗೆಂದನು -

ಅಯ್ಯಾ ಲಂಕಾನಗರಕ್ಕೆ ಹೋಗಿ ಶಾಂತಿ ಜಿನಭಕ್ತಿಯಿಂದ - ಸ್ಮರ, ದಾನ, ದಂತಿ ವಜ್ರಾಂಕುಶ ದರ್ಶನಸ್ತವನದಿಂದ ಪವಿತ್ರನಾಗಿ ಕಾರಣಾಂತರಗಳಿಂದ ದೇಹ ಸ್ತಿಮಿತವನ್ನು ಕಳಕೊಂಡ ರಾವಣನಿಂದ ಈ ಮಾತನ್ನು ಕೇಳಿ ಅದನ್ನು ನಿಮಗೆ ತಿಳಿಸಲು ಇಲ್ಲಿಗೆ ಬಂದೆನು - ಏನೆಂದರೆ -

ವಿಭೀಷಣನು ಸಾಗರ ಬುದ್ಧಿ ಎಂಬ ನೈಮಿತ್ತಿಕನನ್ನು ಬರಿಸಿ ರಾವಣನ ಮರಣ ಕಾರಣವನ್ನು ಕೇಳಲು ಆತನು - 'ಎಲೈ ವಿಭೀಷಣ, ನಾನು ಹೇಳುವ ಮುಂದಿನ ಮಾತುಗಳಲ್ಲಿ ಏನೇನೂ ಸುಳ್ಳಿಲ್ಲ - ಯುದ್ಧದಲ್ಲಿ ರಾವಣನು ಸೀತೆಯ ನೆವನದಲ್ಲಿ ದಾಶರಥಿಯ ಕೈಯಿಂದ ಸಾಯುವನು' - ಎನ್ನಲು ವಿಭೀಷಣನು ದುಃಖಿತನಾಗಿ ಮತ್ತೆ ಯೋಚಿಸಿ -

- ಸೀತೆ, ದಾಶರಥಿಯರ ಹುಟ್ಟಿಗೆ ಕಾರಣರಾಗುವವರನ್ನೆ ಮೊದಲು ಕೊಂದರೆ ಕಾರ್ಯಕ್ಕೆ ಕಾರಣವೇ ಇಲ್ಲವಾಗುತ್ತದೆ - ಎಂದು ತಿಳಿದು - ತನಗೆ ಇದು ಯುಕ್ತವಲ್ಲದ ಕೆಲಸವೆಂದು ಬಗೆದರೂ ತನ್ನ ಸೋದರನಿಗೆ ಒದಗಬಹುದಾದ ವಿಪತ್ತಿಗೆ ಖೇದಪಟ್ಟನು. ಈ ವಿಚಾರವನ್ನು ಜನಕನಿಗೆ ತಿಳಿಸಲು ಹೋಗುವೆನು - ಎಂದು ನಾರದನು ಮಿಥಿಲೆಗೆ ಬಂದು ಆ ವಿಷಯವನ್ನು ತಿಳಿಸಿ ಹೋದನು.

ದಶರಥನು ನಾರದನು ಹೇಳಿದ ವಾರ್ತೆಯನ್ನು ತನ್ನ ಮಂತ್ರಿ ಸಮುದ್ರ ಹೃದಯನಿಗೆ ತಿಳಿಸಲು ಕಾಲವಂಚನೆಯೇ ಕಾರ್ಯವೆಂದು ದಶರಥನನ್ನು ಪರಿಭ್ರಮಣೆಗೆ ಕಳುಹಿಸಿ ಚಿತ್ರಕಾರನನ್ನು ಕರೆದು ತಮಗಿಬ್ಬರಿಗಲ್ಲದೆ ಮೂರನೆಯವರಿಗೆ ತಿಳಿಯದಂತೆ ಲಾಕ್ಷಾರಸದಿಂದ, ಸಪ್ತಧಾತುಗಳಿಂದ ಕೂಡಿದ ದಶರಥನ ರೂಪನ್ನು ಸೃಷ್ಟಿಸಿ ಅರಮನೆಯ ಕರುಮಾಡದ ಎರಡನೇ ಮಾಳಿಗೆಯಲ್ಲಿ ಅದನ್ನಿರಿಸಿ ಪರಿಜನರೊಡನೆ ತಾನೂ ನೋಡುತ್ತಿದ್ದನು. ನಾರದರಿಂದ ಈ ವಿಷಯವನ್ನು ತಿಳಿದ ಜನಕನ ಮಂತ್ರಿಯೂ ಇದೇ ಕ್ರಮದಲ್ಲಿ ಅವನ ಲೆಪ್ಪದ ರೂಪನ್ನು ನಿರ್ಮಿಸಿ ದಿನಕರನೂ ಹಿಮಕರನೂ ಕಾಣದಂತೆ ಅದೃಶ್ಯರಾದರು.

ಇತ್ತ ವಿಭೀಷಣನ ಆದೇಶದಂತೆ ಕಟುಕರು ಅಯೋಧ್ಯೆಯನ್ನು ಹೊಕ್ಕು ಕರುಮಾಡವನ್ನು ಹೊಗಲು ಸಾಧ್ಯವಾಗದೆ, ವಿಭೀಷಣನು ಕೆರಳಿ ಮುಗಿಲದಾರಿಯನ್ನು ಹಿಡಿದು ತಿನ್ನುವ ಯಮನಂತೆ ಅಯೋಧ್ಯೆಯನ್ನು ಹೊಕ್ಕು ಚಿನ್ನದ ಬೆಟ್ಟವೆನ್ನುವ ಮಾಳಿಗೆಯಲ್ಲಿ ಪ್ರಕಾಶಿಸುವ ಲೆಪ್ಪದ ತಲೆಯನ್ನು ಕಡಿಯಲು ಆದೇಶಿಸಿದನು. ಅವನ ಆಜ್ಞೆಯನ್ನು ಪಡೆದ ಆಕಾಶಗಾಮಿಯಾದ ಸೇವಕನು ರಕ್ಷಕನನ್ನು ಕೊಂದು ಲೆಪ್ಪದ ತಲೆಯನ್ನುಕಡಿದು ತಂದು ವಿಭೀಷಣನ ಮುಂದಿಟ್ಟನು. ಜೀವವಿದ್ದವರನ್ನು ಕೊಲ್ಲಲೆಂದು ಬಂದು ಲೆಪ್ಪದ ತಲೆಯನ್ನು ವಿಭೀಷಣನು ಕೊಂಡೊಯ್ದನು. ಆದರೆ ಸಾಯದವರನ್ನು

ಯಾರಾದರೂ ಕೊಲ್ಲಲು ಸಾಧ್ಯವೆ? ಹಣೆಯಲ್ಲಿ ವಿಧಿ ಬರೆದ ಲಿಪಿ ಅದೇನು ನೀರಲ್ಲಿ ಬರೆದ ಲಿಪಿಯೇ?

ಹೀಗೆ ದಶರಥ ಜನಕರನ್ನು ಕೊಂದೆನೆಂದು ಭಾವಿಸಿ ವಿಭೀಷಣನು ಇಬ್ಬರ ತಲೆಗಳನ್ನು ಕಡಲಲ್ಲಿ ಒಗೆದು ಲಂಕೆಗೆ ಹೋಗಿ - ಮನಸ್ಸಿನಲ್ಲೇ ತನ್ನ ಕೃತ್ಯವನ್ನು ನೆನೆದು "ತಪ್ಪು ಮಾಡಿದೆನು ನಾನು, ನನ್ನಣ್ಣನಾದ ರಾವಣನನ್ನು ಕೊಲ್ಲುವವನು ಯಾವನು? ಈ ಕಡಲನ್ನು ದಾಟುವವನು ಯಾವನು? ಲಂಕೆಗೆ ಬರುವವನು ಯಾವನು? ನೈಮಿತ್ತಿಕನು ಹೇಳಿದನೆಂದು ಆತನ ಮಾತನ್ನು ನಾನೇಕೆ ಒಪ್ಪಿದೆನು" ಎಂದು ಮನಸ್ಸಿನಲ್ಲಿ ಉದ್ವೇಗಗೊಂಡನು. ಹೀಗೆ ಭಾವಗಳ ಅತಿರೇಕ ತನಗೆ ಒದಗಿ ಬಂದುದಕ್ಕೆ ಪ್ರಾಯಶ್ಚಿತ್ತವೆಂಬಂತೆ ಜಿನಗೃಹಗಳನ್ನು ಮಾಡಿಸಿ ತನ್ನ ಅನುಚಿತ ವರ್ತನೆಗೆ ನೊಂದುಕೊಂಡನು.

ಇತ್ತ ದಶರಥ ಜನಕರು ರೂಪಪರಿವರ್ತನದಿಂದ ಇದ್ದುದನ್ನು ತಿಳಿದು ಅವರ ಪರಿಜನರು ಸಂತೋಷಪಟ್ಟರು. ಇಬ್ಬರೂ ಅನೇಕ ದೇಶಕೋಶಗಳನ್ನು ಸುತ್ತಿ ಕಾಲವನ್ನು ವಿನೋದದಿಂದ ಕಳೆದು ಸಕಲ ಋತುಗಳೂ ಒಂದೆಡೆ ಕಾಣಬರುವ ವನ, ಬಾವಿ, ಸರೋವರಗಳು ತುಂಬಿರುವ ಕೌತುಕವನ್ನು ಕಂಡು, ಜೊತೆಗೆ ಕೌತುಕಮಂಗಳಪುರವನ್ನೂ ಅಲ್ಲಿ ನಡೆಯುತ್ತಿರುವ ವಿವಾಹ ಮಹೋತ್ಸವವನ್ನೂ ಕಂಡರು. ಆಗ ದಶರಥನಿಗೆ ಒಮ್ಮಿಂದೊಮ್ಮೆ ಬಲಗಣ್ಣು, ಬಲಗೈ ಅದುರಿದುವು. ಅದು ವ್ಯಥೆಯಿಲ್ಲದೆ ಲಲನಾ ರತ್ನವನ್ನು ಪಡೆವ ಲಕ್ಷಣವೆಂದು ಆತ ತಿಳಿದುಕೊಂಡನು. ಮುಂದೆ ಬರುತ್ತಿರಲು ಪಟ್ಟಣದ ಹೊರವಲಯದಲ್ಲಿ ಸ್ವಯಂವರ ಭೂಮಿ ಕಂಗೊಳಿಸಿತು. ಕಣ್ಣುಗಳಿಗೆ ಆಕರ್ಷಕವಾದ ವಿದ್ಯೆ ಗಂಡಿನ ರೂಪತಾಳಿತು ಎನ್ನುವಂತೆ ಇಂತಹ ಸುಂದರ ರೂಪವನ್ನು ಕಾಮಚಕ್ರೇಶ್ವರನು ಇವನಿಗೆ ಕೊಟ್ಟನೋ ಎಂಬಂತಿರುವ ಅವನನ್ನು ನೆರೆದ ರಾಜಕುಮಾರರು ಕಂಡು ಹೆಣ್ಣಿನ ಆಸೆಯನ್ನು ತೊರೆಯುವಂತೆ ದಶರಥನು ಸಭೆಯನ್ನು ಹೊಕ್ಕನು!

ಹೀಗೆ ಹೊಕ್ಕ ದಶರಥ ಜನಕರು ಅಲ್ಲಿ ಒಂದೆಡೆಯ ಚಿನ್ನದ ಮಂಚದಲ್ಲಿ ನಿಂತು ನೋಡುತ್ತಿದ್ದರು. ಎತ್ತರದ ಮಣೆಯನ್ನು ಜೋಡಿಸಿದ ಪಲ್ಲಕಿಯನ್ನೇರಿ ಕಾಮನು ತನ್ನ ಬಿಲ್ಲಿನೊಡನೆ ಬರಲು, ಕೈಕೆ ಮುಗಿಲಿಂದ ರಕ್ಷಿಸಲ್ಪಟ್ಟ ಚಂದ್ರಕಲೆಯ ಚೆಲುವಿನಂತೆ ಶೋಭಿಸುತ್ತಿದ್ದಳು. ಬಾಲಚಂದ್ರ, ಹೊನ್ನಪುತ್ಥಳಿ, ರತ್ನದ ದೀಪ ಹೂವಿನಂತೆ ಕೋಮಲವಾದ ತನ್ನ ಶರೀರ ಅನೇಕ ಕಣ್ಣುಗಳಿಗೆ ಉತ್ಸವವನ್ನು ಉಂಟು ಮಾಡುತ್ತ, ಉತ್ಪಳ ದಳದ ಹಾರವನ್ನು ಕೆದರುತ್ತಿರಲು ಕೈಯಲ್ಲಿರುವ ನವರತ್ನಮಾಲೆ ಕಾಮನ ಮುಷ್ಟಿಪ್ಪಿ ಪಾಶದಂತೆ ಶೋಭಿಸುತ್ತಿತ್ತು.

ಆಗ, ಕಂಚುಕಿ ಅನುಕ್ರಮವಾಗಿ ನೆರೆದ ರಾಜರ ಪರಿಚಯ ಹೇಳಿದರೂ, ಕೈಕೆ ದಶರಥನಿಗೆ ತಾನು ಪ್ರೀತಿಯಿಂದ ಮಾಲೆಯಿಕ್ಕಿದಳು. ಮಾಲೆಯಿಕ್ಕಿ ಪಕ್ಕಕ್ಕೆ ಸರಿಯಲು -

ಈ ಬಾಲಿಕೆ ಏನೂ ತಿಳಿಯದವಳು. ಯಾವುದು ಸರಿ ಯಾವುದು ತಪ್ಪು ಎಂದು ಪರಿಗಣಿಸದೆ ಎಲ್ಲರನ್ನೂ ಕಡೆಗಣಿಸಿದ ಈಕೆಯನ್ನು ಕಾಲವಿಳಂಬ ಮಾಡದೆ ಈ ದೇಸಿಗನಿಂದ ಬಿಡಿಸಿ ನಾವು ವಶಪಡಿಸಿಕೊಳ್ಳಬೇಕು – ಎಂದು ರಣೋತ್ಸಾಹದ ರಾಜರು ಮತ್ಸರದಿಂದ ಯುದ್ಧಕ್ಕೆ ಸಿದ್ಧರಾದರು.

ಇದನ್ನು ಕಂಡು ದಶರಥನು 'ಆನೆ ಸರೋವರವನ್ನು ಕಲಕುವಂತೆ ನಾನೆ ಇಲ್ಲಿ ನೆರೆದು ನನಗೆ ಅಡ್ಡಿಪಡಿಸುತ್ತಿರುವ ರಾಜರ ಸಮೂಹವನ್ನು ಸೋಲಿಸುವೆನು' ಎಂದು ಸಿಂಹ ನಾದ ಮಾಡಿ, ರಥವನ್ನೇರಿ ಬಿಲ್ಲಿನ ನಾರಿಯನ್ನು ಹಿಡಿದೆಳೆದು ಬಿಡಲು ಅದು ಅಲ್ಲಿ ನೆರೆದವರಿಗೆ ಬೆದರಿಕೆಯನ್ನುಂಟು ಮಾಡಿತು. ಆಗ ಕೈಕೆಯ ಮುಖಚಂದ್ರಕಾಂತಿಯು ಹೆಚ್ಚಿತು. ಸ್ತ್ರೀಸಹಜವಾದ ಸಕಲಾಭರಣವನ್ನೂ ಧರಿಸಿದ ಆಕೆ ಆಭರಣಗಳ ಕಾಂತಿಯನ್ನು ಬೀರುತ್ತ ತನ್ನ ಜಯ ಡಿಂಡಿಮ ಸ್ವರವನ್ನು ಮನಸ್ಸಿನಲ್ಲಿ ನೆನೆಯುತ್ತ ದಶರಥನ ಜತೆಗೆ ನಿಂತು ವೀರಲಕ್ಷ್ಮಿಯಂತೆ ಶೋಭಿಸಿದಳು. ಅಕಾಲದ ಮೋಡಗಳಂತೆ ಸ್ವಯಂವರಕ್ಕೆ ಬಂದ ಎಲ್ಲ ರಾಜಪುತ್ರರು ದಶರಥ-ಕೈಕೆಯರ ಸುತ್ತಮುತ್ತ, ಬಾಣದ ಮಳೆಯನ್ನು ಸುರಿಸಿದರು. ದಶರಥನ ಸಾರಥಿಗೆ ವೈರಿಗಳ ಬಾಣವೊಂದು ತಾಗಿತು. ಹಾವಿನ ಹಲ್ಲು ತಾಗಿದಂತೆ ಆತ ಮೂರ್ಛೆ ಹೋದ. ಕೈಕೆ ಸ್ವತಃ ತಾನು ಸಾರಥಿಯಾಗಿ ರಥವನ್ನು ಮುನ್ನಡೆಸಿದಳು. ರಥಿಕನ ಬೆಸನನ್ನು ಮೀರದೆ ಹೆದರಿಕೆಯಿಂದ ಕೂಗದೆ ರಥಿಕನು ತೋರಿದ ಕಡೆ ರಥವನ್ನು ಹಾರಿಸಿ ಆಕೆಗೂ ರಥಕ್ಕೂ ಒಂದೇ ಮನಸ್ಸೆನ್ನುವಂತೆ ರಥ ನಡೆಸಿ ದಶರಥನನ್ನು ಮೆಚ್ಚಿಸಿದಳು.

ದಶರಥನ ಕದನ ಕೌಶಲವನ್ನು ಏನೆಂದು ವರ್ಣಿಸಲಿ? 'ಕೆಲರ ರಥವನ್ನು ಕೆಲರ ಕುದುರೆಗಳನ್ನು, ಕೆಲರ ಉಗ್ರ ಬಾಣಗಳನ್ನು, ಕೆಲರ ಕಿರೀಟಗಳನ್ನು, ಕೆಲರ ಬಿಲ್ಲನ್ನು ಎರಡೆರಡು ತುಂಡು ಮಾಡಿ ತನ್ನ ಬಾಹುಬಲದ ಶಕ್ತಿ ಸಹಜವೆನ್ನುವಂತೆ ಪ್ರತಿ ಸೈನ್ಯವನ್ನು ಕೊಲ್ಲದೆ ಸೋಲಿಸಿದ ಆತನ ಶರಾಸನ ವಿದ್ಯೆಗೆ ಇದು ಅಚ್ಚರಿಯಲ್ಲವೆಂದು ಕಂಡಿತು.

ಈ ಬಗೆಯ ಶೌರ್ಯಕ್ಕೆ ಇದಿರಾಗದೆ ರಾಜರ, ಅವರ ಮಕ್ಕಳ ಸಂದೋಹವು ಹೆದರಿದ ಜಿಂಕೆಗಳಿಗೆ ಬಾಣಗಳ ಗರಿ ಮೂಡಿತೆಂಬಂತೆ ಓಡಿಹೋಯಿತು.

ಅನಂತರ ಕೈಕೆಯನ್ನು ಕೂಡಿಕೊಂಡು ದಶರಥನು ಅಯೋಧ್ಯೆಗೆ ಜನಕನು ಮಿಥಿಳೆಗೆ ಹೋಗಿ ಮೊದಲಿನಂತೆ ರಾಜ್ಯಭಾರ ಮಾಡುತ್ತಿರಲು ಒಂದು ದಿನ ದಶರಥನು ತನ್ನ ಪರಿಜನರಿಂದ ಕೂಡಿದ ಸಭೆಯಲ್ಲಿ ತನ್ನರಸಿ ಕೈಕೆ ತನ್ನ ಸಾರಥಿಯಾಗಿ, ತಮ್ಮ ವಿವಾಹ ಮಂಗಲೋತ್ಸವದಂದು ತೋರಿದ ಸಾಹಸವನ್ನು ಹೇಳಲು ವೃದ್ಧ ಕಂಚುಕಿಯ ಮೂಲಕ ಕೈಕೆಯನ್ನು ಕರೆಸಿದನು. ಕರೆಸಿ, ''ಈಕೆ ಸಾರಥಿಯಾಗಿ ನೆರವಾದುದರಿಂದ ಅಂದು ನಾನು ವೈರಿಗಳನ್ನು ಗೆದ್ದೆ. ಈಕೆ ಕೇಳಿದ್ದನ್ನು ಕೊಡದಿದ್ದರೆ ನನ್ನ ಮೆಚ್ಚಿಕೆ ಪೊಳ್ಳಾಗದೆ?'' ಎಂದು ಎಲ್ಲರ ಮುಖವನ್ನು ನೋಡಿ ಕೈಕೆಗೆ - 'ನೀನು ಮೆಚ್ಚಿದ್ದನ್ನು ಕೇಳು' ಎನ್ನಲು, ಆಕೆ - ಏನನ್ನು ಬೇಡುವುದೆಂದು ತೋಚದೆ 'ಬೇಕಾದುದನ್ನು ನಾನು ಕೇಳಿದಾಗ ಕೊಡಿರಿ' ಎಂದು ತನ್ನ ಇಂಗಿತವನ್ನು ವ್ಯಕ್ತಪಡಿಸಿದಳು. ಅನಂತರ ಅಪರಾಜಿತೆ, ಸುಮಿತ್ರೆ, ಸುಪ್ರಭೆ, ಕೈಕೆಯರ ಒಡನಾಟದಲ್ಲಿ ದಶರಥನ ರಾಜ್ಯಲೀಲೆಯು ಮನ್ಮಥ ಲೀಲೆಯೊಡನೆ ಮೇಳವಿಸಿತು.

ಮಹಾಪತಿವ್ರತೆಯಾದ ಅಪರಾಜಿತೆ ಶೀಲವಂತೆಯಾಗಿ ದಶರಥನ ಧರ್ಮಪತ್ನಿಯೆಂಬ ಅಗ್ರಪಟ್ಟವನ್ನು ಪಡೆದಳು. ಭೂಮಿ ಮಣಿಪರ್ವತವನ್ನು, ರಾತ್ರಿ ಪೂರ್ಣಚಂದ್ರನನ್ನು ಪಡೆದಂತೆ ಅಪರಾಜಿತೆ ಸರ್ವಲಕ್ಷಣಸಂಪನ್ನನಾದ ಮಗನನ್ನು ಪಡೆದಳು. ಆ ಮಗನ ಜನನದಿಂದ ಜಗತ್ತು ನಿಷ್ಕಲಂಕವಾಯಿತು. ಈತನ ಚರಿತ್ರೆಯೇ ಪವಿತ್ರವು. ಈತನೇ ಜಗತ್ತಿನಲ್ಲಿರುವ ಸ್ವಚ್ಛ ಹೃದಯನು ಎಂದು ಜನ ಹೇಳುವಂತೆ ಆತ ಖ್ಯಾತನಾದ. ಈ ಮಗುವೇ ಜಗತ್ತಿನ ಎಲ್ಲ ಉತ್ಸವಗಳಿಗೂ ಕಾರಣಕರ್ತನು, ಭೂಮಿಯ ತಾಪವನ್ನು ಪರಿಹರಿಸುವವನು ಎಂಬಂತೆ ತಂಪಾದ ಗಾಳಿಯು ಬೀಸಿ ಆತನ ಯಶಸ್ಸಿನಂತೆ ಆಕಾಶವು ಶುಭ್ರವಾಯಿತು.

ಈ ಸಂತೋಷಕ್ಕಾಗಿ ದಶರಥನು ಜಿನಪೂಜೆಯನ್ನು ದೇವೇಂದ್ರನೂ ಮಾಡಲಾರನೆಂಬಂತೆ ಮಾಡಿ, ಯಾಚಕರಿಗೆ ಕಲ್ಪವೃಕ್ಷದಂತೆ ಬೇಡಿದ್ದನ್ನೆಲ್ಲ ಕೊಟ್ಟು, ಸನ್ಮಾರ್ಗಕ್ಕೆ ಅರ್ಹರಾದವರನ್ನೂ, ಸಜ್ಜನರನ್ನೂ ವಿಶಿಷ್ಟವಾದ ಹೂ ಹಾರಗಳಿಂದ ಮನ್ನಿಸಿ ತನ್ನ ಪುತ್ರೋತ್ಸವವನ್ನು ಆಚರಿಸಿದನು.

ದೇವಲೋಕದ ಮರಮಟ್ಟುಗಳೇ ತೋಟಗಳು, ಸಿದ್ಧರಸವೇ ತಟಾಕ, ಕಾಮಧೇನುಗಳ ಹಿಂಡೇ ಒಂದೆಡೆ ಸೇರಿದ್ದುವೆಂಬಂತೆ ಜಗತ್ತಿನ ಎಲ್ಲ ಜನಕ್ಕೆ, ಬಾಂಧವ ಜನಕ್ಕೆ, ಅವರಿವರೆನ್ನದೆ ಎಲ್ಲರಿಗೂ ಕೈಯೆರಿ ಕೊಟ್ಟು ದಶರಥನು ಜಾತಕರ್ಮವನ್ನು ನೆರವೇರಿಸಿದನು. ಅನಂತರ ಹತ್ತನೇ ದಿನದಲ್ಲಿ ಪದ್ಮಾಲಂಕೃತ ವಿಶಾಲವೃಕ್ಷಸ್ಥಲದಿಂದೊಪ್ಪುವ ಮಗುವಿಗೆ ಪದ್ಮನೆಂದೂ, ಸಕಲ ಶುಭಲಕ್ಷಣಗಳಿಂದೊಡಗೂಡಿದ ಕಾರಣ ರಾಮಚಂದ್ರನೆಂದೂ ಹಲವು ಅನ್ವರ್ಥನಾಮಗಳನ್ನಿಟ್ಟು ಕೆಲವು ದಿನಗಳ ಅನಂತರ ಕುಲವರ್ಧನೆಗೆ ಈ ಸತಿಯರೆ ಕುಲದೇವಿಯರು ಎಂದು ಬಗೆಯುತ್ತಿರಲು ದಶರಥನಿಗೆ ರಾಗೋದ್ರೇಕವಾಗಿ ಪತ್ನಿಯರಿಗೆ ಗರ್ಭ ಚಿಹ್ನೆಯು ಮತ್ತೆ ತಲೆದೋರಿತು. ಅವರಿಗೆ ಪುಂಸವನ ಮುಂತಾದ ಮಂಗಳ ಕಾರ್ಯಗಳನ್ನು ನೆರವೇರಿಸಿ ದಶರಥನು ಸುಮಿತ್ರೆಯಿಂದ ಲಕ್ಷ್ಮಣನನ್ನೂ, ಕೈಕೆಯಿಂದ ಭರತನನ್ನೂ, ಸುಪ್ರಭೆಯಿಂದ ಶತ್ರುಘ್ನನನ್ನೂ ಪಡೆದನು.

ಅಯೋಧ್ಯೆಯಲ್ಲಿ ಪೂಜೆಗಳಾದುವು. ಮಂಗಳವಾದ್ಯಗಳು ಮೊಳಗಿದುವು. ಹಾರಾಡುವ ಧ್ವಜಗಳು ಸಂಭ್ರಮವನ್ನು ಸಾರಿದುವು. ಹೆಣ್ಣು ಮಕ್ಕಳು ನಲಿದಾಡಿದರು. ಮಕ್ಕಳನ್ನು ನೋಡುವ ಅವಸರದಲ್ಲಿ ದಶರಥನು ಸುಮಿತ್ರೆಯ ಸೂತಿಕಾ ಸದನವನ್ನು ಹೊಕ್ಕನು. ಆಕೆ ಕನಸಿನಲ್ಲಿ ಸಿಂಹವು ಅಭಿಷೇಕ ಪಡೆವುದನ್ನು, ಸಮುದ್ರದಿಂದ ಆವರಿಸಲ್ಪಟ್ಟ ಭೂವಲಯವನ್ನು, ಪ್ರಕಾಶಮಾನವಾದ ಚಕ್ರವು ಹೊಂಬೆಟ್ಟವೇರಿದ್ದನ್ನು ಪತಿಯೊಡನೆ ಹೇಳಲು -ರಜತಾದ್ರಿಯವರೆಗಿನ ಭರತಕ್ಷೇತ್ರವನ್ನು ಇವನು ಆಳುವನೆಂದು ಕಣ್ಣು ತಣಿವವರೆಗೆ ಮಗುವನ್ನು ದಶರಥನು ವೀಕ್ಷಿಸಿದನು.

ದಶರಥನ ಮಕ್ಕಳು ಹೊಸ ಚಂದ್ರಕಲೆಗಳಂತೆ ಎಲ್ಲರಿಗೂ ನಯನೋತ್ಸವವನ್ನು ಉಂಟು ಮಾಡಿದರು. ದಿನದಿಂದ ದಿನಕ್ಕೆ ವೃದ್ಧಿಯಾಗಿ ದೇವಲೋಕದವರಂತೆ ಕೀರ್ತಿಭಾಜನರಾದರು. ಮಕ್ಕಳ ಪರಿಸರ ಪ್ರೇಮವು ಜನ್ಮಾಂತರದಿಂದ ಜತೆಗೂಡಿ ಬಂದುದೆಂಬಂತೆ ರಾಮ-ಲಕ್ಷ್ಮಣರು, ಭರತ-

ಶತ್ರುಘ್ನರು ಜೋಡಿಯಾದರು. ಇವರು ಅವಳಿ-ಜವಳಿ ಎಂಬಂತೆ ಎರಡು ಜೋಡಿಗಳಾಗಿ ತಾಯ್ತಂದೆಯರ ಮನಸ್ಸಿಗೆ ಅಮೃತದ ಮಳೆಯನ್ನೇ ಕರೆದರು.

ಕಂಠಹಾರದ ಪ್ರಕಾಶವನ್ನು, ಮರಕತದ ದೀಪ್ತಿಯನ್ನು ಅವರ ದೇಹದ ಕಾಂತಿಯು ಗೆಲ್ಲಲು, ಹಿಮದ ಹಾರದ ದೀಪ್ತಿಯನ್ನು ಕಾಮನು ಗೆಲ್ಲಲು, ಕಂಠವಾದ ಸಿಂಹದ ಗರ್ಜನೆಯನ್ನು ಗೆಲ್ಲಲು, ಬೇರೆ ಬೇರೆ ಗಂಭೀರಧ್ವನಿ ಸಿಡಿಲಿನ ಅಭ್ಯಾಸವನ್ನು ಗೆಲ್ಲಲು, ರಾಮಲಕ್ಷ್ಮಣರು ಶೋಭಿಸಿದರು.

ರಣದಲ್ಲಿ ರಾವಣನನ್ನು ಬಲಿಕೊಡಲು, ಬೆಳ್ಳಿಯ ಬೆಟ್ಟಕ್ಕೆ ತೆಂಕಣಭಾಗದ ಕಂಕಣದಂತೆ ಭೂಚಕ್ರವೆಂಬ ಆಯುಧವನ್ನು ಧರಿಸಿ ಯುದ್ಧದಲ್ಲಿ ಗೆಲ್ಲಬೇಕೆಂದು ಹುಟ್ಟಿದವರು ಏನು ಸಾಮಾನ್ಯರೇ ರಾಮಲಕ್ಷ್ಮಣರೆಂಬ ತ್ರಿಭುವನ ಖ್ಯಾತ ಕೀರ್ತಿಧ್ವಜರಾದ ರಾಮಲಕ್ಷ್ಮಣರು?

ರಾಮಲಕ್ಷ್ಮಣ ಭರತ ಶತ್ರುಘ್ನರೆಂಬ ನಾಲ್ಕು ಜನ ಮಕ್ಕಳು ನಾಲ್ಕು ರತ್ನಶಿಲಾಕಂಬಗಳಂತೆ ರಘುಕುಲವನ್ನು ಉದ್ಧರಿಸುವಂತಹ ದಶರಥನು ಪರಿಪೂರ್ಣ ಮನೋರಥನಾಗಿ, ಕಾಮಧೇನುವಿನ ಸ್ತನಭಾರದಂತೆ ಪುರುಷಾರ್ಥವು ಮೂರ್ತೀಭವಿಸಿದಂತೆ ನಾಲ್ವರೂ ಒಂದಾಗಿರಲು ನಾಲ್ಕು ಸಮುದ್ರಗಳವರೆಗೆ ಭೂಮಿಯನ್ನು ಆಳಿದನು.

◆

೨. ಸೀತಾಸ್ವಯಂವರ

ಇತ್ತ ಮಿಥಿಳೆಯಲ್ಲಿ ಜನಕನ ಪಟ್ಟದರಸಿಯಾದ ವಿದೇಹಿಗೆ ಪ್ರಭಾಮಂಡಲನೆಂಬ ಮಗನೂ, ಸೀತೆಯೆಂಬ ಮಗಳೂ ಹುಟ್ಟಿದರು. ಈ ಸಂತೋಷಕ್ಕೆ ಮಂಗಳವಾದ್ಯಗಳು ದಿಕ್ಕು ದಿಕ್ಕುಗಳಲ್ಲಿಯೂ ಕೇಳಿಸಿದುವು. ಗಣಿಕೆಯರು ಕುಣಿದಾಡಿದರು. ತುಂಬಿಗಳು ಹೂವಿನೊಡನೆ ಸರಸವಾಡಿದುವು. ನೆಲದಿಂದ ಆಕಾಶದವರೆಗೆ ಸಂತೋಷರಸವು ಹರಿಯಿತು.

ಜನಕನು ಜಾತ ಕರ್ಮೋತ್ಸವವನ್ನು ಮಾಡಿದನು. ಹತ್ತನೇ ದಿನವಂದು, ಲಕ್ಷಣವಾದ ಸಸ್ಯಸಂಪತ್ತಿಗೆ ಸೀತೆಯಾದುದರಿಂದ ಹೆಣ್ಣು ಮಗುವಿಗೆ ಸೀತೆಯೆಂದು ಹೆಸರಿಟ್ಟು ಕೊಂಡಾಡುತ್ತ ನಡೆಸಿದರು. ಮದನಮೋಹನದೀಪದ ಬೆಳಕಿನಂತೆ, ಕಾಮಕಲ್ಪಲತೆಯಂತೆ ನಿರಂತರ ಅಭ್ಯಾಸದಿಂದ ಭರತಶಾಸ್ತ್ರವೇ ಮೊದಲಾದ ಸಕಲ ಕಲೆಗಳಲ್ಲಿ ಪರಿಣತಿ ಪಡೆದು ಬಾಲಲೀಲೆಯಿಂದ ಕಣ್ಣಿಗೆ ಹರ್ಷವನ್ನುಂಟು ಮಾಡಿ ನೋಡುವವರಿಗೆ ದಯಿಗೈವ ಸಂಭ್ರಮದಿಂದ ಕಲ್ಪಲತೆಯನ್ನು ಕಲಾವಿಲಾಸದಿಂದ ಸೋಲಿಸಿ ಮನೋಹರವಾದ ಚಂದ್ರಕಲೆಯನ್ನು ವರ್ಧಿಸಿ ಹಂಸದ ನಡಿಗೆಯುಳ್ಳ ಸೀತೆ ತಾಯಿ ವಿದೇಹಿಗೆ ಮೋಹರಸ ಪ್ರವಾಹವನ್ನೆ ಹರಿಸಿದಳು.

ಜನಕನಿಗೆ ಹರ್ಷಾಧಿಕ್ಯವನ್ನುಂಟು ಮಾಡಿದ ಸೀತೆಯ ಲಾವಣ್ಯವೈಭವವನ್ನು ಕಂಡು, ಈಕೆಗೆ ಅನುರೂಪನಾದ ವರನಾವನೋ ಎಂದು ಆತ ಮನದಲ್ಲಿ ಚಿಂತಿಸುತ್ತಿದ್ದನು. ಹೀಗಿರಲು ಒಂದು ದಿನ ಚಾರನು ಬಂದು ಅಸಂಖ್ಯಾತ ಕಿರಾತರು ನೆರೆದು ರಾಜ್ಯವನ್ನು ಸೂರೆಗೊಂಡರು ಎಂದು ಹೇಳಲು – 'ಒಂದೇ ಕೊಡಲಿಯೇಟಿನಿಂದ ಅಡವಿಯನ್ನು ಛೇದಿಸುವವನಂತೆ ಈ ಖಡ್ಗದಿಂದ ಕಿರಾತರನ್ನು ಕಡಿದು ಕೋಟಿ ಪಿಶಾಚಿಗಳಿಗೆ ಆನಂದವನ್ನುಂಟುಮಾಡುವೆ. ಇಲ್ಲದಿದ್ದರೆ ನನ್ನನ್ನು ಅಪಯಶಸ್ಸು ಆವರಿಸದೆ ಹೋಗದೆ?' ಎನಲು ಮಂತ್ರಿಗಳು – 'ನಿನಗೆ ಸಹಾಯಕನು ದಶರಥನು, ಅವನ ನೆರವಿನಿಂದ ಬೇಡರ ಪಡೆಯನ್ನು ಸೋಲಿಸು' ಎಂದು ಉತ್ತೇಜಿಸಿದರು.

ಜನಕನು ದಶರಥನಿಗೆ ಪತ್ರವನ್ನು ಬರೆದು ಸೇವಕರನ್ನು ಅಟ್ಟಿದನು. ಅದನ್ನು ತಿಳಿದು ಬಲಾಚ್ಯುತರು ಬಂದು ತಂದೆಯ ಚರಣಗಳಿಗೆರಗಿ 'ಅಪ್ಪಾ ಈ ಹೊಣೆಯನ್ನು ನಮಗೆ ಬಿಟ್ಟುಕೊಡಬೇಕು' ಎಂದು ಬಿನ್ನವಿಸಿ ಅವನ ಒಪ್ಪಿಗೆ ಪಡೆದು ಮಿಥಿಳೆಗೆ ಬಂದರು. ಅವರನ್ನು

ಉಚಿತ ಗೌರವದಿಂದ ಸ್ವಾಗತಿಸಿ, ನೆಲವೇ ಹೆತ್ತಿತೆಂಬಂತೆ ಸೇರಿದ ಬೇಡ ಪಡೆಯನ್ನು ಗೆಲ್ಲಲು ಬಂದುದನ್ನು ತಿಳಿದು ಜನಕನು ತನ್ನ ತಮ್ಮನಾದ ಕನಕನೊಡನೆ ಬಂದು ಅವರನ್ನು ಇದಿರ್ಗೊಂಡು ನಾಡಗಡಿಯನ್ನು ಸಮೀಪಿಸಿದರು. ಆಗ ಆನೆಗಳು ಘೀಳಿಡುತ್ತಲಿರಲು ಕುದುರೆಗಳ ಖುರಪುಟ ನಿನಾದದೊಂದಿಗೆ, ರಥಚಕ್ರಗಳ ಚೀತ್ಕಾರವು ಮೇಳೈಸಲು, ಸೈನಿಕರ ಚಾಪಟಂಕಾರವೂ ಘೋರ್ಗರೆಯುವಂತೆ ವನಚರ ಸೈನ್ಯವು ಇದಿರಾಯಿತು.

ಒದಗಿಬಂದ ಚಾಪಟಂಕೃತಿ ಭಯಂಕರವಾಗಲು, ರಥಗಳ ಭಾರದಿಂದ ಭೂಮಿಯೇ ಅದುರಲು, ಮನೋವೇಗದಿಂದ ಬಲಾಚ್ಯುತರ ಸೈನ್ಯವು ಕಿರಾತ ಪಡೆಯ ಮೇಲೆ ಬಿದ್ದು ಅವರನ್ನು ಕೊಂದಿಕ್ಕಿತು. ಆಗ ಜನಕನು 'ರಾಮಾ ನಿನ್ನ ಯುದ್ಧವು ವೈರಿಗಳಿಗೆ ಮಾರಣ ಮಂತ್ರವೂ, ಭೂಮಿಗೆ ಮೃತ್ಯುವಂಚನೋಚ್ಚಾರವೂ ಆಗಿ ಪರಿಣಮಿಸಿದುದು ನನಗೆ ಅಚ್ಚರಿಯನ್ನುಂಟು ಮಾಡಿದೆ. ನಿನ್ನ ಚಾಪಟಂಕಾರದ ನಿನಾದವು ಒಂದಾದರೂ ಹಲವು ರೀತಿಯಲ್ಲಿ ಕೇಳಿಸಿದ ಕಾರಣವಾವುದೋ?' ಎಂದುಕೊಳ್ಳುತ್ತ 'ಪ್ರತ್ಯುಪಕಾರವೆಂದು ನಾನು ಏನು ಮಾಡಲಿ ಕುಮಾರ, ಮೇನಕೆಗೂ ಸರಿಮಿಗಿಲಾದ ಮಗಳು ಜಾನಕಿಯನ್ನು, 'ಮದನ ವಶ್ಯಮಣಿದೀಪಿಕೆ'ಯಾದ ಜಾನಕಿಯನ್ನು ನಿನಗೆ ಧಾರೆ ಎರೆವೆನು' ಎಂದು ಹೇಳಿ -

ರಾಮನನ್ನೂ ಲಕ್ಷ್ಮಣನನ್ನೂ ಚಿತ್ರವಿಚಿತ್ರ ಭೂಷಣಗಳಿಂದ ಅರ್ಚಿಸಿ ಕೆಲವು ದಿನಗಳ ಅನಂತರ ಅಯೋಧ್ಯೆಗೆ ಕಳುಹಿಸಿಕೊಟ್ಟನು. ರಾಮಲಕ್ಷ್ಮಣರು ಅಯೋಧ್ಯೆಯಲ್ಲಿ ಸುಖದಿಂದಿರುತ್ತಿರಲು ಒಂದು ದಿನ 'ಜನಕನು ತನ್ನ ಮಗಳು ಸೀತೆಯನ್ನು ಮನುವಂಶಲಲಾಮನಾದ ರಾಮನಿಗಿತ್ತನು' ಎಂದು ಕೇಳಿದ ಜನವಾರ್ತೆಯಿಂದ ವಿಚಲಿತನಾದ ಖೇಚರನೊಬ್ಬನು ಆಕೆಯನ್ನು ಎಳೆದುಕೊಳ್ಳುವ ಉಪಾಯವೇನೆಂದು ಚಿಂತಿಸಿ - ವಿದ್ಯಾಧರ ಕುಲ ಮೊದಲಿಗರಾದ ನಮಿ ವಿನಮಿಗಳಿಗೆ ನಾಗರಾಜನು ಕೊಟ್ಟ, ವಜ್ರಾವರ್ತ - ಸಾಗರಾವರ್ತಗಳೆಂಬ ಅಗ್ನಿಯನ್ನು ಕಾರುವ ಬಿಲ್ಲುಗಳನ್ನು ತರಿಸಿಕೊಟ್ಟು, ವಜ್ರಾವರ್ತವನ್ನು ರಾಮನೇರಿಸಲು ಅವನಿಗೆ ಸೀತೆಯನ್ನು ಕೊಡುವುದು, ರಾಮನಿಂದ ಅದು ಸಾಧ್ಯವಾಗದಿದ್ದರೆ ನನ್ನ ಮಗನಿಗೆ ಆಕೆಯನ್ನು ಕೊಡುವುದೆಂಬ ಶರ್ತವನ್ನು ತಿಳಿಸಲು ಜನಕನು ರಾಮನ ಸಾಹಸವನ್ನು ತಿಳಿದುಬಲ್ಲವನಾದುದರಿಂದ ಆ ಪಣವನ್ನು ಒಪ್ಪಿ ಪಾರುಪತ್ಯಗಾರನಿಗೆ ಹೇಳಿದನು.

ಹೊರ ಉದ್ಯಾನದ ಪಕ್ಕದಲ್ಲಿ, ರತ್ನ, ಸುವರ್ಣದಿಂದ ಕಂಗಳಿಗೆ ಸುಖವನ್ನುಂಟು ಮಾಡುವ ಸ್ವಯಂವರ ಗೃಹವನ್ನು ನಿರ್ಮಿಸಿ ಸ್ವಯಂವರ ವಿಹಾರಕ್ಕೆ ನಾನಾ ವಾಹನಗಳನ್ನು, ವಿಧವಿಧದ ಭೇರಿಗಳನ್ನು, ರಕ್ಷಿಸಲ್ಪಟ್ಟ ಬಿದಿರನ್ನು ಉಪಯೋಗಿಸಿ ಮದುವೆಯ ಚಪ್ಪರವನ್ನು ನಿರ್ಮಿಸಲಾಯಿತು. ನಾನಾ ದೇಶಗಳಿಂದ ರಾಜರೂ, ರಾಜಪುತ್ರರೂ ಬಂದು ನೆರೆದರು. ಆ ಸಮಯದಲ್ಲಿ ದಶರಥನು ರಾಮ, ಲಕ್ಷ್ಮಣ, ಭರತ, ಶತ್ರುಘ್ನರೊಡನೆ ಸ್ಫಟಿಕದ ಜೌವಳಿಗೆಯಲ್ಲಿ ರತ್ನದುಂಗುರದ ನಾಯಕ ರತ್ನದಂತೆ ಕುಳಿತಿರಲು, ಸೀತೆಯು ಹೂವಿನ ಮೊಗ್ಗೆಯಂತೆ ಆ ಸಭೆಯನ್ನು ಹೊಕ್ಕಳು. ಆಗ, ಅಲ್ಲಿ

ನೆರೆದ ರಾಜ, ರಾಜ ಪುತ್ರರಿಗೆ ಮನೋವಿಕಾರದೊಂದಿಗೆ ಕಾಮ ವಿಕಾರವೂ ತೊಡಗಿ ಮಧುಮಾಸದಲ್ಲಿ ಗಿಡಮರ ಬಳ್ಳಿಗಳಿಗೆ ಆದಂತಹ ಬದಲಾವಣೆಗಳು ಕಂಡುಬಂದವು.

ತಾವರೆಯಂಥ ಕಂಗಳಿರುವ ಜಾನಕಿಗೆ ವೃದ್ಧ ಕಂಚುಕಿ ಬೆರಳ ತುದಿಯಿಂದ ರಾಜಕುಮಾರರ ಹೆಸರು ಹೇಳುತ್ತ ತೋರಿಸಿ, ಅವರ ವಂಶ, ಶೌರ್ಯ, ಧೈರ್ಯಗಳನ್ನು ಅಭಿವರ್ಣಿಸುತ್ತಿದ್ದನು.

ಹೂ ಬಿಟ್ಟ ಚಂಪಕವನಕ್ಕೆ - ರುದ್ರಾಕ್ಷಿ ಮರಗಳಿಗೆ ಬಂದು ಎರಗುವ ಭ್ರಮರಗಳಂತೆ ಆಕೆಯ ಕುಡಿನೋಟವು ಅನ್ಯ ರಾಜರಿಗೆರಗದೆ ರಾಘವನಿಗೆ ಎರಗಲು ಕಂಚುಕಿಯು ಕಂಡು ತಿಳಿದುಕೊಂಡು ವಿಶ್ವಾಸದಿಂದ ಅವನ ಗುಣ ಭೂಷಣಗಳನ್ನು ಹೇಳತೊಡಗಿದನು -

"ಈ ರಾಮನು ಸಾಮಾನ್ಯನಲ್ಲ, ಈತ ದಶರಥನ ಹಿರಿಯ ಮಗ, ಏಕವಾಕ್ಯನು. ಸಕಲ ದಿಕ್ಕುಗಳಿಗೂ ಚಾಮರ ಬೀಸುವ ಸಾಮರ್ಥ್ಯವುಳ್ಳ ಚರಮಾಂಗನು. ಅನಂತ ಶಕ್ತಿವಂತ. ಇಕ್ಷ್ವಾಕುಕುಲವೆಂಬ ಅಮೃತಸಮುದ್ರಕ್ಕೆ ಹುಣ್ಣಿಮೆಯ ಚಂದ್ರ, ರಣಧೀರ, ಉದಾತ್ತ ರಾಘವ!"

ಎಂದು ಅಭಿವರ್ಣಿಸಲು ಆ ಸಮಯದಲ್ಲಿ 'ಈವಜ್ರಾವರ್ತ ಕೋದಂಡವನ್ನು ಹೆದೆಯೇರಿಸುವಂಥ ಸಮರ್ಥನು ಸೀತೆಯನ್ನು ವರಿಸುವನು' ಎಂಬ ಪಡೆಮಾತನ್ನೂ ಕೇಳಿ, ನೆರೆದ ಅರಸು ಮಕ್ಕಳು ಆ ಕೋದಂಡವನ್ನು ಕಂಡು ಗರಬಡಿದವರಂತೆ, ಹಿಂದಿರುಗಲು ಬಲಭದ್ರನಾದ ರಾಮನು, ಪರ್ವತವೇ ಬಂದಂತೆ ಬಂದು ಆ ಕೋದಂಡವನ್ನು ಹರಳು ಗಿಡವ ಕಡ್ಡಿಯೆಂದು ಬಗೆದು ಎರಡು ಬಾರಿ ಬಿಲ್ಲಿನ ತುದಿಯನ್ನು ನೆರೆದವರಿಗೆಲ್ಲ ಭಯವಾಗುವಂತೆ ಒತ್ತಿ ಎತ್ತಿದನು. ದಶರಥ ರಾಮನ ಭುಜಬಲದ ಶಕ್ತಿಯು ಮನುಷ್ಯ ಸಾಮಾನ್ಯವೆ?

ರಾಮನು ವಜ್ರಾವರ್ತವನ್ನು ಏರಿಸಿ ಎಳೆದು ಟಂಕಾರ ಮಾಡಿದಾಗ ಜಾನಕಿಗೆ ಪುಲಕವೂ, ಜನಕನಿಗೆ ಉತ್ಸವವೂ, ಖೇಚರಸಮೂಹಕ್ಕೆ ಚಿಂತೆಯೂ ರಾಜಕುಮಾರರಿಗೆ ಉದ್ವೇಗವೂ, ಸ್ತ್ರೀ ಸಮುದಾಯಕ್ಕೆ ಸಮ್ಮೋಹನವೂ, ಪುರಜನರಿಗೆ ವಿಸ್ಮಯವೂ, ಕಣ್ಣುಗಳಿಗೆ ಆಕರ್ಷಣವೂ ಉಂಟಾಯಿತು.

ಅನಂತರ ಜಾನಕೀದೇವಿ ಈ ಹಂಸೆಯ ನಡೆಯಿ ಚೆಲುವು ಎನ್ನುವಂತೆ, ನೂಪುರದ ಇಂಚರವು, ಮನ್ಮಥನ ಕಾರ್ಮುಕವು ಜೇವೊಡೆದಂತೆ ಕೇಳಿಸಲು, ಮೃದುಪಾದಗಳಿಗೆ ಕೆಂಪು ಬಣ್ಣವು ಕೂಡಿಬಂದಂತೆ ಕೆಂದಾವರೆಯ ಹೂಗಳಂತೆ ಅಡಿ ಇಡುತ್ತ ತಲೆಗೂದಲ ಪರಿಮಳಕ್ಕೆ ತುಂಬಿಗಳು ತಲೆಯ ಮೇಲೆ ನವಿಲುಗರಿ ಹಿಡಿದಂತೆ ಮೂರ್ತ ವೈಭವದಿಂದ ಬಂದು ರಾಮನಿಗೆ ಪುಷ್ಪಮಾಲೆಯನ್ನು ಹಾಕಿದಳು.

ವೀರನಾದ ರಾಮನು ವಜ್ರಾವರ್ತಕ್ಕೂ, ತಮ್ಮನಾದ ಲಕ್ಷ್ಮಣನು ಸಾಗರಾವರ್ತಕ್ಕೂ ಒಡೆಯರಾದರು. ಚಂದ್ರಾಸ್ಯೆಯರಾದ ತನ್ನ ಹದಿನೆಂಟು ಜನ ಕನ್ಯೆಯರನ್ನು ಜನಕನ ತಮ್ಮನಾದ ಚಂದ್ರಧ್ವಜನು ಲಕ್ಷ್ಮಣನಿಗೆ ಮದುವೆ ಮಾಡಿಕೊಟ್ಟನು. ಹೀಗೆ ಜಗತ್ತಿನ ನಡೆದಾಡುವ ಕಲ್ಪವೃಕ್ಷವು ಕೈಗೆ ಸಿಕ್ಕಿತೆಂಬ ಸಂತೋಷದಿಂದ ಜನಕನು ತನ್ನ ಸಂತಾನ ವೃದ್ಧಿಗೆ ನೀರೆರೆವಂತೆ ಮಗಳಿಗೆ, ತಮ್ಮನ ಮಕ್ಕಳಿಗೆ ಪಾಣಿಗ್ರಹಣ ಮಾಡಿಸಿ ಮಂಗಳವಾದ್ಯಗಳನ್ನು ಮೊಳಗಿಸಿದನು.

◆

೩. ವನಪ್ರಯಾಣ

ರಾಮ, ಲಕ್ಷ್ಮಣರಿಗೆ ಹೀಗೆ ಉದಿಸಿದ ಪುಣ್ಯಪ್ರಭಾವವನ್ನು ಕಂಡು ಭರತನು ಐಶ್ವರ್ಯವೂ ಮಹಿಮೆಯೂ ಅಣ್ಣಂದಿರಿಗಾಯ್ತು ಎಂಬ ವ್ಯಥೆಯಿಂದ ತಪಸ್ಸಿಗೆ ಹೋಗುವುದೇ ಲೇಸೆಂಬ ತೀರ್ಮಾನಕ್ಕೆ ಬಂದುದನ್ನು ಕೈಕೆಯು ತಿಳಿದು ತನ್ನ ಗಂಡನಿಗೆ ಏಕಾಂತದಲ್ಲಿ ಹೀಗೆಂದಳು -

ಸ್ವಾಮಿ, ಭರತನ ಮುಖಾರವಿಂದವು ಬಾಡಿದೆ. ಆತನಿಗೆ ಮದುವೆ ಆಗದಿರುವುದರಿಂದ ಹೀಗಾಯಿತೋ ಎಂದು ಅನುಮಾನಿಸಲು, ದಶರಥನು ಯೋಚಿಸಿ, ಜನಕನ ತಮ್ಮ ಕನಕನನ್ನು ಕರೆಸಿ ಪರ್ಯಾಲೋಚಿಸಿ ಹಿಂದಿನಂತೆ ಸಂಬಂಧವನ್ನು ಬೆಳೆಸಲು ನನಗೆ ಮತ್ತೆ ಮನಸ್ಸಾಗಿದೆ' ಎನ್ನಲು ಕನಕನು 'ಮೊದಲೇ ಭರತನಿಗೆ ಕನ್ಯೆಯನ್ನು ಕೊಡುತ್ತೇನೆಂಬ ನನ್ನ ಆಸೆ ಇತ್ತು, ನೀವು ಅದನ್ನೇ ಈಗ ಹೇಳುತ್ತಿರುವಿರಿ; ನನ್ನ ಆಸೆ ಫಲಿಸಿತು' ಎನುತ್ತ ಅದೇ ದಿನ ಮೌಹೂರ್ತಿಕರು ನಿಶ್ಚಯಿಸಿದ ಶುಭ ಮುಹೂರ್ತದಲ್ಲಿ ಮದುವೆ ನಡೆದೇ ಹೋಯಿತು. ಪ್ರಜೆಗಳು ಇಷ್ಟು ಸಂಭ್ರಮದಿಂದ ಮದುವೆ ನಡೆದೇ ಹೋಯ್ತಲ್ಲ - ಎಂದು ಆಶ್ಚರ್ಯಪಟ್ಟರು.

ಹೀಗೆ ಭರತನು ಕನಕನ ಮಗಳು ಕನಕಪ್ರಭೆಯನ್ನು ವಿವಾಹವಾಗಿ ಸುಖದಿಂದಿರಲು, ಜನಕನು ತನ್ನ ರಾಜ ಚಿಹ್ನೆಯೊಂದನ್ನು ಬಿಟ್ಟು ಉಳಿದೆಲ್ಲವನ್ನು ಸೀತೆಗೆ ಬಳುವಳಿ ಕೊಟ್ಟು ಅಯೋಧ್ಯೆಗೆ ಕಳುಹಿಸಿದನು. ಕೆಲವು ದಿನಗಳ ಪ್ರಯಾಣದ ಬಳಿಕ ಅಯೋಧ್ಯೆಗೆ ದಶರಥನು ಬಂದಿರಲು ಒಂದು ದಿನ ಋಷಿ ನಿವೇದಕನು ಬಂದು ಅರಸನೊಡನೆ - ದೇವಾ ನಮ್ಮ ಸರಯೂ ತೀರದ ಮಹೇಂದ್ರೋದ್ಯಾನದಲ್ಲಿ ಜ್ಞಾನಿಗಳಾದ ಸರ್ವಭೂತ ಹಿತ ಭಟ್ಟಾರಕರು ಮಹರ್ಷಿಗಳ ಸಮುದಾಯದೊಂದಿಗೆ ಬಂದು 'ಯೋಗವಿಯೋಗ'ದಿಂದಿರುವರು - ಎಂದು ಹೇಳಲು, ರಾಜನು ಪರಿಮಿತ ಜನರೊಂದಿಗೆ ಆ ಮುನಿಯಿದ್ದ ಉದ್ಯಾನಕ್ಕೆ ಬಂದು ಪ್ರದಕ್ಷಿಣೆಗೊಂಡು ಗುರುಭಕ್ತಿಪೂರ್ವಕ ವಂದಿಸಿ ತನ್ನ ಭವಾವಳಿಯನ್ನು ದಯವಿಟ್ಟು ಹೇಳಬೇಕೆಂದು ಕೈ ಮುಗಿದನು.

ಋಷಿಪತಿಯು ದಶರಥನ ಆ ಜನ್ಮದ ಸಂತತಿಯ ವಿವರವನ್ನು ಸುಖ ದುಃಖಗಳನ್ನು ಹೇಳಿದಾಗ ತಾನು 'ರಾಟಳದ ಗುಂಡಿಗೆ' ಯಂತಾದೆನೆಂದು ತಿಳಿದು ಈ ಸಂಸಾರದಿಂದ

ಮುಕ್ತನಾಗಬೇಕೆಂದು ಬಗೆದನು. "ಇಂದಿನವರೆಗೆ ಸಂಸಾರವೆಂಬ ಹೇಸಿಗೆಯನ್ನು ಸವಿದೆನು. ಹಿರಿಮಗ ಕಿರಿಮಗನೆಂಬ ಭೇದವನ್ನು ತೋರಿ ಸಂಸಾರದಲ್ಲಿ ಪರಾಭವವನ್ನು ಕಂಡೆನು. ಈ ಜನ್ಮದ ಜಲರಾಶಿಯನ್ನು ದಾಟುವುದು ಅಸಾಧ್ಯ. ಆದ್ದರಿಂದ ಜಿನರೂಪವೆಂಬ ತೆಪ್ಪವನ್ನೇರಿ ಯಾತ್ರೆ ಮಾಡದೆ ಬೇರೆ ದಾರಿಯಿಲ್ಲ. ಸಾಯುವ ಹುಟ್ಟುವ ಹೆದರಿಕೆಯೂ, ಯಾವುದನ್ನು ಉಂಡರೂ ತಣಿಯದ ನಾಲಗೆಯ ರುಚಿಯೂ, ಮನುಷ್ಯನನ್ನು ಎಲ್ಲಿಗೆ ಕೊಂಡೊಯ್ಯುವುದು? ಎಂದು ಪರಿಭಾವಿಸಿ ದಶರಥನು ಸರ್ವಹಿತ ಭಟ್ಟಾರಕರನ್ನು ಬೀಳ್ಕೊಂಡು ಅಯೋಧ್ಯೆಗೆ ಬಂದನು.

ಒಂದು ದಿನ ಒಡ್ಡೋಲಗ ಕೊಟ್ಟು ತನ್ನ ನಾಲ್ವರು ಮಕ್ಕಳನ್ನು ಕರೆಯಲು ಅವರೆಲ್ಲರೂ ಬಂದು ತಂದೆಯ ಪಾದಗಳಿಗೆರಗಿದರು. "ಅನಂತ ಸುಖ ಭೋಗಭಾಗಿಗಳಾಗಿ"ಯೆಂದು ಅವರನ್ನು ಹರಸಿ ಪಕ್ಕದ ಮಣಿಮಯಾಸನಗಳಲ್ಲಿ ಕುಳ್ಳಿರಿಸಿ ರಾಮನನ್ನು ನೋಡಿ -

''ಮಗನೆ, ಹಣೆಯಲ್ಲಿ ಕಣ್ಣುಗಳನ್ನು ಪಡೆದಂತೆ ತೇಜೋವಂತನಾದ ನಿನ್ನನ್ನು ಪಡೆದೆನು. ಇನ್ನು ನೀನು ಈ ರಾಜ್ಯವಾಳಲು ಒಪ್ಪಿಕೋ. ನನ್ನನ್ನು ತಪೋರಾಜ್ಯವನ್ನು ಸೇರಲು ಬಿಡು. ನಾನು ಒಂದು ವರ್ಷದ ಮಗುವಾಗಿರುವಾಗ ನನ್ನ ಜನಕನು ಈ ವಿಸ್ತಾರವಾದ ಸಾಮ್ರಾಜ್ಯವನ್ನು ನನಗೆ ಕೊಟ್ಟು ತಾನು ಮೋಕ್ಷವೆಂಬ ಸಂಪತ್ತನ್ನು ಪಡೆದನು. ಮಗನೆ, ನಮ್ಮ ಈ ವಂಶದಲ್ಲಿ ಪುರಾತನದ ಜಗದ್ವಿಖ್ಯಾತರಾದ ರಾಜರು ಅರಸರಾದರು, ದಣಿದು ತತ್ತ್ವಾಭ್ಯಾಸಿಗಳಾಗಿ ವಿಶ್ರಾಂತರೂ ಆಗಿ ಕುಲಕ್ರಮವನ್ನು ನಡೆಸಿದರು. ನಾನು ಆ ಸನ್ಮಾರ್ಗ ಪದ್ಧತಿಯನ್ನು ಮರೆಯುವುದು ಸರಿಯೆ?'' ಎನ್ನಲು ರಾಮಚಂದ್ರನು -

''ಮಲೆತು ನಿಂತ ಉದ್ಧತರನ್ನು ನಿಮ್ಮ ಬಾಹುದಂಡದಿಂದ ಅಂಕಿತದಲ್ಲಿಟ್ಟು ರಾಜ್ಯವಾಳಿದುದನ್ನು ಈ ಜಗತ್ತು ತಿಳಿದಿದೆ. ಘೋರವಾದ ಬಿರುಗಾಳಿಯ ರಭಸವಂತೆ ಬೀಸಣಿಗೆಯ ಗಾಳಿಗೆ ಶಕ್ತಿಯಿದೆಯೆ? ನೀವು ತೋರಿದ ವಿಕ್ರಮವನ್ನು ನಾವು ತೋರಿಸಲು ಸಾಧ್ಯವೆ?'' ಎನಲು ದಶರಥನು ರಾಮನ ವಿನಯವಚನವನ್ನೂ ಕೇಳಿ ಸಂತಸಗೊಂಡನು. ಮತ್ತೆ -

''ತನಯರಿಗೆ ರಾಜ್ಯವನ್ನೊಪ್ಪಿಸಿ ಮನುವಂಶದ ರಾಜರು ತಾವು ತಪೋರಾಜ್ಯವನ್ನು ಸೇರುವುದು ನಮ್ಮ ವಂಶದಲ್ಲಿ ನಡೆದು ಬಂದ ಪದ್ಧತಿ. ನಾನೀಗ ದೇವತೆಗಳು ಮೆಚ್ಚುವ ತಪೋರಾಜ್ಯದಲ್ಲಿ ನಿಲ್ಲುವೆನು, ನೀನು ಈ ರಾಜ್ಯಭಾರವನ್ನು ನಿರ್ವಹಿಸು. ಇದು ನನ್ನ ಆಜ್ಞೆ. ಇದನ್ನು ನೀನು ನಡೆಸುವುದು ನ್ಯಾಯ'' ಎನ್ನುತ್ತ

''ಮಗನೆ ಈ ಸಾಮ್ರಾಜ್ಯ ಪಟ್ಟವು ನಿನ್ನ ಹಣೆಯಲ್ಲಿ ತಿಲಕದಂತೆ ಶೋಭಿಸಲಿ, ಈ ಧರಾಮಂಡಲವು ನಿನ್ನ ಭುಜದಂಡದ ಆಶ್ರಯದಲ್ಲಿರಲಿ, ನಿನ್ನ ತಲೆಯ ಪ್ರಭಾವಳಿ ಬೆಳ್ಗೊಡೆಯ ಆಶ್ರಯದಲ್ಲಿರಲಿ. ನಾನೀಗ ತಪಸ್ಸೆಂಬ ಲಕ್ಷ್ಮಿಯನ್ನು ಸೇರಲು ಅಪೇಕ್ಷೆ ಪಟ್ಟೆನು. ತಂದೆಯ ಮಾತನ್ನು ಉಪೇಕ್ಷಿಸುವುದು ಕ್ರಮವಲ್ಲ'' - ಎಂದು ಹೇಳಿದನು. ಮರುಮಾತಿಗೆ ಅವಕಾಶವಿಲ್ಲದಂತೆ ರಾಮನನ್ನು ಒಡಂಬಡಿಸಿ ಒಪ್ಪಿಸಿದಾಗ ಭರತನು -

‘ದೇಹವು ಕೊಳಕನ್ನೂ, ಅನಂತ ವೀರ್ಯವೇ ಮೊದಲಾದ ನಾಲ್ಕು ಗತಿಗಳಿಂದ ಆಗಬಹುದಾದ ಅನಿಷ್ಟಗಳನ್ನೂ, ಕೆಡುವ ಸುಖಗಳನ್ನು ತಣಿಯದ ಆಯಾಸವನ್ನು ತಿಳಿದು ನಿಮ್ಮ ಪಾದಾರವಿಂದಗಳಿಗೆ ಹೆದರಿ ಇದುವರೆಗೆ ಹೇಳಲು ಹಿಂಜರಿದಿದ್ದೆನು. ಈಗ ಅಪ್ಪಾ, ನಿಮ್ಮ ಜೊತೆಗೆ ಅದನ್ನು ಹೇಳಿಕೊಳ್ಳಲು ಅವಕಾಶ ಸಿಕ್ಕಿತು. ನಿಮ್ಮೊಡನೆ ಜೊತೆಯಾಗಿ ಪರಮಾರ್ಥ ಸುಖವನ್ನು ಸಾಧಿಸುವೆನು ಎನಲು’ – ಅದನ್ನು ಆ ಸಭೆಯಲ್ಲಿದ್ದು ಕೇಳಿದ ಒಬ್ಬಾಕೆ ದಾಸಿ ತ್ವರಿತ ಗತಿಯಿಂದ ಬಂದು ಕೈಕೆಯೊಡನೆ – ರಾಮನಿಗೆ ರಾಜ್ಯವನ್ನು ಕೊಟ್ಟು ದಶರಥನು ಭರತನನ್ನು ಕೂಡಿಕೊಂಡು ತಪಸ್ಸಿಗೆ ಹೋಗುವರಂತೆ – ಎಂದು ತಿಳಿಸಿದಾಗ ಕೈಕೆ ವಿಕಳೆಯಾಗಿ

ರಾಜನು ರಾಜ್ಯವನ್ನು ರಾಮನಿಗೆ ಕೊಟ್ಟನು ನಾನು ಸುಮ್ಮನಿದ್ದರೆ ನನಗೆ ಸದಾ ಹಿರಿರಾಣಿಯ ದಾಸ್ಯಭಾವವು ತಪ್ಪಿದ್ದಲ್ಲವೆಂಬಂತೆ ಭರತನಿಗೆ ಈ ರೀತಿಯ ವೈರಾಗ್ಯವು ಬಂದಿರಬೇಕು ಎಂದು ಚಿಂತಿಸಿ –

ಭರತನು ತಪಸ್ಸಿಗೆ ಹೋದರೆ ನನಗೆ ಯಾರು ದಿಕ್ಕು? ನಾನೊಬ್ಬಳೇ ಉಳಿಯುತ್ತೇನೆ ಎಂದು ತಿಳಿದು ಭಯಚಕಿತೆಯಾಗಿ ಚಿಂತೆಯೆಂಬ ಸಮುದ್ರದಲ್ಲಿ ಮುಳುಗಿ ಕಣ್ಣೆವೆಯಿಕ್ಕುವುದನ್ನೂ ಮರೆತಳು.

ಗಂಡನೊಡನೆ ಮಗನು ತಪಸ್ಸಿಗೆ ಮನಸ್ಸು ಮಾಡಿದರೆ ಸವತಿಯರು ಇಕ್ಕುವ ಕೂಳಿಗೆ ನಾನು ಕೈಯೊಡ್ಡಬೇಕು ಎಂದು ಮನಸ್ಸಿನಲ್ಲೇ ಹಲುಬಿ, ತನಗೆ ದಶರಥನು ಹಿಂದೆ ಕೊಟ್ಟ ವರವನ್ನು ನೆನೆದಂತೆ ಅದು ಬೃಹದಾಕಾರವಾಗಿ ಕೈಕೆಯ ಮುಂದೆ ಬಂದು ನಿಂತಿತು. ಭರತನಲ್ಲಿ ರಾಜ್ಯಮೋಹವನ್ನು ಉಂಟುಮಾಡಬೇಕೆಂದು ಆಕೆ ಯೋಚಿಸಿದಳು. ಚಿನ್ನಾಭರಣವನ್ನು ತೆಗೆದಿಟ್ಟು, ತಾನು ಬಡವೆಯಂತೆ ಕಂಡರೂ ವ್ಯಥಿಸದೆ ಧರ್ಮಹಾನಿಯನ್ನು ನೆನೆಯದೆ ಮಲಿನ ಮನಸ್ಸಿನ ಕೈಕೆ ಮೋಸದ ದೀಪದಂತೆ ದಶರಥನ ಶಯ್ಯಾಗೃಹವನ್ನು ಪ್ರವೇಶಿಸಿದಳು.

ತಾನು ಮಾಡುತ್ತಿರುವುದು ಅನುಚಿತ ಕೆಲಸವೆಂದು ಭಾವಿಸದೆ, ಇದರಿಂದ ತನಗೆ ಅಪಯಶಸ್ಸು ಬರುವುದೆಂದು ತಿಳಿಯದೆ ಆಕೆ ಪತಿಯೆದುರಿಗೆ ಬಂದು “ಬೇಕಾದಾಗ ಕೊಡುವೆನೆಂದು ಹೇಳಿದ ವರವನ್ನು ಇದೀಗ ಕೊಡು” ಎಂದು ಬಿನ್ನವಿಸಲು, ದಶರಥನು “ಮನು ಕುಲಜರು ಆಡಿದ ಮಾತನ್ನು ತಪ್ಪುವುದುಂಟೆ, ಹೆದರದೆ ನಿನಗೆ ಬೇಕಾದುದನ್ನು ಕೇಳು. ಆದರೆ ನನ್ನ ತಪೋಗಮನಕ್ಕೆ ಅಡ್ಡಿಯಾಗದಂತೆ ಕೇಳು”– ಎಂದನು.

ಚಂದ್ರಬಿಂಬದಂತೆ ಶೋಭಿಸುವ ಮುಖದಲ್ಲಿ ಕಳಂಕದ ಬೀಜಗಳಂತೆ ಮುಖಪದ್ಮದ ಮಧುಪಾನವನ್ನು ಮಾಡಿ ಸೊಕ್ಕಿದ ತುಂಬಿಗಳಂತೆ ಕೈಕೆ ಮಾತಿನ ರೀತಿ ಮೀರಿ, ಅಣ್ಣನಿರಲು ತಮ್ಮನಿಗೆ ರಾಜ್ಯಪಟ್ಟದೊರೆಯಬೇಕೆಂಬ ಸ್ವಾರ್ಥವನ್ನು ವ್ಯಕ್ತಪಡಿಸಿ ಹೊಲಸು ಬೇಡಿಕೆಯನ್ನು ಗಂಡನ ಮುಂದಿಟ್ಟಳು. ಅದು :

“ಹದಿನಾಲ್ಕು ವರ್ಷ ಭರತನು ರಾಜ್ಯವಾಳಲಿ, ರಾಮನು ಅಡವಿ ಸೇರಲಿ !” ಈ ಕೇಳಿಕೆ ಈರೇಳು ಹದಿನಾಲ್ಕು ಲೋಕಗಳಷ್ಟು ವ್ಯಾಪಕವೆಂದು ದಶರಥನಿಗನಿಸಿ ಅದು ತನ್ನ ಅಪಖ್ಯಾತಿಯ

ಪತಾಕೆಯಂತೆ ಕಂಡಿತು. ಡೋಲಾಯಮಾನ ಸ್ಥಿತಿಯು ಅವನದಾಗಲು, ಆತ ಮೇಘಮಾಲೆಯ ಧ್ವನಿಕೇಳಿದ ಹಂಸದಂತಾದ.

ತಾನು ಕೊಟ್ಟ ಮಾತಿನಂತೆ ನಡೆಯದಿದ್ದರೆ ತನಗೆ ಬೆಲೆ ಇಲ್ಲದಂತಾಗುತ್ತದೆ. ಕೈಕೆ ಕೇಳಿದ್ದನ್ನು ಕೊಟ್ಟರೆ ಹೆಣ್ಣಿನ ಮಾತು ಕೇಳಿ ಹಿರಿಯನಿರುವಾಗ ಕಿರಿಯನಿಗೆ ಪಟ್ಟಕಟ್ಟಿದ ಪಾಪ ಬರುತ್ತದೆ. ಈಗ ತಾನೇನು ಮಾಡಲಿ ಎಂದು ಮಾತು ಬಾರದವನಂತೆ ದಶರಥನು ಮತಿಭ್ರಾಂತನಾದನು.

ತನ್ನ ತಾಯಿ ತಂದೆಯೊಡನೆ ಅರಸುತನವನ್ನು ತನಗೆ ಕೊಡಬೇಕೆಂದುದನ್ನು ಕೇಳಿ ಭರತನು ಮನಸ್ಸಿನಲ್ಲೇ ನೊಂದನು. ಅದರಿಂದ ಅಪಮಾನಿತನಾಗಿ ರಾಜ್ಯಭಾರ ಮಾಡುವುದು ತನಗೆ ಇಷ್ಟವಲ್ಲ, ತಂದೆಗೂ ಇಷ್ಟವಲ್ಲ ಇದು ಕೆಟ್ಟ ರೀತಿ ಎಂಬುದನ್ನು ತನ್ನ ತಾಯಿ ತಿಳಿಯದೆ ಹೋದಳಲ್ಲ ಎಂದು ಭರತನು ಆಯಾಸ ಹೊಂದಿದ ಸ್ಥಿತಿಯಲ್ಲಿರಲು -

ನೆರೆದ ಸಭೆ - ಈಕೆ ಅನಿಷ್ಟವನ್ನು ಹೇಳಿದಳು, ಅನ್ಯಾಯದ ಮಾತಾಡಿದಳು, ಪತಿಯ ಮನಸ್ಸಿಗೆ ವಿರೋಧವಾದುದನ್ನು ಕೇಳಿದಳು, ಕುಲಕ್ಕೆ ಅಪಯಶಸ್ಸು ತರುವ ವರ್ತನೆಯಿಂದ ನಿಂದೆಗೊಳಗಾದಳು - ಎಂದು ಕೈಕೆಯ ವರ್ತನೆ ದೋಷಪೂರಿತವೆಂದು ಆಡಿಕೊಂಡಿತು.

'ಮನಸ್ಸಿನಲ್ಲಿ ಅತ್ಯಾಸೆ ಇಲ್ಲದ ಹೆಂಗಸರು ಇಲ್ಲ' ಎಂಬುದು ಸತ್ಯವಾದರೂ ಅಣ್ಣ - ತಮ್ಮಂದಿರಲ್ಲಿ ಭೇದವನ್ನು ಹುಟ್ಟುಹಾಕಿ ತನಗೂ ಮಕ್ಕಳಿಗೂ ಗಂಡನಿಗೂ ಭೇದವನ್ನು ಪ್ರಮಾದವನ್ನು ಈ ಕೈಕೆ ಏಕಾಗಿ ಉಂಟು ಮಾಡಿದಳೋ? ಅಪಯಶಸ್ಸಿಗೆ ಹೆದರದೆ ಭೂಮಿಯನ್ನು ಪ್ರೀತಿಯಿಂದ ದಶರಥನು ಕೊಟ್ಟರೂ, ಲಕ್ಷ್ಮಣನು ಕೊಡಲು ಒಡಂಬಡುವನೆ? ಇದು ಕೈಕೆಗೆ ತಿಳಿಯದಾಯ್ತಲ್ಲ. ಹೀಗೆ ಹೆಂಗಸರು ಅವಿವೇಕಿಗಳಾಗುವರೆ?

ಭರತನು ಲಜ್ಜೆಯಿಂದ ಮುಖವೆತ್ತದಂತಾದನು. ಕೈಕೆ ನಿಸ್ತೇಜೆ. ದಶರಥನು ವಿಹ್ವಲ, ಲಕ್ಷ್ಮಣನು ಕೋಪಾವಿಷ್ಟ, ಸಭಿಕರು ಸದಾ ಅಸಹನೆಯನ್ನು ತೋರ್ವವರು. ಅಂತಃಪುರವು ವಾತ್ಸಲ್ಯ ರಹಿತ. ಸದಾ ಕಾರುಣ್ಯದೃಷ್ಟಿಯನ್ನು ಎಲ್ಲರ ಮೇಲೂ ಬೀರುವ ರಾಮನು ಕಡಲಿನ ಮಧ್ಯದಲ್ಲಿ ಪಾರಿಜಾತವು ಕೈಗೆ ಸಿಕ್ಕಿದಂತೆ ಇದ್ದನು.

ತಂದೆಯಾಡಿದ ಮಾತು ಉಳಿಯುವುದು, ತಾಯಿಗೆ ತನ್ನ ಮನೋರಥ ಕೈಗೂಡಿದ ಸಂತಸ ಒದಗುವುದು. ರಾಜ್ಯವನ್ನು ತಮ್ಮನು ಆಳುವನು. ತನ್ನ ಪುಣ್ಯದಿಂದ ನನಗೆ ಪರಮ ಲಾಭವೂ ಉಂಟಾಗುವುದು ಎಂದು ಹಲಾಯುಧನು ರೋಮಾಂಚನಗೊಂಡನು.

ಪ್ರಜೆಗಳಿಗೆ ಹಿತವಲ್ಲದ ಅನುಶಾಸನವನ್ನು ನಾಶ ಮಾಡುವುದು ರಾಜನ ಲಕ್ಷಣ. ಇನ್ನು ಬಾಹುಗುಣ, ದಾನಗುಣಗಳಿಂದ ಎದ್ದು ತೋರುವಂತೆ ಮಾಡಿ ನನ್ನ ತಮ್ಮನಿಗೆ ಮತ್ತು ಎಲ್ಲರಿಗೆ ನನ್ನ ತಂದೆ ಕೊಟ್ಟುದನ್ನು ಉಳಿಸಿಕೊಳ್ಳುವುದು ನ್ಯಾಯ ಎಂದು ಉದಾತ್ತ ರಾಘವನು ನಿಶ್ಚಯಿಸಿದನು. ಹೀಗೆ ನಿಶ್ಚಯಿಸಿ ಕೈಕೆಯ ಮುಖವನ್ನು ನೋಡಿ, ಕೈಗಳನ್ನು ಜೋಡಿಸಿ, ವಿಕಸಿತ ಹೃದಯನಾಗಿ -

‘‘ಇದು ಸುಳ್ಳಲ್ಲ, ನಾಲಗೆಯ ಹೇಡಿತನವಲ್ಲ. ಕೈಯಲ್ಲಿ ಹಿಡಿದ ಖಡ್ಗಕ್ಕೆ ಕುಲಕ್ರಮವನ್ನು ನೇರ್ಪಡಿಸುವುದು ಮುಖ್ಯ. ನನ್ನ ಕಾರಣದಿಂದ ತಂದೆಯು ಸುಳ್ಳಾಡನು. ನಾನು ಅವನ ಮಾತನ್ನು ಮೀರಿದರೆ ಅದು ನನಗೆ ಕೊರತೆಯಾಗದೆ? ತಂದೆಯ ಮಾತಿನಂತೆ ನಾನು ರಾಜನಾದರೆ ನನ್ನ ಖ್ಯಾತಿ ವ್ಯರ್ಥವಲ್ಲವೆ? ಇದು ನನ್ನ ಕೀರ್ತಿಗೆ ಕಲಂಕವನ್ನು ತರುವುದಿಲ್ಲವೆ? ರಾಜ್ಯವನ್ನು ಭರತನಿಗೆ ಪ್ರೀತಿಯಿಂದ ಕೊಡುತ್ತೇನೆ. ತಾಯಿ, ನನ್ನ ಮಾತನ್ನು ನಂಬು ಸಣ್ಣ ವಿಷಯವನ್ನು ನನಗೆ ಹೇಳಿದರೆ ಸಾಕಿತ್ತು. ನನ್ನ ತಮ್ಮನಿಗೆ ರಾಜ್ಯವನ್ನು ಕೊಡದೆ ಇರುತ್ತಿದ್ದೆನೆ? ಅಪ್ಪಾ, ನೀವು ನನಗೆ ರಾಜ್ಯವನ್ನು ಕೊಟ್ಟರೂ ಅದನ್ನು ಆಳುವವರು ನನ್ನ ತಮ್ಮಂದಿರು. ಅದು ಚಿಂತೆ ಪಡುವ ವಿಷಯವಲ್ಲ. ನಾವು ರಾಜ್ಯಕ್ಕಾಗಿ ಹೊಡೆದಾಡುವವರಲ್ಲ. ಆದರೆ ರಾಜ್ಯವನ್ನು ನಾನಾಳಿದರೆ ಭರತನು ತಪಸ್ಸಿಗೆ ಹೋಗುವನು. ಅವನ ಅಗಲುವಿಕೆಯಿಂದ ತಾಯಿಗೆ ಮರಣ ಪ್ರಾಪ್ತವಾಗುತ್ತದೆ. ನಿನಗೆ ಅಪಕೀರ್ತಿ! ಲೋಕವೆಲ್ಲ ‘ಮಗನ ಮೇಲಣ ಮೋಹದಿಂದ ದಶರಥ ತಪ್ಪು ಮಾಡಿದನು’ ಎಂದು ಹೇಳಿದರೆ ನಿನಗೆ ಅವಮಾನ. ಇದನ್ನು ಕೇಳಿಯೂ ರಾಮನು ರಾಜ್ಯವನ್ನು ಅಪೇಕ್ಷಿಸಿದರೆ ರಾಮನಿಗೆ ಅಪಖ್ಯಾತಿ. ಇನ್ನು ರಾಜ್ಯಕ್ಕೆ ಆಸೆ ಪಟ್ಟರೆ ನಿಮ್ಮ ಆಜ್ಞೆಗೆ ತಪ್ಪಿದ ದೋಷ – ಆದ್ದರಿಂದ ನನ್ನ ಮಾತನ್ನು ಕೇಳುವ ಕೃಪೆ ಮಾಡು’’ ಎಂದು ಹೇಳಿದನು.

‘‘ಹದಿನಾಲ್ಕು ವರ್ಷಗಳ ಕಾಲ ಮಗನು ತಪಸ್ಸಿಗೆ ತೆರಳುವ ಅಪೇಕ್ಷೆಯನ್ನು ತಪ್ಪಿಸಲು ಕೈಕೆ ರಾಜ್ಯವನ್ನು ಬೇಡಿ ಒಳ್ಳೆಯದನ್ನೇ ಮಾಡಿದಳು. ಅಷ್ಟು ಕಾಲ ನಾನು ದಿಗ್ವಿಜಯಕ್ಕೆ ತೆರಳಿ ಜಯಶೀಲನಾಗಿ ಬರುತ್ತೇನೆ. ಅದುವರೆಗೆ ಅವನ ತಲೆಯಲ್ಲಿ ಸಾಮ್ರಾಜ್ಯ ಪಟ್ಟವಿರಲಿ’’ ಎಂದು ರಾಮನು ಹೇಳಲು –

ಪರಮ ಪವಿತ್ರನಾದ ರಾಮನಿಗೆ ನಾವು ಕೊಡುವೆವೆನ್ನುವ ರಾಜ್ಯವು ಕೇವಲ ಒಂದು ಅಣುವಿನಷ್ಟು ಮಾತ್ರ ದೊಡ್ಡದು. ಈ ರಾಮನ ವಿನಯಕ್ಕೆ, ಪ್ರೀತಿಗೆ, ಗುಣಕ್ಕೆ, ನಡೆಗೆ ಆಶ್ಚರ್ಯ ಪಟ್ಟು ದಶರಥನ ತಲೆ ಕಾಮನಬಿಲ್ಲು ಪ್ರಕಾಶಮಾನವಾದ ಮಣಿಗಳ ಪ್ರಭೆಯನ್ನು ಬೀರುವಂತೆ ತೂಗಿತು.

ಆ ಸಮಯದಲ್ಲಿ ಭರತನು ದಶರಥನೊಡನೆ –

‘‘ಅಪ್ಪಾ, ಹಿರಿಯಣ್ಣನಿಗೆ ಸಲ್ಲಬೇಕಾದುದನ್ನು ಕಿರಿಯನು ಅಪೇಕ್ಷಿಸುವುದು ಉಚಿತವಲ್ಲ. ತಪೋರಾಜ್ಯವೇ ನನಗೆ ಉಚಿತ. ಅನ್ಯಾಯವಾಗಿ ದೊರೆಯುವುದು ನಿಜವಾಗಿಯೂ ವ್ಯರ್ಥ. 'ಎಂದಿನವರೆಗೆ ನನ್ನಲ್ಲಿ ವೈರಾಗ್ಯವು ಹುಟ್ಟುವುದಿಲ್ಲವೋ ಅಂದಿನವರೆಗೆ ಎಲ್ಲವೂ ಬೇಕು. ತನ್ನನ್ನು ತಾನು ತಿಳಿದುಕೊಂಡ ಮೇಲೆ ತನಗೆ ಏನೂ ಬೇಡ ಎನ್ನಲು, ಅವನ ನಿರ್ಣಯವನ್ನು ದಶರಥನು ಮೆಚ್ಚಿ –

‘‘ಮಗನೆ ನಿನಗೆ ಇದು ವೈರಾಗ್ಯಕ್ಕೆ ಕಾಲವಲ್ಲ. ಏಕೆಂದರೆ ಎಲ್ಲಕ್ಕೂ ಮಿಗಿಲಾದ ಶ್ರೇಷ್ಠವಾದ ಪುರುಷಾರ್ಥವಿರುವುದು ಕೊನೆಗೆ. ಅದುವರೆಗೆ ಉಳಿದ ಪುರುಷಾರ್ಥಗಳನ್ನು ಆಚರಿಸುವುದು. ಆದುದರಿಂದ ಕ್ರಮವನ್ನು ಪಾಲಿಸಿಕೊಂಡು ಬರುವುದೇ ನ್ಯಾಯ. ಇದು ಕುಲಕ್ರಮ. ಅಣ್ಣನ ಮಾತೇ

ನಿನಗೆ ವಿಧೇಯಕ' ಎಂದು ಹೇಳಲು ಅದಕ್ಕೆ ಉತ್ತರ ಕೊಡಲರಿಯದೆ ಭರತನಿರಲು ರಾಮನು, "ಸತ್ಯಕ್ಕೆ ಕಷ್ಟವಾದರೂ ನಮ್ಮಪ್ಪನಿಗೆ ಅಪಯಶಸ್ಸು ಹಿರಿದಾದುದು, ನಿನ್ನ ವಿಯೋಗವು ತಾಯಿಯನ್ನು ಘಾಸಿಗೊಳಿಸುತ್ತದೆ ಹೀಗಾಗಿ, ತಮ್ಮಾ, ನಿನ್ನ ಖ್ಯಾತಿಗೂ, ಚಾರಿತ್ರ್ಯಕ್ಕೂ ನಿನ್ನ ಪಿತೃವಾಕ್ಯ ಪರಿಪಾಲನೆ ಎಂಬ ನಿಯಮಕ್ಕೂ ಕೇಡು ತರುತ್ತದೆ. ಇವನ್ನೂ ಯೋಚಿಸು, ಮತ್ತು ಇವೆಲ್ಲವುಗಳಿಗೂ ಹಾನಿಯಾಗದಂತೆ ನೋಡಿಕೊ. ವಂಶಕ್ರಮವನ್ನು ಪರಿಪಾಲಿಸಲು ತಂದೆ ನನಗೆ ರಾಜ್ಯವನ್ನಿತ್ತ, ತಂದೆಯ ಮಾತನ್ನು ಉಳಿಸಲಿಕ್ಕೆ ನಾನದನ್ನು ನಿನಗೆ ಕೊಟ್ಟೆ. ಇವು ಅಕ್ರಮವಲ್ಲ. ನೀನು ಒಮ್ಮನಸ್ಸಿನಿಂದ ಯುವ ರಾಜ್ಯಭಾರವನ್ನು ಸ್ವೀಕರಿಸು. ಇದು ತಂದೆಯ ಆಜ್ಞೆ. ಇದನ್ನು ನಡೆಸಿಕೊಡಬೇಕಾದುದು ನಮ್ಮ ಧರ್ಮ" ಎಂದು ಹೇಳಿ, ಹೇಗಾದರೂ ಭರತನು ಯುವರಾಜನಾಗಿ ನಿಲ್ಲುವಂತೆ ಅವನನ್ನು ಒಡಂಬಡಿಸಿದನು. ಅಯೋಧ್ಯೆಯ ಪ್ರಜೆಗಳು –

"ಮಹಾ ಪುರುಷರು ಎಂಥ ಶ್ರೇಷ್ಠರು. ಒಬ್ಬರು ಇನ್ನೊಬ್ಬರೊಡನೆ ಕಾದಾಡಿದರು, ಓಡಿದರು, ಮಡಿದರಲ್ಲದೆ ತಂದೆಯ ಮಾತನ್ನು ನಡೆಸಲು ಭೂಮಿಯನ್ನು ಒಣ ಹುಲ್ಲೆಂದು ತಿಳಿದು ದಾನ ಕೊಟ್ಟವರು ಯಾರು" ಎಂದು ಸಾಕೇತದ ಜನರು ರಾಮನನ್ನು ಆದರದಿಂದ ಹೊಗಳಿದ್ದನ್ನು, ಭರತನು ಕ್ರಮತಪ್ಪಿ ಅಯೋಧ್ಯೆಯನ್ನು ಆಳಲು ಕುಲಕ್ರಮವನ್ನೂ ತಪ್ಪಿ ಒಪ್ಪಿಕೊಂಡುದನ್ನು ಕಂಡು ಅಚ್ಚರಿಪಟ್ಟರು.

ಇಂದ್ರನನ್ನು ಸೆರೆಮನೆಯಲ್ಲಿಡಲು, ಕುಲಪರ್ವತಗಳನ್ನು ಹೀಯಾಳಿಸಲು, ತಾರಾಮಂಡಲವನ್ನು ನೆಲಕ್ಕೆ, ನೆಲವನ್ನು ಆಕಾಶಕ್ಕೆ ಹೋಲಿಸಲು ಸಮುದ್ರದ ನೀರನ್ನೇ ಕುಡಿಯಲು, ದಿಗ್ಗಜಗಳ ದಾಡೆಗಳನ್ನು ಬೇರು ಸಮೇತ ಕೀಳಲು ಅಂದು ಕಣ್ಣು ಕೆಂಪು ಮಾಡಿಕೊಂಡ ಲಕ್ಷ್ಮಣನು ಏನೆಂದು ಬಗೆದನೊ? ಈ ಭರತ ಖಂಡವನ್ನು ಭರತನಿಗೆ ತಂದೆಯ ಮಾತನ್ನು ನಡೆಸಲು ರಾಮನು ಕೊಟ್ಟನು, ಜಗತ್ತಿನ ಜನರನ್ನು ಮರುಳು ಮಾಡಿಕೊಟ್ಟನು ಎಂದು ಲೋಕ ಹೇಳುತ್ತದೆ. ಕ್ರಮವನ್ನು ಅತಿಕ್ರಮಿಸಿ ಶೌರ್ಯವಿಲ್ಲವೆಂದು ತಿಳಿದು ಶತ್ರುಗಳಿಗೆ ಸಿಂಹ ಪ್ರಾಯನಾದ ನಮ್ಮಪ್ಪ ದಶರಥನು ಕೊಟ್ಟನೆನ್ನುತ್ತದೆ ಲೋಕ. ರಾಮನು ಭರತನಿಗೆ ರಾಜ್ಯವನ್ನು ಕೊಟ್ಟನೆನ್ನುವುದೆ?

ನಮಗೆ ಸಹಾಯಕರಿಲ್ಲದೆ ಬಹುರೀತಿಯ ಅಪಾಯವು ಉಂಟಾಗುತ್ತದೆ. ಅಂತಹ ಅಪಾಯವು ಸಂಭವಿಸಲಿ ಎಂದು ಚಿಕ್ಕ ತಾಯಿ ಹದಿನಾಲ್ಕು ವರ್ಷ ಭರತನಿಗೆ ರಾಜ್ಯ ಕೇಳಿದರೆ, ಅದನ್ನು ನೀವು ಕೊಟ್ಟರೆ ಮಿಕ್ಕವರನ್ನು ಸುಮ್ಮನಿರಿಸಲು ಸಾಧ್ಯವೆ? ಸಾಗರಾವರ್ತ ಚಾಪದ ಛತ್ರದ ನೆರಳಿನಲ್ಲಿರುವ ರಾಘವನನ್ನು ನಿಸ್ಸಹಾಯಕನೆಂದು ಬಗೆದಿರೆ? ಎಂದು ಗುಡುಗುಡಿಸುವ ಸಿಡಿಲಂತೆ ಲಕ್ಷ್ಮಣನು ಗರ್ಜಿಸಲು ಸಭೆ ರೋಮಾಂಚನಗೊಂಡಂತೆ ತೋರಿತು. ಪರಾರ್ಥ ಚರಿತನಾದ ರಾಮನು ಲಕ್ಷ್ಮಣನ ಮಾತುಗಳನ್ನು ಕೇಳಿ ಕಣ್ಸನ್ನೆಯಿಂದಲೇ ಅವನನ್ನು ಸುಮ್ಮನಿರಿಸಿದನಲ್ಲದೆ ಲಕ್ಷ್ಮಣನ ಸಿಟ್ಟು ಹರನ ಮೂರನೆಯ ಕಣ್ಣಿನಂತೆ ಎಂದು ಯಾರಿಗೆ ಗೊತ್ತಿಲ್ಲ?

ಅನಂತರ ದಶರಥನೊಡನೆ ರಾಮನು – "ತಲೆಯಲ್ಲಿ ನಿಮ್ಮ ಆಜ್ಞೆಯನ್ನು ರತ್ನದ ಶಿರೋಭೂಷಣದೊಂದಿಗೆ ಹೊತ್ತು ನನ್ನ ಬಾಹುಬಲದಿಂದ ವೈರಿಗಳನ್ನು ಗೆಲ್ಲುವೆನು. ಇದೋ

ನಿಮ್ಮ ಪಾದ ಪದ್ಮಗಳಿಗೆ ನಮಸ್ಕಾರ'' ಎಂದು ತಂದೆಯ ಪಾದಗಳಿಗೆ ಎರಗಿ ಹೊರ ನಡೆದಾಗ ಲಕ್ಷ್ಮಣನೂ ಸಭೆಯಿಂದೆದ್ದು ಹೊರನಡೆದನು.

ಅಣ್ಣನೊಡನೆ ಹೊರಟ ಲಕ್ಷ್ಮಣನ ನೆರಳನ್ನು ಮಾತ್ರ ಕಂಡ ದಶರಥನ ಎದೆಗುದಿ ಹೆಚ್ಚಾಗಿ ತಟಕ್ಕನೆ ಮೂರ್ಛಿತನಾದನು. ಅದನ್ನು ಕಂಡ ಕೈಕೆ ಆನತಮುಖಿಳಾಗಿ ಸಭೆಯಿಂದ ಹೊರ ನಡೆಯಲು -

ಕ್ರಮದಂತೆ ಯಾರಿಗೆ ರಾಜ್ಯಾಧಿಕಾರ ಸಲ್ಲಬೇಕೋ, ದೈವಯೋಗದಿಂದ ಅದು ತಪ್ಪಿ ವನವಾಸಕ್ಕೆ ಹೋಗಬೇಕಾಯಿತಲ್ಲ ಎಂದು ಸಾಕೇತಪುರವಾಸಿಗಳು ಖೇದಗೊಂಡು, ದೀನ ಮುಖರಾಗಿ, ಗದ್ಗದಿತರಾಗಿ, ಕಣ್ಣೀರು ಸುರಿಸುತ್ತ ಇದ್ದರು.... ಈ ವಿಚಾರವನ್ನು ಸುಮಿತ್ರೆಯು ಕೇಳಿ ತಿಳಿದು, ಅಪರಾಜಿತಾ ಮಹಾರಾಣಿಯಲ್ಲಿಗೆ ಬಂದು -

ಭರತನಿಗೆ ಕೈಕೆ ವಸುಂಧರೆಯನ್ನು ಕೊಟ್ಟಳು. ಅದನ್ನು ರಾಮನು ಭರತನಿಗೆ ಕೊಟ್ಟನು. ಕರ್ಣಾಕರ್ಣಿಕೆಯಾಗಿ ತಿಳಿದ ವಿಷಯವನ್ನು ನಿಮಗೆ ಹೇಳಲು ಬಂದೆನು - ಎನಲು ಅಪರಾಜಿತೆ ಭಯದಿಂದ 'ಕೈಕೆ ಹೀಗೆ ಮಾಡಿದಳೆ? ಕೈಕೆ ಕೊಟ್ಟುದನ್ನು ಹುಲ್ಲೆಂದು ಬಗೆದು ಮಂದರ ಪರ್ವತದಂತೆ ಅಚಲನಾದ ರಾಮನು ಭರತನಿಗೆ ಕೊಟ್ಟನೆ? - ಹಾ ದೈವ ಘಟನೆಯಿದು ! ಈ ಪ್ರಪಂಚದಲ್ಲಿ ಆಗದ್ದು ಏನಿದೆ? ಎಂದು ಇಬ್ಬರೂ ತಮ್ಮ ತಮ್ಮಲ್ಲಿ ದುಃಖಿಸುತ್ತಿರುವಾಗ ರಾಮಲಕ್ಷ್ಮಣರು ಅರಮನೆಯನ್ನು ಹೊಕ್ಕು ತಮ್ಮ ತಾಯಂದಿರ ಪಾದಗಳಿಗೆರಗಿ, ರಾಮನಿಗೊದಗಿದ ಪರಾರ್ಥವೃತ್ತಿಯನ್ನು ಲಕ್ಷ್ಮಣನು ವಿವರಿಸಲು ಅಪರಾಜಿತಾ ದೇವಿ ಶೋಕವೆಂಬ ಬೆಂಕಿಯಲ್ಲಿ ಬಿದ್ದಂತಾಗಿ ರಾಮನೊಡನೆ -

''ಮಗನೆ ವಿಧಿ ಹೀಗೆ ನಮ್ಮನ್ನು ಬೆದರಿಸಿ ವನಕ್ಕಟ್ಟಿದನೆ? ಮೊದಲೇ ನನ್ನ ತವರ್ಮನೆ ಹೆಸರಿಲ್ಲದೆ ನಾಶವಾಯಿತು. ಈಗ ಪತಿಯು ತಪಸ್ಸಿಗೆ ಹೋಗುವನು. ನೀನು ವನವಾಸಕ್ಕೆ ಹೋದರೆ ನನಗೆ ಗತಿಯಾರು? ಯಾರನ್ನು ಹೊಂದಿ ನಾನು ಬದುಕಲಿ'' ಎಂದು ಗದ್ಗದ ಸ್ವರದಿಂದ ದುಃಖಿಸಿ ಕಣ್ಣೀರು ಸುರಿಸಿ

''ಕುಲಕ್ರಮವನ್ನು ನೋಡದೆ ಬಂಧುಗಳನ್ನು ತೊರೆದು, ನಾಡನ್ನು ಬಿಟ್ಟು ಸಪ್ತಾಂಗ ರಾಜ್ಯಾಧಿಕಾರವನ್ನು ತ್ಯಜಿಸಿ, ಚಿಕ್ಕಮ್ಮನ ಮಗನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ತಾಯಿಗೆ ದುಃಖವನ್ನು ಕೊಟ್ಟು, ವನಕ್ಕೆ ಹೋಗುವುದು ಎಂಥ ನ್ಯಾಯ?'' ಎಂದು ಕಣ್ಣೀರಿನಲ್ಲಿ ತೇಲಿದಳು.

ಶೋಕದಿಂದ ದುಃಖಿಸುವ ಕೌಸಲ್ಯೆಗೆ ಲಕ್ಷ್ಮಣನು ''ಅಮ್ಮಾ ವೀರರೂ, ತ್ಯಾಗಿಗಳೂ ಮನುಕುಲದವರಲ್ಲದೆ, ಈ ಭೂಮಿ, ಮೇಲೆ ಕಾಣುವ ಸೂರ್ಯ ಇರುವವರೆಗೆ ಇಂಥ ಯೋಗ್ಯತೆಯನ್ನು, ಹೆಮ್ಮೆಯನ್ನು ಹೊಂದಿದವರು ಪಕಕುಂಡಲಧರನಾದ ನನ್ನಣ್ಣನಾದ ಈ ರಾಮನಲ್ಲದೆ ಇನ್ಯಾರಿರುವರು? ಇನ್ನು ನೀನು ಯಾವುದಕ್ಕೂ ಹಂಬಲಿಸಬೇಡ. ಭರತನು ನಿಮ್ಮ ದಿವ್ಯ ಪಾದಸೇವೆಗೆ ನಮ್ಮಂತೆ ಸಮರ್ಥನಲ್ಲದಿದ್ದರೂ ಲೋಕಾಂಬಿಕೆಯಾದ ಸುಮಿತ್ರೆ ಸಾಲ್ವಳು. ಅಣ್ಣನ ಸೇವೆಗೆ ನಾನಿರುವೆನು. ಇನ್ನು ನಿಮ್ಮ ಮನಸ್ಸಿನ ಖೇದವನ್ನು ಬಿಟ್ಟುಬಿಡಿರಿ'' ಎಂದು

ಬಿನ್ನವಿಸಿದನು. ಸುಮಿತ್ರೆ ಆ ಮಾತುಗಳನ್ನು ಕೇಳಿ ಗ್ರಹಿಸಿ, ರಾಮನನ್ನು ನೋಡಿ - "ಮಗನೆ ಸುಚರಿತೆಯಾದ ಸೀತೆ ನಿನ್ನೊಂದಿಗೆ ಬರುವಳಲ್ಲದೆ ಇಲ್ಲಿರುವುದು ಥರವಲ್ಲ" - ಎನ್ನಲು - ಹಾಗೇ ಮಾಡುವೆನೆಂದು ತಾಯ ಮಾತನ್ನು ಶಿರಸಾವಹಿಸಿ, ತನ್ನ ತಲೆಯನ್ನು ತಾಯ ಪಾವಗಳಿಗೆ ಬಾಗಿ ಅವಳ ಉಗುರುಗಳ ಕಾಂತಿಯಿಂದ ತನ್ನ ಮುಖಕಾಂತಿಯನ್ನು ವರ್ಧಿಸಿಕೊಂಡನು. ಲಕ್ಷ್ಮಣನು ತನ್ನ ತಲೆಯ ಮಣಿಕಿರೀಟ ಕಿರಣಗಳಿಂದ ಇಬ್ಬರು ತಾಯಂದಿರ ಪಾದಗಳನ್ನು ಬೆಳಗಲು ಅವರು 'ಸಾರ್ವಭೌಮನಾಗು' ಎಂದು ಹರಸಿದರು.

ಲಕ್ಷ್ಮಣನೊಡನೆ ಸುಮಿತ್ರಾದೇವಿ "ಮಗನೆ ದುಃಖದಲ್ಲಿ, ನಿದ್ರೆಯಲ್ಲಿ ಅನ್ನ, ಪಾನ, ನಡೆನುಡಿಗಳಲ್ಲಿ ನಿನಗೆ ಕ್ಲೇಶವಾಗುವುದನ್ನು ಗಮನಿಸದೆ ಅತ್ಯಂತ ಶ್ರಮದಿಂದಲಾದರೂ ಸೀತಾ-ರಾಮರನ್ನು ಸೇವಿಸುತ್ತಿರು" ಎಂದು ಹರಸಿದಳು.

ರಾಮಲಕ್ಷ್ಮಣರು ತಾಯಂದಿರ ಪಾದಪದ್ಮಗಳಿಗೆ ವಂದಿಸಿದರು.

ಅವರನ್ನು ಬೀಳ್ಕೊಟ್ಟು, ಅರಮನೆಯಿಂದ ಹೊರಟು, ಬೀದಿಗುಂಟ, ಅಂಗಡಿ ಮುಂಗಟ್ಟುಗಳ ಇದಿರಿಂದ ಸೀತೆಯೊಡಗೂಡಿ ಬರುತ್ತಿರಲು ಪುರಜನರು ಸಂಭ್ರಮದಿಂದ ನೋಡುತ್ತಿದ್ದರು.

ಆನೆಯ ಮೇಲೆ ಶ್ವೇತಚ್ಛತ್ರವನ್ನು ಹಿಡಿದು ಚಂದ್ರಾನನೆಯರು ಚಾಮರವಿಕ್ಕುತ್ತಿರಲು, ಹೆಣ್ಣಾನೆಗಳು ಇಬ್ಬದಿಗಳಲ್ಲಿಯೂ ನಿದಾನವಾಗಿ ನಡೆಯುತ್ತಿರಲು ದಾನಗಜವು ಬೃಹದಾಕಾರದ ಮೋಡದಂತೆ ಬರಲು ಸಾಧ್ಯವಾಗದಿದ್ದರೂ ಬಲನೂ ಅಚ್ಯುತನೂ ಸೀತೆಯೂ ನಾಡಾಡಿಗಳಂತೆ ನಡೆದುಬರುತ್ತಿದ್ದರು.

ಮಂಗಳಕರವಾದ ಚಂದ್ರಕಾಂತದ ರತ್ನ ವೇದಿಕೆಯಲ್ಲಿ, ಓಲಗ ಶಾಲೆಯಲ್ಲಿ, ರಾಜಾಂಗಣದಲ್ಲಿ ಅರಮನೆಯ ಉಪವನದಲ್ಲಿ, ಸುತ್ತಮುತ್ತಣ ಸಣ್ಣ ಕೊಳಗಳಲ್ಲಿ, ವಿಲಾಸ ಗೇಹಗಳಲ್ಲಿ, ಹಂಸಗಳ ಹಿಂಡಿನೊಡನೆ ಆಡಬೇಕಾದ ಸೀತೆ, ಹೀಗೆ ಕಾಲ್ನಡಿಗೆಯಲ್ಲಿ ಅಂಗಡಿ ಬೀದಿಗಳಲ್ಲಿ, ಪತಿಯ ಹಿಂದಿನಿಂದ, ಕಂಡೂ ಕಾಣಿಸದಂತೆ ಎತ್ತ ಕಡೆ ಹೊರಟಳೊ? -

ಎಂದು ಆಡಿಕೊಳ್ಳುತ್ತಿರುವ ಮಾತುಗಳನ್ನು ಕೇಳುತ್ತ ಹೊತ್ತು ಕಂತುವವರೆಗೆ ನಡೆದರು. ಅವರನ್ನು ಬೀಳ್ಕೊಳ್ಳಲು ಬಂದ ತಾಯಂದಿರೊಡನೆ ವಿನಯದಿಂದ ಮಾತಾಡಿ, ಸಂತೋಷಪಡಿಸಿ ಅರಮನೆಗೆ ಕಳುಹಿಸಿ, ಜಿನಮಂದಿರಕ್ಕೆ ಬಂದು ಮೂರು ಸುತ್ತು ಬಲವಂದು ಜಗತ್ರಯ ಪ್ರಭುವಿಗೆ

ಜಯ ಜಯ ಪಾಪವರ್ಜಿತ ಜಿನೇಶ್ವರ
ನದೀತಟದ ಹೊಯಿಗೆಯಲ್ಲಿ ಆಡುತ್ತಿರುವ ರಾಜಹಂಸನೇ

ಸಂಸಾರವೆಂಬ ಸಾಗರದ ತಡಿಗೆ ನಮ್ಮನ್ನು ಕೊಂಡೊಯ್ಯು. ನೀನಲ್ಲದಿದ್ದರೂ ಹಾವನ್ನು ಹಿಡಿದು ನೀನೇ ಎಂದು ಹೂವಿನ ಹಾರವನ್ನು ಹಿಡಿಯುವರು. ಇದೇ ದೇವರು ಎಂದು ಭ್ರಮಿಸುವರು. ಅಂಥವರು ತಮ್ಮ ಭ್ರಮೆಯಿಂದ ಎಷ್ಟು ಮೋಹ ಮೂರ್ಛೆಗೆ ಒಳಪಟ್ಟರೊ? ನಿನಗೆ ಒಂದೇ

ರಸವಲ್ಲವೆ? ಆ ಶಾಂತರಸವು ಸದಾಕಾಲವೂ ಸಮುದ್ರದೋಪಾದಿಯಲ್ಲಿ ನಮ್ಮಲ್ಲಿ ಇರುವಂತೆ ಮಾಡಿ, ಇತರ ಯಾವ ರಸವನ್ನೂ ನಾವು ಕನಸಿನಲ್ಲಿಯೂ ನೆನೆಯದಂತೆ ಮಾಡು ಅರ್ಹಂತಾ. ಮಣಿಭೂಷಣಗಳನ್ನು ಧರಿಸಿಕೊಳ್ಳುವುದರಿಂದ ನಾನು ಜಡ್ಡು ಕಟ್ಟುವುದೇಕೆ? ನಿನ್ನ ನಿರ್ಮಲವಾದ ಗುಣಗಳೆಂಬ ಮಣಿಭೂಷಣಗಳನ್ನು ನನಗೆ ಕರುಣಿಸಿ ನಾನು ಮೋಕ್ಷಲಕ್ಷ್ಮಿಯ ಸಾನ್ನಿಧ್ಯವನ್ನು ಪಡೆವಂತೆ ಮಾಡು ಅರುಹಾ"

"ಸಿಂಹದ ಗರ್ಜನೆ, ಮದತುಂಬಿದ ಮದ್ದಾನೆಯನ್ನು ಹೆದರಿಸುವಂತೆ ನಿನ್ನ ಪ್ರತಿಬಿಂಬವು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನಿಂತು ಜನನ ಮರಣದ ದುಃಖವನ್ನು ಹಿಂಗಿಸುವಂತೆ ಮಾಡು ಅರುಹಾ -

"ಯಾರನ್ನೂ ಮೆಚ್ಚದೆ, ಯಾರಿಗೂ ಮುಳಿಯದೆ ನಿನ್ನ ಪಾದಮೂಲದಲ್ಲಿ ನಂಬಿಕೆಯನ್ನಿಟ್ಟು ಉಚ್ಚಗತಿ, ನೀಚಗತಿಯ ವ್ಯತ್ಯಾಸವನ್ನು ನನಗೆ ಕರುಣಿಸು ಅರುಹಾ.

"ಹಿರಿಯರಿಗೆ ನೀನೇ ದಾರಿ ತೋರಿಸುವವನು. ನೀನಲ್ಲದೆ ಅನ್ಯ ವಸ್ತುಗಳೆಲ್ಲ ಹೀನವಾದುದು ಎಂಬ ಸುವಿಚಾರವನ್ನು ನನಗೆ ತಿಳಿವಂತೆ ಮಾಡು ಅರುಹಾ

"ನಿತ್ಯ ಸುಖವು ಆತ್ಮರೂಪವು, ಅನಿತ್ಯಸುಖವು ಮೋಹರೂಪವು ಎಂಬ ವಿವೇಕವು ಸತ್ಯರೂಪವೆಂಬ ತಿಳುವಳಿಕೆ ನನಗೆ ಚೆನ್ನಾಗಿ ಬರುವಂತೆ ಮಾಡು ಅರುಹಾ"

ಎಂದು ದರ್ಶನ ಸ್ತುತಿ ಮಾಡಿ ಜಿನಮುಖ ದರ್ಶನದಿಂದ ಹರ್ಷ ಚಿತ್ತರಾಗಿ, ನಿದ್ರೆಯ ಮುದ್ರೆಯಿಂದ ಕೂಡಿದ ಕಣ್ಣುಗಳುಳ್ಳ ಅವರು ನಡುವಿರುಳು ಎದ್ದು ಜಿನಪತಿಯನ್ನು ಬೀಳ್ಕೊಂಡು ಬಿಲ್ಲುಬಾಣಗಳೊಡನೆ ಸೀತೆ ನಡುವಿನಲ್ಲಿರುವಂತೆ ಪಟ್ಟಣದ ನಡುವಣ ಕಿರುದ್ವಾರದಿಂದ ಹೊರಟು ದಕ್ಷಿಣಾಭಿಮುಖವಾಗಿ ಅಲ್ಲಲ್ಲಿಯ ಗ್ರಾಮ, ನಗರಗಳನ್ನು ನೋಡುತ್ತ, ಮುಂದೆ ಗಂಭೀರವಾಗಿ ಹರಿಯುತ್ತಿರುವ ನದಿಯ ಬಳಿಗೆ ಬಂದು ನಿಂತು, ಹಿಂಬಾಲಿಸಿದ ಸಾಮಂತರೇ ಮುಂತಾದವರನ್ನು ಒಡಂಬಡಿಸಿ ಅಲ್ಲಿ ನಿಲ್ಲಿಸಿ, ದೋಣಿಯ ಮೂಲಕ ನದಿಯನ್ನು ದಾಟಿ ಹೋದರು. ರಾಮಲಕ್ಷ್ಮಣರ ಅಗಲಿಕೆಯನ್ನು ಸಹಿಸಲಾರದೆ ಕೆಲವರಿಗೆ ಅದೇ ನಿರ್ವೇಗ ಕಾರಣವಾಗಲು ಆ ನದೀತೀರದ ಜಿನಗೃಹದಲ್ಲಿ ದೀಕ್ಷೆಗೊಂಡು ಅಲ್ಲಿಯೇ ನಿಂತರು. ಕೆಲವರು ವಿಶೇಷ ವ್ರತಗಳನ್ನು ಕೈಕೊಂಡು ಸಾಕೇತಕ್ಕೆ ಬಂದು ಎಲ್ಲ ವಿಷಯಗಳನ್ನು ದಶರಥನಿಗೆ ಹೇಳಲು ಕೇಳಿ -

"ಬಂಧುಗಳ ಅಗಲಿಕೆಗೆ ಹಿಂಜರಿದನೆ? ಪುತ್ರ ಕಳತ್ರ ಮೋಹದಿಂದ ಬಂಧಿಸಲ್ಪಟ್ಟನೆ? ಪಟ್ಟಬಂಧಕ್ಕೆ ತೊಡಕಾದನೆ? ರಾಮನು ಅರಣ್ಯಕ್ಕೆ ಹೋಗುವೆನೆಂದಾಗ ಏಕೆಂದು ಕೇಳಿದನೆ? ಇಲ್ಲ; ತಾನು ಆಗಲೆ ಸರ್ವಭೂತ ಹಿತ ದಿವ್ಯ ಮುನಿಗಳ ಪಾದ ಪಾರ್ಶ್ವದಲ್ಲಿ ದೀಕ್ಷೆಗೊಂಡನು.

◆

೪. ಸೀತಾಪಹರಣ

ದಶರಥನು ದೀಕ್ಷೆಗೊಂಡನು, ಭರತನು ರಾಜ್ಯಸುಖವನ್ನು ತ್ಯಜಿಸಿದನು ಕೈಕೆಗೆ ಇದು ತಿಳಿದು ಶೋಕದ ಆವೇಗ ಹೆಚ್ಚಿತು.

ಪತಿ ದೀಕ್ಷೆಗೊಂಡಾಗ ಕೈಕೆ ದುಃಖದ ಭಾರವು ಅಧಿಕವಾಯಿತು, ಮಗನು ರಾಜ್ಯವಾಳುವ ಹೊಣೆಯನ್ನು ಪರಿತ್ಯಜಿಸಿದನು. ಅಕಟಾ ನನ್ನ ಸ್ತ್ರೀ ಬುದ್ಧಿಯಿಂದ ಇಷ್ಟೆಲ್ಲ ಅನಾಹುತಗಳು ಆದುವಲ್ಲ ಎಂದು ಆಕೆ ಖೇದಿಸಿದಳು. ತನ್ನನ್ನು ತಾನೆ ನಿಂದಿಸಿಕೊಳ್ಳುತ್ತ, ಭರತನನ್ನು ಬರಮಾಡಿ 'ಮಗನೆ ನಿನ್ನ ರಾಜ್ಯವು ರಾಮ ಲಕ್ಷ್ಮಣರಿಲ್ಲದ್ದರಿಂದ, ನಿನ್ನ ಅಧಿಕಾರವನ್ನು ಒಪ್ಪದ ಅವರ ತಾಯಂದಿರು ಮಕ್ಕಳ ವಿಯೋಗದಿಂದ ದುಃಖಿತರಾಗಿರುವರು. ಆದ್ದರಿಂದ ಅವರು ವನವಾಸಕ್ಕೆ ಹೋಗದಿರುವಂತೆ ಮಾಡು, ನಿನ್ನ ಬೆನ್ನ ಹಿಂದೆ ನಾನೂ ಬರುವೆನು ಎಂದು ಹೇಳಲು ಅದನ್ನೊಪ್ಪಿ, ರಾಮನನ್ನು ವನವಾಸಕ್ಕೆ ಕಳುಹಿಸಲು ಅವರ ಜತೆಗೆ ಹೋಗಿ ಮರಳುವ ಸಾಮಂತರನ್ನು ಕೂಡಿಕೊಂಡು ಭರತನು ಅವರು ದಾಟಿದ ನದಿಯನ್ನು ದಾಟಿ ಮುಂದೆ ಹೋಗುತ್ತಿರಲು ರಾಮಲಕ್ಷ್ಮಣಸೀತೆಯರು ಕಷ್ಟದಿಂದ ಸಾಗುತ್ತಿರುವ ಕಠಿಣವಾದ ಕಾಡಿನ ಹಾದಿಯನ್ನು ನೋಡಿ, ರಾಮನ ಮುಂದೆ ಬಂದು ಅವನ ಕಾಲ ಮೇಲೆ ಬಿದ್ದನು.

ಭರತನ ಕಣ್ಣಿಗೆ ಮಂಜು ಕವಿದಿತ್ತು. ಮೋಹದ ದಾವಾಗ್ನಿಯ ಹೊಗೆಯಂತೆ ಅವನ ತ್ರಿಕರಣಗಳು ಬಸವಳಿದು, ಪ್ರಾಣವಾಯು ಕ್ಷೀಣವಾದಂತೆ ರಾಮನ ಕಾಲ ಬುಡದಲ್ಲಿ ಭರತನು ಮೂರ್ಛಿತನಾದನು. ಕ್ಷಣದೊಳಗೆ ಎಚ್ಚತ್ತ ಅವನು ಸೀತೆಗೂ ರಾಮನಿಗೂ ನಮಸ್ಕರಿಸಿ ರಾಮನನ್ನು ನೋಡಿ –

"ಅಣ್ಣಾ, ನಾನು ಅಕ್ರಮವಾಗಿ ಆಸೆಪಟ್ಟು ರಾಜ್ಯವನ್ನು ಬಯಸಲಿಲ್ಲ. ಹಾಗೆ ಮಾಡುತ್ತಿದ್ದರೆ ಅದು ಅಪಯಶಸ್ಸಿಗೆ ಕಾರಣವಾಗುತ್ತಿತ್ತು. ಇದನ್ನು ನೀನು ಅವಧರಿಸುತ್ತೀ ಎಂದು ನಂಬುತ್ತೇನೆ" – ಎಂದು ಹೇಳುವಷ್ಟರಲ್ಲಿ ಅಲ್ಲಿಗೆ ಕೈಕೆಯು ನೂರು ಜನ ಸಾಮಂತರೊಡನೆ ಬರುವುದನ್ನು ಕಂಡು ಇದಿರೆದ್ದು ಬಂದು ರಾಮನು ಆಕೆಯ ಪಾದಗಳಿಗೆರಗಲು, ಆಕೆಗೆ ಆದ ಹರ್ಷಭಾರದಿಂದ ದುಃಖವುಂಟಾಗಿ ತಾನು ಮಾಡಿದ ಅನ್ಯಾಯ ಕೃತ್ಯಗಳನ್ನು ನೆನೆನೆನೆದು ದುಃಖಿಸಿದಳು.

ಹೀಗೆ ವಿನಯದಿಂದ ಕೈಮುಗಿದ ರಾಮನನ್ನು ಸಮಾಧಾನಪಡಿಸಿ ಹಲವು ರೀತಿಯಿಂದ ಪ್ರಲಾಪಿಸಿ 'ಮಗನೆ ನಾನು ಗೈದ ಅವಿವೇಕವನ್ನು ಮನ್ನಿಸು, ರಾಜ್ಯವನ್ನು ಕೈಕೊಂಡು ನೀನೇ ಆಳು, ನಿನ್ನ ತಮ್ಮಂದಿರು ನೀನು ಹೇಳಿದಂತೆ ಕೇಳುವರು, ನೀನು ಆಜ್ಞಾಪಿಸಿದಂತೆ ಬಾಳುವರು, ನನ್ನ ಮಾತನ್ನು ಸತ್ಯವೆಂದು ನಂಬು, ಉದಾಸೀನ ಮಾಡದೆ ಹಿಂತಿರುಗಿ ಬಾ' ಎಂದು ಹೇಳಿದ ತಾಯಿಗೆ ರಾಮನು –

"ಅಕಲಂಕ ಚರಿತನೂ, ಕ್ಷತ್ರ ಕುಲ ಕಂಠೀರವನೂ ಆದ ನನ್ನ ತಂದೆ ಮಾತಿಗೆ ತಪ್ಪಿದನೆಂಬ ಅಪವಾದಕ್ಕೆ ಇಹಪರಗಳೆರಡರಲ್ಲಿಯೂ ಭಾಜನನಾಗುವಂತೆ ಮಾಡುವುದು ತರವಲ್ಲ. ಅನೃತಕ್ಕಿಂತ ಮಿಗಿಲಾದ ಪಾಪವುಂಟೆ? ತಂದೆಯ ಮಾತಿನಿಂದ ಕಷ್ಟ ಒದಗಿತೆಂದು ಬಗೆದು, ನಿಮ್ಮಲ್ಲಿ ಪ್ರಕಟಿಸಿದ ವಿನಯವನ್ನು ಮರೆತು ತಮ್ಮನಿಗೆ ಕೊಟ್ಟ ರಾಜ್ಯವನ್ನು ಮತ್ತೆ ಪಡೆದರೆ, ನನ್ನ ಮಾತು ಕಪಟವೆಂದು ಅನಿಸುವುದಿಲ್ಲವೆ? ಆದುದರಿಂದ ನಾನು ಬಿನ್ನವಿಸುವುದು ನ್ಯಾಯಸಮ್ಮತವೆಂದು ಬಗೆದು ಒಪ್ಪಿ ಭರತನಿಗೆ ಸಾಮ್ರಾಜ್ಯ ಪಟ್ಟವನ್ನು ಕಟ್ಟಲು ಸಿದ್ಧಳಾಗು" ಎಂದು ವಿಜ್ಞಾಪಿಸಿದನು.

ಭರತನು ''ನಿಮ್ಮನ್ನು ಧರಾವಲ್ಲಭನಾದ ನಮ್ಮಯ್ಯನು ನೋಡುವವರೆಗೂ ರಕ್ಷಿಸುವೆನು, ನಿನ್ನ ಆಜ್ಞೆಗೆ ಹೆದರಿ, ನನ್ನ ಮನಸ್ಸಾಕ್ಷಿಗೆ ವಿರೋಧವಾಗಿ ರಾಜ್ಯವನ್ನು ಅಪೇಕ್ಷಿಸುವವನಲ್ಲ'' ಎಂದು ಪ್ರಮಾಣ ಮಾಡಿದನು. ಲೋಭ ಪ್ರಪಂಚವನ್ನೇ ಒಲ್ಲದ ಭರತನು ಎಂಥ ಅಕ್ಷತ ಧೈರ್ಯಶಾಲಿಯೊ?

ಪ್ರತಿಜ್ಞೆ ಮಾಡಿದ ಭರತನನ್ನು ಮತ್ತು ತಾಯಿಯನ್ನು ಯಥೋಚಿತ ಉಪಚಾರಗಳಿಂದ ಸಮಾಧಾನ ಪಡಿಸಿ ಪಟ್ಟಣಕ್ಕೆ ಕಳುಹಿಸಿ, ರಾಮಲಕ್ಷ್ಮಣ ಸೀತೆಯರು ಮುಂದೆ ಪ್ರಯಾಣಿಸಿದರು. ಚಿತ್ರಕೂಟ ಪರ್ವತವು ಬಲಭಾಗದಲ್ಲಿರುವಂತೆ ನಡೆದು ಮುಂದೆ ನೆಲವೇ ಇಲ್ಲ, ಇದೇ ಈ ದಿಕ್ಕಿನ ಎಲ್ಲೆ ಎಂದೆನಿಸುವಂತೆ ಕತ್ತಲೆ ಚಂದ್ರಸೂರ್ಯರ ಬೆಳಕನ್ನು ಮೀರಿ ಕಾಣಿಸುವಂತಿತ್ತು. ಕಾಡಾನೆಗಳ ಹಿಂಡು, ಸಿಂಹಗಳ ಗುಂಪು, ಹೆಬ್ಬುಲಿಗಳ ಕೂಟದಿಂದ ಕಣ್ಣಿಗೆ ಭಯವನ್ನುಂಟು ಮಾಡುವಂತೆ, ಕುಲಪರ್ವತಗಳೊಡನೆ ಸ್ಪರ್ಧಿಸುವಂತೆ ವಿಂಧ್ಯಪರ್ವತವು ಕಾಣುತ್ತಿತ್ತು.

ಆ ಪರ್ವತವನ್ನು ದಾಟಿ, ಮುಂದುವರಿದು ಇದಿರಿಗೆ ಕಾಣುವ ರಾಜಮಾರ್ಗವನ್ನು ಹಿಡಿದು ಮುನ್ನಡೆಯುತ್ತಿರಲು ಜಡೆಯಂತಿರುವ ಬಿಳಲುಗಳಿಂದ ಹಾವುಗಳ ನಿವಾಸ ಸ್ಥಾನವನ್ನೂ, ಅನೇಕ ಶಾಖೆಗಳಿಂದ ಇಂದ್ರಾಲಯವನ್ನೂ, ಕತ್ತಲೆಯನ್ನು ತಗಲಿಸಿಕೊಂಡು ಅದನ್ನು ಸೆರೆಯಲ್ಲಿಟ್ಟು, ಹಿಮಕ್ಕೆ ಕೊಂಬು ಕೊಟ್ಟು, ಆಲದ ಮರದ ಬಿಳಲುಗಳಿಂದ ಶೋಭಿಸುವ ವಟವೃಕ್ಷದ ಬುಡಕ್ಕೆ ಬಂದು ಇದಿರಿಗೆ ಕಾಣುವ ನದೀತೀರದ ಬಿಸಿಲಿನ ಝಳವನ್ನು ಅನುಭವಿಸುತ್ತ ರಾಮಲಕ್ಷ್ಮಣ ಸೀತೆಯರು ಇದ್ದರು.

ಆಲದ ಮರದಲ್ಲಿ ವಾಸವಾಗಿದ್ದ ಇಭಕರ್ಣದೇವನೆಂಬ ಯಕ್ಷನು ಅವರ ಪುಣ್ಯ ಪ್ರಭಾವವನ್ನು ಕಂಡು ವಿಂಧ್ಯಾಟವಿಯಲ್ಲಿರುವ ಯಕ್ಷರಾಜ ಕ್ರೀಡಾಪ್ರೂತನಿಗೆ ''ಪ್ರಚಂಡ ಕೋದಂಡ'' ವನ್ನು ಧರಿಸಿದ ಇಬ್ಬರು ತಾನು ವಾಸವಾಗಿರುವ ಮರದ ಸನಿಹಕ್ಕೆ ಬಂದು ನಿಂತರು. ಅವರ

ದೇಹದಿಂದ ಸೂಸುತ್ತಿರುವ ಬೆಳಕಿಗೆ ಅಲ್ಲಿ ನಿಲ್ಲಲು ಬೆದರಿ ನಿಮಗೆ ತಿಳಿಸಲು ಬಂದೆ' ಎಂದುಸುರಲು –ಯಕ್ಷನು ಅವಧಿ ಧ್ಯಾನದಿಂದ ಅವರು ಈ ಕಾಲದ ಬಲದೇವ, ವಾಸುದೇವರೆಂದು ತಿಳಿದು ಅವರು ಬಂದ ಕಾರಣವನ್ನು ಕೇಳಿ, ಅವರನ್ನು ಸತ್ಕರಿಸಿ, ರಾಮನಿಗೆ ಮುಕ್ತಾದಾನವನ್ನು – ಲಕ್ಷ್ಮಣನಿಗೆ ಮಣಿಕುಂಡಲದ ದಾನವನ್ನು – ಸೀತೆಗೆ ಚೂಡಾರತ್ನ – ವೀಣಾರತ್ನವನ್ನು ದಾನ ಮಾಡಿ 'ನಿಮಗೆ ಕಷ್ಟ ಬಂದಾಗ ನನ್ನನ್ನು ನೆನೆಯಿರಿ' ಎಂದು ತಿಳಿಸಿ ಸ್ವಲ್ಪ ದೂರದವರೆಗೆ ಅವರ ಜತೆ ಬಂದು ಯಕ್ಷನು ನಿಜ ನಿವಾಸಕ್ಕೆ ಹೊರಟು ಹೋದನು.

ಇತ್ತ ರಾಮಲಕ್ಷ್ಮಣರು ನಿತ್ಯ ಪಯಣ ಮಾಡಿ ದಕ್ಷಿಣಾಭಿಮುಖವಾಗಿ ಬಂದು ದೊಡ್ಡ ಕಾಡೊಂದನ್ನು ಹೊಕ್ಕು, ಕರ್ಣರವೆಯೆಂಬ ನದಿಯನ್ನು ದಾಟಿ ಅದರ ತೆಂಕಣ ತಡಿಯಲ್ಲಿ ರಮ್ಯ ಪ್ರದೇಶದಲ್ಲಿ ವಿಶ್ರಮಿಸುತ್ತಿರುವಾಗ ಅಲ್ಲಿ ಸುಗುಪ್ತಿಗುಪ್ತರೆಂಬ ಆಕಾಶಚಾರಣರು ಭೂತಲದಲ್ಲಿ ಕಾಣಿಸಿಕೊಂಡರು. ಮಾಸೋಪವಾಸದ ಪಾರಣೆಗೆಂದು ಬರುವುದನ್ನು ದೂರದಿಂದ ಕಂಡು ಅರ್ಚಿಸಿ ವಿಧಿ ಪೂರ್ವಕವಾಗಿ ದೋಷವಿಲ್ಲದ ಆಹಾರವನ್ನು ಕೊಡಲು ಅವರು ಸಂಯಮ, ಸಂರಕ್ಷಣ ದೇಹಸ್ಥಿತಿಯನ್ನು ಕೈಕೊಂಡು ಅಕ್ಷಯ ದಾನವನ್ನೀಯಲು –

ಚಿನ್ನದ ಮಳೆಯೇ ಸುರಿದಂತೆ, ಹಿಮಾಚ್ಛಾದಿತ ಹೂಮಳೆಯಂತೆ ದೇವ ಭೇರಿ ಮೊಳಗಿದಂತೆ, ದೇವತೆಗಳು ಕೊಟ್ಟ ದಾನದಂತೆ ಅದು ವಿಚಿತ್ರವಾದ ಆಶ್ಚರ್ಯವನ್ನುಂಟು ಮಾಡಿತು. ಆಗ ಅವರ ತಪಸ್ಸಾಮರ್ಥ್ಯಕ್ಕೆ ರೋಮಾಂಚನಗೊಂಡ ರಾಮಾದಿಗಳು, ಧರ್ಮ ಕಥಾಶ್ರವಣದಲ್ಲಿ ತೊಡಗಿದರು, ಅವರ ಇದಿರಿನ ಸಾಲುಮರದ ಗೆಲ್ಲಿನಲ್ಲಿ ಕುಳಿತಿದ್ದ ಒಂದು ಹದ್ದು –

ಕಳೆದು ಹೋದ ಜನ್ಮದ ನೆನಪು ಮುನಿದರ್ಶನ ಮಾತ್ರದಿಂದಲೆ ಮನಸ್ಸಿಗೆ ತಿಳಿದರೆ ತಾನು ಸಂಗ್ರಹಿಸಿದ ಪಾಪವನ್ನು ನಿಧಾನವಾಗಿ ಕಳೆದುಕೊಳ್ಳುತ್ತೇನೆ ಎಂದು ಹತ್ತಿರ ಬಂದು ಕನಕಪ್ರಭೆಯೊಡನೆ ಪಟಕ್ಕೆ ಮಣಿಯಲು – ಅದನ್ನು ಕಂಡು 'ನನಗಿದು ಕಂದ' ನೆಂದು ಆ ಪಕ್ಷಿಯನ್ನು ಆಲಿಂಗಿಸಿಕೊಂಡು, ಅದರ ಕೈ ಕಾಲುಗಳಲ್ಲಿ, ಕುತ್ತಿಗೆಯಲ್ಲಿ ಚಿನ್ನದ ಸರಗಳನ್ನು ರತ್ನಮಣಿ ನೂಪುರವನ್ನೂ ಭೂಷಿಸಲು ಪಕ್ಷಿಯ ಮುಖವು ಅಗಲವಾಗಿ ಅರಳಿದ ತಾವರೆಯಂತೆ ಕಂಡಿತು. ರಘುವೀರರು ಅದನ್ನು ಜಟಾಯು ಎಂದು ಕರೆದರು.

ಮರುದಿನ ರಾಮಲಕ್ಷ್ಮಣ ಸೀತೆಯರು ದಂಡಕಾರಣ್ಯದಲ್ಲಿ ನಡೆದು ಕ್ರೌಂಚ ನದಿಯನ್ನು ದಾಟಿ ಸೀತೆ ಬಳಲಿದಳೆಂದು ವಿಶ್ರಮಿಸಿದರು. ಆ ನದಿಯ ಸಮೀಪದ ದಂಡಕ ಗಿರಿಯಲ್ಲಿ ವಿಸ್ತಾರವಾದ ಗುಹೆಯೊಂದಿತ್ತು. ಒಂದು ಯೋಜನ ವಿಸ್ತಾರದ ಗುಹೆ. ಅದರ ಎಂಟನೆಯ ಒಂದು ಭಾಗವು ಗುಂಡಿಯಾಗಿದ್ದು ಪಾತಾಳಲಂಕೆಯೆಂಬ ಹೆಸರು ಪಡೆದಿತ್ತು. ಅದನ್ನು ಖರನೆಂಬವನು ಆಳುತ್ತಿದ್ದನು. ಆತನ ರಾಣಿ ರಾವಣನ ತಂಗಿಯಾದ ಚಂದ್ರನಖಿ. ಅವರಿಗೆ ಶಂಭುಕ, ಸುಂದರರೆಂಬಿಬ್ಬರು ಮಕ್ಕಳು. ಅವರಲ್ಲಿ ಶಂಭುಕನೆಂಬ ಹಿರಿಯ ಮಗನು 'ಸೂರ್ಯಹಾಸ' ಎಂಬ ಖಡ್ಗವನ್ನು ತಪಸ್ಸಿನ ಮೂಲಕ ಪಡೆಯಲು ಧ್ಯಾನದಲ್ಲಿದ್ದಾಗ, ಅದನ್ನು ಕೊಡಲೆಂದು ಬಂದ ಸಹಸ್ರ ಯಕ್ಷಾಮರರು ಖಡ್ಗವನ್ನು ಅವನು ಧ್ಯಾನಿಸುತ್ತಿರುವ ಬಿದಿರಮೆಳೆಯ ಪೊದೆಯಲ್ಲಿರಿಸಿ ಮಂದಾರವೇ ಮೊದಲಾದ ಪುಷ್ಪಗಳಿಂದ

ಅರ್ಚಿಸುತ್ತಿರಲು ಅಲ್ಲಿ ವನದ ಸೊಬಗನ್ನು ನೋಡುತ್ತ ತಿರುಗಾಡುತ್ತಿದ್ದ ಲಕ್ಷ್ಮಣನು ಖಡ್ಗ ಸಿದ್ಧಿ ಸಮಯಕ್ಕೆ ಸರಿಯಾಗಿ ಪರಿಮಳದ ತುಂಬಿಯಂತೆ ಬಿದಿರ ಮೆಳೆಯ ಹತ್ತಿರ ಬಂದು ತೊಡರಿನಲ್ಲಿರುವ ಸೂರ್ಯಹಾಸಕ್ಕೆ ಕೈ ನೀಡುತ್ತಿರಲು, ಅದು ಜಯಲಕ್ಷ್ಮಿಯ ಕಣ್ಣುಗಳೆಂಬಂತೆ, ಉತ್ಪಲದ ಕಾಂತಿಯಂತೆ ಏನು ಮನೋಹರವಾಗಿ ಕಾಣಿಸಿತೋ, ಆ ಕತ್ತಿಯನ್ನು ಕೈಯಲ್ಲಿ ಹಿಡಿದು ಅದರ ತೀಕ್ಷ್ಣತೆಯನ್ನು ಪರೀಕ್ಷಿಸಲು ಬೀಸಿದಾಗ ಆ ಬೀಸುವಿಕೆಗೆ ಬಿದಿರ ಮೆಳೆ ನೈದಿಲೆಯಂಚಿನ ಪೊರೆಯಂತೆ ಕತ್ತರಿಸಿ ಹೋಯಿತು. ಅದರೊಡನೆ ಒಂದು ತಲೆಯೂ ಮುಂಡದಿಂದ ಬೇರೆಯಾಗಿ ಹಾರಿತು. ಲಕ್ಷ್ಮಣನು ಇದನ್ನು ನೋಡಿ 'ನಾನು, ತಪಸ್ಸು ಮಾಡುತ್ತಿದ್ದ ನಿರಪರಾಧಿಯನ್ನು ಕೊಂದೆ' ಎಂದು ದುಃಖಿಸುತ್ತಿರಲು, ಆ ಖಡ್ಗದ ಕಾವಲುಗಾರರು ತಮಗಿನ್ನು ಲಕ್ಷ್ಮಣನೇ ಯಜಮಾನ ಎಂದು ಹೇಳಿ ಅವನಿಗೆ ನಮಸ್ಕರಿಸಿ, ಅವನನ್ನು ಪೂಜಿಸಿ ಹೊರಟು ಹೋದರು. ಕತ್ತರಿಸಲ್ಪಟ್ಟ ತಲೆ ಆಕಾಶದಲ್ಲಿ ಅರಳಿದ ಕೆಂದಾವರೆಯಂತೆ ಶೋಭಿಸುತ್ತಿರಲು ಲಕ್ಷ್ಮಣನ ಮನಸ್ಸಿನಲ್ಲಿ ಅಪರಾಧ ಪ್ರಜ್ಞೆ ಹುಟ್ಟಿಕೊಂಡಿತು. ಆತನು ಕೂಡಲೆ ಅಣ್ಣನ ಬಳಿ ಬಂದು ಖಡ್ಗದ ವೃತ್ತಾಂತವನ್ನು ತಿಳಿಸಿದನು.

ಇತ್ತ ಚಂದ್ರನಖಿ ತನ್ನ ಮಗನು ಈ ದಿನ ಸೂರ್ಯಹಾಸವನ್ನು ಪಡೆಯುವನು ಎಂಬ ಸಂತೋಷದಿಂದ ಅನೇಕ ವಿಧದ ಪೂಜೆಗಳನ್ನು ಮಾಡಿ, ಉಲ್ಕಾಪಾತದಿಂದ ತಾನು ರೂಪವೆತ್ತಳೋ ಎನ್ನುವಂತೆ ಆಕಾಶದಿಂದ ಇಳಿದು ಬಂದಳು. ಇದಿರಿಗೆ ಕಂಡದ್ದು ಮಗನ ತಲೆ, ಇನ್ನೊಂದೆಡೆಯಲ್ಲಿ ಆತನ ಶರೀರ ಬೇರೆಯಾಗಿ ಬಿದ್ದಿರುವುದನ್ನು ಕಂಡು ಆಕೆಗೆ ಭಯದಿಂದ ಎದೆ ಹಾರಿತು. ಅದು ವಿಷಾದವೆಂಬ ಬೆಂಕಿಗೆ ಇಂಧನವಾದಂತೆ ಚಂದ್ರನಖಿ ಕಂಗೆಟ್ಟಳು.

'ಖರಾಸುರನ ಮಗನನ್ನು, ದಶಕಂಠನ ಅಳಿಯನನ್ನು, ನನ್ನ ಪ್ರೀತಿಯ ಮಗ ಶಂಭುಕನನ್ನು ಯಾರು ಕೊಂದರು?' ಎಂದು ಚಂದ್ರನಖಿ ತರಾತುರಿಯಿಂದ ಎದ್ದು, ಕ್ಷಣಕ್ಷಣಕ್ಕೆ ಕೋಪವೂ, ಶೋಕರಸವೂ ಹೆಚ್ಚುತ್ತಿರಲು ಕಡೆಗಾಲದ ಕೆಂಡದ ಮಳೆಯೇ ಸುರಿವಂತೆ ಆಕೆ ಗರ್ಜಿಸಿದಳು. ತನ್ನನ್ನು ದಂಡಿಸಿ ಜೀವನವನ್ನು ಹನ್ನೆರಡು ವರ್ಷಕ್ಕೆ ವಿಸ್ತರಿಸಿದ ಬಾಲಕನನ್ನು ಕೊಂದವನ ಬಾಳನ್ನು ಬಿಸಿನೀರಿನಿಂದ ಸುಟ್ಟು ಬಿಡುತ್ತೇನೆ' ಎಂದು ಎದ್ದು ರಾಮಲಕ್ಷ್ಮಣ ಸೀತೆಯರಿರುವಲ್ಲಿಗೆ ಬಂದು ಅವರನ್ನು ಕಂಡು, "ಪುತ್ರವಿಯೋಗವಾದರೂ, ಅವನನ್ನು ಕೊಂದವನನ್ನು ಕೊಲ್ಲದಿರೆನು" ಎಂದು ಪ್ರತಿಜ್ಞೆಯನ್ನು ಜ್ಞಾಪಿಸಿಕೊಳ್ಳದೆ, ಲಕ್ಷ್ಮಣನ ರೂಪ ಲಾವಣ್ಯಕ್ಕೆ ಮೋಹಿಸಿದಳು. ಕಾಮಾತುರರಾದವರು ಬೇರೇನನ್ನಾದರೂ ಲಕ್ಷಿಸುವರೆ?

ರೂಪ ಪರಾವರ್ತನ ವಿದ್ಯೆಯನ್ನು ಬಲ್ಲ ಆಕೆ ಲಕ್ಷಣವಂತೆಯಾದ ಕನ್ಯಾರೂಪವನ್ನು ಪಡೆದು, ತಾರಾಪತಿಯಾದ ಚಂದ್ರನ ತಾರುಣ್ಯಲಕ್ಷ್ಮಿಯಂತೆ ಕಾಣಿಸಿದಳು. ಕಾಮಚಕ್ರೇಶ್ವರನ ಅಮೃತದ ಹಸಿಯೇ ಹುಟ್ಟಿತೆಂಬಂತೆ ಕಣ್ಣಲ್ಲಿ ನೀರು ಸುರಿಸಿದಳು. ಇದನ್ನು ಕಂಡು ಸೀತೆಗೆ ತನ್ನಲ್ಲಿ ಕರುಣಾರಸವೇ ಆವಿರ್ಭವಿಸಿತೆಂಬಂತೆ ಆಕೆಯ ಹತ್ತಿರ ಬಂದು ಅವಳನ್ನು ಕುಳ್ಳಿರಿಸಿ ಆಕೆಯ ಕಣ್ಣೀರನ್ನು ತೊಡೆದು ಕಪಟವನ್ನು ತಿಳಿಯದೆ ಕರುಣೆಯಿಂದ ಆದರಿಸಿದಳು.

'ಬಿಸಿಲು, ಬೆಳದಿಂಗಳು, ಗಾಳಿ ಒಳಹೊಗಲು ಸಾಧ್ಯವಿಲ್ಲದ ಈ ಕಾಡನ್ನು ನೀನು ಯಾವ ಧೈರ್ಯದಿಂದ ಹೊಕ್ಕೆ? ನಿನ್ನ ಕುರಿತಾದ ವಿವರವನ್ನು ಹೇಳುವೆಯಾ?' ಎಂದು ರಾಮಚಂದ್ರನು ಶರತ್ಕಾಲದ ಬೆಳದಿಂಗಳಂತಹ ಹಲ್ಲುಗಳ ಕಾಂತಿ ಮಿನುಗುತ್ತಿರಲು ಕೇಳಿದನು. ಆಗ ಆ ಕಪಟಸ್ತ್ರೀ 'ಅಯ್ಯಾ ಯಮನು ತಂದೆ, ತಾಯನ್ನು ಮೊದಲೇ ಕೊಂಡೊಯ್ದನು. ನಿಸ್ಸಹಾಯಕಳಾಗಿ ಒಬ್ಬಳೇ ಬಾಳಲಾರೆನೆಂದು ತಿಳಿದು, ಘೋರವಾದ ಈ ಅಡವಿಯನ್ನು ಹೊಕ್ಕು ಸಾಯುವೆನೆಂದು ಬರುತ್ತಿರಲು ನನ್ನ ಪುಣ್ಯೋದಯದಿಂದ ನಿಮ್ಮನ್ನು ಕಂಡೆನು. ನನ್ನನ್ನು ನಿಮ್ಮಲ್ಲಿ ಒಬ್ಬನು ಗಾಂಧರ್ವ ವಿವಾಹ ಮಾಡಿಕೊಂಡರೆ ಧನ್ಯೆ' ಎನ್ನಲು, ಸೀತೆಯು ರಾಮಲಕ್ಷ್ಮಣರ ಮುಖ ನೋಡಿ ನಗುತ್ತಿರಲು, ಸಿಟ್ಟಾಗಿ ಮನಸಿನಲ್ಲೇ ದುಃಖಪಟ್ಟು - ಇವರಿಗೆ ತಕ್ಕುದನ್ನು ಮಾಡುವೆನೆಂದು ಕಣ್ಣಿಗೆ ಕಾಣದಷ್ಟು ದೂರ ನಡೆದು ಮಿಂಚಿನಂತೆ ಆಕಾಶಕ್ಕೆ ಹಾರಿದಳು.

ಕೆದರಿದ ಕೂದಲು, ಕಣ್ಣುಗಳಿಂದ ಸುರಿವ ಕಣ್ಣೀರು, ಕೈಗಳಿಂದ ಬಸಿರನ್ನು ಹೊಡಕೊಳ್ಳುತ್ತ, ಮಗನ ಮರಣಕ್ಕೆ ಶೋಕಿಸುತ್ತಾ, ಖರನ ಪಾದಗಳಿಗೆ ಎರಗಿ 'ಹಾ ಹಾ' ಎಂದು ಗೋಳಿಡುತ್ತ ರೋದಿಸಿದಳು. ಶೋಕವಿಕಲೆಯಾದ ಚಂದ್ರನಖಿಯನ್ನು ಕಂಡು ಖರನು ಇದೇನೆಂದು ಕೇಳಿದನು.

"ಸೂರ್ಯ ಹಾಸಾಸಿಯನ್ನು ಪಡೆಯಲು ತಪಸ್ಸನ್ನು ಮಾಡುತ್ತಿದ್ದ ಹಿರಿಯ ಮಗನನ್ನು ನೋಡುವೆನೆಂದು ಹೋದಾಗ ತಲೆ, ದೇಹ ಬೇರೆ ಬೇರೆಯಾಗಿ ಭೂಮಿಗೆ ಬಿದ್ದಿರುವುದನ್ನು ಕಂಡೆ. ಕಂಡು ಮೂರ್ಛಿತೆಯಾಗಿ ಬಿದ್ದೆ. ಚೇತರಿಸಿ ಎದ್ದು ಮಗನನ್ನು ಕೊಂದವರ್‍ಯಾರೆಂದು ತಿಳಿಯಲು ಹೋಗಿ, ಖಡ್ಗದಿಂದ ಕೊಲಲೆಂದು ಮುಂದುವರಿದಾಗ ನನ್ನನ್ನು ಸೋಲಿಸಿ ಆ ಉದ್ಧತನು ಹಿಂದಟ್ಟಿದನು. ನಿನ್ನ ಪತ್ನಿಯಾಗಿ, ತ್ರಿಭುವನ ಪರಾಕ್ರಮಿ ರಾವಣನ ತಂಗಿಯಾದ ನನಗೆ ಇಂಥ ಸೋಲು ಪ್ರಾಪ್ತವಾಗುವುದೆಂದರೆ - ಅದು ಹಿಂದಣ ಜನ್ಮದ ಕರ್ಮಬಂಧ, ಅದನ್ನು ಮೀರುವವರು ಯಾರು" - ಎಂದು ಹೇಳಿದಳು.

ಕೇಳಿದ ಖರನು ಮಗನ ಸಾವು, ಹೆಂಡತಿಯ ಪರಾಭವ ತನಗೆ ದುಃಖವನ್ನುಂಟು ಮಾಡಿ ರಣರಸದ ಆವೇಶವೇ ಉಕ್ಕಿ ಬಂತು. ಅವನ ಮೈ ಬೆವರಿ ಕಪೋಲ ಪಟದಲ್ಲಿ ಬೆವರ ಹನಿ ಸುರಿಯಿತು.

"ಮಗನನ್ನು ಕೊಂದವನನ್ನು, ಹೆಂಡತಿಗೆ ಸೋಲುಣಿಸಿದವನನ್ನು ಇದಿರಿಸಿ ಕಾದಾಡಿ ಅವನ ತಲೆಯನ್ನು ಭೇದಿಸುತ್ತೇನೆ" - ಎಂದು ಗರ್ಜಿಸಿ, ಖಡ್ಗಕ್ಕೆ ಕೈ ಹಾಕುವುದನ್ನು ಕಂಡು ಅವನ ಮಂತ್ರಿಗಳು "ವಿದ್ಯಾಧರ ವಲ್ಲಭ, ಬಂದುದು ಸಾಧಾರಣದವರಲ್ಲ - ಅವರು ಶೌರ್ಯ, ಧೈರ್ಯಗಳನ್ನು ಕರಗತ ಮಾಡಿಕೊಂಡವರಿರಬೇಕು. ಸೂರ್ಯಹಾಸವು ಅವರ ಕೈವಶವಾಯಿತೆಂದರೆ ಅದೇನು ಅವರು ಮಾನವರೆಂದು ತಿಳಿದಿರೆ?" ಎಂದು ಕೇಳಿದರು. "ಅವರನ್ನು ಅಪಹಾಸ್ಯ ಮಾಡದೆ, ಸಾಮಂತರನ್ನು ಬರಿಸಿ, ಯುದ್ಧಕ್ಕೆ ಸಿದ್ಧತೆಯನ್ನು ಮಾಡಿಕೊಂಡು ಮಾತಾಡಿಸುವುದು ನೀತಿ. ಯಾಕೆಂದರೆ ಸಕಲ ಚಕ್ರವರ್ತಿಗಳೂ - ಮನುಷ್ಯರಾಗಿದ್ದರೂ - ಯುದ್ಧದಲ್ಲಿ ಬಲ್ಲಿದರು ಎಂಬುದು ಪ್ರಸಿದ್ಧ. ಈ ವಿಚಾರವನ್ನು ರಾವಣನಿಗೆ ತಿಳಿಸಿ ಮುಂದಿನ ಕ್ರಮವನ್ನು ಕೈಗೊಳ್ಳಬೇಕೆಂದು ಬಿನ್ನವಿಸಿದರು.

ಖರನು ಅದನ್ನು ಗ್ರಹಿಸಿ ಅಸಂಖ್ಯಾಕ ಸಾಮಂತ ಸೇನೆಯೊಂದಿಗೆ ಖರದೂಷಣರು, ಗಾಳಿಗೆ ಇದಿರಾಗಿ ನಡೆವ ಮುಗಿಲಿನ ಸಾಲಿನಂತೆ, ಆಕಾಶಮಾರ್ಗದಿಂದ ರಾಮಲಕ್ಷ್ಮಣರನ್ನು ಹುಡುಕಿಕೊಂಡು ಬರುತ್ತಿರಲು, ಆ ಸಮಯದಲ್ಲಿ ಸಮುದ್ರದ ಗರ್ಜನೆಗಿಂತಲೂ ಮಿಗಿಲಾದ ಕೋಲಾಹಲವನ್ನು ಕೇಳಿ ಇದೇನೆಂದು ಸೀತೆ ಹೆದರಿದಳು; ರಾಮನು ಮೆಲ್ಲನೆ ತನ್ನ ಬತ್ತಳಿಕೆಗೆ ಕೈ ಹಾಕುತ್ತಿರಲು, ಲಕ್ಷ್ಮಣನು ಅಣ್ಣಾ ನೀವು ಬಿಲ್ಲು ಹಿಡಿಯುವಂಥದ್ದೇನೂ ಆಗಿಲ್ಲ. ಇದಿರಿಗೆ ಕಾಣುವ ಈ ವಿದ್ಯಾಧರ ಸೇನೆಯನ್ನು ನಿಮಿಷದಲ್ಲಿ ಹದ್ದಿಗೆ ಉಣಿಸಿಕ್ಕಿ ಬರುತ್ತೇನೆ" - ಎಂದು ಅವನ ಆಜ್ಞೆ ಪಡೆದನು. "ತಾಯಿ ಸೀತಾಮಾತೆಯನ್ನು ಅಪಾಯದ ಈ ಗಹನ ಅರಣ್ಯದಲ್ಲಿ ಒಬ್ಬಂಟಿಗಳಾಗಿ ಬಿಡಬೇಡಿ. ಏನಾದರೂ ನನಗೆ ಅಪಾಯವಿದ್ದರೆ ನಾನು ಸಿಂಹನಾದ ಮಾಡುತ್ತೇನೆ. ಆಗ ಮಾತ್ರ ಬರುವುದು" - ಎಂದು ಅವನ ಆಜ್ಞೆ ಪಡೆದು, ಧನುಸ್ಸೇರಿಸಿ ವಿದ್ಯಾಧರ ಸೇನೆಗೆ ಇದಿರಾಗಿ ನಡೆದು ಬಾಣಗಳನ್ನೆಸೆಯಲು 'ಇವು ಮೊನೆಯಾದ ಬಾಣಗಳಲ್ಲ ವಿಷದ ಬಾಣಗಳು. ಅವು ಇದಿರಾದವರನ್ನು ಚುಚ್ಚಿ ಸೀಳುತ್ತಾ ಹೋಗಲು ಹೆಣಗಳ ಸಾಲು ಸಾಲೇ ಕಂಡವು. ಹೆಣಗಳು ಭೂಮಿಯಲ್ಲಿ ಮಲಗಿದಂತೆ ಕಾಣಲು ಕೃಷ್ಣ ಸರ್ಪದಂಥ ಬಾಣಕ್ಕೆ ಹೆದರದೆ ಇದಿರು ನಿಂತು ಬದುಕುವವರು ಯಾರು? ಸಿಡಿಲಿನ ಬೆಂಕಿ, ಸಿಂಹದ ಶಕ್ತಿ, ಭೈರವನ ಬಲ, ಸಿಟ್ಟು, ಅಂತ್ಯಕಾಲದ ಯಮನ ಆಧಿಕ್ಯ ಇವು ಏಕ ಕಾಲದಲ್ಲಿ ಪ್ರತ್ಯಕ್ಷವಾದುವೆನ್ನುವಂತೆ - ಲಕ್ಷ್ಮಣನು ಕಾದಾಡುತ್ತಿದ್ದನು.

ಆಗ ರಾವಣನು ಖರದೂಷಣರು ಕಳುಹಿಸಿದ ಸುದ್ದಿಯನ್ನು ಕೇಳಿ, ಲಯಕಾಲದ ಕಡಲಿನಂತೆ ಸಿಟ್ಟಿಗೆದ್ದು -

ತಪಸ್ಸಿನಲ್ಲಿದ್ದವನನ್ನು, ನಿರಪರಾಧಿಯನ್ನು, ನನ್ನ ತಂಗಿಯ ಮಗನನ್ನು ಕೊಂದವನನ್ನು ಕೊಂದು, ಆತನ ಮೈಯ್ಯ ರಕ್ತವನ್ನು ಎರೆದು ಖರನ ಶೋಕಾಗ್ನಿಯನ್ನು ನಂದಿಸುತ್ತೇನೆ'. ಎಂದು ತನ್ನ ಚಂದ್ರಹಾಸವನ್ನು ಹಿರಿದನು. ಅವನ ಕೋಪವೆಂಬ ಬೆಂಕಿಯ ಉರಿಯು ಹೊಗೆ ಎಬ್ಬಿಸುವಂತೆ ಧರಿಸಿದ ಆಭರಣಗಳ ಕಾಂತಿ ದಟ್ಟವಾಗಿ ಹೆಣೆದುಕೊಳ್ಳುವಂತೆ, ಯುದ್ಧಾತುರರಾದ ಖೇಚರ ನಾಯಕರನ್ನು ಕರೆಸಿಕೊಂಡು, ಕುಳಿತ ಸಿಂಹಪೀಠದಿಂದೆದ್ದು ರಾವಣನು ಯುದ್ಧಕ್ಕೆ ಸಿದ್ಧನಾದನು.

ತನ್ನ ಯಶಸ್ಸಿನ ಪ್ರಭೆಯಿಂದ ಹಿಮಪ್ರಭೆಯೂ, ಸೂರ್ಯಕಿರಣಗಳೂ ಹಿಂಜರಿಯಲು, ಬಲಗೈಯಲ್ಲಿ ಧರಿಸಿದ ಖಡ್ಗದ ಹೊಳಪಿನಿಂದ ದಟ್ಟವಾದ ಕತ್ತಲೆ ಪ್ರಕಾಶಿಸಲು, ರಾಹುವು ತನ್ನ ವಿಮಾನವನ್ನೇರುವಂತೆ ಇಂದ್ರನ ಹಗೆಯಾದ ರಾವಣನು ತನ್ನ ವಿಮಾನವನ್ನೇರಿದನು. ಪ್ರತಿಕೂಲವಾದ ಗಾಳಿಯಿಂದ ವಿಮಾನದ ಪತಾಕೆ 'ಹಿಂದಿರುಗು' ಎಂಬಂತೆ ಸನ್ನೆ ಮಾಡುತ್ತಿರಲು "ಹೋಗುವುದು ನ್ಯಾಯವಲ್ಲ" ಎಂಬಂತೆ ಘಂಟಾನಾದವಾಗುತ್ತಿರಲು, "ಇದು ವಿಮಾನವಲ್ಲ ಪುಣ್ಯ ದೇವತೆಯ ಕಣ್ಣೀರು' ಎಂಬಂತೆ ಅದು ದಂಡಕಾರಣ್ಯವನ್ನು ಹೊಕ್ಕಿತು. ಆ ಸಮಯದಲ್ಲಿ ರಾವಣನು ಒಂದು ನೆರಳಿರುವ ತಂಪಾದ ಸ್ಥಳದಲ್ಲಿ, ಬರಸಿಡಿಲಿನ ಜತೆಗಿರುವ ತೀಕ್ಷ್ಣ ಮಿಂಚಿನಂತೆ ಬಲಭದ್ರನ ಪಕ್ಕದಲ್ಲಿದ್ದ ಸೀತೆಯನ್ನು ಕಂಡು ದೃಷ್ಟಿಗೆ ಬಿದ್ದೊಡನೆ ವಜ್ರದ ಸಂಕೋಲೆಯೇ ತನ್ನ ಎದೆಗೆ ಬಿದ್ದಂತಾಗಿ ರೂಪವತಿಯಾದ ಸೀತೆ ಕಾಣಲು, ತಾವರೆಯ ಎಲೆಯ ಮೇಲೆ ಬಿದ್ದ ನೀರ ಹನಿಯಂತೆ ಅವನ

ಮನಸ್ಸು ವಿಚಲಿಸಿತು. ಸೀತೆಯ ಕಣ್ಣುಗಳು ಥಳಥಳಿಸಿ ಹೊಳೆಯಲು, ಚಕ್ರವರ್ತಿಯಾದ ರಾವಣನ ಮನಸ್ಸು ಕೊಳದೊಳಗಿನ ಎಳೆಯ ಬಾಳೆಯಂತೆ ಒಂದು ಕ್ಷಣದಲ್ಲಿ ಕದಡಿಹೋಯಿತು. ಕೊರಳ ಹಾರದ ಕಿರಣಗಳ ಗೊಂಚಲು, ಅಮೃತಧಾರೆ, ಚಂದ್ರಕಿರಣ, ಕರ್ಪೂರದ ಶಲಾಕೆ ಇವೆಲ್ಲ ನೇತ್ರಸುಖವನ್ನು ಕೊಡುವುವು. ಆದರೆ ಈಕೆ ಸಮುದ್ರವನ್ನು ಕಡೆದಾಗ ಸಿಕ್ಕಿದ ಮಹಾಲಕ್ಷ್ಮಿಯೇ ಆಗಿರುವಳು.

ಹಲವು ವಿದ್ಯಾಧರ ಸ್ತ್ರೀಯರು, ದೇವತಾ ಸ್ತ್ರೀಯರು, ಮಾನವಸ್ತ್ರೀಯರು ತಮ್ಮ ಪ್ರೀತಿಯನ್ನು ರಾವಣನ ಮೇಲೆ ಹರಿಯ ಬಿಟ್ಟರೂ, ಅಂಥವರನ್ನು ಹಚ್ಚಿಕೊಳ್ಳದೆ ಕಡೆಗಣಿಸಿದ್ದನ್ನು ಗಮನಿಸಿ ಮನ್ಮಥನು ಸೀತೆಯನ್ನು ರಾವಣನು ಕಂಡೊಡನೆ ಪುಷ್ಪಬಾಣವನ್ನು ಗುರಿಯಿಟ್ಟು ಎಸೆದೇ ಬಿಟ್ಟನು.

ಗುರಿ ತಪ್ಪದೆ ತಾಗಿದ ಆ ಬಾಣದ ಕಾವು ರಾವಣನ ನಡೆಯಲ್ಲಿ ನುಡಿಯಲ್ಲಿ ವ್ಯಕ್ತವಾಗಿ ಅವನ ಹಾದಿ ತಪ್ಪಿಸಿತು. ಅದರಿಂದ ಅವನ ಕುರಿತಾದ ಖ್ಯಾತಿ ಕುಂದಿತು; ಸಂಪತ್ತು ಕ್ಷೀಣವಾಯಿತು, ಮನುಷ್ಯತ್ವ ಓಡಿ ಹೋಯಿತು. ಒಟ್ಟಿನಲ್ಲಿ ಎಲ್ಲವು ಹಾಳಾಗಿ ಜೆಂಕಿಯ ಕಿಡಿ ಮಸಿಯಾದಂತೆ ವಿಷಯ ಸುಖದ ಆಸೆಬುರುಕರು ಕೀಳಾಗುವುದಿಲ್ಲವೆ?

ಆಚಾರ ಶುದ್ಧಿಯನ್ನು, ಕುಲಕ್ಕೆ ತಕ್ಕ ಗುಣಪ್ರಖ್ಯಾತಿಯನ್ನು ದುಷ್ಟನಿಗ್ರಹ ಶಿಷ್ಟ ಪರಿಪಾಲನಾ ಕ್ಷಮತೆಯನ್ನು ಉಳಿಸಿಕೊಳ್ಳದೆ, ಅನ್ಯಸ್ತ್ರೀಯರ ಕುರಿತಾದ ಅತ್ಯಾಸೆಯನ್ನು ರಾವಣನು ಕಾಲವಶದಿಂದ ತಾಳಿದನು. ಒಮ್ಮೆಗೆ ಸಮುದ್ರವೇ ಆದರೂ ಕಾಲವಶದಿಂದ ತನ್ನ ಮರ್ಯಾದೆಯನ್ನು ಮೀರದಿರುವುದೇ?

ಅವಿವೇಕಿಯಾದ ರಾವಣನು ದೃಷ್ಟಿಮಾತ್ರದಿಂದಲೇ ಕೊಲ್ಲುವ ವಿಷತುಂಬಿದ ಸರ್ಪದ ಹೆಡೆಯಲ್ಲಿರುವ ಮಣಿಗೆ ಕೈ ನೀಡುವ ಮೂರ್ಖನು ತನಗೆ ತಾನೇ ನಾಶವಾಗುವಂತೆ ವರ್ತಿಸಿದನು. ಅನ್ಯಸ್ತ್ರೀಗೆ ಆಸೆಪಡುವ ಪಾಪ ಒಂದು, ರಾಮನೊಡನೆ ಇದಿರು ನಿಂತು ಕಾದಾಡದೆ ವಂಚನೆಯಿಂದ ಸೀತೆಯನ್ನು ಕೊಂಡೊಯ್ಯುವ ಪಾಪ ಮತ್ತೊಂದು - ಇವುಗಳಿಂದ ಅವನ ಯಶಸ್ಸು ಕುಂದಿತು ಎಂದು ಆತ ತನ್ನಲ್ಲಿರುವ ಅವಲೋಕಿನೀ ವಿದ್ಯೆಯನ್ನು ಸ್ಮರಿಸಿದನು. ಆತ್ಮ ಸತ್ವದ ಗುಣಹಾನಿಯು ಮನುಷ್ಯನ ವಿನಾಶವನ್ನು ಸೂಚಿಸುತ್ತದೆ!

ಅವಲೋಕಿನೀ ವಿದ್ಯೆ ಬಂದು ಇದಿರುನಿಂದು - 'ಏನಪ್ಪಣೆ?' ಎನ್ನಲು 'ಮುಂದಿರುವ ಇವರು ಯಾರು?' ಎಂದು ರಾವಣನು ಕೇಳಲು 'ಇವರು ಬಲದೇವ - ವಾಸುದೇವರು, ದೇವತೆಗಳೇ ಕೊಟ್ಟ ವಜ್ರಾವರ್ತ, ಸಾಗರಾವರ್ತ ಚಾಪಗಳನ್ನು ಪ್ರಯತ್ನ ವಿಲ್ಲದೆ ಪಡೆದವರು. ರಾಮಲಕ್ಷ್ಮಣರೆಂಬ ಹೆಸರಿರುವವರು, ಮಹಾಪರಾಕ್ರಮಿಗಳು. ರಾಮನ ಹೆಂಡತಿ ಸೀತೆ ಮಿಥಿಲೆಯ ಅರಸು ಜನಕರಾಜನ ಮಗಳು. ರಥನೂಪುರ ಪುರವನ್ನಾಳುವ ಮಹಾಪರಾಕ್ರಮಿಯಾದ ಪ್ರಭಾ ಮಂಡಲನ ತಂಗಿ' ಎಂದಿತು. 'ಈಕೆಯನ್ನು ರಾಮನಿಂದ ಅಗಲಿಸುವ ಉಪಾಯವೇನು' ಎಂದು ರಾವಣ ಕೇಳಲು ಅವಲೋಕಿನಿ ವಿದ್ಯೆಯು ಚಕಿತ ಮನಸ್ಸಿನವಳಾಗಿ -

"ಯೋಚನೆ ಮಾಡಿದರೆ - ಅಸಾಧಾರಣ ಪುರುಷರೊಡನೆ, ಅಧಿಕ ಬಲರೊಡನೆ ವಿರೋಧ ಸಲ್ಲದು. ಇವರು ಕಾರಣಪುರುಷರು. ಇಂಥವರೊಡನೆ ನಿಷ್ಕಾರಣವಾಗಿ ಹಗೆತನ ಕಟ್ಟಿಕೊಳ್ಳಬಾರದು' - ಎಂದು ಹೇಳುತ್ತ ಮತ್ತೆ ಮತ್ತೆ ಅವಲೋಕಿನೀ ವಿದ್ಯೆ 'ಲೋಕದಲ್ಲಿರುವ ಅಧರ್ಮಿಗಳನ್ನು ಸರಿದಾರಿಗೆ ತಂದು ರಕ್ಷಿಸುವ ಹೊಣೆ ನಿನ್ನದು. ಇಂಥ ನೀನೇ ವಿಷಯಕ್ಕೆ ಮನಸ್ಸು ಮಾಡಿದರೆ ಕಾಯುವವರೇ ಶಸ್ತ್ರಧಾರಣೆ ಮಾಡಿದರು ಎಂಬ ಮಾತಿಗೆ ಎಡೆಯಾಗುತ್ತದೆ. ಅನ್ಯಾಯದಿಂದ ನಡೆವವರನ್ನು ನೀನು ಸರಿದಾರಿಗೆ ತರುವವನು. ಇಂಥ ನೀನು ದಾರಿ ತಪ್ಪಿದರೆ ಹೇಗೆ? ಸಮುದ್ರದ ನೀರೆಲ್ಲ ಬಿಸಿಯಾದರೆ ತಣ್ಣೀರು ಬೆರಸಿದರೆ ತಣ್ಣೀರಾಗುತ್ತದೆಯೆ? ಹದಿನಾಲ್ಕು ಸಾವಿರ ಮುಖ್ಯ ನಾಯಕರನ್ನೊಳಗೊಂಡ ಖರದೂಷಣರು ಇದಿರಾದರೂ ಅವರೊಡನೆ ಹೋರಾಡಿ ಲಕ್ಷ್ಮಣನು ಗೆದ್ದನು. ರಾಮನು ಇದನ್ನು ನೋಡಿ ಏನೂ ಚಿಂತೆಯಿಲ್ಲದೆ ವಿನೋದದಿಂದಿದ್ದನು. ಇಂಥವರೊಡನೆ ದ್ವೇಷ ಕಟ್ಟುವುದು ತಪ್ಪಲ್ಲವೆ?"

- ಎಂದು ಹೇಳಿದ್ದನ್ನು ಕೇಳಿ ರಾವಣನು ಕೋಪಿಸಿದನು. ಕಾಮನ ಬಾಣ ತಾಗಿದ ಮೇಲೆ ರಾವಣನ ಮನಸ್ಸಿಗೆ ಯಾವ ಉಪದೇಶವಾದರೂ ಸೇರುವುದೇ? ಒಳ್ಳೆಯ ಮಾತುಗಳ ಪರಿಣಾಮವಾಗದಿರುವುದು ವಿಧಿಯ ಕೈವಾಡ.

ರಾವಣನು ಮುನಿಸಿನಿಂದ - "ನಾನೊಂದನ್ನು ಕೇಳಿದರೆ ನೀನೊಂದು ಬೇರೆಯೇ ಹೇಳುತ್ತೀ. ಹೇಳಿದಷ್ಟು ಮಾಡು ನಿನ್ನ ಕೆಲಸ ಅಷ್ಟೆ! ಮಾನವರಾದವರು ಲಂಕಾಪತಿಗೆ ಗಣ್ಯರೆ?"

ರಾವಣನ ಮಾತು ವಿದ್ಯಾದೇವತೆಗೆ ಕೋಪ ಬರಿಸಿತು. ಆದರೆ ಏನೂ ಹೇಳದೆ ತನ್ನಲ್ಲೆ "ಜನಕಜೆಯಾದ ಸೀತೆಯನ್ನು ಒಯ್ದರೆ ದಶರಥನ ಮಕ್ಕಳಿಂದ ಈತನಿಗೆ ಮರಣ ಎಂಬ ವಿಧಿ ಲಿಖಿತವೇ ಇರುವಾಗ ಯಾರು ಯಾರಿಗೆ ಏನು ಮಾಡಬಹುದು? ಎಲ್ಲವೂ ಪುರಾಕೃತ ಕರ್ಮ" ಎಂದು ಯೋಚಿಸಿತು. ಇತ್ತ ಲಕ್ಷ್ಮಣನು ಅಣ್ಣನೊಡನೆ 'ರಿಪು ಬಲವನ್ನು ಗೆಲ್ಲಲು ನನಗೆ ಅಸಾಧ್ಯವಾದರೆ ಸಿಂಹನಾದ ಮಾಡುತ್ತೇನೆ. ಆಗ ನನಗೆ ಬೆಂಬಲವಾಗಿ ರಣರಂಗಕ್ಕೆ ಬರುವುದು - ಎಂದು ತಿಳಿಸಿದ್ದು ನೆನಪಾಗಿ ಅವಲೋಕಿನೀ ವಿದ್ಯೆ ಲಕ್ಷ್ಮಣನಿಗೆ ಕೇಳಿಸದಂತೆ ಸಿಂಹನಾದ ಮಾಡಿತು. ಆ ಧ್ವನಿಯನ್ನು ಕೇಳಿ 'ಲಕ್ಷ್ಮಣನು ಯುದ್ಧದಲ್ಲಿ ಯಾರಿಗೂ ಹಿಮ್ಮೆಟ್ಟುವವನಲ್ಲ' ಎಂಬ ರಾಮನ ನಿಶ್ಚಯವು ಸಡಿಲಾಯಿತು. ತಮ್ಮನಿಗೆ ಯುದ್ಧವು ಕಠಿಣವಾಗಿರಬೇಕೆಂಬ ಭಾವನೆ ಒಡಮೂಡಿತು. ಆತ ಆಶ್ಚರ್ಯಪಟ್ಟರೂ, ಕರ್ಮಾನುಸಾರವಾಗಿ ಸೀತಾಪಹರಣ ಆಗಬೇಕಿದ್ದರೆ ಅದನ್ನು ತಪ್ಪಿಸಲಿಕ್ಕೆ ಯಾರಿಗೆ ಸಾಧ್ಯ?

ರಾಮನು, ಜಟಾಯುವಿಗೆ 'ಸೀತೆಯನ್ನು ಕಾದುಕೋ' ಎಂದು ಹೇಳಿ, ಸೀತೆಗೆ ಕ್ಷಣದಲ್ಲಿ ಬರುವೆನೆಂದು ತಿಳಿಸಿ, ವೈರಿಬಲವನ್ನು ನಾಶ ಮಾಡಲು ಯಮನಂತೆ ಚಾಪಧಾರಿಯಾಗಿ ಕೋಪಾವೇಶದಿಂದ ಮುಂದೊತ್ತಿದನು.

ಇತ್ತ ಪರ ವಧುವಿಗೆ ಆಸೆಪಟ್ಟು ಅಧೋಗತಿಗೆ ಇಳಿಯುವುದನ್ನು ಅಭಿನಯಿಸಿ ತೋರುವಂತೆ ಸೀತೆಯಿರುವಲ್ಲಿಗೈದಿ ಆಕಾಶದಿಂದ ಪಾಪಿ ರಾವಣನು ನೆಲಕ್ಕಿಳಿದು ಪಾಪಕ್ಕೂ ಸಿಂದೆಗೂ

ಅಂಜದವನಂತಾದನು. ದೋಷಿಯು, ನಿರ್ದೋಷಿಯಾದ ಕಾಸಿದ ನೇಗಿಲವೊನೆಯನ್ನು ಉತ್ಸಾಹದಿಂದ ಹಿಡಿವಂತೆ, ಕಾಳೋರಗನನ್ನು ಸಣ್ಣ ಕೂಸು ಹಿಡಿವಂತೆ ಅವಿವೇಕಿಯಾದ ರಾವಣನು ದೋಷವನ್ನು ಹಿಡಿದನು. ಹೀಗೆ ಹಿಡಿದು ಈಕೆಯನ್ನು ವಿಮಾನದಲ್ಲಿರಿಸಿ, ಚಂದ್ರನನ್ನು ರಾಹು ಹಿಡಿದಂತೆ, ಹದಿನಾಲ್ಕು ಲೋಕಗಳೂ ಅವನ ಅನ್ಯಾಯವನ್ನು ಸಾರಿ ಹೇಳುವಂತೆ ಕೊಂಡೊಯ್ದನು. ಅದನ್ನು ಕಂಡ ಜಟಾಯುವು ಕೋಪಾಗ್ನಿಯಿಂದ ಕಣ್ಣುಗಳಲ್ಲಿ ಕಿಡಿ ಸೂಸುತ್ತ ರಾವಣನನ್ನು ನುಂಗುವಂತೆ ನೋಡಿ - 'ನನ್ನ ಯಜಮಾನನು ಈ ತಾಯಿಯನ್ನು ರಕ್ಷಿಸಲು ಹೇಳಿ ಹೋದನು. ಈ ಖೂಳನು ಉದ್ಧತನಾಗಿ ನನ್ನನ್ನು ಲೆಕ್ಕಿಸದೆ, ಆಕೆಯನ್ನು ಕದ್ದೊಯ್ಯಲು ಹವಣಿಸುತ್ತಿದ್ದಾನೆ. ಇವನನ್ನು ನನ್ನ ಕೊಕ್ಕಿನಿಂದ ನೂರು ತುಂಡಾಗುವಂತೆ ಮಾಡುವೆನೆಂದು ಹೇಳುತ್ತ -ಕ್ರೂರವಾದ ಉಗುರುಗಳಿಂದ, ಹರಿತವಾದ ಕೊಕ್ಕಿನಿಂದ ರಾವಣನನ್ನು ಇರಿಯಲು ಮುಂದೊತ್ತಿದನು. ರಾವಣನು ಜಟಾಯುವನ್ನು ಕೈಗಳಿಂದ ಹೊಡೆಯಲು ಆತ ತನ್ನೆರಡೂ ರೆಕ್ಕೆಗಳನ್ನು ಮುರಿಸಿಕೊಂಡು ವಜ್ರಾಯುಧದಿಂದ ಇಂದ್ರನು ಹೊಡೆಯಲು ಪರ್ವತವೇ ಬಿದ್ದಂತೆ ಆಕಾಶಮಾರ್ಗದಿಂದ ಕೆಳಗೆ ಬಿದ್ದನು. ಇದನ್ನು ಕಂಡು ಸೀತೆಯ ದುಃಖವು ಹೆಚ್ಚಾಯಿತು, ಮನಸ್ಸು ಸಣ್ಣದಾಯಿತು. ಕಂಗಳ ಕಣ್ಣೀರು ಅವುಗಳ ದಳವನ್ನು ತೊಳೆದು ಹೊರಗೆ ಸೂಸಲು, ಮಾತಾಡಲು ಬಾರದೆ ಗದ್ಗದ ಸ್ವರವನ್ನು ಹೊರಡಿಸಿ, ಬಾಯಿಂದ ಹಾ ಹಾ ರವವನ್ನು ಸೂಸಿತು. ಭಯಭೀತೆಯಾದ ಸೀತೆ ದಿಕ್ಕು ತೋಚದೆ ಬೊಬ್ಬಿಟ್ಟಳು. ದಿಗಂತಗಳಲ್ಲಿ ಆಕೆಯ ದನಿ ಮಾರ್ದನಿಗೊಂಡಿತು. ಅದು ದಿಗಂಗನೆಯರೇ ಅಳುವಂತೆ ಕೇಳಿಸಿತು. ಸೀತೆ ಹಿಂದಿರುಗಿ ನೋಡಿ ದಶಕಂಠನನ್ನು ಕಂಡು ಕಂಗಾಲಾದಳು. ಶೋಕವೂ ಆತಂಕವೂ ಉಂಟಾಗಿ ಆಕೆ ವಿಮಾನದ ರತ್ನಖಚಿತ ಬೊಂಬೆಗಳನ್ನು ನೋಡಿ ಬೆವರಿದಳು. ಆ ಬೆವರು ಲಂಕೆಯ ಉನ್ನತಿಗೆ ಬೆಂಕಿ ಹತ್ತಿದ್ದನ್ನು ರಾವಣನಿಗೆ ತಿಳಿಸುವಂತೆ ಕಂಡಿತು.

ಬಲೆಯಲ್ಲಿ ಸಿಕ್ಕಿಬಿದ್ದ ಸೋಗೆ ನವಿಲಿನಂತೆ ಭಯಭೀತೆಯಾದ ಸೀತೆ ರಾಮನನ್ನು ಬಯಸಿ, ನೋಡಲು ಅಪೇಕ್ಷಿಸಿದಳು. ಆದರೆ ಹೊರಗೆ ನೋಡದೆ ಅವಳ ಕಣ್ಣಿನ ರೆಪ್ಪೆಗಳು ಮುಚ್ಚಿಕೊಂಡು ಆಕೆ ಮೂರ್ಛಿತಳಾದಳು. ಒಂದರೆ ನಿಮಿಷದಲ್ಲಿ ಎಚ್ಚತ್ತು "ಕ್ರೂರಾತ್ಮನೂ, ವಂಚಕನೂ, ಅವಿಚಾರಿಯೂ, ದುರಾಚಾರಿಯೂ ಆದ ಈ ದುಷ್ಟನು ಆಹಾ ರಾಮಾ ನನ್ನನ್ನು ಒಯ್ಯುತ್ತಿದ್ದಾನೆ, ಇವನನ್ನು ತಡೆವವರು ಯಾರೂ ಇಲ್ಲವೆ?" ಎಂದು ಕೇಳಿದಳು.

ಶೋಕಿಸುವ ಸೀತೆಯನ್ನು ದಶಕಂಠನು ಅನಂತವೀರ್ಯ ಕೇವಲಿಯ ಕಾಲಬುಡದಲ್ಲಿ ಕೈಕೊಂಡ 'ಪರಾಂಗನಾವಿರತಿ' ವ್ರತಭಂಗವನ್ನು ನೆನೆಯದೆ - ಕೊಂಡೊಯ್ದನು. ಇತ್ತ -

ದೇವೇಂದ್ರನ ವಜ್ರಾಯುಧವನ್ನು, ನನ್ನ ಈ ವಜ್ರಾವರ್ತ ಚಾಪವನ್ನು ಮೀರಿಸುವವನು ಇನ್ನಾವನು ಎಂದು ಯುದ್ಧಭೂಮಿಗೆ ರಾಮನು ಬಂದು ಮುಟ್ಟಿದನು. ಹೀಗೆ ಬರುತ್ತಿರಲು ಲಕ್ಷ್ಮಣನು - 'ಅಪಾಯಕರವಾದ ಅಡವಿಯಲ್ಲಿ ಸೀತಾದೇವಿಯನ್ನು ಅಗಲ್ಚಿ ಏಕೆ ಬಂದಿರಿ" ಎಂದು ಕೇಳಲು," ನಿನ್ನ ಸಿಂಹನಾದವನ್ನು ಕೇಳಿಬಂದೆನು" ಎಂದು ರಾಮನೆನ್ನಲು "ಅಣ್ಣಾ, ನಿನ್ನ ಆಶೀರ್ವಾದದಿಂದ ನನಗೆ ಬಲವಾದ ಯುದ್ಧವಿಲ್ಲ, ಇದು ಯಾವನೋ ಒಬ್ಬ ಮಾಯಾವಿಯ ಕಪಟವಾಗಿರಬೇಕು.

ಆದರಿಂದಾಗಿ ನಾವು ಕೂಡಲೇ ಹಿಂದಿರುಗಬೇಕು - ನಾನೀ ಯುದ್ಧವನ್ನು ಮುಗಿಸಿ ಬರುವೆನು ಎಂದು ಬಿನ್ನವಿಸಲು - ರಾಮನು

'ಲಕ್ಷ್ಮಣ ಸಿಂಹನಾದ ಮಾಡಿಲ್ಲ, ನನ್ನ ಮನಸ್ಸಿಗೆ ಸೀತೆಯನ್ನು ಒಂಟಿಯಾಗಿ ಬಿಟ್ಟು ಬರಲಾಗದು ಎಂದು ಅನಿಸಲಿಲ್ಲ - ನನ್ನ ಎಡಗಣ್ಣು ಉತ್ಸಾಹದಿಂದ ಹಾರಿತು. ವ್ಯಥೆಯಾಗಲೀ, ಕಷ್ಟವಾಗಲೀ ನನಗೆ ಆಗಲಿಲ್ಲ' ಎಂದು ಮನಸ್ಸಿನಲ್ಲಿ ಯೋಚಿಸುತ್ತ ರಾಮನು ಹಿಂತಿರುಗಿದನು. ಹಿಂತಿರುಗಿ ಬಂದು ಲತಾ ಭವನದಲ್ಲಿ ಸೀತೆಯನ್ನು ಕಾಣದೆ, ಬೆಂಕಿಯ ಮುಂದೆ ಬಂದ ಪಾದರಸದಂತೆ, ರಾಮನ ಧೈರ್ಯಗುಣವು ಅದೃಶ್ಯವಾಯಿತು. ಕೂಡಲೆ ಆತ, "ಹಾಹಾ ಜನಕಸುತೇ, ವೈದೇಹಿ" ಎಂದು ರಾಮನ ಮನಸ್ಸಿನಲ್ಲಿ ಮೋಹವೆಂಬ ಕತ್ತಲೆಯೇ ತುಂಬಿದಂತೆ, ಗಾಳಿಯ ಬೀಸುವಿಕೆಗೆ ದೀಪ ನಂದುವಂತೆ ರಾಮನು ಮೂರ್ಛಿತನಾದನು.

ಕ್ಷಣದಲ್ಲಿ, ದೇಹವು ಸ್ವಲ್ಪ ಬಿಸಿಯಾಯಿತು, ಚಲಿಸುವ ಅವಯವಗಳು ಸ್ವಲ್ಪವೇ ಚಲಿಸಿದವು, ಮಂದವಾದ ಉಸಿರಾಟವು ಮೂಗೆಂಬ ಮೊಗ್ಗಿನಿಂದ ಸೂಸಿತು. ಕಣ್ಣೆವೆ ಅರಳಿತು. ರಾಮನು 'ಜಾನಕೀ' ಎಂದು ಸಂಬೋಧಿಸುತ್ತ, ರಘುಕುಲನೆಂಬ ಆಕಾಶಕ್ಕೆ ಸೂರ್ಯನೆಂಬ ರಾಮನು ಮೂರ್ಛೆ ತಿಳಿದೆದ್ದನು.

ಎಚ್ಚತ್ತು ಸುತ್ತಲೂ, ನಡೆದಾಡಿ ಸೀತೆಯನ್ನು ಹುಡುಕುತ್ತಿರಲು, ಒಂದೆಡೆ ಪ್ರಾಣೋತ್ಕ್ರಮಣ ಕಾಲದ ಸಂಕಟದಿಂದ ಬಳಲುವ ಜಟಾಯುವಿನ ಸ್ವರವನ್ನು ಆಲಿಸಿ ಸೀತಾಹರಣವೇ ಇದಕ್ಕೆ ಕಾರಣವೆಂದು ತಿಳಿದು ಶೋಕಿಸಿ, ಪಂಚನಮಸ್ಕಾರಗಳನ್ನು ಮಾಡಿ ಅವನಿಗೆ ಅಮರ ಗತಿಯನ್ನು ಕರುಣಿಸಿ, ವೈದೇಹಿಯನ್ನು ಕಾಣದೆ -

'ಹಂಸಗಮನೆ ಸೀತೆ, ಕಸ್ತೂರಿಯ ಪರಿಮಳವನ್ನು ಸೂಸುವ ಉಸಿರಿನ ಜಾನಕಿ, ತಳಿರುಗಳೇ ತಾವರೆಗಳೇ, ತುಂಬಿಗಳೇ, ನೈದಿಲೆಯೇ ಕಂಡಿರೇ ನೀವು ಪಲ್ಲವದಂಥ ತುಟಿಗಳಿರುವ ಸೀತೆಯನ್ನು? ತಾವರೆಯಂಥ ಮುಖವುಳ್ಳ, ಭೃಂಗಕುಂತಳೆಯನ್ನು, ಕೈರವ ನೇತ್ರೆಯನ್ನು ಸೀತೆಯನ್ನು ಕಂಡಿರೆ? ಇನಿದಾಗಿ ಹಾಡುವ ಕೋಗಿಲೆಯಂಥ, ನೀಲೋತ್ಪಲ ಪುಷ್ಪವನ್ನು ನೋಡುತ್ತ ತುಂಬಿಗಳ ಮಾಲೆಯಂಥ ತುರುಬಿರುವ, ಹಂಸೆಯಂತೆ ನಡೆವ, ಕೋಮಲವಾದ ಬಳ್ಳಿಗಳಂಥ ನಳಿದೋಳಿರುವ ಜಾನಕೀ, ನನ್ನ ಕಣ್ಣಿಗೆ ಕಾಣಿಸದೆ ಗೋಳಾಡಿಸುತ್ತಿರುವ ಕಾರಣವೇನು?

- ಎಂದು ವಿಧವಿಧವಾಗಿ ಹಲುಬುತ್ತಾ, ಮಾತಾಡುತ್ತ ಮನಸ್ತಾಪದಿಂದ ದೇಹಕ್ಕೆ ಬಳಲಿಕೆಯಾಗಲು ಅದರಿಂದ ಬಳಲುತ್ತ, ಮನ್ಮಥ ತಾಪದಿಂದ ಕೋಪಿಸುತ್ತ, ಕಣ್ಣೀರು ಸುರಿಸುತ್ತ ಆ ಕಾಡಿನಲ್ಲಿ ರಾಮನು ಆಯಾಸಪಟ್ಟನು.

ಇತ್ತ ಲಕ್ಷ್ಮಣನು ಖರದೂಷಣರ ತಲೆಗಳನ್ನು ಸೂರ್ಯಹಾಸ ಖಡ್ಗದಿಂದ ಛೇದಿಸಿ ವಿಜಯಿಯಾಗಿ ವಿರಾಧಿತನೆಂಬ ಖೇಚರರನ್ನು ಪಾತಾಳ ಲಂಕೆಗೆ ಅಧಿಪತಿಯಾಗಿ ನೇಮಿಸಿದನು. ಪರ್ಣಶಾಲೆಯೆಡೆ ಬಂದನು.

ಪರ್ಣಶಾಲೆಯಲ್ಲಿ ಸೀತೆಯಿಲ್ಲ! ಮದಜಲ ಧಾರೆಯಿಲ್ಲದ ದಿಗ್ಗಜ ಚಂದ್ರಕಿರಣದ ಪ್ರಕಾಶವಿಲ್ಲದ ಆಕಾಶ, ಕಲ್ಪತರುವಿಲ್ಲದ ನಂದನವನ, ದಡವಿಲ್ಲದ ಕಡಲು, ಸಿಂಹಿಣಿಯ ಜತೆಯಿಲ್ಲದ ಸಿಂಹ, ಸೀತೆಯಿಲ್ಲದ ರಘುವಂಶದ ರಾಮನನ್ನು ಚಿಂತಾಕುಲನಾದ ಲಕ್ಷ್ಮಣನು ನೋಡಿದನು 'ತಾಯಿ ಸೀತೆ ಇರಬಹುದೆಂದು ಬಂದೆ. ಆಕೆಯನ್ನಿಲ್ಲಿ ಕಾಣಲಿಲ್ಲ. ಎಲ್ಲಿ ಸಿಂಹ, ಶರಭವೇ ಮೊದಲಾದ ದುಷ್ಟ ಮೃಗಗಳು ಕೊಂಡೊಯ್ದುವೋ, ಯಾರಾದರೂ ಮಾಯಾವಿಗಳು ಕದ್ದೊಯ್ದರೋ ಕಾಡೆಲ್ಲ ತೊಳಲಿದೆನು' ಎಂದು ನೊಂದುಕೊಂಡನು. ಅವನ ಹಿಂದಿನಿಂದ ಬರುವ ಸೈನ್ಯವನ್ನು ಕಂಡು ರಾಮನು ಇದಾರ ಸೈನ್ಯವೆನ್ನಲು ಲಕ್ಷ್ಮಣನು 'ಇದು ವಿರಾಧಿತನೆಂಬ ವಿದ್ಯಾಧರನು ನನಗೆ ಸಹಾಯಕನಾಗಿ ತನ್ನ ಸೇವೆಯನ್ನು ಸಲ್ಲಿಸಿದನು. ಇದು ಅವನ ಸೈನ್ಯ' ಎನ್ನುತ್ತ ರಾಮನ ಪಾದಕ್ಕೆ ವಂದಿಸಿದನು. ಜಗನ್ಮಾತೆಯಾದ ಸೀತಾದೇವಿಯನ್ನು ಕದ್ದು ಇಲ್ಲೆಲ್ಲಿಯಾದರೂ ದುರಾತ್ಮರು ಅಡಗಿರಬಹುದೆಂದು ಅಣ್ಣನು ವ್ಯಗ್ರನಾಗಿದ್ದಾನೆ' ಎಂದು ಲಕ್ಷ್ಮಣನೆನ್ನಲು - ವಿರಾಧಿತನು ರಾಮನಿಗೆ ತನ್ನ ಕುಲದವರ ವಿವರವನ್ನು ತಿಳಿಸಿ, ನಿಸರ್ಗದತ್ತವಾದ ದುರ್ಗಮವಾಗಿರುವ ಪಾತಾಳಲಂಕೆಯ ಅರಸನು ತಾನು ಎಂದು ಪರಿಚಯಿಸುತ್ತ, ಸೀತಾದೇವಿಯ ಅಣ್ಣನಾದ ಪ್ರಭಾಮಂಡಲನನ್ನು ಬರಮಾಡಿ ಸೀತಾಮಾತೆಯನ್ನು ಹುಡುಕುವ ಪ್ರಯತ್ನವನ್ನು ಮಾಡೋಣ. ಅದಕ್ಕೆ ನಾನೇ ತಕ್ಕವನು ಎಂದು ರಾಮಲಕ್ಷ್ಮಣರಿಬ್ಬರನ್ನೂ ರಥವೇರಿಸಿಕೊಂಡು ಪಾತಾಳ ಲಂಕೆಯನ್ನು ಹೊಕ್ಕನು.

ಇತ್ತ ಆಕಾಶಮಾರ್ಗದಲ್ಲಿ ರಾವಣನು ಸಮುದ್ರದ ಮೇಲಿಂದ ಮನೋವೇಗದಲ್ಲಿ ಹೋಗುತ್ತಿರಲು, ಸೀತೆಯ ಮನಸ್ಸಿಗೆ ಖೇದವು ಹೆಚ್ಚಿತು. ಎಲ್ಲಿ, ಯಾವ ದಿಕ್ಕು ಎಂಬ ವಿವರವು ತಿಳಿಯದೆ ಆಕೆ ಹತಾಶಳಾದಳು. ದುಃಖದಿಂದ ಧಾರಾಕಾರವಾಗಿ ಕಣ್ಣೀರು ಸುರಿಸುತ್ತ, ಕೈಗಳಿಂದ ಬಸಿರನ್ನು ಹೊಯ್ಯುತ್ತ 'ಪರಾಂಗನೆಯನ್ನು, ನನ್ನನ್ನು ಈ ದುಷ್ಟನು ಕದ್ದೊಯ್ಯುತ್ತಿದ್ದಾನೆ, ದಯಾವಂತರು ನನ್ನನ್ನು ಬಿಡಿಸಬೇಕು' ಎಂದು ಸೀತೆ ಬೊಬ್ಬಿಟ್ಟಳು.

ಸೀತೆಯ ಈ ಹಾಹಾಕಾರವನ್ನು ಅರ್ಕಜಟಿಯ ಮಗನಾದ ರತ್ನಜಟಿ ಕೇಳಿದನು. ಅಪ್ಪಳಿಸುತ್ತ ಬಂದು ರಾವಣನ ವಿಮಾನವನ್ನು ಅಡ್ಡಗಟ್ಟಿ ನಿಂತು -

'ಸತ್ಪುರುಷರ ನಡತೆಯನ್ನು ಬಿಟ್ಟು, ಭೂಚರ, ಖೇಚರ ಚಕ್ರವರ್ತಿಯಾದ ಹೇ ರಾವಣ, ನೀನು ಹೀಗೆ ಪರವಧುವಿಗೆ ಆಸೆ ಪಡುವುದು ನಿನ್ನ ಇಹಪರಗಳೆರಡಕ್ಕೂ ಹಾನಿಕಾರಕವಾಗುವುದು. ನಿನ್ನಂಥವರು ಈ ಬಗೆಯ ನಡವಳಿಕೆಯಲ್ಲಿ ತೊಡಗುವುದು ಸರಿಯೆ?' ಎಂದು ಮೂದಲಿಸಿ ಹತ್ತಿರ ಬರಲು, ಆ ದಾನವನು ಅರ್ಕಜಟಿಯ ಗೆಳೆತನಕ್ಕಾಗಿ ಅವನ ಮಗನಲ್ಲಿ ಕಾದಾಡದೆ ದಯದೋರಿ, ಅವನ ವಿದ್ಯಾಛೇದನ ಮಾಡಿ ಮುಂದ್ಯೆದಿದನು. ಆಕಾಶಮಾರ್ಗದಲ್ಲಿ ಆತ್ಮವಿದ್ಯಾಡಂಬರದಲ್ಲಿ ಇದ್ದ ರತ್ನಜಟಿಯು ರೆಕ್ಕೆ ಮುರಿದ ಹಕ್ಕಿಯಂತೆ ಭೂಮಿಗೆ ಬಿದ್ದನು.

ರಾವಣನ ಮನಸ್ಸು ಸಂಭೋಗ ಸುಖಕ್ಕೆ ಕಾತರಿಸಿತು. ಕಣ್ಣುಗಳು ಕೆರಳಿದವು. ಅಂಗಾಂಗಗಳು ಆಲಿಂಗಿಸಲು ಆತುರಪಟ್ಟವು. ಮದನ ರಾಗದ ಹುಚ್ಚಾಟಗಳು ತೋರಿದುವು. ಬಾಹುಗಳು ಆಲಿಂಗನಕ್ಕೆ

ಆಸೆ ಪಟ್ಟವು. ಇಂಥ ಚೇಷ್ಟೆಗಳಿಗೆ ರಾವಣನು ಮನಸ್ಸು ಕೊಟ್ಟಾನೆಂದರೆ ಕಾಮನು ಯಾರನ್ನು ದಂಡಿಸದೆ ಇದ್ದಾನು?

ಈ ಬಗೆಯ ಅವನ ಚೇಷ್ಟೆಗಳನ್ನು ಕಂಡು ಸೀತೆ ಸೈರಣೆಗೆಟ್ಟಳು. 'ನೀನು ನನ್ನನ್ನು ಮುಟ್ಟಿದರೆ ನಾಲಗೆಯನ್ನೇ ಕಿತ್ತು ಸಾಯುವೆ' ಎಂದು ನಿಶ್ಚಯವಾಗಿ ಹೇಳಲು, ಆತ ಸೀತೆಯ ಶೀಲದ ನಿಶ್ಚಲತೆಯನ್ನು ತಿಳಿಯದವನಾದ್ದರಿಂದ - ಅನಂತವೀರ್ಯ ಕೇವಲಿಗಳು ತನಗಿತ್ತ 'ಪರವಧೂವಿರತಿವ್ರತ ಪರಿಪಾಲನೆ' ತನ್ನಿಂದ ಸಾಧ್ಯವಾದುದನ್ನು ಮನಗಂಡು - ಈಕೆಯನ್ನು ಒಡಂಬಡಿಸುವುದು ಯಾವ ದೊಡ್ಡ ಕೆಲಸ ಎಂದು ಬಗೆದು ತನ್ನ ಮನಸ್ಸನ್ನು ತಾನೆ ಸಂತಯಿಸಿದನು.

ಸೀತೆ ಅನ್ನಾಹಾರಗಳನ್ನು ಸ್ವೀಕರಿಸದೆ, ' ಪತಿಯ ಕುಶಲ ವಾರ್ತೆ ಕೇಳಿದ್ದಲ್ಲದೆ ಉಣ್ಣೆನು' ಎಂದು ಪ್ರತಿಜ್ಞೆಯನ್ನು ಕೈಕೊಂಡಳು. ಪತಿವ್ರತೆಯರು ಈ ಬಗೆಯ ನಿಶ್ಚಯವನ್ನು ಕೈಗೊಳ್ಳುವುದು ಸೀತೆಯಂಥವರಲ್ಲದೆ ಇನ್ನಾರು?

ರಾವಣನು ಲಂಕೆಗೆ ಬಂದು 'ಗೀರ್ವಾಣ ರಮಣ' ಎಂಬ ತನ್ನ ಉದ್ಯಾನವನದಲ್ಲಿ, ಅಲ್ಲಿನ ರತ್ನಖಚಿತ ಅರಮನೆಯಲ್ಲಿ ಸೀತೆಯನ್ನಿರಿಸಿ ತಾನು ತನ್ನ ಅರಮನೆಯ ಕರುಮಾಡವನ್ನು ಹೊಕ್ಕನು. ಇತ್ತ ಖರ ದೂಷಣರ ಮರಣವಾರ್ತೆಯನ್ನು ಚಂದ್ರನಖಿ ಕೇಳಿ, ದುಃಖದಿಂದ ಅಳುತ್ತಿರುವುದನ್ನು ಕಂಡು ಆಕೆಗೆ ಸಂಸಾರದ ನಿಜಸ್ವರೂಪವನ್ನು ತಿಳಿಸಿ ಖರ ದೂಷಣರನ್ನು ಕೊಂದವರು ಯಾರೇ ಇರಲಿ ಅವರನ್ನು ಖಂಡಿತವಾಗಿಯೂ ಕೊಲ್ಲುವೆನೆಂದು ಸಂತೈಸಿ ಭಗವಾನ್ ಅರ್ಹಂತ ಭವನಗಳಲ್ಲಿ ಮಹಾಪೂಜೆಯನ್ನು ಮಾಡಿಸಿ ರಾಜಭವನಕ್ಕೆ ಬಂದು ಶಯ್ಯಾಗೃಹವನ್ನು ಹೊಕ್ಕನು.

ಖರದೂಷಣರನ್ನು ಕೊಂದವರನ್ನು ಕೊಲ್ಲದೆ ಇರಲಾರೆನೆಂಬ ರಾವಣನ ಮಾತು ಸುಳ್ಳಾಯ್ತು. ಅದನ್ನು ಬದಿಗೊತ್ತಿ, ಇದೀಗ ಸೀತೆಯ ವ್ಯಾಮೋಹದಿಂದ ಅವಳನ್ನು ಹೇಗೆ ವಶಪಡಿಸಿಕೊಳ್ಳುವುದೆಂದು ಸಾಧಿಸಲು ಯಾವ ಉಪಾಯ ಕೈಕೊಳ್ಳಬೇಕು, ತನ್ನ ಕಾಮನೆಯನ್ನು ಹೇಗೆ ತೀರಿಸಬೇಕೆಂಬ ವ್ಯಥೆಯಿಂದ ಹಂಬಲಿಸುತ್ತಾ ಆತ ಭ್ರಮಿಷ್ಟನಂತಿದ್ದನು. ರಾವಣನಿಗೆ ಇತರ ಯಾವುದೇ ಚಿಂತೆ, ಹಂಬಲ ಮನಸ್ಸಿನಲ್ಲಿ ಮೂಡಲಿಲ್ಲ. ಬೇರಾವುದೇ ಸ್ಪರ್ಶ, ಸೌಂದರ್ಯ, ಪರಿಮಳ - ಇತರರೊಡನೆ ಮಾತುಕತೆ ಇಲ್ಲದೆ ಆತ ಕಾಮ ಬಾಣಾಘಾತದಿಂದ, ಸೀತೆಯ ಚಿಂತೆಯನ್ನು ಮಾಡುತ್ತ ಕೇವಲ 'ಮರದ ಮನುಷ್ಯ' ನಂತೆ ಕಂಡನು.

ಚಿಂತಾಕ್ರಾಂತನಾದ ಗಂಡನನ್ನು ಮಂಡೋದರಿ ನೋಡಿದಳು. 'ಖರನಿಗೊದಗಿದ ಮರಣದಿಂದ ದುಃಖಿತನಾದನೆ? ಹೆಂಗಸರಂತೆ ಯಾವಾಗ ನೋಡಿದರೂ ಒಂದನ್ನೇ ಚಿಂತಿಸುತ್ತಾ ಇದ್ದರೆ, ಅದು ಪುರುಷಗುಣಕ್ಕೆ ಸೋಲು' ಎಂದು ತಿಳಿದುಕೊಂಡಳು ಆಕೆ. ತನ್ನ ಗಂಡ 'ಜಾನಕಿ ವಿರಹ' ವೆಂಬ ಬೆಂಕಿಯಿಂದ ಹೊತ್ತುತಿದ್ದಾನೆಂದು ಆಕೆಗೆ ಹೇಗೆ ತಿಳಿದೀತು?

'ಮನಸ್ಸಿನ ಚಿಂತೆಗೆ ಅಂಥದ್ದೇನೂ ಕಾರಣವಲ್ಲ. ಅದನ್ನು ತಿಳಿದುಕೊಳ್ಳಲು ನಿನಗೆ ಸಾಧ್ಯವಿಲ್ಲ' ಎಂದು ಹೇಳಿ ರಾವಣ ಸುಮ್ಮನಾದ. ಅವನ ಮನಸ್ಸು ಬೆಂಡಾಯ್ತು. ಅವನು ಮಾತಾಡದೆ ಇರಲು,

ಅವನ ಮನಸ್ಸನ್ನು ತಿಳಿವ ತವಕದಿಂದ ಮಂಡೋದರಿ ಮತ್ತೆ ಕೇಳಿದಳು "ಏನು ಕಾರಣ ನಿಮಗ ಸ್ಥಿತಿ" ರಾವಣ ಉತ್ತರ ಕೊಡದೆ ಲಜ್ಜೆಯಿಂದ ಮುಖ ಬಾಡಿಸಿಕೊಂಡ.

ಅವನು ಸುಮ್ಮನಿರಲು ಮಂಡೋದರಿ "ವೀರಕಚ್ಚೆಯನ್ನು ಹಾಕಿಕೊಂಡು ಬಿಲ್ಲ ಬಾಣಗಳೊಡನೆ ನಿನಗೆ ಚಿಂತೆಯನ್ನುಂಟು ಮಾಡುವ ವೀರರು ಭೂಮಿಯಲ್ಲಿಲ್ಲ! ದೇವತೆಗಳಿಲ್ಲ ವಿದ್ಯಾಧರರಿಲ್ಲ! ನಿನ್ನ ಪರಾಕ್ರಮ ಈ ಜಗತ್ತಿಗೆಲ್ಲ ತಿಳಿದಿದೆ. ಹಾಗಾದರೆ ನಿನ್ನ ಈ ಸ್ಥಿತಿಗ ಪುಷ್ಪಬಾಣಗಳನ್ನು ಕೈಯಲ್ಲಿ ಹಿಡಿದ ಕಾಮಚಕ್ರೇಶ್ವರನ ತುಂಟತನ ಕಾರಣವೆ? ಕಾಮನನ್ನು ಮೆಚ್ಚರ ನಿನ್ನ ಈ ಆಕಾರವನ್ನು ಕಡೆಗಣಿಸಿ ನಿನಗೆ ಸಂಕಟವನ್ನು ಒದಗಿಸಿದ ಸ್ತ್ರೀ, ಅರಗಿನ ಚಿತ್ರದ ಹೆಣ್ಣಾಗಿರಬೇಕು" ಎಂದು ಹೇಳಿದಳು. ಆಕೆಯ ಮುಖವನ್ನು ನೋಡಿ, ಈಕೆಗೆ ಎಲ್ಲವೂ ತಿಳಿದ ಹೋಯಿತೆಂದು 'ಮಂಡೋದರಿ ಇದು ಹೇಳುವ ಮಾತಲ್ಲ, ನನ್ನ ಈ ಸ್ಥಿತಿ ನಿನಗೆ ಮನವರಿಕೆಯಾದ ಮೇಲೆ - ಅದನ್ನು ಹೇಳದೆ ಇರಬಾರದು. ನಾನು ಹಿಂದೆ ಮುಂದೆ ನೋಡದೆ ಸೀತೆಯನ್ನು ತಂದೆನು ಪುಷ್ಪಬಾಣನು ತನ್ನ ಬಾಣಗಳಿಂದ ನನ್ನನ್ನು ಗಾಸಿ ಮಾಡಿದನು' ಎಂದನು.

ದಶಾಸ್ಯನ ದಶಾವಸ್ಥೆಗಳನ್ನು ಕಂಡು, ಮಂಡೋದರಿ 'ಕ್ಷಣಕಾಲದಲ್ಲಿ ಮಿಂಚುವ ಮಿಂಚಿನ ಪ್ರಕಾಶವೂ, ಹೆಣ್ಣಾದವರ ಸೌಂದರ್ಯವೂ ಕಂಡಕ್ಷಣಕ್ಕೆ ವಿಶೇಷವಾಗಿ ಕಾಣುವುದು ಸಹಜ. ಆದರೆ ಅದು ಚಿರಕಾಲ ಉಳಿಯದೆಂಬುದು ನಿಜ. ಶಾಶ್ವತವಲ್ಲದ ಆ ಸುಖಕ್ಕೆ ಸೋಲದವರು ಜಗತ್ತಿನಲ್ಲಿ ಇರುವರೆ?' ಎಂದು ಸಂತೋಷ ಪಡುತ್ತ 'ಸೀತೆಯನ್ನು ಒಡಂಬಡಿಸಲು ನಾನೇ ಸಾಕು ಎನ್ನುತ್ತ ಅಂತಃಪುರದ ಸ್ತ್ರೀಯರನ್ನೆಲ್ಲ ಕೂಡಿಸಿಕೊಂಡು ಸೀತೆಯ ಸಮೀಪಕ್ಕೆ ಬಂದು ಕುಳಿತುಕೊಂಡು ಜಾನಕಿಯನ್ನು ನೋಡಿ -

'ಬ್ರಹ್ಮನು ನಿನಗೆ ಸರಿಜೋಡಿಯಲ್ಲದ ರಾಘವನಿಗೆ ಕೊಟ್ಟಿದ್ದನ್ನು ಕಂಡು ಸೈರಿಸದೆ, ಕಾಮಚಕ್ರೇಶ್ವರನು ನಿನ್ನನ್ನು ದಶಕಂಠನಿಗೆ ಕೊಟ್ಟನು. ಏಕೆಂದರೆ ರಾವಣನಿಗೆ ನೀನು ಅನುರೂಪಳು. ಆದ್ದರಿಂದ ಅವನನ್ನು ಕೂಡಿ ಸುಖವಾಗಿ ಅರಸಿಯ ಪಟ್ಟವನ್ನು ಪಡೆದು ಇಬ್ಬರೂ ಲಂಕೆಯನ್ನು ಆಳಿರಿ"

''ಈ ನವ ಯೌವ್ವನವನ್ನೂ, ಕಣ್ಣುಗಳಿಗೆ ಆನಂದವನ್ನುಂಟು ಮಾಡುವ ರೂಪಿನ, ದೇಹಕಾಂತಿಯನ್ನುಳ್ಳ ಮೇನಕೆಯನ್ನು ಕಣ್ಣೆತ್ತಿಯೂ ನೋಡದ ರಾವಣನು ನಿನ್ನ ಕೈವಶನಾದನು ಎಂದರೆ ಜಾನಕೀ, ನಿನ್ನಂತಹ ಸ್ತ್ರೀಯರು ಯಾರಿದ್ದಾರೆ? ವಿದ್ಯಾಧರ ಸ್ತ್ರೀಯರಿಂದ ಸೇವೆ ಮಾಡಿಸಿಕೋ, ಆಜ್ಞೆ ಮಾಡು, ಭರತ ತ್ರಿಖಂಡದಲ್ಲಿ ನಿನ್ನ ಆಜ್ಞೆಗೆ ತಲೆಬಾಗದವರು ಯಾರೂ ಇಲ್ಲ! ಖೇಚರೇಂದ್ರನಾದ ರಾವಣನ ವಕ್ಷದಲ್ಲಿ ಲಕ್ಷ್ಮಿಯಂತೆ ವಾಸಿಸು. ಆತನ ತೋಳು ಎಂಬ ಹಾಸಿಗೆಯಲ್ಲಿ ನಿತ್ಯವೂ ಹೊಸತನವನ್ನು ಕಾಣು. ಇಂಥ ಪ್ರೀತಿಯನ್ನು ಏಕೆ ಬಂಜೆಯನ್ನಾಗಿ ಮಾಡುತ್ತಿ?'' ಎಂದು ಹೇಳಲು, ಜಾನಕಿ ಮನಸ್ಸಿನಲ್ಲೇ ಮಂಡೋದರಿಯ ಮೇಲೆ ಸಿಟ್ಟಾಗಿ, ''ಇದು ಬುದ್ಧಿ ಭ್ರಾಂತರಾದವರ ಹರಟೆಯ ಮಾತು! ಕುಲವಧುಗಳ ಮಾತಲ್ಲ. ನಿಮ್ಮಂಥವರು

ವಂಶದ ಹಾನಿಗೂ ಹೆದರದೆ ಹೀಗೆ ಮಾತಾಡಲಾರರು. ನನ್ನ ರಮಣ, ರಾಮಚಂದ್ರ ಇಂಥ ಮಾತುಗಳಿಂದ ಹೊರಗೆ!'' ಎಂದು ಕೋಪದಿಂದ ಹೇಳಿದಳು.

ಚಂದ್ರಹಾಸವನ್ನು ಹಿರಿಯುತ್ತ ಅಲ್ಲಿಗೆ, ದಿವ್ಯಗಂಧವನ್ನು ಲೇಪಿಸಿಕೊಂಡು, ಮಿಂಚಿನ ಪ್ರಕಾಶದಂತೆ ತೊಟ್ಟ ಆಭರಣವು ಹೊಳೆಯುತ್ತಿರಲು, ಸೌಂದರ್ಯದಲ್ಲಿ ಇಂದ್ರನಿಗೂ ನೂರು ಪಾಲು ಹೆಚ್ಚು ಎಂಬಂತೆ ಜನಕಸುತೆಯನ್ನು ನೋಡುವ ಕಾತರದ ಮನಸ್ಸಿನ ರಾವಣನು ಅಲ್ಲಿಗೆ ಬಂದನು.

ಹರಿಯುವ ನೀರಿನಲ್ಲಿ ಕಾಣುವ ನೆರಳಿನಂತೆ ರಾವಣ ತನ್ನನ್ನು ನೋಡಿ ಜಾನಕಿ ನಡುಗಲಿ ಎಂದು ಬಯಸಿ, ಅಲ್ಲಿದ್ದ ಅಂತಃಪುರದ ಸ್ತ್ರೀಯರನ್ನು ಕಣ್ ಸನ್ನೆಯಿಂದ ತೊಲಗಿಸಿ, ಅನಂತರ ಜಾನಕಿಯತ್ತ ಕಣ್ಣೋಟವನ್ನು ಹರಿಸಿ "ಆನೆಯ ಮೇಲೆ, ಬೆಳ್ಗೊಡೆಯ ತಂಪಾದ ನೆರಳಲ್ಲಿ ಇದ್ದು ಅಂತಃಪುರದ ಸ್ತ್ರೀಯರು ನಿನ್ನ ಆಜ್ಞೆಗೆ ಕಾಯುತ್ತಿರಲು, ಅದಕ್ಕೆ ಸಂತೋಷಪಡುವುದನ್ನು ಬಿಟ್ಟು, ಹೀಗೆ ವೈರಾಗ್ಯದಿಂದ ಇರುವೆಯಲ್ಲ?

"ಕುಲನದಿಗಳನ್ನು, ಕುಲಾದ್ರಿಶಿಖರಗಳ ದಿವ್ಯ ಸರೋವರಗಳನ್ನು, ಮಲಯ ಪರ್ವತದ ಸಾನು ವನಗಳನ್ನು, ಲವಣ ಸಮುದ್ರ, ವಜ್ರವೇದಿಕೆಯ ವೈಭವ, ಕಣ್ಣಿಗೆ ಹಬ್ಬವನ್ನುಂಟು ಮಾಡುವ ಪುಷ್ಪಕ ವಿಮಾನ ಯಾನವನ್ನು ನನ್ನ ಜತೆಗೂಡಿ ಮಾಡುವ ಸುಖವನ್ನು ಅನುಭವಿಸು, ಜಾನಕಿ!

"ನನ್ನೊಡನೆ ಹೋರಾಡಿ ಉದುರಿದ ಇಂದ್ರ ಸಿಂಧುರದ ತಂಪಾದ ಪಲ್ಲಂಕದಲ್ಲಿ ಮೊದಲು ಬ್ರಹ್ಮನು, ಹಂಸವನ್ನು ಕೊಂದು ಅದರ ತುಪ್ಪುಳಗಳಿಂದ ದಿಕ್ಪಾಲಕರು ಸಿದ್ಧಪಡಿಸಿದ ಬಟ್ಟೆಯ ಸುಖಾಸನದಲ್ಲಿ ಮಲಗಿ ನಿದ್ರಿಸುತ್ತ ದೇವತಾಸ್ತ್ರೀಯರು ಹಾಡುವ ಮಂಗಲಗೀತವನ್ನು ಆಲಿಸು.

"ಅಸಿರತ್ನ, ಚಕ್ರರತ್ನ, ಅಸಂಖ್ಯ ವಿದ್ಯೆಗಳನ್ನು ಕರಗತ ಮಾಡಿದ ನಾನು ದಿಕ್ಪಾಲಕರ ಎದೆಯನ್ನು ನಡುಗಿಸಿದೆನು; ಅವರನ್ನು ಕಟ್ಟಿ ಹಾಕಿದೆನು. ದೇವೇಂದ್ರನನ್ನು ಸುಲಭದಲ್ಲಿ ಸೋಲಿಸಿದೆನು. ಹೆಚ್ಚೇಕೆ, ಕೈಲಾಸ ಪರ್ವತವನ್ನು, ದಕ್ಷಿಣ ಭರತ ಭೂಮಿಯನ್ನು ವಶಪಡಿಸಿಕೊಂಡೆನು. ಇಂಥ ನನ್ನನ್ನು ಮನುಷ್ಯ ಮಾತ್ರದವರು ಸೋಲಿಸುವರೆ?" ಎಂದು ಕೊಚ್ಚಿಕೊಂಡನು. ಆದರೆ ಅದು ಆಕಾಶಕ್ಕೆ ಮಸಿ ಹಚ್ಚಲು ಪ್ರಯತ್ನಿಸಿದಂತೆ ವಿಫಲವಾಯ್ತು. ದುರಾತ್ಮನಾದ ರಾವಣನ ಕೆಟ್ಟ ಮಾತುಗಳಿಗೆ ಜಾನಕಿ ಕೋಪಿಸಿಕೊಂಡಳು. ಆದರೆ ಅದನ್ನು ವ್ಯಕ್ತಪಡಿಸದೆ ಸೀತೆ –

"ಎಂದೆಗೂ ಪಾಪಕ್ಕೂ ಅಂಜದೆ ಹೀಗೆ ಕ್ರಮತಪ್ಪಿ, ಅಂತರಂಗದಲ್ಲಿ ಒಂದಿಷ್ಟೂ ಬೆದರದೆ ಇವನ್ನೆಲ್ಲ ಹೇಳಬಹುದೆ? ಛಿ! ಪರದಾರ ವಿಷಯವನ್ನು, ಅನ್ಯ ಶಯನಸ್ಥಾನದ ಕುರಿತು, ಅನ್ಯರು ಮಿಂದ ನೀರನ್ನು ಬಳಸುವ ಚಾಳಿ, ಅನ್ಯರು ಮುಡಿದ ಹೂ, ಅನ್ಯರು ಉಪಯೋಗಿಸಿದ ಅಂಗರಾಗಾದಿಗಳೂ, ಅನ್ಯರ ಬಾಯಿತಂಬುಲ ಇವು ಅಸ್ಪೃಶ್ಯಗಳಲ್ಲವೆ?

"ಗುಣಹಾನಿಯಿಂದ ಅಧೋಗತಿ, ಗುಣದಿಂದ ಸ್ವರ್ಗ, ಮೋಕ್ಷ ಸುಖ ಎಂಬಾಗ -ಗುಣ ಹೀನನ ಸಿರಿಗಿಂತ ಗುಣಿಗಳ ಬಡತನವೇ ಯಾವಾಗಲೂ ಲೇಸಲ್ಲವೇ?

"ಕಡಲು ತಳದವರೆಗೆ ಆರಿದರೂ, ತುಂಬಿ ತುಳುಕಿದರೂ, ತ್ರಿಕೂಟಾಚಲವನ್ನೇ ಸೂರ್ಯಹಾಸದಿಂದ ಇರಿದು ಅಳ್ಳಾಡಿಸಿದರೂ, ಏಕಾದಶಾಕ್ಷೋಹಿಣೀ ಸೇನೆಯೊಡನೆ ಬಂದ ದುಷ್ಟರನ್ನು ರಾಮಾನುಜನಾದ ಲಕ್ಷ್ಮಣನು ಏಕಾಂಗಿಯಾಗಿ ಸೋಲಿಸಲಿಲ್ಲವೆ?

"ಯುದ್ಧದ ಬಯಕೆ ಮಸಗಲು, ನನ್ನ ಪತಿಯಿಂದ ನನ್ನನ್ನಗಲಿಸಿ ಮೋಸದಿಂದ ತಂದೆ, ದಶಕಂಠಾ, ಅಕಾಲದಲ್ಲಿ ದ್ವೇಷದಿಂದ ಗೈದ ಕೃತ್ಯ ಸಂಜೆಯ ಮುಗಿಲುಗಳಂತೆ ಲಯಕಾಲವನ್ನು ತರಲಾರವೆ?" ಎಂದು ಮರುಮಾತಿಗೆ ಎಡೆಯಿಲ್ಲದಂತೆ ಸೀತೆ ಹೇಳಲು - ಅದಕ್ಕೆ ಉತ್ತರ ಕೊಡುವುದಿರಲಿ, ಕೋಪಿಸುವುದಿರಲಿ, ರಾವಣನಿಗೆ ಒಲವು ಹತ್ತು ಪಟ್ಟು ಹೆಚ್ಚಾಯಿತು. ಅಪ್ರಾಪ್ತಿಯಿಂದ ಮೋಹ ಹೆಚ್ಚು ಆವರಿಸುತ್ತದೆ. ಅದೂ ವಿಷಯ ಸುಖ ಸಂಬಂಧದಲ್ಲಿ, ಇದೇನೂ ಆಶ್ಚರ್ಯವಲ್ಲ!

ನಯನೀತಿಯಿಂದ ಈ ಹೆಣ್ಣನ್ನು ತಾನು ವಶಪಡಿಸಿಕೊಳ್ಳಲಾರೆ ಎಂದು ರಾವಣನು ಭಯಂಕರವಾದ ವಿಕುರ್ವಣಾ ವಿದ್ಯೆಯನ್ನು ತೋರ್ಪಡಿಸಲು ಮುಂದಾದನು. ಅನುಕೂಲವಾಯಿತೆನ್ನುವಂತೆ ಸೂರ್ಯನು ಮುಳುಗಲು, ಬಾತು ಹೋದ ಹೆಣಗಳ ರೂಪ ತಾಳಿ, ಭೂತಗಣಗಳು ಕುಣಿದಾಡುವಂತೆ, ಕ್ರೂರಮೃಗಗಳು ಮೈಮೇಲೆ ಬೀಳುವಂತೆ, ಗರ್ಜಿಸಿ ನುಂಗಲು ಮುಂದುವರಿದಂತೆ, ಭೋರನೆ ರಕ್ತದ ಮಳೆಯೇ ಸುರಿವಂತೆ, ಸಿಡಿಲು ಹೊಡೆದಂತೆ, ಸಮುದ್ರವೇ ಮೇರೆ ತಪ್ಪಿ ಬಂದೆರಗುವಂತೆ, ರಾವಣನ ವಿಕುರ್ವಣಮಾಯೆ ವಿಜೃಂಭಿಸಿತು.

ಮನಸ್ಸಿನಲ್ಲಿ ಜನಪಾದವೂ, ನಾಲಗೆಯಲ್ಲಿ ಪಂಚಪದವೂ ಸದಾ ಉಚ್ಚರಿಸಲ್ಪಡುತ್ತಿರಲು, ರತ್ನದ ದೀಪವು ಪ್ರಚಂಡವಾದ ಬಿರುಗಾಳಿಯನ್ನು ಲಕ್ಷ್ಯಕ್ಕೆ ತಾರದಿರುವಂತೆ ಸೀತೆ ಯಾವುದನ್ನೂ ಲೆಕ್ಕಿಸದೆ ಶಾಂತವಾಗಿದ್ದಳು.

ಇತ್ತ ಕನ್ಯಾ ಮಾಡದ ಮರೆಯಲ್ಲಿದ್ದು ಸೀತೆ ಶೋಕಿಸುತ್ತಿರುವುದನ್ನು ಕಂಡ ವಿಭೀಷಣನು ಪುರುಷ ವಿರಹದಿಂದ ಪ್ರಲಾಪಿಸುವುದು ಯಾರೆಂದು ಕೇಳಲು ಆ ಮಾತನ್ನು ಕೇಳಿ ಸೀತೆ -

"ತನಗಿದಿರಾದ ಮಾರ್ಬಲವನ್ನು ಒಬ್ಬನೇ ಒಬ್ಬ ಲಕ್ಷ್ಮಣನು ಕಾದಿ ಸೋಲಿಸಿದನು. ಯುದ್ಧ ಕೌಶಲವನ್ನು ನೋಡಲು ಹೋದ ರಾಮನನ್ನು ವಂಚಿಸಿ ದಶಕಂಠನು ನನ್ನನ್ನು ಎಳೆತಂದನು. ನಾನು ಜನಕನ ಮಗಳು ಸೀತೆ - ಪತಿ ವಿಯೋಗದಿಂದ ಬೆಂಕಿಯಲ್ಲಿ ಬೆಂದು ಹೋಗುವವಳಿದ್ದೇನೆ" - ಎಂದಳು.

ವಿಭೀಷಣನಿಗೆ ನೈಮಿತ್ತಿಕರ ಆದೇಶವು ನೆನಪಿಗೆ ಬಂತು. ಆತ ಚಕಿತ ಮನಸ್ಸಿನವನಾಗಿ,

"ಪರಸ್ತ್ರೀಯರನ್ನು, ಪರರ ಗೃಹಿಕೆಗಳನ್ನು ತಿಳಿದುಕೊಳ್ಳಲಾರದ ಪುರುಷರಿಂದ ಪುರುಷ ಧರ್ಮವೇ ನಾಶವಾಗುತ್ತದೆ. ಜಗತ್ತು ಅಂಥವರನ್ನು ಹಳಿಯುತ್ತದೆ. ಆದರೆ ಈ ದುರ್ನಡತೆಯನ್ನು

ಪರಿಹರಿಸುವವರು ಯಾರು?'' ಎಂದು ಮಾತಾಡಿಕೊಂಡಾಗ ಮಾರೀಚನೂ ಇದನ್ನೇ ಎತ್ತಿ ಹೇಳಲು -

''ಸೀತಾ ರತ್ನಕ್ಕೆ ನಾನಿದ್ದೇನೆ! ನಾನಲ್ಲದೆ ನನ್ನನ್ನು ಮೀರುವವರು ಯಾರು? ನನ್ನ ಭುಜ ಬಲಕ್ಕೆ ಯಾರು ಸಮಾನರು?'' ಎಂದು ಅವಿಚಾರಿಯಾದ ರಾವಣನು ಅವರನ್ನು ನಿಂದಿಸಿ ನುಡಿದನು.

ಹೀಗೆಂದು ಸೀತಾದೇವಿಯ ಸೌಂದರ್ಯವೆಂಬ ಮದಿರೆಗೆ ಹುಚ್ಚನಾದ ರಾವಣ ಅವಳನ್ನು ಪ್ರಮದವನದಲ್ಲಿ ಬಂಧನದಲ್ಲಿಟ್ಟು ವಿಕಲನಂತಿದ್ದನು.

ಕುಲ ಮದವೊಂದು, ರೂಪ ಮದವು ಮತ್ತೊಂದು, ವಯಸ್ಸಿನ ಮದ, ತನ್ನ ಪರಾಕ್ರಮ ಮದ ಇನ್ನೊಂದು. ಜಾತಿಯ ಮದ, ಜ್ಞಾನದ ಮದ, ದೇವತೆಗಳ ಬಲವಿದೆಯೆಂಬ ಮದ - ಹೀಗೆ ಇವೆಲ್ಲ ತನ್ನೊಬ್ಬನಲ್ಲಿಯೇ ಇದೆಯೆಂಬ ಹೆಮ್ಮೆ ತಲೆಗೇರಿದಾಗ ವಿಷಯ ಸುಖವನ್ನೇ ಬಯಸುವವರು ಭವಿಷ್ಯವನ್ನು ಚಿಂತಿಸುವರೆ?

◆

೫. ರಾವಣ ದಿಗ್ವಿಜಯ

ವಾನರ ಚಿಹ್ನನಾದ ಸುಗ್ರೀವನು ತನಗೆ ಒದಗಿ ಬಂದ ಸೋಲನ್ನು ಖರದೂಷಣರಿಂದ ಪರಿಹರಿಸಿಕೊಳ್ಳುವೆನು ಎಂದು ಬರುತ್ತಿರಲು ಮುಂದೆ ಕಾಡಿನಲ್ಲಿ ಭಯಂಕರವಾದೊಂದು ರಣಮಂಡಲವನ್ನು ಕಂಡನು.

ಚತುರಂಗ ಸೇನೆಯನ್ನು ಯಮನು ತಾನು ಉಂಡು ಕಾರಿದನು ಎಂಬಂತೆ ಕಾಣುವ ಆ ರಣರಂಗವನ್ನು ಸತಿವಿಯೋಗದಿಂದ ದುಃಖಿತನಾದ ಸುಗ್ರೀವನು ಕಂಡೊಡನೆ ಸನಿಯದಲ್ಲಿದ್ದ ಒಬ್ಬನೊಡನೆ ಇದೇನೆಂದು ಕೇಳಲು "ಬಲ, ಅಚ್ಯುತರು, ಶಂಬುಕನನ್ನು ಕೊಂದು ಸೂರ್ಯ ಹಾಸ ಖಡ್ಗವನ್ನು ಪಡೆದರು. ಚಂದ್ರನಖಿಯ ಗೋಳಾಟವನ್ನು ಕಂಡು ಕೇಳಿ ಖೇಚರ ಬಲವನ್ನು ಒಂದೇ ಬಾರಿಗೆ ಕೊಂದು ಕಳೆದರು. ಖರದೂಷಣರನ್ನು ಕೊಂದು, ವಿರಾಧಿತನಿಗೆ ಅವನ ರಾಜ್ಯವನ್ನು ಬಿಡಿಸಿಕೊಟ್ಟರು. ಅವರ ಪರಾಕ್ರಮಕ್ಕೆ ಜೋಡಿ ಇಲ್ಲ. ಅವರ ಗೌರವ ಪುರುಷರು, ಪಾತಾಳ ಲಂಕೆಯಲ್ಲಿ ಬಂದಿಳಿದಿದ್ದಾರೆ" ಎಂದರು.

ಸುಗ್ರೀವನು ಆ ಮಾತುಗಳನ್ನೆಲ್ಲ ಗ್ರಹಿಸಿದನು. ಮಹಾನುಭಾವರಾದ ಈ ರಾಮಲಕ್ಷ್ಮಣ ರಿಂದ ತನ್ನ ಹಗೆಯನ್ನು ಪರಿಹರಿಸಿಕೊಳ್ಳುವೆನು ಎಂದು ತನ್ನ ಪಟ್ಟಣವನ್ನು ಹೊಗುವ ಕಾಲದಲ್ಲಿ, ಲಕ್ಷ್ಮಣನು 'ಈತನಾರು?' ಎಂದು ವಿರಾಧಿತನಲ್ಲಿ ಪ್ರಶ್ನಿಸಿದಾಗ ಆತ 'ಈತನೇ ಕಿಷ್ಕಿಂಧೆಯ ಅಧಿನಾಥನೂ, ಕಪಿಧ್ವಜನೂ, ಕಪಿಕುಲಧ್ವಜನೂ, ಸೂರ್ಯಂಜಯಪ್ರಿಯನ ಮಗನೂ ವಾಲಿಭಟ್ಟಾರಕರ ನೇರ ಕಿರಿಯ ತಮ್ಮನೂ, ಅಂಗದನ ಜನಕನೂ ಆದ ಸುಗ್ರೀವನು ನಿಮ್ಮಲ್ಲಿ ಸಖ್ಯ ಬೆಳೆಸಲು ಬಂದನು" ಎಂದು ಬಿನ್ನವಿಸಲು –

ಸುಗ್ರೀವನು ಬಂದು "ರಾಮಲಕ್ಷ್ಮಣರ ಚರಣ ಕಮಲಗಳಿಗೆರಗುವಂಥ ಪುಣ್ಯವು ನನಗೆ ದೊರೆಯಿತು", ಎಂದು ನಿಯಮಿತ ಆಸನದಲ್ಲಿ ಕುಳಿತಿರಲು ಉದಾತ್ತ ರಾಘವನು

'ನಿಮಗೆ ಕುಶಲವೆ?' ಎಂದು ಕೇಳಿದನು. ಸುಗ್ರೀವನು 'ಪರರಿಂದ ಅವಮಾನಿಸಲ್ಪಟ್ಟವರಿಗೆ ಕುಶಲವು ಎಂದಾದರೂ ಇರುವುದೆ?' ಎಂದು ನೊಂದು ನುಡಿಯಲು. ರಾಮನು 'ಏನು ಕಾರಣದಿಂದ ಬಂದಿರಿ' ಎಂದು ಕೇಳಲು ಜಾಂಬವನು –

ಸುಗ್ರೀವನ ಪತ್ನಿಯಾದ ಸುತಾರೆಯನ್ನು ಅಪಹರಿಸಲು ವಾಲಿಯು ಸುಗ್ರೀವನ ರೂಪವನ್ನು ತಾಳಿ ಮೋಸದಿಂದ ಅಂತಃಪುರವನ್ನು ಹೊಕ್ಕನು. ಇಬ್ಬರಿಗೂ ರೂಪ ಸಾಮ್ಯವಿದ್ದರೂ, ವಾಲಿಯ ಕೆಟ್ಟ ಕೆಲಸವನ್ನು ಸುತಾರೆ ತಿಳಿಯದೆ ಹೋದಳು. ಆಕೆಯ ಪುಣ್ಯವನ್ನು ಏನೆಂದು ಹೇಳೋಣ? ಆ ಸಮಯದಲ್ಲಿ ಉದ್ಯಾನದಲ್ಲಿದ್ದ ಸುಗ್ರೀವನು ತನ್ನರಮನೆಗೆ ಬರುತ್ತಿರಲು - ವಾಲಿಯ ತುಂಟತನವನ್ನು ಕಂಡು ಅವನೊಡನೆ ಕಾದಲು ಸಿದ್ಧನಾದನು. ಇಬ್ಬರೂ ಕಾದಲು ಅಣಿಯಾದರು. ಆದರೆ ನಿಜವಾದ ಸುಗ್ರೀವ ಯಾರು ಮೋಸದ ಸುಗ್ರೀವ ಯಾರು ಎಂದು ತಿಳಿಯದೆ ಸೇನೆಯ ಮುಖ್ಯಸ್ಥರು ಪರಸ್ಪರ ಹೋರಾಡಿದರು. ಹನುಮಂತನು ಮಾಯಾ ಸುಗ್ರೀವನನ್ನು ಹೊಡೆಯುತ್ತೇನೆಂದು ಭ್ರಮಿಸಿ ನಿಜದ ಸುಗ್ರೀವನೊಡನೆ ಹೊಡೆದಾಡಿ ಅಪವಾದಕ್ಕೆ ಒಳಗಾದನು ಮತ್ತು ರಣರಂಗವನ್ನೇ ತ್ಯಜಿಸಿದನು. ಹೀಗೆ ಹೋಗುತ್ತಿರುವಾಗಲೂ ನಿಮ್ಮ ಪರಾಕ್ರಮದ ಖ್ಯಾತಿಯನ್ನೂ, ಕುಂದಿಲ್ಲದ ಯುದ್ಧ ಚಮತ್ಕಾರವನ್ನೂ ಕೇಳಿ ಹೆಂಡತಿಯನ್ನು ಕಳಕೊಂಡ ವಿರಹದಿಂದ ನಿಮ್ಮ ಪಾದವೆ ಗತಿಯೆಂದು ನಿಮ್ಮೆಡೆಗೆ ಬಂದೆನು - ಎಂದು ಬಿನ್ನವಿಸಲು - ರಾಮನು

"ಈತ ನಮ್ಮವನು. ಇವನಿಗೊದಗಿದ ದುಃಖವನ್ನು ನಿವಾರಿಸುವುದು ನಮ್ಮ ಧರ್ಮ" ಎಂದು ಆ ಕೆಲಸವನ್ನು ತಮ್ಮನಿಗೆ ನೇಮಿಸಿ ನೆರವನ್ನು ಕೋರಿದವರಿಗೆ ಅದನ್ನು ಕೊಡುವುದು ಕರ್ತವ್ಯ" ಎಂದನು.

ರಾಮಚಂದ್ರನ ಅನುಗ್ರಹಕ್ಕೆ ಪಾತ್ರನಾಗಿ ವಿರಾಧಿತನ ಮುಖವನ್ನೂ ನೋಡಿ, ವಿರಹದಿಂದ ನೊಂದವರಂತೆ ರಾಮನು ಹೇಳಿದ ವಿಷಯ ಏನು ಎಂದು ವಿಚಾರಿಸಲು ವಿರಾಧಿತನು "ಕಾಡಿನಲ್ಲಿ ರಾಮನ ಹೆಂಡತಿಯಾದ ಸೀತೆಯ ಅಪಹರಣವು ವಂಚನೆಯಿಂದ ನಡೆಯಿತು" ಎಂದೂ ಆ ಸಮಯದಲ್ಲಿ ಘನ ಘೋರ ಯುದ್ಧವೂ ನಡೆಯಿತು ಎಂದೂ, ಖರದೂಷಣರು ಜನಾರ್ದನನೊಡನೆ ಕಾದಾಡಿ ಸತ್ತರೆಂದೂ ವಿವರಿಸಿದನು.

ಸೀತೆಯನ್ನು ಯಾರು ಕೊಂಡೊಯ್ದರು ಎಂದು ತಿಳಿಯದೆ ರಾಮನಿದ್ದ. ಯಾರು ಕೊಂಡೊಯ್ದರು ಎಂಬುದು ತಿಳಿದಿದ್ದರೆ, ಅಂಥವನ ಕರುಳಿನಿಂದ ವೀರಶ್ರೀಗೆ ತೋರಣ ಕಟ್ಟದೆ ಇರುತ್ತಿದ್ದನೆ? ಎನಲು ಸುಗ್ರೀವನು ಕೂಡಲೇ ಇಂದಿನಿಂದ ಏಳು ದಿನಗಳ ಒಳಗೆ ದೇವಿಯ ಸುದ್ದಿಯನ್ನು ತರುವೆನು' ಎಂದು ಪ್ರತಿಜ್ಞೆ ಮಾಡಿ. ರಾಮನ ಮೆಚ್ಚುಗೆ ಗಳಿಸಿ, ನಿತ್ಯ ಪಯಣಿಸಿ ಬಲಾಚ್ಯುತರೂ ವಿರಾಧಿತನೂ ಕಿಷ್ಕಿಂಧೆಗೆ ಬಂದು ದೂತರನ್ನು ಅಟ್ಟಲು ಕೃತಕ ಸುಗ್ರೀವನು ಇದಿರು ಬರಲು - ರಾಮನು ನಕ್ಕು ಬತ್ತಳಿಕೆಯಿಂದ ಬಾಣವನ್ನು ತೆಗೆದು ಬಿಲ್ಲಿಗೆ ಜೋಡಿಸಿ ಕಿವಿವರೆಗೆಳೆದು ಬಿಡಲು, ಅಹಿತಬಲವೂ ಅವನ ಸಹಾಯಕರೂ ಧರಿಸಿದ್ದ ವಿಜಯ ಶ್ರೀಕಾಂತೆಯ ಪ್ರಾಣವಾಯುವನ್ನೇ ಸೆಳೆದಂತಾಗಿ ವಾನರ ಪತಾಕನಿಗೆ ಚಿಂತಾಜ್ವರವು ಹೆಚ್ಚಾಯಿತು. ಆಗ ಕಪಿಧ್ವಜನು -

'ಮಹಾಸ್ವಾಮಿಯು ಜತೆಗೆ ಬಂದು ನನ್ನನ್ನು ಪುನೀತನನ್ನಾಗಿ ಮಾಡಿ ನಿಮ್ಮ ಸೇವೆಯನ್ನು ಮಾಡುವ ಅವಕಾಶವನ್ನು ಒದಗಿಸಿಕೊಡಬೇಕು ಮತ್ತು ನಮ್ಮ ಕುಲವನ್ನೇ ತಮ್ಮ ಸೇವೆಗೆಂದು

ಕಾದಿಡಬೇಕು' ಎಂದು ಬಿನ್ನವಿಸಿ ಕನ್ಯಾವ್ರತದಲ್ಲಿದ್ದ ತನ್ನ ಹೆಣ್ಣು ಮಕ್ಕಳನ್ನು - ಮಹಾಸಾಗರಗಳಿಗೆ ಕುಲಪರ್ವತಗಳು ಸಣ್ಣ ಸಣ್ಣ ತೊರೆಗಳನ್ನು ಕೊಡುವಂತೆ ರಘುನಂದನನಿಗೆ ಪಾಣಿಗ್ರಹಣ ಮಾಡಿಸಿದನು. ಒಂದು ಕ್ಷಣ ಮಾತ್ರ ಬಾಲಕಿಯರನ್ನು ಸ್ಪರ್ಶಿಸಿ ಸಂತುಷ್ಟಿಪಡಿಸಿ ಅನಂತರ ಸೀತೆಯನ್ನು ನೆನೆದು ಚಂದ್ರಿಕೆಯನ್ನು ಸೇವಿಸಿದ ಚಕೋರಕ್ಕೆ ಹಿಮಕಣವು ಸೇರಿಕೆಯಾಗದಂತೆ ದೂರ ಮಾಡಿದನು.

ಸುಗ್ರೀವನು ಇತ್ತ ತನ್ನ ಪ್ರತಿಜ್ಞೆಯನ್ನು ನೆನೆದು ಬಲಾಚ್ಯುತರ ಮತ್ತು ಸೀತೆಯ ಸುದ್ದಿಯನ್ನು ಮುಂದಾಗಿ ಪ್ರಭಾಮಂಡಲನಿಗೆ ತಿಳಿಸಿ, ಸೀತೆಯ ಕುರಿತು ತಿಳಿಯಲು ಸಕಲವನ್ನು ಬಲ್ಲ ಜಾಣರನ್ನು ನೇಮಿಸಿ ಮೂಡುದಿಕ್ಕಿಗೆ ಕೆಲವು ಅನುಚರರನ್ನು ಕೂಡಿಕೊಂಡು ಮುಂದೆ ನಡೆದನು.

ಗದಾಯುಧ, ಹಲಾಯುಧರನ್ನು ಬೀಳ್ಕೊಂಡು ಮನೋವೇಗದಿಂದ ಹೋಗುತ್ತಿರಲು ಗಿರಿಶಿಖರದಲ್ಲಿ ರತ್ನ ಜಟಿಯನ್ನು ಕಂಡು ಆತನ ಹತ್ತಿರ ಬಂದು 'ನಿನಗೊದಗಿದ ದುಸ್ಥಿತಿಗೆ ಕಾರಣವೇನು?' ಎಂದು ಕೇಳಲು - ಅದನ್ನು ರತ್ನಜಟಿಯು ಸವಿಸ್ತಾರವಾಗಿ ವಿವರಿಸಿದನು. ವಾನರ ಚಿಹ್ನನು 'ನನ್ನ ಪ್ರತಿಜ್ಞೆ ಕೈಗೂಡಿತು' ಎಂದು ತೋಷಿಸಿ 'ಜಾನಕಿಯನ್ನು ದಶಕಂಠನು ಲಂಕೆಗೊಯ್ದನು ಎಂದು ಹೇಳಲು -

ಸೀತಾವಿರಹದ ಕತ್ತಲೆ ರಾಮನನ್ನು ಮುಸುಕಿತು. ಆ ಕತ್ತಲೆಯನ್ನು ಕಳೆಯಲು ರತ್ನದ ಬೆಳಕನ್ನು ತಂದಂತೆ ರತ್ನಜಟಿಯನ್ನು ತಂದು ಕಾಣಿಸಿದರು. ರತ್ನಜಟಿಯು ಕೈಮುಗಿದು -

ಕಾಮಾಂಧನಾದ ದಶಕಂಠನು ಈ ದಾರಿಯಲ್ಲೇ ಸೀತಾಮಾತೆಯನ್ನು ಕೊಂಡೊಯ್ದನು. "ಬಲವಂತರು, ಸಾಹಸಿಗಳು ತಡೆಯುವರು ಯಾರೂ ಇಲ್ಲವೆ? ಹಾ ಜನಕ, ಜನಕ ಹಾ ಲಕ್ಷ್ಮಣ ಲಕ್ಷ್ಮಣ, ಹಾ ರಾಮಾ ರಾಮಾ ಎಂದು ಬಸಿರನ್ನು ಬಡಿದುಕೊಳ್ಳುತ್ತ ಸೀತಾ ಮಾತೆ ಅಳುವುದನ್ನು ಕೇಳಿ ಹೋದೆನು. ಅವನೊಡನೆ ಹೋರಾಡಲು ಸಾಮರ್ಥ್ಯವುಂಟೆಂದು ಹೋರಾಡಿದೆ. ಆದರೆ ಅವನು ನನ್ನಲ್ಲಿ ಯುದ್ಧ ಮಾಡದೆ ನನ್ನ ವಿದ್ಯಾಚ್ಛೇದ ಮಾಡಿ ಸೀತೆಯನ್ನು ಲಂಕೆಗೊಯ್ದನು" ಎಂದುದನ್ನು ಕೇಳಿ ರಣಲಂಪಟನಾದ ಜನಾರ್ದನನು -

"ಕೀಳ್ಗಿಲಸದ ಸೇವಕಿಯನ್ನು ಭಯಪಡುವಂತೆ ಹೊಡೆಯಲು ಆಕೆ ಹೆದರಿದಂತೆ ಲಂಕಾನಗರವನ್ನೆ ಹೊಡೆದು ಈ ತ್ರಿಕೂಟಾಚಲವನ್ನೇ - ದಶಕಂಠನ ಕಂಠನಾಳವನ್ನೆ - ಮುರಿದು ಅದರಿಂದ ಒಸರುವ ಬಿಸಿನೆತ್ತರ ಸೇಕದಿಂದ ನನ್ನ ರಟ್ಟೆಗಳ ತೀಟೆಯನ್ನು ಕಳೆವೆನು. ತಪ್ಪಿದರೆ ನನ್ನ ಶೌರ್ಯಕ್ಕೆ ಕಳಂಕ" ಎಂದು ನಿರ್ಣಾಯಕವಾಗಿ ಹೇಳಿದನು.

ಜೈನಾಗಮ ಕೋವಿದನಾದ ಜಾಂಬೂನದನೆಂಬ ಕಪಿಧ್ವಜನೊಡನೆ ದಶಕಂಠನ ವಂಶ ವಿಚಾರವನ್ನು, ಲಂಕಾನಗರದ ವ್ಯಾಪ್ತಿಯ ವಿವರವನ್ನು ಉದಾತ್ತ ರಾಘವನು ವಿಚಾರಿಸಿದನು. ರಾವಣನು ಸಕಲ ವಿದ್ಯಾ ನಿಪುಣನು, ಈ ಪ್ರಪಂಚವನ್ನು ತನ್ನ ಪ್ರತಾಪದಿಂದ ಸಾಮಾನ್ಯರೂ ಕೊಂಡಾಡುವಂತೆ ಮಾಡುವ ಯೋಗ್ಯತಾವಂತನು. ಹಲವು ದ್ವೀಪಗಳು, ಕಣ್ಣಿನ ಕಾಣ್ಕೆಯನ್ನು ಸೆರೆಹಿಡಿದು ಕಿನ್ನರರೇ ಮೊದಲಾದವರ ವಾಸಸ್ಥಾನವಾದ ಎಂಟು ಮರುತ್ಕುಲ ನಿಲಯಗಳಿವೆ. ಅಲ್ಲಿ ಆ ದ್ವೀಪಗಳಲ್ಲಿ ಈತನದೇ ಅಧಿಕಾರ. ಆ ದ್ವೀಪಗಳಲ್ಲಿ ರಾಕ್ಷಸ ದ್ವೀಪವೆಂಬುದು ಏಳು ನೂರು

ಯೋಜನ ಉದ್ದವಾಗಿದೆ. ಅದರ ನಡುವಿನದು ತ್ರಿಕೂಟಾಚಲ. ಅದರ ತುದಿಯಲ್ಲಿ ಮುನ್ನೂರು ಯೋಜನ ವಿಸ್ತಾರದಲ್ಲಿ ಲಂಕಾನಗರ. ನಿರಾತಂಕವಾದ ಆ ಲಂಕೆಯಲ್ಲಿ ಸುಖವಾಗಿ ರಾಜ್ಯಭಾರ ಮಾಡಿಕೊಂಡಿರು' ಎಂದು ರಾಕ್ಷಸ ಕುಲಾಧಿಪನಾದ 'ಭೀಮ'ನೆಂಬವನು ಅವನನ್ನು ನೇಮಿಸಿದನು. ಜನ್ಮಾಂತರದ ಸ್ನೇಹದಿಂದ ರಥನೂಪುರ ಚಕ್ರವಾಳಪುರದ ರಾಜಕುಮಾರ ತೋಯದವಾಹನನು ತನ್ನ ಪಟ್ಟಣಕ್ಕೆ ಈತನನ್ನು ಕರೆದೊಯ್ದು ಲಂಕೆಯನ್ನು ಆಳುತ್ತಿರಲು ಕೆಲವು ಕಾಲಾನಂತರ ವೈರಾಗ್ಯಪರನಾಗಿ, ತನ್ನ ಹಿರಿಯ ಮಗನಾದ ಮಹಾರಾಕ್ಷಸನಿಗೆ ರಾಜ್ಯವನ್ನಿತ್ತು ದೀಕ್ಷೆಗೊಂಡು ಮೋಕ್ಷಕ್ಕೆ ಸೇರಿದನು. ಇತ್ತ ಆ ಸಂತಾನದಲ್ಲಿ ಅನೇಕರು ರಾಜಪಾಳುತ್ತಿರಲು ಪಾತಾಳ ಲಂಕೆಯ ಖೇಚರಪತಿಯಾದ ಸುಮಾಲಿ ಮತ್ತು ಪ್ರೀತಿಮತಿ ದಂಪತಿಗಳಿಗೆ ರತ್ನಶ್ರವನೆಂಬ ಮಗನಾದನು. ಆತನು ಅತ್ಯಂತ ಪ್ರಖ್ಯಾತನಾಗಿ ಪುಷ್ಪೋತ್ತರವೆಂಬ ಕಾಡಿನಲ್ಲಿ ತಪಸ್ಸು ಮಾಡಿ ಸಿದ್ಧ ಪರಮೇಷ್ಠಿಗಳಿಂದ ವಿದ್ಯೆಯನ್ನು ಪಡೆದು, ಕೌತುಕಮಂಗಳ ಪುರವನ್ನು ಆಳುವ ವ್ಯೋಮ ಭಾನು ಎಂಬ ಖೇಚರನು ತನ್ನ ಮಗಳು ಕೈಕಸಿ ಎಂಬ ಕನ್ಯಾರತ್ನವನ್ನು ಕೊಡಲು ಅಲ್ಲಿಯೇ ತನ್ನ ವಿದ್ಯಾಬಲದಿಂದ ಪುಷ್ಪೋತ್ತರವೆಂಬ ಪಟ್ಟಣವನ್ನು ನಿರ್ಮಿಸಿ, ಅಲ್ಲಿಗೆ ತನ್ನ ತಂದೆತಾಯಂದಿರನ್ನು ಬರಿಸಿ ಮದುವೆ ಮಾಡಿಕೊಂಡನು. ಕೈಕಸೆಗೆ ಗರ್ಭವು ಬೆಳೆಯಿತು.

ಭರತ ಮೊದಲಾದ ತ್ರಿಖಂಡ ಮಂಡಲವನ್ನು ರಕ್ಷಿಸುವ ದಕ್ಷನಾದವನೇ ಅವಳಿಗೆ ಹುಟ್ಟುವ ಮಗನು ಎಂದು ಆ ಪುರದ ಮೇಲೆ ನಿತ್ಯವೂ ಪುಷ್ಪ ವೃಷ್ಟಿಯಾಯಿತು. ನವಮಾಸಗಳು ಕಳೆದು ಕೈಕಸೆಯು ಮಗುವನ್ನು ಹೆತ್ತಳು. ಹೆತ್ತ ಹತ್ತನೆಯ ದಿನದಲ್ಲಿ ಭೀಮ ರಾಕ್ಷಸನು ಕೊಟ್ಟ ನವಮುಖ ರತ್ನಭೂಷಣದ ಮಾಣಿಕ್ಯದಲ್ಲಿ ಮಗುವಿನ ಮುಖವು ಪ್ರತಿಬಿಂಬಿಸಲು ಅವನಿಗೆ 'ದಶಮುಖ' ಎಂದು ಹೆಸರಿಟ್ಟು ಅನಂತರ, ಭಾನುಕರ್ಣ, ಚಂದ್ರನಖಿ, ವಿಭೀಷಣ ಎಂಬ ಮಕ್ಕಳನ್ನು ಅನುಕ್ರಮವಾಗಿ ಹೆತ್ತು ಅವರು ಬೆಳೆದು ಶೈಶವವನ್ನು ಕಳೆದು, ಅತ್ಯಾವಶ್ಯಕವಾದ ಮೂರು ಶಕ್ತಿಗಳು ಒಂದಾದಂತೆ ಮೂವರೂ ಅಖಿಲ ಶಾಸ್ತ್ರಗಳನ್ನು ಓದಿ ಪಾರಂಗತರಾಗಿ ಶೋಭಿಸುತ್ತಿದ್ದರು.

ಆಗ ಕಿವಿಗಳಿಗೆ ಇಂಪಾದ ಮಣಿ ಘಂಟಾನಿನಾದವನ್ನು ಕೇಳಿ, ಮಣಿರತ್ನ ಭೂಷಿತ ವಿಮಾನದಿಂದ ಹಸ್ತಾಭಿನಯವನ್ನು ಪ್ರದರ್ಶಿಸಿ, ಆಕಾಶದಲ್ಲಿ ಕಾಮನ ಬಿಲ್ಲನ್ನು ತೋರಿಸಿ, ತೊಟ್ಟ ಭೂಷಣಗಳ ಪ್ರಕಾಶವು ದಟ್ಟವಾಗಿ ಹಬ್ಬಿ, ಈತನೇ ದೇವತೆಗಳ ಒಡೆಯ, ಖೇಚರನಲ್ಲ ಎಂಬ ಭ್ರಮೆಯನ್ನು ಹುಟ್ಟಿಸಿ, ಒಬ್ಬ ಖಚರೇಂದ್ರನು ವಿಮಾನಾರೂಢನಾಗಿ ಪ್ರಯಾಣಿಸುತ್ತಿದ್ದನು.

ಆತನು ಕೆಳಗೆ ಕಾಣುವ ಭೂಮಿಯೆಲ್ಲ ಹುಲ್ಲಿಗೆ ಸಮಾನ ಎಂದು ಪರಿಭಾವಿಸಿ ಹೋಗುತ್ತಿದ್ದುದನ್ನು ಕಂಡು, ದಶಕಂಠನು ಆಕಾಶದತ್ತ ದೃಷ್ಟಿ ಹಾಯಿಸಿದನು. ತಾಯೊಡನೆ 'ಈತನಾರು?' ಎಂದು ಕೇಳಿದನು. ಕೈಕಸಿ, 'ಇವನು ನಮ್ಮಕ್ಕನ ಮಗನು, ವೈಶ್ರವಣ ಎಂಬುದು ಅವನ ಹೆಸರು. ಇಂದ್ರನೆಂಬ ವಿದ್ಯಾಧರ ಚಕ್ರವರ್ತಿ, ನಮ್ಮ ಹಿರಿಯ ಮುತ್ತಪ್ಪನಾದ ಮಾಲಿಯನ್ನು ಕೊಂದು ನಮ್ಮ ಕುಲದ್ದೇ ಆಗಿದ್ದ ಲಂಕೆಯನ್ನು ತಾನು ವಶಪಡಿಸಿಕೊಂಡು ಆಳುತ್ತಿದ್ದಾನೆ, ಈತನಿಗೆ ನಾವು ಸದಾ ಭೀತರಾಗಿರುವೆವು' ಎಂದು ದುಃಖಿಸಲು, ವಿಭೀಷಣನು ತಾಯನ್ನು ಸಮಾಧಾನಿಸಿ. 'ನಿಮ್ಮ

ಹಗೆಯನ್ನು ನಿವಾರಿಸಿ ಅಣ್ಣನಾದ ರಾವಣನು ನಮಗೆ ಸಂತೋಷವನ್ನುಂಟು ಮಾಡುವನು. ಅಲ್ಲಿಯವರೆಗೆ ನಮಗೆ ಬೇಕಾದ ವಿದ್ಯೆಗಳನ್ನು ಸಾಧಿಸಿ ತೋರುವೆವು' ಎಂದು ಬಿನ್ನವಿಸಿದನು.

ಆ ಸಾಹಸಿಗಳು ತತ್ವಾಭ್ಯಾಸವನ್ನು ಕಲಿಯುವ ಮುನಿಗಳಂತೆ ಪ್ರತಿಜ್ಞೆ ಮಾಡಿ, ಬೇರೇನನ್ನೂ ಮಾಡದೆ 'ಪಲ್ಯಂಕಾಸನ'ದಲ್ಲಿ ಮೂವರೂ ಕುಳಿತು ಅಭ್ಯಾಸ ಮಾಡಿದರು. ಹೀಗೆ ವಿದ್ಯೆಗಳನ್ನು ಸಾಧಿಸಿ ಸಿದ್ಧವಿದ್ಯರನ್ನು ಪಂಚಪರಮೇಷ್ಠಿಗಳನ್ನು ಪೂಜಿಸಿದ ಬಳಿಕ ಮೂರು ದಿನಗಳಲ್ಲಿ, ಅಗಣ್ಯಪುಣ್ಯ ನಿಲಯಗಳನ್ನು, ಜೀವ ಜೀವಗಳನ್ನೇ ಆಕರ್ಷಿಸುವ ಉಗ್ರವಾದ ಖಡ್ಗರತ್ನವನ್ನು ರಾವಣನು ಪಡೆದನು. ಚಂದ್ರಹಾಸವನ್ನು ಪಡೆದು ತಾನು ಕಲಿತ ವಿದ್ಯೆಯಿಂದ 'ಸ್ವಯಂಪ್ರಭ' ಎಂಬ ಪಟ್ಟಣವನ್ನು ನಿರ್ಮಿಸಿ ತನ್ನ ಪರಿವಾರವೆಲ್ಲವನ್ನೂ ಕೂಡಿಸಿಕೊಂಡು, ಹಲವು ವಿದ್ಯೆ, ಭುಜಬಲ ಪರಾಕ್ರಮವನ್ನು ತನಗೆ ಯಾರೂ ಸಮಾನರಿಲ್ಲವೆಂಬಂತೆ ಸಾಧಿಸಿ, ಒಳ್ಳೆಯ ಮನಸ್ಸಿನಿಂದ, ಗುಣಾಧಿಕ್ಯದಿಂದ ಇನ್ನಷ್ಟು ಒಳಿತನ್ನು ಸಾಧಿಸುವ ತವಕದಲ್ಲಿ ರಾವಣನಿದ್ದನು.

ಒಂದು ದಿನ ಸುರಸಂಗೀತ ಪುರದ ಪ್ರಧಾನನಾದ ಮಯನು ತನ್ನ ಮಗಳಾದ ಮಂಡೋದರಿಯನ್ನು ನೈಮಿತ್ತಿಕರ ಆಜ್ಞೆಯಂತೆ ವಿಮಾನವೇರಿಸಿ ಸ್ವಯಂಪ್ರಭ ಪಟ್ಟಣಕ್ಕೆ ಬಂದು ಅವಳನ್ನು ರಾವಣನಿಗೆ ಮಹಾಸಂಭ್ರಮದಿಂದ ಮದುವೆ ಮಾಡಿಸಿದನು. ಅನಂತರ ಮಯಮಾರೀಚರೇ ಮೊದಲಾದವರನ್ನು ಉಪಚರಿಸಿ ಕಳುಹಿಸಿ, ದಶಾನನ ತನ್ನ ವಿದ್ಯೆಗಳ ಹೆಚ್ಚಳವನ್ನು ಕಂಡು ತೋಷಿಸಿ, ಆಕಾಶದಲ್ಲಿ ವಿಹರಿಸುತ್ತಿರುವಾಗ ಮೇಘಶೃಂಗವೆಂಬ ಪರ್ವತದ ಪಕ್ಕದಲ್ಲಿದ್ದ ತಾವರೆಯ ಕೊಳದಲ್ಲಿ ನೀರಾಟವಾಡುತ್ತಿರುವ ಪದ್ಮೆ, ವಿದ್ಯುತ್ ಪ್ರಭೆ, ಅಶೋಕ ಲತೆ ಮೊದಲ್ಗೊಂಡ ಆರು ಸಾವಿರ ಕನ್ಯೆಯರನ್ನು ಕಂಡು ಅಪೇಕ್ಷಿಸಿ, ಅವರನ್ನು ಗಾಂಧರ್ವ ವಿವಾಹವಾಗುವ ಆಸೆಯನ್ನು ವ್ಯಕ್ತಪಡಿಸಿದನು. ಆ ಕನ್ಯೆಯರ ತಂದೆ ಸುರಸುಂದರನು ಅದನ್ನು ಕೇಳಿ ಸಿಟ್ಟಾಗಿ ರಾವಣನ ಮೇಲೆ ಏರಿಬರುತ್ತಿರಲು - ಅವನೊಡನೆ ಕಾದಾಡಿ ಕೊಲ್ಲದೆ ನಾಗಪಾಶದಿಂದ ಕಟ್ಟಿಹಾಕಿದನು. ಅದನ್ನು ಕಂಡು ಮೆಚ್ಚಿ - ಸುರಸುಂದರನು ತನ್ನ ಮಕ್ಕಳನ್ನು ಮದುವೆ ಮಾಡಿಕೊಟ್ಟನು. ವಿವಾಹಾನಂತರ ಅವರು ಸ್ವಯಂಪ್ರಭಾ ಪಟ್ಟಣವನ್ನು ಸೇರಿ ಸುಖದಿಂದಿದ್ದರು.

ಅಲ್ಲಿಂದ ಮತ್ತೆ ತನ್ನ ನಗರಕ್ಕೆ ಬಂದ ದಶಕಂಠನು ಕುಂಭಪುರದ ಮಹೋದರ-ಸುರೂಪೆಯರ ಮಗಳು ವಿದ್ಯುದ್ವೇಗೆಯನ್ನು ಭಾನುಕರ್ಣನಿಗೆ ಮದುವೆ ಮಾಡಿಕೊಟ್ಟನು. ಭಾನುಕರ್ಣನು ಅನಂತರ ಯಾವಾಗಲೂ ಕುಂಭಪುರದ ವರ್ತಮಾನವನ್ನೇ ಪ್ರಸ್ತಾಪಿಸು ತ್ತಿರುವುದನ್ನು ಕಂಡು ಅವನನ್ನು ಜನರು ಕುಂಭಕರ್ಣನೆಂದೇ ಕರೆದರು. ಜ್ಯೋತಿಪ್ರಭ ಪುರವನ್ನು ಆಳುವ ಶುದ್ಧಕಮಲ - ಆನಂದಮಾಲೆಯ ಮಗಳು ರಾಜೀವಸರಸೆಯನ್ನು ವಿಭೀಷಣನಿಗೆ ರಾವಣನು ಮದುವೆ ಮಾಡಿಸಿಕೊಟ್ಟನು.

ಮಂಡೋದರಿಗೆ ಮೊದಲು ಇಂದ್ರಜಿ ಅನಂತರ ಮೇಘವಾಹನನೂ ಮೂರನೆಯ ಮಗನಾಗಿ ಶತ್ರುಂದಮನೂ ಹುಟ್ಟಿ, ತಮ್ಮ ಪರಾಕ್ರಮದಿಂದ ಖೇಚರಕುಲಕ್ಕೆ ಆನಂದವನ್ನು ತಂದರು.

ದಿಕ್ಕುಗಳೆಂಬ ಆನೆಗೆ ದಂತಗಳಂತೆ ಅವರು ರಾವಣನಿಗೆ ನೆರವಾದರು. ಇದಕ್ಕೆ ರಾವಣನು ಪ್ರೀತನಾದರೂ ತನ್ನ ಕುಲಕ್ಕೊದಗಿದ ಪರಿಭವವನ್ನು ಮರೆಯಲಿಲ್ಲ. ಅದಕ್ಕೆ ಚಿಂತಿತನಾಗಿ -

ಕುಲಕ್ರಮಾಗತವಾಗಿ ತಮ್ಮ ಪಿತಾಮಹನ ಅಧೀನದಲ್ಲಿದ್ದ ಲಂಕೆಯನ್ನು ಸ್ವಾಧೀನ ಪಡಿಸಿದವನನ್ನು ಎಳೆದು ಕೊಂದು ಕಳೆಯದಿದ್ದರೆ ತನ್ನ ಬಾಹುಬಲವು ಹುಲ್ಲಿಗೆ ಸಮಾನವೆಂಬ ಮನಸ್ಸಿನ ಉಮ್ಮಳದಿಂದ ರಾವಣನು ಯೋಚಿಸುತ್ತಾ ಲಂಕೆಗೆ ದಾಳಿಯಿಟ್ಟನು.

ವೈಶ್ರವಣನು ತಾನೂ ಇದಿರಾಗಿ ಕಾದುತ್ತ ಕೋಪದಿಂದ ಬಾಣಗಳನ್ನು ಎಸೆಯಲು ಅವನ್ನು ಮಧ್ಯದಲ್ಲಿ ಕಡಿದು, ಹರಿತವಾದ ಬಾಣಗಳಿಂದ ವೈಶ್ರವಣನ ತಲೆ ಎರಡು ಹೋಳುಗಳಾಗುವಂತೆ ಬಾಣ ಪ್ರಯೋಗಿಸಲು ಆತನು ಮೂರ್ಛಿತನಾಗಿ ನೆಲಕ್ಕೆ ಬಿದ್ದನು.

ಹೀಗೆ ಮೂರ್ಛಿತನಾದ ಅವನನ್ನು ರಾವಣನ ಅನುಚರರು ವಿಮಾನದಲ್ಲಿಟ್ಟು ವಿಜಯಾರ್ಧ ನಗರಕ್ಕೆ ಕೊಂಡೊಯ್ದರು. ಆತನ ಪುಷ್ಪಕ ವಿಮಾನವನ್ನು ಸ್ವಾಧೀನಪಡಿಸಿಕೊಂಡು, ಜಯಶ್ರೀಯನ್ನು ಒಲಿಸಿಕೊಂಡು ದಕ್ಷಿಣ ತೀರ ಸಮುದ್ರನಿವಾಸಿಗಳಾದ ಇಂದ್ರನ ಸಾಮಂತ ರಾಜರನ್ನೆಲ್ಲ ಸೋಲಿಸಿದರು.

ಬಡಗಣ ದಿಕ್ಕಿನ ರಾಜರನ್ನು ಸೋಲಿಸಬೇಕೆಂದು ಬಯಸಿ, ಭೂತಳಾಧೀಶ ಖೇಚರಾಧೀಶ್ವರರನ್ನೆಲ್ಲ ಕಾಲಿಗೆರಗಿಸಿಕೊಂಡು ದಿಗ್ವನಿತೆಯರಿಗೆ ಕೀರ್ತಿಮಾಲೆಯನ್ನು ತೊಡಿಸಿದನು. ಹೀಗೆ ಎಲ್ಲ ರಾಜರನ್ನು ನಡುಗಿಸಿ ಕಪ್ಪವನ್ನು ಪಡೆದು ಕೈಲಾಸ ಪರ್ವತದ ಕಾಡಿನಲ್ಲಿ ಭದ್ರಗಜವೊಂದನ್ನು ಕಂಡು ತನಗೆ ಪಟ್ಟದಾನೆಯಾಗಲು ಇದುವೇ ತಕ್ಕುದೆಂದು, ಹಿಂದೆ ಇಂದ್ರನಿಗೂ ಹಿಡಿಯಲು ಅಸಾಧ್ಯವಾದ ಹಟಮಾರಿ ಆನೆಯನ್ನು ತನ್ನ ವಿದ್ಯಾಬಲದಿಂದ ಹಿಡಿದು ಅದಕ್ಕೆ ತ್ರಿಜಗದ್ಭೂಷಣವೆಂಬ ಹೆಸರನ್ನಿಟ್ಟು, ಮತ್ತೆ ತನ್ನರಮನೆಗೆ ಬಂದು ಕಿಷ್ಕಿಂಧಪುರದ ಯಮರಾಜನನ್ನು ಗೆದ್ದು ಅವನ ಪಟ್ಟಣವನ್ನು ಪಿತಾಮಹ ಸಹಿತ ಆಳುತ್ತಿದ್ದನು.

ಸೂರ್ಯಜನ ಅರಸಿಯಾದ ಇಂದುಮಾಲೆ ವಾಲಿ ಸುಗ್ರೀವ ಮತ್ತು ಶ್ರೀಪ್ರಭೆಯರನ್ನು ಹೆತ್ತಳು. ಕೆಲವು ಕಾಲಾನಂತರ ವಾಲಿ ಸುಗ್ರೀವರನ್ನು ಅಧಿರಾಜ ಯುವರಾಜ ಪದವಿಯಲ್ಲಿ ನಿಲಿಸಿ ವಿಹಿತಾಶ್ರವ ಭಟ್ಟಾರಕರಿಂದ ದೀಕ್ಷೆಯನ್ನು ಕೈಗೊಂಡು ಅವನು ಮೋಕ್ಷಕ್ಕೆ ಹೋದನು. ಇತ್ತ ಪರಿಣಯ ನಿಮಿತ್ತವಾಗಿ ದಶರಥನು ಅತ್ತ ಹೋಗಲು, ಅದನ್ನು ತಿಳಿದು, ಲಂಕಾಪುರದಿಂದ ರಾವಣನ ತಂಗಿ ಚಂದ್ರನಖಿಯನ್ನು ಖರನು ಬಲಾತ್ಕಾರದಿಂದ ಕದ್ದೊಯ್ದನು. ಹೀಗೆ ಕದ್ದೊಯ್ದು ರಾವಣನನ್ನು ಅಣುಮಾತ್ರವೂ ಲೆಕ್ಕಿಸದೆ ಇದ್ದ ಚಂದ್ರೋದರನನ್ನು ಖರನು ಯಮನ ಹೊಟ್ಟೆಗೆ ಆಹುತಿಕೊಟ್ಟು, ಪಾತಾಳಲಂಕೆಯನ್ನು ಸ್ವೀಕರಿಸಿ ಸುಖದಿಂದಿರಲು, ರಾವಣನು ಮರಳಿ ಬಂದು ನನ್ನ ತಂಗಿಯನ್ನು ಕೊಂಡೊಯ್ದ ಆ ಖರನಿಗೆ ತಕ್ಕುದನ್ನು ಮಾಡುತ್ತೇನೆಂದು ಗರ್ಜಿಸಲು ಅವನನ್ನು ಅವನ ರಾಣಿ 'ನಿನ್ನ ಮೈದುನನಾದ ಖರನು ಅವಳಿಗೆ ಅನುರೂಪನು, ಅಲ್ಲದೆ ಅವಳಲ್ಲಿ ಅನುರಕ್ತನು. ಹೀಗೆ ಮದುವೆಯಾಗುವುದರಲ್ಲಿ ತಪ್ಪೇನು? ಅಂಥವನಲ್ಲಿ ಕೋಪಿಸುವುದು ವಿವೇಕವಲ್ಲ' ಎಂದು ಮಯನಂದನೆ ಅವನನ್ನು ಸಮಾಧಾನಪಡಿಸಿದಳು.

ಮಂಡೋದರಿ ಮತ್ತೆ ಗಂಡನೊಡನೆ "ನಿನಗೆ ವಿಧೇಯನಾಗದ ಚಂದ್ರೋದರನನ್ನು ನಿಗ್ರಹಿಸಿ

ನಿನಗೆ ನಿಷ್ಕಂಟಕವನ್ನು ಉಂಟುಮಾಡಿದ ಇವನನ್ನು ಕೊಂದು ನಿನ್ನ ತಂಗಿಗೆ ವೈಧವ್ಯ ದೀಕ್ಷೆ ಕೊಡುವುದು ಬುದ್ಧಿವಂತಿಕೆಯಲ್ಲ'' ಎಂದು ತಿಳಿ ಹೇಳಿ ಮಯನಂದನೆ ಅವನನ್ನು ಸಮಾಧಾನಿಸಿದಳು. ಇತ್ತ ಚಂದ್ರೋದರನ ಪತ್ನಿಯಾದ ಅನುರಾಧೆ ಗರ್ಭಿಣಿಯಾಗಿ ಕೂಸನ್ನು ಹೆತ್ತಳು. 'ಈತ ಹೊಟ್ಟೆಯಲ್ಲಿರುವಾಗ ಹಗೆಗಳಿಂದ ಆಯಾಸ ಪಟ್ಟೆನು' ಎನ್ನುತ್ತ ಅವನಿಗೆ ವಿರಾಧಿತ ಎಂದು ಹೆಸರಿಟ್ಟಳು. ಆತ ಬಳೆದು ಹಗೆತನವನ್ನು ಸಾಧಿಸುವ ಉಪಾಯಗಳನ್ನು ಯೋಚಿಸುತ್ತಿದ್ದನು.

ಮಾನಧನನೂ, ವಿವೇಕನಿಧಿಯೂ ಆದ ವಾಲಿ, ಜಿನಾಗಮ ಕೋವಿದನಾಗಿ ಹೊರಗೆ ಕೈ ಮುಗಿಯುವುದು ನಮ್ಮ ಪಾವಿತ್ರ್ಯಕ್ಕೆ ಕುಂದು ಎಂದು ತಿಳಿದು ಮುಂದೆ ಜೈನಪದಕ್ಕೆ, ಜೈನ ಮುನಿಗಳಿಗಲ್ಲದೆ ಅನ್ಯರಿಗೆ ಕೈ ಮುಗಿಯೆನು' ಎಂದು ನಿಶ್ಚಯಿಸಿ 'ಅಪ್ರಮತ್ತ ಚರಿತ್ರಪ್ರಿಯ' ನಾಗಿ ಉದಾತ್ತನಾಗಿ ಮೆರೆದನು.

ಅನಂತವೀರ್ಯವಂತನೂ, ಚರಮದೇಹಧಾರಿಯೂ ಅವಕ್ರವಿಕ್ರಮನೂ ಆದ ವಾಲಿ, ನಿಯಮಸ್ಥನಾಗಿ ಸುಖದಿಂದಿರಲು ಒಂದು ದಿನ ಅನುಜೆಯಾದ ಶ್ರೀಪ್ರಭೆಯನ್ನು ಬೇಡಿ, ರಾವಣನು ಓಲೆಯನ್ನು ಬರೆದು ಚರನನ್ನು ಕಳುಹಿದನು. ಅದನ್ನು ತಿಳಿದು ವಾಲಿ ಮಂತ್ರಶಾಲೆಯನ್ನು ಸುಗ್ರೀವನೊಡನೆ ಹೊಕ್ಕು, ಮಂತ್ರಿ ಮಂಡಲವನ್ನು ಆಪ್ತರನ್ನೂ ಬರಮಾಡಿ ''ಸರಿದಾರಿಯಲ್ಲಿ ನಡೆಯದ ಉನ್ಮಾರ್ಗಿಗೆ ತಂಗಿಯನ್ನು ಕೊಡೆನು. ದಶಕಂಠನು ಮದಾಂಧ, ಧರ್ಮಾನು ಯಾಯಿಯಲ್ಲ. ಅಂಥವನಿಗೆ ಹೆಣ್ಣು ಕೊಟ್ಟರೆ ಇಹಪರದಲ್ಲಿ ತೆಗಳಿಕೆಗೆ ಗುರಿಯಾಗಬೇಕು. ಉದ್ಧತನಾದ ರಾವಣನಿಗೆ ಹೆಣ್ಣು ಕೊಟ್ಟರೆ ನಾನಾತನಿಗೆ ಕೈ ಮುಗಿಯಬೇಕು. ಕೈಮುಗಿದರೆ ನನ್ನ ನಡತೆಯೂ, ಚಾರಿತ್ರ್ಯವೂ ಕೆಟ್ಟು ವ್ರತಭಂಗವಾಗುವುದು. ಕೈಗೊಂಡ ವ್ರತವನ್ನು ಬಿಡುವುದು ನ್ಯಾಯವಲ್ಲ. ಹೆಣ್ಣು ಕೊಡದೆ ಅವನೊಡನೆ ಯುದ್ಧಕ್ಕೆ ನಿಂತರೆ ರಾಕ್ಷಸರ ಮತ್ತು ನಮ್ಮೊಳಗಣ ಈವರೆಗಿನ ಅನ್ಯೋನ್ಯತೆ ಕೆಡುತ್ತದೆ. ಅದಕ್ಕೆ ನಾನು ಕಾರಣನಾಗುತ್ತೇನೆ'' ಎಂದು ಯೋಚಿಸಿ ಮನೋವಿಕಾರವನ್ನು ತೊರೆದು ತಪಸ್ಸಿಗೆ ಕುಳಿತು ಪುಣ್ಯ ಭಾಜನನಾದನು.

ಹೀಗೆಲ್ಲ ಆದರೂ ಸುಗ್ರೀವನು ಅನುಜೆಯಾದ ಶ್ರೀಪ್ರಭೆಯನ್ನು ದಶಕಂಠನಿಗಿತ್ತು ಅವನೊಂದಿಗೆ ಸೌಹಾರ್ದದಿಂದಿದ್ದನು. ಮದುವೆಯಾಗಿ ನಿತ್ಯಾಲೋಕಪುರದಿಂದ ಮರಳಿ ಬರುತ್ತಿರುವಾಗ, ಕೈಲಾಸನಗರದಲ್ಲಿದ್ದ ಮಹಾ ಮುನಿಯ ಮೇಲೆ ಆಕಾಶದಲ್ಲಿ ಅವನ ವಿಮಾನ ಚಲಿಸದೆ ನಿಂತುಹೋಯಿತು. ಆಶ್ಚರ್ಯಪಟ್ಟು, ಕಾರಣವೇನೆಂದು ಅವಲೋಕಿನೀ ವಿದ್ಯೆಯಿಂದ - ಅದು ವಾಲಿದೇವನಿಂದಾಯಿತು - ಎಂದು ತಿಳಿಯಲು 'ನನ್ನ ವಿಮಾನ ಸ್ತಂಭಿಸಿದರೇನಾಯ್ತು ಈ ಪರ್ವತದೊಡನೆ ಅವನನ್ನು ಕಿತ್ತು ಸಮುದ್ರದಲ್ಲಿಡುವೆನು' ಎಂದು ರಾವಣನು ನೆಲಕ್ಕವತರಿಸಿ, ಸಣ್ಣ ದೊಡ್ಡ ಮೋಡಗಳಂತೆ ಬಾಹುದಂಡಗಳ ಶಕ್ತಿಯಿಂದ ರಸಾತಳಕ್ಕೆ ಇಳಿದು ಧನದಾಚಲದ ಕೆಳಭಾಗಕ್ಕೆ ಬಂದು -

ಸಾವಿರ ವಿದ್ಯೆಗಳಿಂದೊಡಗೂಡಿದ ತೋಳ್ಬಲದ ತೆಕ್ಕೆಯಿಂದ ವ್ಯಾಪಿಸಿ ರಾವಣನು ಬೀಳಿ ಮೋಡಗಳನ್ನು ಎತ್ತುವ ಸುಂಟರಗಾಳಿಯಂತೆ ಕೈಲಾಸವನ್ನೇ ಎತ್ತಲು ಅದರಿಂದ ಯಾರಿಗೂ

ಕೇಡಾಗಬಾರದೆಂದು ವಾಲಿಯು ಉಂಗುಷ್ಠದಿಂದ ಒತ್ತಿ ಹಿಡಿದನು - ಹೀಗೆ ಒತ್ತಿ ಹಿಡಿದಾಗ ಕೆಳಭಾಗದಿಂದ ಹುಯ್ಯಲಿಡುವ ಧ್ವನಿಯನ್ನು ಕೇಳಿ - ಪರಿಜನಸಹಿತ ಮಂಡೋದರಿ ಬಂದು 'ಮುನೀಂದ್ರ, ರಕ್ಷಿಸು, ರಕ್ಷಿಸು' ಎಂದು ಕಾಲಿಗದ್ದ ಬೀಳಲು - ಕರುಣಾ ರಸದೊಂದಿಗೆ ಮುನಿಯು ತನ್ನ ಉಂಗುಷ್ಠವನ್ನು ಸಡಿಲಿಸಿದನು. ಹೀಗೆ ಹುಯ್ಯಲಿಡುವ ಭೀಕರ ಸ್ವರವನ್ನು ಕೇಳಿದ ಅನಂತರವೇ ದಶಕಂಠನಿಗೆ ರಾವಣನೆಂಬ ಹೆಸರು ರೂಢಿಯಾಯಿತು. ರಾವಣನು ಅನಂತರ ವಾಲಿಭಟ್ಟಾರಕನನ್ನು ಪೂಜಿಸಿ, ಕಾಲಿಗೆ ಅಡ್ಡ ಬಿದ್ದು, ತನ್ನ ತಪ್ಪನ್ನು ಕ್ಷಮಿಸಬೇಕೆಂದು ಬೇಡಿ, ಪಕ್ಕದ ಜಿನಾಲಯಕ್ಕೆ ಬಲವಂದು ಒಳಹೊಕ್ಕು ದೇವರನ್ನು ರತ್ನರಾಶಿಗಳಿಂದ ಅರ್ಚಿಸಿ, ಲಯತ್ರಯಗಳಿಂದ ವಸ್ತು, ಗುಣ, ರೂಪ, ಜಿನಸ್ತವಗಳಿಂದ, ಹಲವು ರೀತಿಯಲ್ಲಿ ರಸಸ್ಯಂದಿಯಾಗಿ ತನ್ನ ರಾವಣಹಸ್ತವೆಂಬ ವೀಣಾನಾದದೊಡನೆ ಸ್ತುತಿಸಿದನು.

ಹೀಗೆ ಸ್ತುತಿಸಿದಾಗ ಆಸನ ಕಂಪನವಾಯಿತು. ಆದಿಶೇಷನು ಫಣಿಲೋಕದಿಂದ ಕೈಲಾಸಪರ್ವತಕ್ಕೆ ಬಂದು ರಾವಣನ ದೈವಭಕ್ತಿಯನ್ನು ಕಂಡು ಅದರ ಹೆಚ್ಚಳವನ್ನು ಶ್ಲಾಘಿಸಿ, ಅತನಿಗೆ ಸಮಸ್ತ ದೇವಾಸುರ ನಾಯಕರಿಗೆ ಜೀವವಿಮುಕ್ತಿಯನ್ನು ಕೊಡುವ ಶಕ್ತಿಯನ್ನು ಕರುಣಿಸಿದನು.

ರಾವಣನು ಮತ್ತೆ ನಂದ್ಯಕ, ಸುವೇಲವೇ ಮೊದಲಾದ ದ್ವೀಪಗಳನ್ನು ಆಳುತ್ತಿದ್ದ ಮಹಾಬಲ, ವಿದ್ಯಾಧರರನ್ನು ಸೋಲಿಸಿ, ಕುಂಭಕರ್ಣ, ವಿಭೀಷಣ, ಇಂದ್ರಜಿ, ಮೇಘವಾಹನ, ಸುಗ್ರೀವ, ಅಂಗದ, ಮರ್ಕಟಧ್ವಜ ಮತ್ತು ಪ್ರಮುಖ ವಿದ್ಯಾಧರರೊಡನೆ ನಿತ್ಯಪಯಣವೆನ್ನುವಂತೆ ದಿಗ್ವಿಜಯದಲ್ಲಿ ಜಯವನ್ನು ಪಡೆದು, ರೈವತ ನದೀ ತೀರದಲ್ಲಿ ಬೀಡು ಬಿಟ್ಟು, ನದೀತೀರದ ಮರಳ ದಿಂಡೆಯಲ್ಲಿ ರತ್ನಮಂಟಪವನ್ನು ನಿರ್ಮಿಸಿ, ಸಿಂಹಾಸನದ ಮೇಲೆ ರತ್ನದ ಜಿನಪ್ರತಿಮೆಯನ್ನು ನಿಲ್ಲಿಸಿ ಪೂಜಿಸುವ ವೇಳೆಯಲ್ಲಿ -

ನದಿಯ ನೀರು ಒಮ್ಮಿಂದೊಮ್ಮೆಗೆ ಉಕ್ಕುತ್ತ ಬರಲು ಇದೇನು ಕಾರಣವೆಂದು ರಾವಣನು ಮೇಲೆ ನೆಗೆದು ಆಶ್ಚರ್ಯಪಟ್ಟನು. ಅಚ್ಚರಿಗೊಂಡು, ಅಕಾಲದಲ್ಲಿ ಹೀಗಾಗಲು ಕಾರಣವೇನೆಂದು ಕಂಡುಹಿಡಿಯಲು ದೂತರನ್ನಟ್ಟಿದನು. ಅವರು ಶೋಧಿಸಿ, 'ಇದು ಮಾಹಿಷ್ಮತೀಪುರದ ಸಹಸ್ರ ಬಾಹು ತನ್ನಂತಃಪುರದ ಸ್ತ್ರೀಯರೊಡನೆ ಜಲಕೇಳಿಯಾಡಲು ಯಂತ್ರಗಳಿಂದ ನದಿಯ ನೀರನ್ನು ಸಂಗ್ರಹಿಸಿ ಜಲಕೇಳಿಯ ಅನಂತರ ಯಂತ್ರಗಳನ್ನು ಬೇರ್ಪಡಿಸಲು ನೀರ ಪ್ರವಾಹವು ಒಮ್ಮೆಲೆ ಅಧಿಕವಾಯ್ತು' ಎಂದು ದೂತರಿಂದ ತಿಳಿದುಕೊಂಡನು.

ದೂತರ ಮಾತನ್ನು ಕೇಳಿ ರಾವಣನು ಕೋಪಿಸಿ, ತನ್ನ ಆನೆಯನ್ನೇರಿ ಸಹಸ್ರ ಬಾಹುವಿದ್ದಲ್ಲಿಗೆ ಬಂದು, ಅವನ ಸೈನಿಕ ಸಹಾಯಕರನ್ನು ಹೊಡೆದೋಡಿಸಿ ಅವನನ್ನು ಅವನೇರಿದ ಆನೆಯೊಡನೆ ಸೆರೆಹಿಡಿದು ತನ್ನ ಶಿಬಿರಕ್ಕೆ ತಂದನು.

ಸಹಸ್ರ ಬಾಹುವಿನ ತಂದೆ ಶತಬಾಹುವೆಂಬ ಜಂಘಾಚಾರಣರು ವಿಷಯ ತಿಳಿದು ಅಲ್ಲಿಗೆ ಬರಲು, ರಾವಣನು ಅವರನ್ನು ಕಂಡು ಎದ್ದು ಭಕ್ತಿಪೂರ್ವಕವಾಗಿ ವಂದಿಸಿ 'ಏನಪ್ಪಣೆ?; ಎಂದು

ಕೇಳಲು 'ನೀನು ಸೆರೆ ಹಿಡಿದ ಸಹಸ್ರಬಾಹುವನ್ನು ಬಿಡಿಸು' ಎನ್ನಲು ಆತನನ್ನು ಬಿಡುಗಡೆ ಮಾಡಿ ನಮಸ್ಕರಿಸಿದನು. ಆತನು ಬಂದು ದಿವ್ಯಮುನಿಗೆ ನಮಸ್ಕರಿಸಿದನು. ''ಇನ್ನು ನೀನು ನಿನ್ನ ರಾಜ್ಯದಲ್ಲಿ ನಿಲ್ಲುವುದು'' ಎಂದು ಆಜ್ಞಾಪಿಸಲು ಆತನು ''ನಾನು ಇನ್ನು ತಪೋರಾಜ್ಯವನ್ನಲ್ಲದೆ ರಾಜ್ಯವನ್ನು ಒಲ್ಲೆ''ನೆಂದು ದೀಕ್ಷೆಯನ್ನು ಕೈಕೊಂಡನು.

ರಾವಣನ ವಿಜಯಯಾತ್ರೆ ಅಲ್ಲಿಂದ ಮುಂದುವರಿಯಿತು. ಎಲ್ಲ ರಾಜರನ್ನೂ ಸೋಲಿಸಿ ಕಪ್ಪವನ್ನು ಪಡೆಯುತ್ತ, ಧರ್ಮವನ್ನು ಪ್ರತಿಪಾದಿಸುತ್ತ ಮುಂದೊತ್ತುತ್ತಿರಲು, ರಾಜಪುರವನ್ನಾಳುವ ಮರುತ್ತೆಂಬ ಅರಸನು, ಜೀವವಧೆಯನ್ನು ಅಳವಡಿಸಿಕೊಂಡ ಯಜ್ಞವನ್ನು ಮಾಡುತ್ತಿರುವುದನ್ನು ಕೇಳಿ, ಯಾಗನಿಮಿತ್ತವಾಗಿ ಯೂಪಸ್ತಂಭಗಳಿಗೆ ಕಟ್ಟಿಹಾಕಿದ ಪಶುಗಳು ಗೋಳಿಡುವಂತೆ ಕೊಂದು ಯಜ್ಞಕ್ಕೆ ಆಹುತಿ ಕೊಡುವುದನ್ನು ಕಂಡು - ಅಗ್ನಿ ಕುಂಡಗಳನ್ನು ಒಡೆದು, ಯಜ್ಞಶಾಲೆಗಳನ್ನು ಕೆಡವಿ, ಯೂಪಸ್ತಂಭಗಳನ್ನು ಕಡಿದು, ಋತ್ವಿಜರನ್ನು ಕೊಲ್ಲಲು ಸಿದ್ಧರಾದರು. ಆಗ ಮರುತ್ತನೆಂಬ ಅವರ ರಾಜನು ಅವಸರದಿಂದ ಬಂದು ರಾವಣನ ಕಾಲಿಗೆ ಅಡ್ಡ ಬಿದ್ದು ಕ್ಷಮೆಯನ್ನು ಕೇಳಿ, ಪಡೆದು -

ಚಿನ್ನದ ಕಾಂತಿಯನ್ನು ನಾಚಿಸುವ ತನ್ನ ಮಗಳು ಕನಕಪ್ರಭೆಯನ್ನು ಖಚರಕುಲಕ್ಕೆ ಆನಂದವನ್ನು ತರುವ ದಶಾನನನಿಗೆ ಪ್ರೀತಿಯಿಂದ ಮದುವೆ ಮಾಡಿಕೊಟ್ಟನು. ಮದುವೆಯಾಗಿ ತನ್ನ ಬಲಸಮೇತ ಹದಿನೆಂಟು ವರ್ಷಗಳವರೆಗೆ ಕಾದಾಡಿ, ಕೈಲಾಸ ಪರ್ವತದ ತಪ್ಪಲಲ್ಲಿ ಬೀಡು ಬಿಟ್ಟಿರಲು, ದುರ್ಲಂಘ್ಯಪುರದ ಅರಸನಾದ ನಳಕೂಬರನು ದೇವೇಂದ್ರನ ಬಿಲ್ಲು, ಬತ್ತಳಿಕೆ, ಕವಚಗಳನ್ನು ರಕ್ಷಿಸುವಾತನಾಗಿ ಮೆರೆಯುತ್ತಿದ್ದನು. ರಾವಣನು ತಮ್ಮ ಮೇಲೆ ದಂಡೆತ್ತಿ ಬರುತ್ತಿರುವುದನ್ನು ಅರಸನಾದ ಇಂದ್ರನಿಗೆ ತಿಳಿಸೆಂದು ಚಾರಕರನ್ನು ಕಳುಹಿಸಲು - ಇಂದ್ರನು 'ಯಾರವನು ರಾವಣನೆಂಬವರೆ' ಎಂಬ ಅಹಂಕಾರದಿಂದ ಹೇಳುತ್ತ, ನಳಕೂಬರನು ಯೋಜನ ದೂರ ಇರಿಸಿದ್ದ ಬೇತಾಳ ಯಂತ್ರಗಳ ಮೂಲಕ ಎಷ್ಟು ದೂರವಿದ್ದರೂ ಅಷ್ಟು ದೂರದಿಂದಲೇ ಜನರನ್ನು ಸೆಳೆದು ನುಂಗುವ ಉರಗಗಳಿಂದ 'ಧಗ ಧಗ' ಎಂಬ ಬೆಂಕಿಯ ಭೀಕರ ಜ್ವಾಲೆಗಳಿಂದ ಉಪದ್ರವ ಕೊಡುವ ರೌದ್ರವೃಕ್ಷಗಳಿಂದ, ವಜ್ರಸಾಲವೆಂಬ ಕೋಟೆಯನ್ನು ನಿರ್ಮಿಸಿ ಅದಕ್ಕೆ ದುರ್ಲಂಘ್ಯಪುರವೆಂಬ ಹೆಸರಿಟ್ಟುದರಿಂದ ಯಾರಿಗೂ ಹೆದರದೆ ಇದ್ದನು.

ಆ ಪಟ್ಟಣದ ವಿಶೇಷ ಮಹತ್ವವನ್ನು ತಿಳಿದುಕೊಳ್ಳಬೇಕೆಂದು ದಶಕಂಠನು ಪ್ರಹಸ್ತನೆಂಬವನನ್ನು ಕಳುಹಿಸಿ ಅವನಿಂದ ಇಷ್ಟೆಲ್ಲ ಮಾಹಿತಿಗಳನ್ನು ತಿಳಿದು ರಾವಣನಿಗೆ ಹೇಳಲು - ರಾವಣನು ಕೋಟೆಯನ್ನು ಸ್ವಾಧೀನಪಡಿಸುವುದು ಹೇಗೆಂದು ಯೋಚಿಸುತ್ತಿರುವಾಗ -

ವಿಲಾಸವತಿಯಾದ ನಳಕೂಬರನ ಹೆಂಡತಿ. ಬಹಳ ಕಾಲದಿಂದ ರಾವಣನನ್ನು ಅಪೇಕ್ಷಿಸುತ್ತಿರುವುದನ್ನು ತನ್ನ ಸೇವಕಿಗೆ ತಿಳಿಸಿ ಅವಳನ್ನು ರಾವಣನಲ್ಲಿಗೆ ಪ್ರೇಮ ಭಿಕ್ಷೆ ಬೇಡಲು ಕಳುಹಿಸಿದಳು. ಸೇವಕಿಯಾದಚಿತ್ರಮಾಲೆ ನೀಲಬಟ್ಟೆಯ ಮುಸುಕು ಹಾಕಿಕೊಂಡು ರಾತ್ರಿ ಸಮಯದಲ್ಲಿ ಆಕಾಶ ಮಾರ್ಗದಿಂದ ಬಂದು ರಾವಣನಿದ್ದ ಆಲಯವನ್ನು ಹೊಕ್ಕಳು. ಅವನ ಪಕ್ಕದಲ್ಲಿ ನಿಂದು " ಉಪರಂಭೆಯೆಂಬ ನಮ್ಮರಸಿ ರೂಪಿನಲ್ಲಿ ರಂಭೆಗೂ ಮಿಗಿಲು. ನನ್ನನ್ನು ನಿಮ್ಮ ಬಳಿಗೆ ಅಟ್ಟಿದಳು.

ಹಲವು ದಿನಗಳಿಂದ ನಿನ್ನ ಮೇಲಣ ಮೋಹದಿಂದ, ಕಾಮನ ಕಾಟದಿಂದ ತಲ್ಲಣಿಸುತ್ತಿದ್ದಾಳೆ. ಅವಳ ಚೆಲ್ವಿಕೆಯನ್ನು ಏನೆಂದು ಹೇಳಲಿ? ರೂಪಿನಿಂದ ಸಾಮರ್ಥ್ಯದಿಂದ, ನಿನ್ನನ್ನು ಸೇರಿದರೆ ನಿನಗೆ ಅಸಾಧ್ಯವಾದುದು ಬೇರೆ ಉಂಟೆ?" ಎಂದು ನುಡಿದಳು.

ರಾವಣನು ಈ ಮಾತನ್ನು ಕೇಳಿ 'ನಿಂದೆಯೂ ಪಾಪವೂ ಆದ ದುಶ್ಚರಿತ್ರವನ್ನು ಏನೆಂದು ಹೊಗಳಲಿ' ಎಂದು ತನ್ನಲ್ಲೇ ಕೇಳಿಕೊಂಡು, ವಿಭೀಷಣನನ್ನು ಬರಮಾಡಿ ರಹಸ್ಯವಾಗಿ ಈ ವಿಷಯವನ್ನು ತಿಳಿಸಲು, ಅವಳ ವಿದ್ಯಾಪ್ರಕಾರವನ್ನು ಕೆಡಿಸುವಂತೆ ಪ್ರತಿವಿದ್ಯೆಯನ್ನು ಸುಳ್ಳೇ ಅವಳಿಂದ ಕಲಿತು ಅವಳನ್ನು ಗುರುವೆಂದು ಒಪ್ಪುವುದು ಒಂದು ನೆವನ. ಈ ಕಾರಣದಿಂದ ಅವಳನ್ನು ಗೆಲಬಹುದು ಎಂದೆಣಿಸಿ ಆಕೆಯನ್ನು 'ತಾಯಿಯೆಂದು' ಶ್ಲೇಷೆಯಿಂದ ವರ್ಣಿಸಿ - ಕರೆಸಿ, ಅವಳು ಬಂದಾಗ ಕೋಟೆಯನ್ನು ಪ್ರವೇಶಿಸುವ ವಿದ್ಯೆಯನ್ನು ಅವಳಿಂದ ಕಲಿತು, ಮರುದಿನ ಕೋಟೆಯನ್ನು ಭೇದಿಸುವ ವಿದ್ಯೆಯನ್ನು ಪ್ರತಿವಿದ್ಯೆಯಿಂದ ಕೆಡಿಸಿ ದುರ್ಲಂಘ್ಯಪುರಕ್ಕೆ ಮುತ್ತಿಗೆ ಹಾಕಿದರು.

ಭಯವನ್ನು, ಅಚ್ಚರಿಯನ್ನು ತೋರ್ಪಡಿಸದೆ ಕಾದಾಡಿ ನಳಕೂಬರನನ್ನು ವಿಭೀಷಣನು ಮದ್ದಾನೆಯನ್ನು ಸಿಂಹವು ಹಿಡಿದಂತೆ ಹಿಡಿದನು. ರಾಕ್ಷಸಾಧೀಶ್ವರನ ಪೂರ್ವಪುಣ್ಯ ವಿಶೇಷದಿಂದ ಆಯುಧ ಶಾಲೆಯಲ್ಲಿ ರಾಜರಿಗೆ ಪ್ರಳಯ ಕಾಲ ಸಮಾನವಾದ ಚಕ್ರ ರತ್ನವು ಹುಟ್ಟಿಕೊಂಡಿತು. ಚಕ್ರವು ಹುಟ್ಟಲು ರಾವಣನು ಮಹೋತ್ಸವದಿಂದ ಚಕ್ರಪೂಜೆಯನ್ನು ಮಾಡಿ, ರಹಸ್ಯವಾಗಿ ಉಪರಂಭೆಯನ್ನು ಕರೆದು, ಚರಿತ್ರ ಶುದ್ಧರಾದ ಕುಶಧ್ವಜ - ಮಧುಕಾಂತೆಯರ ಮಗಳು, ಅಲ್ಲದೆ ನನಗೆ ವಿದ್ಯೋಪದೇಶವನ್ನು ಮಾಡಿದ ಗುರು ನೀನು. ಬೇರೇನನ್ನೂ ಬಗೆಯದೆ ನಳಕೂಬರನೊಂದಿಗೆ ಸುಖವಾಗಿ ಬಾಳು ಎಂದು ಕಾಮವಿಕಾರದಿಂದಾಗುವ ವಿಪತ್ತನ್ನು ತಿಳಿ ಹೇಳಿದನು. ನಳಕೂಬರನನ್ನು ಆ ಕ್ಷಣದಲ್ಲಿ ಬರಹೇಳಿ ತನ್ನ ಮಗನಾದ ಇಂದ್ರಜಿತುವಿನಂತೆ ಅವನನ್ನು ಮನ್ನಿಸಿ, ಭಯವನ್ನು ಕಳೆದು ಭೃತ್ಯ ಪದವಿಯನ್ನು ಅವನಿಗೆ ಕೊಟ್ಟು, ರಾವಣನು ಅವನನ್ನು ಸಂತೋಷಪಡಿಸಿದನು.

ಅವನನ್ನು ಕೂಡಿಕೊಂಡು ವಿಜಯಾರ್ಧ ಪರ್ವತಕ್ಕೆ ಬಂದು ಎತ್ತಲು ಅದನ್ನು ಕೇಳಿ ದೇವೇಂದ್ರನು ಸಮರಸನ್ನಾಹ ಭೇರಿಯನ್ನು ಹೊಡೆಸಿ ರಣಭೂಮಿಯಲ್ಲಿ ಹೋರಾಡಲು ಸಿದ್ಧನಾದನು. ಇಬ್ಬರೂ ತಮ್ಮ ತಮ್ಮ ಆನೆಗಳ ಮೇಲೆ ಕುಳಿತು ಯುದ್ಧ ಮಾಡಲು ರಾವಣನು ಇಂದ್ರನ ಪಟ್ಟದಾನೆಯ ಮಾವುತನನ್ನು ಕಾಲ ತುಳಿತದಿಂದ ನೆಲಕ್ಕೆ ಬೀಳಿಸಿ, ಇಂದ್ರನನ್ನು ಸೆರಗಿನಲ್ಲಿ ಕಟ್ಟಿ, ಕೊಲ್ಲುವುದಿಲ್ಲವೆಂದು ಅಭಯವನ್ನು ಕೊಟ್ಟು, ತನ್ನ ಆನೆಯ ಸನಿಯಕ್ಕೆ ಬರುತ್ತಿರಲು ಇಂದ್ರನ ಮಗನಾದ ಜಯಂತನನ್ನು ಇಂದ್ರಜಿತುವು ಸೆರೆ ಹಿಡಿಯಲು ರಾವಣನು ಅವನಿಗೂ ಅಭಯವನ್ನು ಕೊಟ್ಟು ಲಂಕೆಗೆ ಮರಳಿ ಸುಖದಿಂದಿದ್ದನು.

ಒಂದು ದಿನ ಪರಿಜನರೊಡನೆ ಸಹಸ್ರಾರನು ತನ್ನ ಮಗನ ಮೇಲಣ ವ್ಯಾಮೋಹದಿಂದ ರಾವಣನಲ್ಲಿಗೆ ಬರಲು ಆತನನ್ನು ತನ್ನ ತಂದೆಗಿಂತಲೂ ಹೆಚ್ಚಾಗಿ ಮನ್ನಿಸಿ. ಮಣಿಮಯ ಪೀಠದಲ್ಲಿ ಕುಳ್ಳಿರಿಸಿ 'ಏನಪ್ಪಣೆ' ಎಂದು ಕೇಳಿದನು. ಸಹಸ್ರಾರನು 'ನಿನಗೆ ಇದಿರುನಿಂತ ಇಂದ್ರನನ್ನು ಗೆದ್ದು ಅವನನ್ನು ಸೆರೆಯಲ್ಲಿಟ್ಟೆ, ಅವನನ್ನು ಬಿಟ್ಟುಬಿಡು. ನಿನ್ನ ಘನತೆಗೆ ಅದು ಶೋಭಿಸುತ್ತದೆ' ರಾವಣನು

'ಹಾಗೇ ಆಗಲಿ' ಎಂದು ಬಂಧಮುಕ್ತಿಗೊಳಿಸಿದನು. 'ಮನಸ್ಸಿನಲ್ಲಿ ಅನ್ಯಥಾ ಭಾವಿಸದೆ ನಿನ್ನ ರಾಜ್ಯದಲ್ಲಿ ಸುಖವಾಗಿರು' ಎನ್ನಲು ಆತನು ರಾವಣನಲ್ಲಿದ್ದ ದ್ವೇಷವನ್ನು ತ್ಯಜಿಸಿ ತನ್ನ ಪಟ್ಟಣಕ್ಕೆ ಬಂದು ಇಂದುವೆಂಬ ತನ್ನ ಹಿರಿಯ ಮಗನಿಗೆ ಪಟ್ಟ ಕಟ್ಟಿ, ತನ್ನ ಮಗನಾದ ಜಯಂತ ಮತ್ತು ಇತರ ದೇವತೆಗಳೊಡನೆ ತಾನು ದೀಕ್ಷೆಗೊಂಡು ಮೋಕ್ಷಕ್ಕೆ ಸಂದನು. ಇತ್ತ ದಶಾನನ ವರುಣನೊಡನೆ ಹೋರಾಡಲು ಸಮಸ್ತ ಸಾಮಂತರನ್ನು ಬರಮಾಡಿ, ಹನುಮರ ದ್ವೀಪಕ್ಕೆ ದೂತರನ್ನು ಅಟ್ಟಲು ಅವನು ಬಂದು ಪ್ರತಿಸೂರ್ಯ, ಪವನಂಜಯರನ್ನು ಕಂಡು ತಾನು ಬಂದ ವೃತ್ತಾಂತವನ್ನು ತಿಳಿಸಲು, ಪವನಂಜಯನು ಆಂಜನೇಯನನ್ನು ಬರಮಾಡಿಕೊಂಡನು. ಆದರೂ ರಾವಣನಿಗೆ ವರುಣನೊಬ್ಬ ತನಗೆ ವಿಧೇಯನಾಗನು ಎಂಬ ಸಿಟ್ಟು. ಅದಕ್ಕಾಗಿ ನಮಗೆ ಉಪಕಾರ ಮಾಡುವವನಂತೆ 'ಇದೋ ಸ್ವೀಕರಿಸು ರಾಜ್ಯಭಾರವನ್ನು' ಎನ್ನಲು ಹನುಮಂತನು ಮುಗಿದ ಕೈಗಳಿಂದ ವೀರಲಕ್ಷ್ಮಿಯನ್ನು ಆಲಿಂಗಿಸಿದಂತೆ ಅಪ್ಪಣೆಯನ್ನು ಬೇಡಿ ಪಡೆದುಕೊಂಡನು.

ಅನಂತರ ವಿಮಾನಾರೂಢನಾಗಿ ಅಸಂಖ್ಯಾಕ ಬಲದೊಡನೆ ಬರುತ್ತಿರುವ ಸಮಯದಲ್ಲಿ ರಾವಣನು ಗಗನಮಂಡಲದಲ್ಲಿದ್ದು ಹನುಮಂತನ ಬರವನ್ನು ಕಂಡು, ಇದಿರು ಬರಲು, ತಾನೂ ಉತ್ಸುಕತೆಯಿಂದ ಬಂದು ತನ್ನ ಪದವಿಗೆ ಒದಗಿದ ಭಕ್ತಿಯನ್ನು ಪ್ರಕಟಿಸಿ, ತಾನೂ ಮಣಿ ಕಿರೀಟಗಳನ್ನು ಕೊಟ್ಟು, ಸಂಭ್ರಮದಿಂದ ಆಲಿಂಗಿಸಿಕೊಳ್ಳಲು ದಾನವ ಚಕ್ರವರ್ತಿ ರಾವಣನಿಗೆ ತನ್ನನ್ನು ಸೋಲಿಸುವವರು ಇನ್ನಾರು ಎಂಬ ಹರ್ಷ ಉಂಟಾಯಿತು.

ಈ ಸಂತೋಷದಲ್ಲಿ ದಶಕಂಠನು ಪಾತಾಳ ಪುಂಡರೀಕಿಣೀಪುರವನ್ನು ಮೂರು ಬಾರಿ ಸುತ್ತಿ, ಮುತ್ತಿಗೆ ಹಾಕಲು ವರುಣನು ಸಿಟ್ಟಾಗಿ ಯುದ್ಧಕ್ಕೆ ಹೊರಡಲು ಅವನ ನೂರು ಮಕ್ಕಳು ಜೀವದ ಹಂಗುದೊರೆದು ಕಾದಾಡಿದರು. ವರುಣ ಪುತ್ರರ ದಾಳಿಗೆ ರಾವಣನ ಸೈನ್ಯ ಹಿಂದೋಡಿತು. ಹನುಮಂತನು ಯುದ್ಧಕ್ಕೆ ಬಂದು, ವೈರಿಸೇನೆಯನ್ನು ಸುತ್ತಲೂ ಮುತ್ತಿಗೆ ಹಾಕಿ ವಾನರ ವಿದ್ಯಾನಿಪುಣರಾದ ಸೈನಿಕರಿಂದ ಅವರನ್ನು ಸೋಲಿಸಿ ವರುಣನ ನೂರು ಮಕ್ಕಳನ್ನು ಹಿಡಿದು ಕಟ್ಟಿದನು. ತನ್ನ ವಿದ್ಯೆಯ ಹೆಚ್ಚುಗಾರಿಕೆಯಿಂದ ಕಾದಾಡುವ ವರುಣನನ್ನು ದನುಜೇಂದ್ರನು ಸೆರೆಹಿಡಿದನು.

ಸೆರೆಹಿಡಿದವನನ್ನು ಕುಂಭಕರ್ಣನಿಗೆ ಒಪ್ಪಿಸಿ ಯುದ್ಧವನ್ನು ನಿಲ್ಲಿಸಿ ವರುಣನನ್ನು ಬರಮಾಡಿ 'ವೀರನಾದವನು ಯುದ್ಧದಲ್ಲಿ ಸೋಲುತ್ತಾನೆ - ಸಾಯುತ್ತಾನೆ. ಇದು ಅವಮಾನವಲ್ಲ. ಆದರೆ ನೀನು ಹಿಂದಿನಂತೆ ನಿನ್ನ ರಾಜ್ಯವನ್ನು ಆಳಿಕೊಂಡಿರು' ಎಂದು ಮನ್ನಿಸಲು ಅವನ ಕೈಹಿಡಿದು ಹನುಮಂತನ ಶೌರ್ಯವನ್ನು ಹೊಗಳುತ್ತಿರಲು ವರುಣನು ಸತ್ಯವತಿ ಎಂಬ ತನ್ನ ಮಗಳನ್ನು ರಾವಣನಿಗೆ ಕೊಟ್ಟು ಮದುವೆ ಮಾಡಿಸಿದನು. ಆತನು ಪಟ್ಟಣಕ್ಕೆ ಬಂದು ಭರತಖಂಡವೇ ಮೊದಲಾದ ಮೂರು ಖಂಡಗಳನ್ನು ಆಳಿದನು. ಚಕ್ರರತ್ನಗಳಾದ ಅಸಿರತ್ನವೇ ಮೊದಲಾದುವು ಕೈವಶವಾದುವು. ಅಖಿಲ ವಿದ್ಯಾಧರ ವಲ್ಲಭರು ತನ್ನ ಸಾಹಸಕ್ಕೆ ಸ್ವಾಧೀನರಾದರು. ಇಂತಹ ಕ್ರೋಧೋದ್ಧತನಾಗಿರುವ ರಾವಣನಲ್ಲಿ ಯಾರು ಕಾದಾಡುವರು? ಯುದ್ಧದಲ್ಲಿ ಇಂದ್ರನಿಗೆ ಮುಖ್ಯವಾದ ತ್ರಿಜಗದ್ಭೂಷಣ ಆನೆಯನ್ನು ಕೊಂಡಿಕ್ಕಿದ್ದು ಒಂದು ಸಾಲದೆ? ಅದಕ್ಕಿಂತ ಮಿಗಿಲಾದ ಸಾಹಸ ಉಂಟೆ? ಲೋಕ

ಲೋಕಗಳಲ್ಲಿರುವ ಸಕಲ ಚಕ್ರರತ್ನಗಳನ್ನು ಪುಡಿ ಮಾಡಿದ ರಾವಣನ ಚಂದ್ರಹಾಸ ಖಡ್ಗದ ಇದಿರಲ್ಲಿ ಮಾರಾಂತು ಗೆಲ್ಲುವವರು ಯಾರು?

ಭೂಮಿಯಲ್ಲಿರುವ ಕ್ಷತ್ರ ಕುಲ, ಖೇಚರ ಕುಲಗಳು, ಸಂಗ್ರಾಮ ಕೇಳಿಯಲ್ಲಿ ಸೋಲನನುಭವಿಸಿ, ತನ್ನ ಹತ್ತಿರ ಬಂದು 'ಏನು ನಿಮ್ಮಾಜ್ಞೆ' ಎಂದು ಕೈಕಟ್ಟಿ ನಿಂತುಕೊಂಡಿರುವಾಗ, ಹೊಸ ರಕ್ತವನ್ನು ಕುಡಿದ ಆತುರದ ರಾಕ್ಷಸರ ಬಾಯಲ್ಲಿ ಇನ್ನು ಇದಿರಾದವರನ್ನು ರಾವಣನ ಕೈಯ ಖಡ್ಗದ ಧಾರೆ ಇದಿರಾಗುವುದು.

ಸೈನ್ಯಬಲ, ಸ್ವಂತ ಬಲ, ವಿದ್ಯಾಬಲ, ಮನೋಬಲ ಸ್ಥಿರವಾಗಿರುವ ದಶಕಂಠನನ್ನು ಇದಿರಿಸುವ ಧೈರ್ಯವಿಲ್ಲವಾದುದರಿಂದ ಆತ ದೇವೇಂದ್ರನಿಗೂ ಹೆದರದವನು ಎಂದು ಸುತ್ತಮುತ್ತಣ ವೀರಾಧಿವೀರರು ಹೇಳುತ್ತಿರಲು ಲಕ್ಷ್ಮಣನು ಕೋಪ ಬೆರೆತ ಮುಗುಳ್ನಗೆಯೊಂದಿಗೆ 'ಅಂಥ ಅದಟುತನ ರಾವಣನಿಗೆ ಇರುತ್ತಿದ್ದರೆ, ಆತ ಸೀತೆಯನ್ನು ಕಳವಿನಲ್ಲಿ ಒಯ್ಯಬೇಕಿತ್ತೆ? ಅದೇ ಅವನ ಶೌರ್ಯಕ್ಕೆ ಸಾಕ್ಷಿ ಹೇಳುವುದಿಲ್ಲವೆ? ಆತ ಧೈರ್ಯಶಾಲಿಯಲ್ಲ, ಹೆದರು ಪುಕ್ಕ! ಇಕ್ಷ್ವಾಕು ವಂಶದವರನ್ನು ಗೆಲ್ಲುವುದು ಸುಲಭವೇ? ರಾಮ, ರಾವಣರ ಬಲಾಬಲ ಪರೀಕ್ಷೆ, ಇದಿರು ನಿಂತರೆ ನೋಟವೆಂಬ ತಕ್ಕಡಿಯಲ್ಲಿ ತೂಗಿ ನೋಡಬಹುದು, ರಣರಂಗದಲ್ಲಿ!

'ಸಾಮಾನ್ಯನಲ್ಲಿ ಅವನ ಪರಾಕ್ರಮ ನಡೆದೀತು. ಆದರೆ ನಮ್ಮಲ್ಲಿ ನಡೆಯದು. ರಾಮನ ಬಾಣಗಳನ್ನು ತಡೆವ ಅವಸರದಲ್ಲಿ, ಅವನ ನಡೆ ಕೆಟ್ಟು, ಆತ ಮಧ್ಯದಲ್ಲಿ ನಿಂತು ಹೋದಾನು! ಇದಕ್ಕೆ ಕಾಲಾವಕಾಶವಿಲ್ಲ, ನಾಳೆಯೇ ರಣರಂಗದಲ್ಲಿ ನೋಡಬಹುದು. ಬಾಣಹತಿಗೆ ತುತ್ತಾಗಿ, ಸಂಕಷ್ಟದಿಂದ ತಾಂಡವವಾಡುವ, ರಾವಣನ ತಲೆಯಿಲ್ಲದ ಮುಂಡದ ಆಟವನ್ನು ನೋಡಬಹುದು!' ಎಂದು ಲಕ್ಷ್ಮಣನು ಹೇಳುತ್ತಿರಲು ಜಾಂಬವನೇ ಮೊದಲಾದ ಪ್ರಧಾನರು - ನಮಗೆ ಅಧಿರಾಜನಾಗಿ, ಖೇಚರರಿಗೆಲ್ಲ ವಲ್ಲಭನಾಗಿ ಖೇಚರ ಸ್ತ್ರೀಯರಿಗೆ ಪ್ರಿಯಕರನಾಗಿ ರಾಜ್ಯವನ್ನು ಆಳುವ ವಿಲಾಸವನ್ನು ಪಡೆದವನನ್ನು ಅವನ ದೇಹವೊಂದುಳಿಯುವಂತೆ ದೇವಿಯನ್ನು ತರುವುದು. ಇದಲ್ಲದೆ ಆತನಲ್ಲಿ ಹೋರಾಡಿ ಸೋಲಿಸಿ ತರುವುದು ನಮ್ಮಿಂದಾಗದು. ಅವನೊಡನೆ ಯುದ್ಧ ಮಾಡುವುದು ನಮ್ಮಿಂದಾಗದು ಎಂದು ಹೇಳಲು ರಾಮನು -

"ಆತನೊಡನೆ ಯುದ್ಧ ಮಾಡಲು, ಸೇನೆಯ ಭಯಭೀತರ ನೆರವು ನಮಗೇಕೆ ಬೇಕು? ರಾವಣನಿಗೆ ಆತಂಕವನ್ನು ಒದಗಿಸುವ ನನ್ನ ತಮ್ಮನ ಒರೆಯಿಂದ ಎಳೆದು ಸಿದ್ಧವಾದ ಖಡ್ಗವೇ ಇದೆ. ಅದು ನೆರವಲ್ಲವೆ? ಅನ್ಯಕಾಂತೆಯನ್ನು ಅಪೇಕ್ಷಿಸುವುದು ರಘುಕುಲಕ್ರಮಕ್ಕೆ ವಿರೋಧ ವಾದುದು. ಈ ದುರಾತ್ಮನು ಅಂತಹ ಹೇಸಿಗೆಯ ಕೆಲಸಕ್ಕೆ ಕೈಯಿಕ್ಕಿ ಯುದ್ಧಕ್ಕೆ ನಿಂತರೆ, ಅಂಥವನನ್ನು ನನ್ನ ಅಮೋಘ ಬಾಣಕ್ಕೆ ದಿಗ್ಬಲಿ ಕೊಡುತ್ತೇನೆ. ಯುದ್ಧಕ್ಕೆ ಹೆದರಿ ಜಾನಕಿಯನ್ನು ನನಗೆ ಒಪ್ಪಿಸಿದರೆ ಲೇಸು. ಈ ವಿಷಯದಲ್ಲಿ ಮಂತ್ರಾಲೋಚನೆಗೆ ದಾರಿ ಇಲ್ಲ" ಎಂದನು.

ಹೆದರಿಕೆ ಇಲ್ಲದ ಉದಾತ್ತ ರಾಘವನ ಮಾತನ್ನು ಕೇಳಿ ಜಾಂಬೂನದನು ವಿಸ್ಮಯಪಟ್ಟು, ರಣದಲ್ಲಿ ಕಾದಾಡಿ ರಾವಣನನ್ನು ಗೆಲ್ಲುವ ದುರ್ಧರ ಸಾಹಸವನ್ನು ಪರೀಕ್ಷಿಸುವ ಮನಸ್ಸಿನಿಂದ

ರಾವಣನಿಗೆ ದಿವ್ಯಮುನಿಗಳು ಹಿಂದೆ ಹೇಳಿದ ವೃತ್ತಾಂತವನ್ನು ಹೇಳಲು ಆತುರಪಟ್ಟನು:

"ದೇವಾ, ಮೊದಲೊಮ್ಮೆ ದಶಕಂಠನು ಅನಂತವೀರ್ಯ ಕೇವಲಿಗಳ ಕಾಲಬುಡದಲ್ಲಿ ಕುಳಿತು ಧರ್ಮವನ್ನು ಕೇಳುತ್ತ 'ನನಗೆ ಅನ್ಯರ ಕೈಯಲ್ಲಿ ಮರಣವಾಗುತ್ತದೋ ಇಲ್ಲವೋ ತಿಳಿಸಿರಿ' ಎಂದು ಕೇಳಿದನು. ಅವರು 'ಯಾರು ಸಿದ್ಧ ಶೈಲವನ್ನು ಎತ್ತುತ್ತಾರೋ ಅವರ ಕೈಯಿಂದ ಮರಣ' ಎಂದು ಹೇಳಿದ್ದರು. ಸಿದ್ಧ ಶೈಲವನ್ನು ಎತ್ತುವವರ್‍ಯಾರೂ ಈಗ ಇಲ್ಲವಾದ್ದರಿಂದ ನನಗೆ ಮರಣವೇ ಇಲ್ಲ - ಎಂದು ರಾವಣನು ಹರ್ಷಿತನಾದನು ' ಎನಲು ಲಕ್ಷ್ಮಣನು

"ಕುಲಪರ್ವತವನ್ನು ಎತ್ತುವ ಮಹಾ ಸಾಮರ್ಥ್ಯಕ್ಕೆ ನಿರ್ವಾಣ ಶೈಲವನ್ನೆತ್ತುವುದು ಯಾವ ದೊಡ್ಡ ಕೆಲಸ? ನಿರ್ವಾಣ ಶೈಲ ಕುಲಪರ್ವತದ ಇದಿರಿಗೆ ಜಳ್ಳು ಕಾಳಿನಂತೆ ಎಂಬಲ್ಲಿವರೆಗೆ ನಾನದನ್ನು ಸಾಧಿಸುತ್ತೇನೆ." ಎನ್ನಲು, ಜಾಂಬೂನದನು ಅದನ್ನು ಸಂಗ್ರಹಿಸಿ ಸುಗ್ರೀವ, ನಳ, ನೀಲ, ಅರ್ಕಮಾಲಿ ಮುಂತಾದವರನ್ನು ವಿಮಾನದಲ್ಲೇರಿಸಿಕೊಂಡು ನಿರ್ವಾಣ ಪರ್ವತಕ್ಕೆ ಹೋಗಿ ಪ್ರದರ್ಶನ ಮಾಡಿ ಪೂಜಿಸಲು, ಲಕ್ಷ್ಮಣನು ಸಿದ್ಧ ಸ್ತವನ ಮಾಡಿ -

ಪಾದಾಘಾತಕ್ಕೆ ಭೂಮಿಯೇ ಬಾಯ್ಬಿಡಲು, ಭುಜಾದಂಡಗಳನ್ನು ಸಾರ್ಚಿ ಸಡಿಲಾದ ಭೂಮಿಯ ಸಂದುಗಳನ್ನು ಜೋಡಿಸಿ, ನಿಂತ ನೆಲೆಯಿಂದ ಬಲಶಾಲಿಯಾದ ಲಕ್ಷ್ಮಣನು ಹೊರಟು ದಶಕಂಠನ ಕುತ್ತಿಗೆಯ ಬೇರನ್ನೆ ಕೀಳುವಂತೆ ಸಿದ್ಧಶೈಲವನ್ನು ಎತ್ತಿ ಇಂತಹ ಅದ್ಭುತವನ್ನು ಯಾರು ಮಾಡಿಯಾರು ಎಂಬಂತೆ ಮಾಡಿ ತೋರಿಸಿದನು.

ಗಿರಿ, ನಿರ್ಝರಗಳಿಂದ ನೀರ ಪ್ರವಾಹ ಸುರಿಯಿತು. ಭರತ ಮೊದಲಾದ ತ್ರಿಖಂಡಗಳಲ್ಲಿಯೇ ಮುಂದೆ ದಶಕಂಧರನೆಂಬವನ ವಧೆಯಾಗುತ್ತದೆ ಎಂಬ ವದಂತಿ ಸ್ಪಷ್ಟವಾಗುವಂತಾಯಿತು!

◆

೬. ಲಂಕಾದಹನ

ದೇವತೆಗಳಿಂದ ಹೂವಿನ ಮಳೆ, ವಾದ್ಯಘೋಷ, ಸುರರ ಜಯ ಜಯಕಾರ ಅಧಿಕವಾಗುತ್ತಿರುವಂತೆ ವಾನರ ಚಿಹ್ನ ಪ್ರಮುಖರೂ, ಖೇಚರ ಪ್ರಮುಖರೂ ಇದೇನೆಂದು ಆಶ್ಚರ್ಯಪಟ್ಟರು.

ಆಗ ಪದ್ಮದೇವನು, 'ಸೀತೆ ಅದೆಲ್ಲಿದ್ದಾಳೆಂದು ಇದುವರೆಗೆ ತಿಳಿಸದ ಅನ್ಯಾಯವೊಂದೇ ಸಾಲದೆ ನಮ್ಮ ಪರಾಕ್ರಮದ ಹೆಚ್ಚುಗಾರಿಕೆಯನ್ನು ಎತ್ತಿ ತೋರಲು' ಎನಲು ಜಾಂಬವಂತನು, 'ನ್ಯಾಯವಾದುದನ್ನು ತಮಗೆ ತಿಳಿಸಿದರೂ, ಮಾಡಿದ ಅನ್ಯಾಯವನ್ನು ನಿಮಗೆ ಹೇಳುವವರಿಲ್ಲ, ಮಾಡಿದವರಿಲ್ಲ. ಆದರೂ ಕನ್ನಡಿಯ ಕೊಳೆಯನ್ನು ಪ್ರಯತ್ನಪೂರ್ವಕವಾಗಿ ಒರಸಿ ತೆಗೆಯೋಣ, ಮುಂದೆ ಕೊಳೆ ಕಾಣದು' ಎಂದನು. ಮತ್ತೆ 'ರಾವಣನ ತಮ್ಮ ವಿಭೀಷಣನು ಶುದ್ಧಾಚಾರ, ವಿಚಾರಪರ. ಈತ - ಪರಾಂಗನೆಯಾದ ಸೀತೆಯನ್ನು ಅಪೇಕ್ಷಿಸುವುದು ಯೋಗ್ಯವೆ? ಅಲ್ಲ. ಆದ್ದರಿಂದ ಕಳುಹಿಸಿ ಅವಳನ್ನು ಹಿಂದೆ - ಎಂದು ಅಣ್ಣನಿಗೆ ಹೇಳಿ ಅವಳನ್ನು ಹಿಂದಕ್ಕೆ ಕಳುಹಿಸುವಂತೆ ಮಾಡಿಯಾನು, ವಿಭೀಷಣನ ಮಾತನ್ನು ರಾವಣ ಮೀರಲಾರ. ಆದ್ದರಿಂದ ಕೂಡಲೇ ವಿಭೀಷಣನಿಗೆ ದೂತರ ಮೂಲಕ ಸಂದೇಶ ಕಳುಹಿಸಿದರೆ ರಾವಣನು ಸೀತೆಯನ್ನು ಹಿಂದೆ ಕಳುಹಿಸಬಹುದು ಇಲ್ಲವಾದರೆ ಬೆಟ್ಟ ಬೆಟ್ಟಗಳು ಹೊಯ್ದಾಡಿಕೊಂಡಂತೆ ಕಾಳಗವು ಇದೆಯಲ್ಲವೆ?

'ದೂತನನ್ನಟ್ಟುವುದು ನ್ಯಾಯವಾದ ಮಾರ್ಗ. ನಮ್ಮ ಕಡೆಯ ಕುಶಲ ವಾರ್ತೆಯನ್ನು ಕೇಳದಿದ್ದರೆ ಸೀತಾದೇವಿಗೆ ಮರಣ ಭಯವಿದೆ. ಕಾಲ ವಿಳಂಬದಿಂದ ಅನಾಹುತವಾಗುವುದು ನಿಜ' ಎಂದು ಜಾಂಬವಂತನು ಒತ್ತಿ ಹೇಳಿದನು.

ಮತ್ತೆ ಮುಂದುವರಿದು,

ಈ ಮಹಾಶರಧಿ, ವಾಯು, ಸೂರ್ಯನೇ ಮೊದಲಾದ ರಕ್ಷಣೆಗಳನ್ನು ದಾಟಿ, ಅನೇಕಾನೇಕ ವಿದ್ಯಾಪ್ರಾಕಾರಗಳು ಸ್ವಾಧೀನವಿರುವ ರಾಕ್ಷಸ ಚಕ್ರವರ್ತಿಯಾದ ರಾವಣನ ಪಟ್ಟಣಕ್ಕೆ ಯಾವನು ಹೋಗಬಹುದು? ಇಲ್ಲಿರುವವರಲ್ಲಿ ಯಾರೊಬ್ಬರೂ ಹೋಗಿ ಕಾರ್ಯ ಸಾಧಿಸಿಕೊಂಡು ಬರಲು

ಸಮರ್ಥರಲ್ಲ! ಇರುವವನೊಬ್ಬನೇ ಆಂಜನೇಯ. ಆ ಹನುಮಂತನನ್ನು ರಾವಣನು ಮನ್ನಿಸುತ್ತಾನೆ. ವಿಭೀಷಣನಿಗೆ ಹನುಮಂತನು ಒಳ್ಳೆಯವನಾಗಿದ್ದಾನೆ. ಅಭೇದ್ಯವಾದ ಲಂಕೆಯನ್ನು ತನ್ನ ಬಾಹುಬಲದಿಂದ ಹೊಗಲು ಸಾಮರ್ಥ್ಯವಿರುವವನು ಅಂಜನೆಯ ಮಗನಾದ ಆಂಜನೇಯ. ಅವನೇ ಸೀತಾದೇವಿಯನ್ನು ಬಿಡಿಸಿ ತರುವವನು, ಕಾದಿ ಬಿಡಿಸಿ ತರುವವನು. ದಶಕಂಠನು ಇದಿರು ನಿಂತರೂ ಈ ಕೆಲಸವನ್ನು ಹನುಮಂತನೊಬ್ಬನಲ್ಲದೆ ಇನ್ಯಾರೂ ಮಾಡುವವರಿಲ್ಲ!"

ಜಾಂಬವನು ಹೀಗನ್ನಲು, ಎಲ್ಲರೂ ಆ ಮಾತಿಗೆ ಸಂತೋಷಪಟ್ಟರು. ಸುಗ್ರೀವನು ದೂತನಿಗೆ ವಿಷಯವನ್ನು ತಿಳಿಸಿ ಅವನನ್ನು ಆಕಾಶಮಾರ್ಗದಿಂದ ಹನುಮರ ದ್ವೀಪಕ್ಕೆ ಕಳುಹಿಸಿದನು. ದೂತನು ಬಂದು ಸವಿಸ್ತಾರವಾಗಿ ಹನುಮಂತನಿಗೆ ವಿಷಯವನ್ನು ತಿಳಿಸಲು –

"ನನಗೆ ತಿಳಿದಿರುವ ಸುಗ್ರೀವನ ಹಗೆಯನ್ನು ತೀರಿಸುವ, ಮಾಡಿದ ಉಪಕಾರಕ್ಕೆ ನಾನು ನನ್ನನ್ನೇ ಅರ್ಪಿಸಿಕೊಳ್ಳುವೆನೆಂದು ಹನುಮಂತನು ನಿಶ್ಚಯಿಸಿದನು. ತಕ್ಷಣ ವಿಮಾನವನ್ನೇರಿ ಕಿಷ್ಕಿಂಧೆಗೆ ಮುಟ್ಟಲು, ಸುಗ್ರೀವನು ಇದಿರಿಗೆ ಕಂಡು ರಾಮನ ರಾಜಮಂದಿರಕ್ಕೆ ಬಂದು ಕಾಣಿಕೆಯೊಡನೆ ಚರಣಗಳಿಗೆ ವಂದಿಸಿ ಮಣಿಮಯಾಸನದಲ್ಲಿ ಕುಳಿತು ರಾಮನೊಡನೆ – ದೇವಾ ನನ್ನ ಜನ್ಮಕ್ಕೂ ಅಖಿಲ ಜಗತ್ತಿನ ಜನ್ಮಕ್ಕೂ ಪರಮೋಪಕಾರ ಮಾಡಿದಿರಿ. ಆದ್ದರಿಂದ ನಮ್ಮ ಸೇವೆಯನ್ನು ಸ್ವೀಕರಿಸಬೇಕು" ಎಂದು ವಿಜ್ಞಾಪಿಸಿದನು.

ಧೀರಪ್ರಕೃತಿಗೂ, ಸೌಮ್ಯವಾದ ಆಕಾರಕ್ಕೂ ಅನುಗುಣವಾದ ನಯವಿನಯದ ಮಾತಿಗೂ, ರಘುಕುಲವೀರನು ಮೆಚ್ಚಿ ಅವನನ್ನು ದಯಾದೃಷ್ಟಿಯಿಂದ ನೋಡಿದನು. ನೋಡಿ ಅಪರಿಮಿತವಾದ ದಯಾಸಾಗರನು, ನೃಪರತ್ನನೂ ಭಟರತ್ನನೂ ಆದ ಆಂಜನೇಯನಿಗೆ ಅಪೂರ್ವವೆನಿಸುವ ರತ್ನಖಚಿತವಾದ ಕರ್ಣ ಕುಂಡಲಗಳನ್ನು ಕೊಟ್ಟನು. ಆಗ ಮಹೋದಧಿಯು –

"ಹನುಮಂತ, ನೀನಲ್ಲದೆ ಬೇರೆ ಯಾರೂ ಲಂಕೆಗೆ ಹೋಗಿ ದಶಕಂಠನೊಡನೆ ಮಾತಾಡಿ ಜಾನಕಿಯ ಸುದ್ದಿಯನ್ನು ತರುವವರಿಲ್ಲ" ಎನಲು ಮಾರುತಿಯು ಮೇಘಧ್ವನಿಯಂತೆ –

"ನಯದಿಂದ ತರುವೆ, ಸಾಧ್ಯವಾಗದಿದ್ದರೆ ಶೌರ್ಯದಿಂದ ತರುವೆ, ಆದರೆ ಯಾರೂ ತಿಳಿಯದಂತೆ ಮಾಯಾ ರೂಪದಿಂದ ದೇವಿಯನ್ನು ನೋಡಿ ಆಕೆಯ ಸುದ್ದಿಯನ್ನು ತರುವವನಲ್ಲ. ಇದಕ್ಕೆ ವಿಘ್ನವನ್ನು ತಂದರೆ ಆನೆ ಕೊಳವನ್ನು ಹೊಕ್ಕಂತೆ ಲಂಕೆಯನ್ನು, ಅಲ್ಲಿರುವವರನ್ನು ಹೆದರಿಸಿ ಜಾನಕಿಯ ಸುದ್ದಿಯನ್ನು ತರುತ್ತೇನೆ" ಎಂದು ಪ್ರತಿಜ್ಞೆ ಮಾಡಿದನು.

ಈ ಪ್ರತಿಜ್ಞೆಯನ್ನು ಕೇಳಿ ರಾಮನು,

"ಜನಕಜೆಯ ಸುದ್ದಿಯನ್ನು ತರುವ ನಿಯೋಗ ನಿನಗೆ, ಯುದ್ಧದಲ್ಲಿ ಮೇಲೆ ಬಿದ್ದ ದಶಾಸ್ಯನನ್ನು ಸೋಲಿಸಿ ದೇವಿಯನ್ನು ತರುವ ನಿಯೋಗ ಲಕ್ಷ್ಮಣನಿಗೆ – ಬೇರೆಯವರಿಗೆ ಸಂಬಂಧವೇ ಇಲ್ಲ. ತನ್ನ ದುಃಖವನ್ನು ಇನ್ನೊಬ್ಬರಿಗೆ ಹೇಳುವ ಸೌಲಭ್ಯವಿಲ್ಲ. ಮರೆತೂ ನನ್ನ ಅಗಲಿಕೆಯನ್ನು ಅನುಭವಿಸಿದವಳಲ್ಲ! ಭಯದಿಂದ ಪ್ರಾಣವನ್ನು ಬಿಡುವ ಸ್ಥಿತಿಯನ್ನು ಸೀತೆ ಅನುಸರಿಸದಂತೆ ಮಾಡುವುದು. ಆಕೆ ಪ್ರಾಣ ಬಿಟ್ಟ ಮೇಲೆ ರಕ್ಕಸನನ್ನು ಕೊಂದರೇನು? ಕೊಲ್ಲದಿದ್ದರೇನು? ಅದು

ಲೆಕ್ಕವೇ" ಎಂದು ಹೇಳುತ್ತ ರಾಮನು ತನ್ನ ಮತ್ತು ಸೀತೆಯ ಬಗೆಗೆ ವೈಯಕ್ತಿಕ ವಿಷಯಗಳನ್ನು ತಿಳಿಸಿದನು. ಅದಲ್ಲದೆ -

ಜನಕಜೆಯ ಮುಖಕಮಲವನ್ನು ಅರಳಿಸಿ ವಿರಹದ ಕತ್ತಲೆಯನ್ನು ಕಳೆಯಲು, ಹನುಮಂತನ ಕೈಯಲ್ಲಿ ಸೂರ್ಯ ತೇಜಸ್ಸನ್ನು ಮಿಗುವ ಮುದ್ರಿಕೆಯನ್ನಿತ್ತು ತನಗೆ ಆಕೆಯ ಚೂಡಾಮಣಿಯನ್ನು ತರುವುದು ಎಂದು ಹೇಳಲು - ಮಹಾಪ್ರಸಾದವೆಂದು ಕೈಮುಗಿದು ಅವರನ್ನು ಬೀಳ್ಕೊಂಡು ಪ್ರಬಲ ಬಲವನ್ನು ಒಡಗೊಂಡು ವಿಮಾನಾರೂಢನಾಗಿ ಪವಮಾನ ಸುತನಾದ ಹನುಮಂತನು ಆಕಾಶಮಾರ್ಗಗಳಲ್ಲಿ ತೆಂಕಮುಖವಾಗಿ ಪಯಣಿಸಿ ಲಂಕೆಯ ಹೊರಪ್ರದೇಶದಲ್ಲಿ ಬೀಡುಬಿಟ್ಟು ಪಟ್ಟಣವನ್ನು ಹೊಗುವ ಸಮಯದಲ್ಲಿ -

ಆ ಪಟ್ಟಣವು ವಿಭೀಷಣನ ಷೈಕುರ್ವಣ ವಿದ್ಯಾಕಾರಣವಾಗಿ, ಅಭೇದ್ಯವಾಗಿತ್ತು. ಮಾಳಿಗೆಯ ಮೇಲೆ ಉಗ್ರ ಕಾಳಿಂಗಗಳ ಹಿಂಡು, ಭೂತಾವಳಿ, ರೌದ್ರ ಸತ್ವಗಳ ಗುಂಪು, ಲೋಕಕ್ಕೆ ಅಪೂರ್ವವಾದ ವಿದ್ಯಾಪರಿಣತಿ - ನೋಡುವ ಕಣ್ಣಿಗೆ ಭಯಂಕರವಾಗಿ ಕಾಣಿಸಿತು.

ಅದರ ಸ್ವರೂಪವನ್ನೆಲ್ಲ ಮಂತ್ರಿ ಹನುಮಂತನಿಗೆ ಹೇಳುತ್ತಿರಲು, ಆತ ಆತಂಕಿತನಾಗಿ ವಿಮಾನದಿಂದ ಹೊರಬಂದು, ವಜ್ರಕವಚವನ್ನು ವಿದ್ಯಾಪ್ರಕಾರಗಳನ್ನೆಲ್ಲ ಧ್ವಂಸ ಮಾಡಿ, ದ್ವಾರ ಕಾಯುತ್ತಿದ್ದ ವಜ್ರಮುಖನನ್ನು ಯಮನ ಬಾಯೊಳಗೆ ತುರುಕಿ, ಅವನ ಮಗಳು ಲಂಕಾಸುಂದರಿಯನ್ನು ಮದುವೆಯಾಗಿ, ಲಂಕೆಯನ್ನು ಹೊಕ್ಕು, ವಿಭೀಷಣನನ್ನು ಕಂಡು, ಕುಶಲವಾರ್ತೆಯ ಅನಂತರ -

''ಕುಲ, ಸತ್ಯ ಮತ್ತು ಯೋಚನಾಶುದ್ಧಿ, ಚಾರಿತ್ರ್ಯ, ತ್ಯಾಗ, ಚಲ, ಶೌರ್ಯ ಕಲಾವೈಭವಗಳನ್ನು ಕೊಂಡಾಡಿಕೊಳ್ಳುತ್ತಿರುವ ಈ ರಾವಣನು, ಭೂಮಿಯ ಜನರೆಲ್ಲ ಹಳಿಯುವಂತಹ, ಅನ್ಯವಧುವನ್ನು ಬಯಸುವಂತಹ, ದುರ್ಮೋಹದಿಂದ ತನ್ನ ಜೀವಕ್ಕೆ ಹಾನಿಯಾಗುವುದನ್ನು ತಪ್ಪಿಸದಿದ್ದರೆ - ಉಪೇಕ್ಷಾದೋಷವಾಗದೆ?'' ಎಂದು ಕೇಳಿದನು.

ಮುಂದುವರಿದು - "ತನ್ನ ಶುದ್ಧ, ಶೌಚಗುಣವನ್ನು ಗಮನಿಸದೆ, ಅವನ್ನು ರಕ್ಷಿಸಲು ಪ್ರಯತ್ನಿಸದೆ, ಪರವಧುವನ್ನು ಅಪೇಕ್ಷಿಸಿ, ಶರಣಾಗತ ರಕ್ಷಣ ದಕ್ಷನೂ, ದಕ್ಷಿಣ ಭರತ ತ್ರಿಖಂಡ ಧರಣಿ ಪತಿಯೂ ದಾನವ ಚಕ್ರವರ್ತಿಯೂ ಆದ ರಾವಣ ಅಪಕೀರ್ತಿಗೆ ಭಾಜನನಾದನೆನ್ನುವ ಮಾತು ಅವನ ಖ್ಯಾತಿಗೆ ತಪ್ಪಾಗದೆ? ಇನ್ನಾದರೂ ಸೀತೆಯನ್ನು ರಾಮನಿಗೆ ಒಪ್ಪಿಸಿ, ನಿಮ್ಮ ಕುಲಕ್ಕೆ ಬರುವ ಅಪವಾದವನ್ನು ತಪ್ಪಿಸುವುದು. ಇಂಥ ವಿಷಯದಲ್ಲಿ ನಿಮ್ಮಂಥವರು ಉಪೇಕ್ಷೆ ತೋರಿದರೆ ಭೂಮಿ ಇರುವವರೆಗೂ ನಿಮಗೆ ಅಪಕೀರ್ತಿ ತಪ್ಪದು - ಎನಲು ವಿಭೀಷಣನು - ಅಯ್ಯಾ ಹನುಮಂತ 'ದನುಜೇಂದ್ರನಿಂದ ಇಂಥ ಕೆಲಸ ಇನ್ನಾಗದು' ಎಂದು ತಿಳಿದು ನಾನೇ ಕಂಡೂ ಕಾಣದಂತಹ ಈ ಪರಪ್ರೇಯಸೀ ಪ್ರೇಮದಿಂದ ಆಗುತ್ತಿರುವ ಅನಾಹುತಗಳನ್ನು ಅಣ್ಣನಿಗೆ ತಿಳಿಸಿ ಹೇಳಿದರೂ, 'ಇದು ಸೂಕ್ತ' ಎಂದು ತಿಳಿದು ಎಚ್ಚೆತ್ತುಕೊಳ್ಳುವವರು ಯಾರು? ಇಂದಿನಿಂದ ಹನ್ನೊಂದು ದಿನಗಳವರೆಗೆ ಸೀತಾದೇವಿ ಅನ್ನ ತ್ಯಾಗ ಮಾಡಿ ತನ್ನ ಕುಲವನ್ನು ವ್ರತವನ್ನು ಉನ್ನತಿಯನ್ನು ಕಾಯ್ದುಕೊಳ್ಳುವಾಗ ನನ್ನಣ್ಣನಿಗೆ ತಾನು ಮಾಡುವ ದುಷ್ಟ ಕಾರ್ಯದಲ್ಲಿ ವೈರಾಗ್ಯ

ಬರಲಿಲ್ಲ. ಪ್ರಮದವನದಲ್ಲಿ ಆಕೆಯನ್ನು ಸೆರೆಯಿಟ್ಟು ತಾನಾಗಿಯೂ, ದೂತರ ಮೂಲಕ ವಾಗಿಯೂ ಎಡೆಗೆಡೆಗೆ ತೊಂದರೆ ಕೊಡುತ್ತಿರುವವರಿಗೆ ಉಚಿತ ಅನುಚಿತ ವರ್ತನೆ ಗೊತ್ತಿದೆಯೆ? ಕಾಮನಿಗೆ ವಶವಾಗಿ, ತನ್ನ ಯೋಗ್ಯತೆಯನ್ನು ಕಳಕೊಳ್ಳದವನು ಯಾರು?" - ಎಂದು ನುಡಿಯಲು ಹನುಮಂತನು ಕೇಳಿ, ಕರುಣಾರಸ ಪ್ರವಾಹವೇ ಎಳೆದೊಯ್ಯುವಂತೆ ವಿಭೀಷಣನ ಅರಮನೆಯಿಂದ ಹೊರಟು ಅದೃಶ್ಯನಾಗಿ, ಸೀತೆಯಿದ್ದ ಪ್ರಮದವನವನ್ನು ಹೊಕ್ಕು ಮಂಡೋದರಿಯೇ ಮೊದಲಾದ ಖೇಚರಸ್ತ್ರೀಯರು, ದಿನಲಕ್ಷ್ಮಿಯನ್ನು ಬಳಸಿದ ದೀಪಮಾಲೆಯಂತೆ ಕಾಂತಿಹೀನೆಯೂ, ವಿರಹವಿಧುರೆಯೂ ಚೆಲುವಿಕೆಯ ಖನಿಯೇ ಆಗಿ ಹೂಬಿಟ್ಟ ಅಶೋಕವೃಕ್ಷದ ಬುಡದಲ್ಲಿ ಕುಳಿತು -

ಹೊಗೆ ಹತ್ತಿದ ಚಿತ್ರ, ಧೂಳು ಹಿಡಿದ ಬೊಂಬೆ, ಇಬ್ಬನಿ ಬಿದ್ದ ತಾವರೆಯಂತೆ, ಕಪ್ಪುಮೋಡ ಮುಸುಕಿದ ಚಂದ್ರನಂತೆ ಮೃಗಲೋಚನೆ ಸೀತೆ ದುಃಖಿತೆಯಾಗಿ ಹನುಮಂತನಿಗೆ ಕಂಡಳು.

ಅನುಪಮ ರೂಪವಂತೆಯರಾದ ಇಂಥವರು ಖೇಚರ ಸ್ತ್ರೀ ಸಮುದಾಯದಲ್ಲಿ ಬೇರೆ ಯಾರೂ ಇಲ್ಲವೆನ್ನುವಂತೆ, ಖಚರ ಭಟರ ಕಾವಲಿನಲ್ಲಿ ಜಾನಕಿಯೊಬ್ಬಳೇ ಹೀಗಿರುವವಳು. ಅಲ್ಲವಾದರೆ ಇಂಥ ಚೆಲುವಿಕೆಯ ರಾಶಿಯೇ ಆದ ಇವಳನ್ನು ಮದುವೆಯಾಗಲು ರಾಮನು ಆಶೆಪಟ್ಟನೆ? ಎಂದು ಮನಸ್ಸಿನಲ್ಲಿ ಯೋಚಿಸಿ ಹನುಮಂತನು ಪ್ರಮದವನದಿಂದ ಕ್ಷಣ ಮಾತ್ರ ಹೊರಬಂದು ಬೇರೆಯವರು ಕಾಣದಂತೆ ಅಶೋಕವೃಕ್ಷದ ತಳಿರಿನ ಎಡೆಯಿಂದ ತಲೆಮಾತ್ರ ಕಾಣಿಸುವಂತೆ, ಮೊದಲೇ ನಿಶ್ಚಯಿಸಿದಂತೆ ರಾಮನ ಮುದ್ರೆಯುಂಗುರವನ್ನು ಸೀತೆಗೆ ಕೊಟ್ಟು, ಅಲ್ಲಿಂದಲೇ ತಲೆಬಾಗಿದನು. ಸೀತೆಗೆ ಅದನ್ನು ಕಂಡು ಕಣ್ಣುಗಳಲ್ಲಿ ಆನಂದದ ಪುಲಕವು ಹೊರ ಹೊಮ್ಮಿತು. ಅವಳ ಮುಖದಲ್ಲಿ ಮನೋವಿಕಾಸವು ಪ್ರಕಟವಾಯಿತು.

ಹೀಗೆ ಹರ್ಷದ ತೆರೆಗಳೇಳುವ ಮುಖಾರವಿಂದನ್ನು ಕಂಡು, ಕೆಲದಲ್ಲಿದ್ದ ಮಂಡೋದರಿಯೇ ಮೊದಲಾದ ಖೇಚರ ಕಾಂತೆಯರು, ರಾವಣನಲ್ಲಿ ಇದೀಗ ಸೀತೆಗೆ - ಅನುಬಂಧವು ಕೂಡಿ ಬಂತು - ಅದಕ್ಕಾಗಿ ಅವಳು ಸಂತೋಷಪಟ್ಟಳು ಎಂದು ಮಾತಾಡುವುದನ್ನು ಕೇಳಿ ಸೀತೆ -

'ನನಗೆ ಪರ ಪುರುಷರು ನನ್ನ ತಂದೆಗೆ ಸಮಾನರು, ಸಹೋದರರು. ಆದರೆ ಅನುರಾಗವು ರಾಮನ ಆಜ್ಞೆಯಿಂದ ಇಲ್ಲಿವರೆಗೆ ಬಂದು ಸಂತಸವನ್ನು ಕೊಟ್ಟ ದೂತನಿಂದಾಯಿತು' - ಎಂದಳು. ಇದನ್ನು ಕೇಳಿ ಮಂಡೋದರಿ -

'ಸಾಗರವನ್ನು ದಾಟಿ ಬರುವ ಶಕ್ತಿ ಮಾನವರಿಗಿದೆಯೆ? ಯಾರಿಗೂ ಅಭೇದ್ಯವಾಗಿ ಸ್ವರ್ಗ, ಮರ್ತ್ಯ, ಪಾತಾಳದವರೆಗೂ ಹಬ್ಬಿರುವ ಲಂಕೆಯ ವಜ್ರಕೋಟೆಯನ್ನು ಭೇದಿಸುವವರು ಇಲ್ಲಿಗೆ ಬಂದು ರಾಮನ ವರ್ತಮಾನವನ್ನು ಈಕೆಗೆ ತಿಳಿಸಿದರೆನ್ನುವ ಮಾತು ಕರ್ಣ ಪಿಶಾಚರ ವಿಕಲ ಭಾಷೆ ಮತ್ತು ಪಿತ್ತ ವಿಕಾರ', ಎಂದು ನೆರೆದಿದ್ದ ಸ್ತ್ರೀಯರಲ್ಲಿ ಹೇಳುತ್ತಿರಲು ಸೀತೆಯು "ಅಯ್ಯಾ, ಮಹಾನುಭಾವ, ನೀನು ನನ್ನನ್ನು ಈ ಅಪಾರ ದುಃಖಭಾರದಿಂದ ಪಾರು ಮಾಡಿದೆ; ನನಗೆ

ಸುಖವಾರ್ತೆಯನ್ನು ಕೊಟ್ಟೆ. ಆದ್ದರಿಂದ ನನ್ನ ಸಹೋದರ ಪ್ರಭಾಮಂಡಲನಿಗಿಂತಲೂ ಹೆಚ್ಚಿನವನು. ನಿನ್ನ ಪರಿಚಯವನ್ನು ತಿಳಿಸುವೆಯಾ?'' ಎಂದು ಕೇಳಲು -

''ನನ್ನ ತಂದೆ ಖೇಚರವಲ್ಲಭನು. ತಾಯಿ ಅಂಜನಾದೇವಿ, ಹೆಸರು ಹನುಮಂತನೆಂಬುದು. ಜಗತ್ಪತಿಯಾದ ರಾಮನು ನಿಮ್ಮ ಸುದ್ದಿಯನ್ನು ತಿಳಿದು ತನಗೆ ತಿಳಿಸಬೇಕೆಂದು ಅಪ್ಪಣೆ ಕೊಡಲು, ತಾಯೇ ಇಲ್ಲಿಗೆ ಬಂದೆನು. ಕಮಲ ಪುಷ್ಪವನ್ನು ಹಂಸವೂ, ಹೂವುಗಳನ್ನು ತುಂಬಿಯೂ ವನಾಂತಸ್ಥಲಿಯನ್ನು ಮದ್ದಾನೆಗಳೂ ಬಯಸುವಂತೆ ನಿಮ್ಮನ್ನೇ ರಾಮನು ತಾಯೇ, ನೆನೆಯುತ್ತಿರುವನು'' ಎಂದು ಹೇಳುತ್ತ ಇನ್ನೂ ಕೆಲವು ಗುರುತುಗಳನ್ನು ತಿಳಿಸಿದನು. ಇದರಿಂದಾಗಿ ಸೀತೆಗೆ ಸಂಶಯ ನಿವಾರಣೆಯಾಗಿ ಸಂತೋಷ ತಾಳಿ -

''ಹನುಮಂತ ನಿಮ್ಮಂಥವರು ನಿಜವಾಗಿಯೂ ಏಕಾಂಗವಿಜಯಿಗಳಾದ ಧುರೀಣರು. ಇಂಥವರು ಎಷ್ಟು ಜನ ನಿಮ್ಮೊಂದಿಗಿರುವರು?'' ಎಂದು ಕೇಳಿದಾಗ ಮಂಡೋದರಿಯು "ಆತನ ಪರಾಕ್ರಮದ ಹೆಚ್ಚಳವನ್ನು ಹೇಳುವುದಾದರೆ ಮೊದಲೊಮ್ಮೆ ದಶವದನನನ್ನು ರಣಮುಖದಲ್ಲಿ ಇದಿರಾದ ವರುಣನನ್ನು ಸೋಲಿಸಿದನು. ದಶವದನನು ತನ್ನ ತಂಗಿಯಾದ ಚಂದ್ರನಖಿಯ ಮಗಳು ಅನಂಗಪುಷ್ಪೆಯನ್ನು ವಿಜೃಂಭಣೆಯಿಂದ ಮದುವೆ ಮಾಡಿಕೊಟ್ಟು ಮುಂದೆ ಪರಸ್ಪರ ಹಗೆತನವಿಲ್ಲ ದಂತೆ ನಡೆದುಕೊಂಡರು; ಆದರೆ ಮತ್ತೆ ಮಾತಿಗೆ ತಪ್ಪಿ 'ಕಬ್ಬು ಕೊಬ್ಬಿ ರುಚಿ ಕೆಟ್ಟಿತು' ಎಂಬಂತೆ ಖೇಚರ ಪತಿಯಿರುವಾಗ ಅಲ್ಪರಾದ ಮಾನವರೊಡನೆ ಸ್ನೇಹ ಸಂಪಾದಿಸಿದ್ದು ಒಂದಲ್ಲದಿದ್ದರೆ ಈ ಹನುಮಂತನನ್ನು ಹೋಲುವವರು ಇನ್ನಾರು?" ಎನ್ನಲು ಹನುಮಂತನು 'ನನಗೆ ಉದಾತ್ತ ರಾಘವನು ಮಾಡಿದ ಉಪಕಾರಕ್ಕೆ ಪ್ರತಿಯಾಗಿ ತಾನೂ ಉಪಕರಿಸಬೇಕೆಂದು ಬಯಸಿ ನಮಗೆ ಸಹಜವಾದ ಪುರುಷಾಕಾರವನ್ನು ಪ್ರಕಟಿಸಲು ಬಂದೆನು. ಮಂಡೋದರಿ, ನಿಮಗೆ ನಿಮ್ಮ ಕುಲವೆಲ್ಲ ತಿಳಿವಂತೆ, ಜಗತ್ತಿನ ಜನರೆಲ್ಲ ನಿಂದಿಸುವಂತೆ, ಮನುಷ್ಯತ್ವ ತೊರೆದು, ಪರದ ಚಿಂತೆಯಿಲ್ಲದೆ, ಪರಸ್ತ್ರೀಯನ್ನು ಬಯಸಿದ ಪಾಪವನ್ನು ಕಳೆಯುವ ದಾರಿ ಯಾವುದು? ಹೇಳು' ಎನಲು ಆಕೆ ' ಹನುಮಂತ, ನಿನ್ನನ್ನು ಈ ಸುಗ್ರೀವನನ್ನು ಅಸಾಧಾರಣ ಕೋಪಿಷ್ಟನಾದ ದಶಕಂಠನು ನಿಶ್ಚಯವಾಗಿ ಕೊಲ್ಲದೆ ಬಿಡುವನೆ?' ಎಂದು ಹೇಳಿದಾಗ ಸೀತೆ ಕೋಪಿಷ್ಠೆಯಾದಳು. ಆಕೆ ಸಿಟ್ಟಿನಿಂದ "ಕಡಲನ್ನು ದಾಟಿ, ಜಗತ್ರಯ ಕಂಟಕನನ್ನು ರಾಮಲಕ್ಷ್ಮಣರು ಇಪ್ಪತ್ತೆಂಟು ದಿನಗಳಲ್ಲಿ ಕೊಂದು ನಿನಗೆ ದುಃಖವನ್ನುಂಟು ಮಾಡುವರು" ಎಂದು ಹೇಳಿದಳು. ಮಂಡೋದರಿ ಸೀತೆಯ ಮಾತನ್ನು ಕೇಳಿ 'ಕೆಂಪುಜ್ವಾಲೆಯ ಬೆಂಕಿ ಸೂಸುತ್ತಿರಲು, ಬೆಂಕಿಯ ಕಿಡಿಗಳು ಮುಖದಿಂದ ಉದುರುತ್ತಿರಲು, ಕ್ರೂರದಾಡೆಗಳು ಬೆಳೆಯುತ್ತ ಆಕಾಶವನ್ನು ತರುಬುವಂತೆ ಕಾಣಿಸಲು ತನ್ನ ಕೈಗಳನ್ನೆತ್ತಿ ಹೊಡೆಯಲು ಮುಂದಾದಾಗ ವೈರಿಗಳನ್ನು ಗೆಲ್ಲುವ ಅಂಜನಾಸುತನು ಮಧ್ಯೆ ಪ್ರವೇಶ ಮಾಡಿದನು.

ಇದನ್ನು ಸೈರಿಸದೆ ಮಂಡೋದರಿ ಹೊರನಡೆದು ರಾವಣನಲ್ಲಿಗೆ ಹೋಗಲು ಹನುಮಂತನು ಆಹಾರವನ್ನು ತರಿಸಲು, 'ಸಿದ್ಧ ಪ್ರತಿಜ್ಞೆಯಾಗಿ, ಪಂಚ ಪರಮೇಷ್ಠಿಗಳನ್ನು ಭಕ್ತಿಯಿಂದ ಸ್ತುತಿಸಿ,

ಯತಿಗಳಿಗೆ ಅನ್ನವನ್ನು ಮಾನಸಿಕವಾಗಿ ನೀಡಿ, ರಾಘವನ ಚರಣ ಕಮಲಗಳನ್ನು ತನ್ನ ಹೃದಯವೆಂಬ ಕೊಳದಲ್ಲಿಟ್ಟು, ದೇವತೆಗಳೇ ಸಿದ್ಧಪಡಿಸಿದ ಅಮೃತವನ್ನು ಉಂಡ ಬಳಿಕ –

ಹನುಮಂತನು ಅವಳಿಗೆ ಕೈ ಮುಗಿದು –

'ಜನನೀ ನಿಮ್ಮನ್ನು ಈಗಲೇ ರಾಮನಲ್ಲಿಗೆ ಕೊಂಡೊಯ್ಯುವೆ' ಎನಲು ಸೀತೆ 'ನ್ಯಾಯವಲ್ಲ' ಎನ್ನುತ್ತ ಮತ್ತೆ ಹೀಗೆಂದಳು. 'ಧರಣೀವಲ್ಲಭನಾದ ರಾಮನ ಆಜ್ಞೆಯಿಲ್ಲದೆ ನಾನು ಬರುವುದು ಉಚಿತವಲ್ಲ. ರಾಮನಿಗೆ ನನ್ನ ಸ್ಥಿತಿಯನ್ನು ನಿವೇದಿಸು. ಕಾಲಕ್ಷೇಪ ಮಾಡಿ ನೀನು ಇಲ್ಲಿದ್ದರೆ ನಿನಗೆ ಅಪಾಯವಾಗಬಹುದು. ನೀನು ಇಲ್ಲಿ ನಿಲ್ಲದೆ ಮರಳುವುದು ಉಚಿತ. ಇದೋ 'ಈ ಚೂಡಾರತ್ನ' " ಎಂದು ಚೂಡಾರತ್ನವನ್ನು ನೀಡಿದಳು.

ಮತ್ತೆ ಪತಿ ಪತ್ನಿಯರೊಳಗಣ ಕೆಲವು ವಿಷಯಗಳನ್ನು ಹೇಳಿ ಗದ್ಗದ ಕಂಠೆಯಾದ ಸೀತೆಗೆ ಹನುಮಂತನು –

"ಅಮ್ಮಾ ನನಗೆ ಅಪಾಯವನ್ನುಂಟು ಮಾಡುವವನು ಯಾರು? ಯುದ್ಧದಲ್ಲಿ ನನ್ನೆದುರು ನಿಲ್ಲುವವನು ಯಾರು? ನನಗೆ ಬೇಕಾದುದು ರಾಘವನ ಆಜ್ಞೆ! ಅದು ದೊರೆತರೆ ಎಲ್ಲಿಯ ರಾವಣ?" ಎಂದು ಹೇಳಿ ಸೀತೆಯನ್ನು ಬೀಳ್ಕೊಂಡನು.

"ನಾನು ಬಂದುದನ್ನು, ಬರಿಗೈಯಲ್ಲಿ ಹೋಗುವುದನ್ನು ಯಾರೂ ಅರಿಯರು. ಹೀಗಾದರೆ ಕೈಯಲ್ಲಿ ಹಿಡಿದ ಆಯುಧವು ದೂಷಿತವಾಗುವುದು. ನಾಲ್ಕಾರು ಜನರನ್ನು ಇದಿರಿಸಿ – ಸೋಲಿಸಿ ಈ ಉದ್ಯಾನವನ್ನು ಕಿತ್ತು, ಈ ಪಟ್ಟಣವನ್ನು ಸುಟ್ಟು ದಶವದನನು ನನ್ನನ್ನು ತಿಳಿದನೆನ್ನುವವರೆಗೆ, ನಾನು ಬಂದುದನ್ನು ಅವನ ಗಮನಕ್ಕೆ ತಂದು ಆಮೇಲೆ ರಾಮನ ಪಾದಗಳಿಗೆ ವಂದಿಸಬೇಕು" ಎಂದು ಹನುಮಂತನು ಆಸೆಪಟ್ಟನು.

ಅಷ್ಟರೊಳಗೆ ಮಂಡೋದರಿ ರಾವಣನಲ್ಲಿಗೆ ಹೋಗಿ, "ದೇವಾ ಸುಗ್ರೀವನ ಮೂಲಕ ಹನುಮಂತನನ್ನು ಬರಿಸಿ, ಲಂಕೆಗೆ ಸೀತೆಯ ಸುದ್ದಿಯನ್ನು ತಿಳಿಯಲು ಆತ ಇಲ್ಲಿಗೆ ಬಂದನು. ಪ್ರಮದವನದಲ್ಲಿ ಸೀತೆಯ ಸಮೀಪದಲ್ಲಿ ಹನುಮಂತನಿದ್ದುದನ್ನು ಕಂಡೆನು" ಎನ್ನಲು ಗಂಡಸ್ಥಲದಲ್ಲಿ ರಾವಣನು ಬೆವರಿಳಿಸಿಕೊಂಡು ಸಿಟ್ಟಿನಿಂದ ಕಿಡಿಕಿಡಿಯಾದನು. ಕೂಡಲೆ "ಪ್ರಮದವನದಲ್ಲಿ ಯಾರಿದ್ದಾರೋ ಅವರನ್ನು ಕೊಂದು ಬಿಡಿ" ಎಂದು ತನ್ನ ಕಡೆಯ ಸಮರ ಸಾಹಸರೊಡನೆ ಹೇಳಲು, ಬಂದವರು ಯಾರೆಂದು ತಿಳಿಯದೆ ರಾಕ್ಷಸವೀರರು "ಅವರು ಸಾಮಾನ್ಯ ನಾಡಾಡಿಯಾಗಿರಬಹುದು" ಎಂದು ಅಲಕ್ಷಿಸಿದರು. ಬಂದವನು ಚಂಡವಿಕ್ರಮನಾದ ಹನುಮಂತನೆಂದು ತಿಳಿದಿದ್ದರೆ ಬಂದಾರೆ? ಹನುಮಂತನನ್ನು ಇದಿರಿಸಲು ಬಂದ ರಾಕ್ಷಸ ಬಲವನ್ನು ವನದ ಮರಮಟ್ಟುಗಳನ್ನು ಕಿತ್ತು ಆತ ಬಡಿಸಿಕೊಳ್ಳಲು ತೊಡಗಿದಾಗ ಒಂದು ಕಡೆ ಯುದ್ಧವೂ ಮತ್ತೊಂದೆಡೆ ಮರಗಿಡಗಳನ್ನು ಕಿತ್ತೊಗೆಯುವ ವಿನೋದವೂ ಒಟ್ಟೊಟ್ಟಿಗೆ ನಡೆಯಿತು.

ಗಂಧದ ಮರವನ್ನು ಕಿತ್ತು ನಿಶಾಚರ ಬಲವನ್ನು ಹೊಡೆದು ಕೊಂದು ರಾಕ್ಷಸರ ಯಶಸ್ಸೆನ್ನುವ ತಿಲಕವನ್ನೂ ರಾಕ್ಷಸರ ಹೆಂಡಂದಿರ ಹಣೆಯ ತಿಲಕವನ್ನೂ ಪವಮಾನಸುತನು ಅಳಿಸಿ ಹಾಕಿದನು. ಹನುಮಂತನ ಈ ಅಟ್ಟಹಾಸಕ್ಕೆ ಕೋಗಿಲೆಗಳು ಬೆಚ್ಚಿ ಮಾವಿನಮರದಿಂದ ಹಾರಿದವು. ಗಿಳಿಗಳ ಹಿಂಡು ಅಡಿಕೆಮರಗಳಿಂದ ಓಡಿತು. ನವಿಲ ಮರಿಗಳು ಹೂಗಳಿಂದಲೂ, ಉನ್ಮತ್ತ ತುಂಬಿಗಳು ಪುನ್ನಾಗ ವನದಿಂದಲೂ ಓಡಿ ಸುರಕ್ಷಿತ ಸ್ಥಳವನ್ನು ಸೇರಿದವು. ಹೀಗೆ ವನಭಂಗವನ್ನು ಮಾಡುತ್ತಲಿರುವುದನ್ನು ರಾಕ್ಷಸ ದೂತನೊಬ್ಬನು ಬಂದು ರಾವಣನಿಗೆ ಬಿನ್ನವಿಸಿದನು.

ದೂತನ ಮಾತನ್ನು ಕೇಳಿ, ಸಿಡಿಲ ಆರ್ಭಟಕ್ಕೆ ಕೆರಳಿದ ಸಿಂಹದಂತೆ, ಸಿಂಹಪೀಠದಿಂದ ಎದ್ದು ರಾವಣನು ಹುಬ್ಬು ಗಂಟಿಕ್ಕಲು ಆಗ 'ಅಪ್ಪಾ, ನೀವು ಬರುವುದುಂಟೆ? ಯುದ್ಧವಿರುವುದು ಪವಮಾನತನಯನಾದ ಹನುಮಂತನೊಡನೆ. ಅವನು ಇದಿರಾಗಿ ಕಾದಿದರೆ ಕೊಂದು ಬಿಡುವೆನು, ಸೆರೆಸಿಕ್ಕರೆ ನಿಮ್ಮ ಪಾದಮೂಲದಲ್ಲಿ ತಂದು ಒಪ್ಪಿಸುತ್ತೇನೆ. ಈಗ ಹೇಳಿ ಏನು ಮಾಡಬೇಕು' ಎಂದು ಇಂದಗಿಯು ಕೇಳಲು -

ರಾವಣನಿಂದ ಯುದ್ಧಕ್ಕೆ ಅಪ್ಪಣೆ ಪಡೆದು, ಸಮರಸನ್ನಾಹದೊಡನೆ ಇದಿರು ನಿಂತ ಇಂದಗಿಯನ್ನು ಕಂಡು ಹನುಮಂತನು, ಪಟ್ಟಣದ ಹೊರಗೆ ನಿಲಿಸಿದ ತನ್ನ ಸೈನ್ಯವನ್ನು ಬರಿಸಿ ವಿಜಯರಥಾರೂಢನಾಗಿ ಲಂಕಾಪಟ್ಟಣವೇ ತಲ್ಲಣಿಸುವಂತೆ ಹೋರಾಡಿ, ಖ್ಯಾತಿವಂತರಾದ ರಾಕ್ಷಸ ನಾಯಕರನ್ನು ಕೊಂದು, ಹನುಮಂತನು ಯೋಚಿಸಿದನು - ಖಾಡಾಖಾಡಿಯಾಗಿ ಯುದ್ಧ ಮಾಡುವ ಅಪ್ಪಣೆಯನ್ನು ತಾನು ರಾಮನಿಂದ ಪಡೆಯಲಿಲ್ಲ. ಹೀಗಿರುವಾಗ ರಾಕ್ಷಸರೊಡನೆ ಕಾದಾಡುವುದರಲ್ಲಿ ಹುರುಳಿಲ್ಲ. ಆದ್ದರಿಂದ ಇವರಿಗೆ ಸೆರೆ ಸಿಕ್ಕಿದಂತೆ ನಟಿಸಿ, ದಶಕಂಠನನ್ನು ಹೆದರಿಸಿ ಬಗ್ಗುವಂತೆ ಮಾಡಲು ಲಂಕೆಯನ್ನು ಅಗ್ನಿಗೆ ಆಹುತಿ ಕೊಡುವ ಉದ್ಯೋಗದಲ್ಲಿ ತೊಡಗುವೆನು - ಎಂದು ನಿಶ್ಚೈಸಿದನು.

ಸೋತನೆಂಬಂತೆ ಇಂದಗಿಗೆ ಸೆರೆಸಿಕ್ಕಲು, ಅವನು ಹನುಮಂತನನ್ನು ಸೆರೆ ಹಿಡಿದು ದಶಕಂಠನ ಇದಿರು ನಿಲ್ಲಿಸಿ ಇಂದಗಿಯು 'ಇನ್ನು ನೀವೇ ಏನು ಮಾಡುವುದೆಂದು ತೀರ್ಮಾನಿಸಿರಿ' ಎಂದನು.

ರಾವಣನು 'ಎಲಾ ಹನುಮಂತ, ತನ್ನ ಕುಲದ ಯೋಗ್ಯತೆಯನ್ನು, ಮಹಿಮೆಯನ್ನು ತಿಳಿದು ಖೇಚರಪ್ರಮುಖ, ವಾನರಪ್ರಮುಖನಾಗಿ ಮಾನವನೊಬ್ಬನ ದೂತನಾಗಿ ಲಂಕೆಗೆ ಬಂದು ಇಂದಗಿಯೊಡನೆ ಹೋರಾಡಲು ಸಿದ್ಧನಾದೆಯಲ್ಲ! ನಿನ್ನಲ್ಲಿ ನಾನಿಟ್ಟ ನಂಬಿಕೆಯನ್ನು ಗಣಿಸದೆ, ಪರಬಲವನ್ನು ಸೇರಿ ದೋಷಕ್ಕೆ ಗುರಿಯಾದೆಯಲ್ಲ' - ಎಂದು ಖೇದಪಟ್ಟನು. ಆದರೆ ಪವಮಾನ ಸೂನುವು ಹೀಗೆಂದನು -

" 'ತೋಯದ ವಾಹನನ ಕುಲದ ಹಿರಿಮೆಯನ್ನು ತಿಳಿಯದೆ, ನಡತೆ ತಪ್ಪಿ, ಕುಲಕ್ಕೇ ನಿಂದೆ ಬರುವಂತೆ - ಪರಸ್ತ್ರೀಯನ್ನು ಅಪೇಕ್ಷಿಸಿದ ದುಷ್ಟ, ಯಾರು ಎಂಬುದನ್ನು ನೀವೇ ನಿಮ್ಮಲ್ಲಿ ತಿಳಿದುಕೊಳ್ಳುವುದು. ದಶಮುಖನು ಧರ್ಮವನ್ನು ಕಡೆಗಣಿಸಿದ್ದನ್ನು ತಿಳಿದೂ, "ಅದು ಕೂಡದು"

ಎಂದು ಅವನಿಗೆ ತಿಳಿ ಹೇಳಿ, ಅವನನ್ನು ಸರಿದಾರಿಗೆ ತರದೆ ಇದ್ದುದು ಈ ಅಧರ್ಮಕ್ಕೆ ಕಾರಣ ಎಂದು ನಿಶ್ಚಯವಾಗುವುದಿಲ್ಲವೆ?''

''ಲಕ್ಷ್ಮಣನ ಕೈಯಿಂದ ರಣಭೂಮಿಯಲ್ಲಿ ನಿಮಗೂ ರಾವಣನಿಗೂ ಮರಣ ಎಂದು ವಿಧಿಯೇ ಹಣೆಯಲ್ಲಿ ಬರೆದಿರುವಾಗ ಅದನ್ನು ತಪ್ಪಿಸಲಿಕ್ಕೆ ಯಾರಿಗಾದರೂ ಸಾಧ್ಯವೆ?" ಎಂದು ಹಲವು ರೀತಿಯಲ್ಲಿ ಹೀನೈಸಿ ನುಡಿಯಲು ದಶಮುಖನು ಸಿಟ್ಟಾಗಿ, ಕಣ್ಣಿನಿಂದ ಅಗ್ನಿಜ್ವಾಲೆ ಪ್ರಜ್ವಲಿಸಲು ಎದ್ದು 'ಈತ ರಾಮದೂತನೆಂದು ಘೋಷಿಸಿ ಸೋಲಿಸಿ ಲಂಕೆಯಿಂದ ಹೊರಗಟ್ಟಿರಿ'' ಎಂದು ಆಜ್ಞಾಪಿಸಿದನು.

ಉರಿಲಿಂಗವೇ ರಸಾತಳದಿಂದ ಎದ್ದು ಬಂದಿತೋ, ಕಣ್ಣಿಂದ ಕೋಪದ ಬೆಂಕಿಯೇ ಪ್ರಜ್ವಲಿಸಿತೋ ಎನ್ನುವಂತೆ ಎದ್ದು ಆಸ್ಥಾನದಲ್ಲಿ ಪರಾಕ್ರಮಿಗಳಾದ ವಿದ್ಯಾಧರ ವೀರರನ್ನು ಯಮನ ಬಾಯಿಗೆ ತನ್ನ ಪದಹತಿಯಿಂದ - ಹಸ್ತ ಪ್ರಹಾರದಿಂದ ತುರುಕಿಸಿ ಹನುಮಂತನು ಮೆರೆದನು. ಹೀಗೆ ಕೊಂದು ಸಿಟ್ಟಾಗಿ ಸಿಡಿಲಂತೆ ಸಿಂಹಲಂಘನದಿಂದ ಆಕಾಶಕ್ಕೆ ನೆಗೆದು ಮನೆ ಮನೆಗೆ ಹನಿಹನಿಯಾಗಿ ಬೆಂಕಿ ಪಸರಿಸಿ ಸುಡುವಂತೆ ಸುಡುವ ವಿದ್ಯೆಯೇ ಸಾಕ್ಷಾತ್ ಪ್ರತ್ಯಕ್ಷವಾದಂತೆ ಪವನ ಕುಮಾರನು ಲಂಕಾಧಿಪನಾದ ರಾವಣನ ಮನಸ್ಸೇ ಮುರಿದಂತೆ, ಅವನ ಮುಖವನ್ನೇ ಹೊಗೆ ಮುಸುಕಿತೆಂಬಂತೆ ಸುಟ್ಟನು. ಸೂರ್ಯಮಂಡಲದಲ್ಲಿ ವಿಶೇಷವಾದ ಹೊಗೆಯ ಗೆರೆಯೇ ಮೂಡಿದುವು ಎಂಬಂತೆ ಅದು ಕಂಡುಬರಲು, ಇದೀಗ ಅಸುರೇಂದ್ರನ ವಿನಾಶ ಹೇತುಗಳೆಂಬಂತೆ ಧೂಮಕೇತುಗಳು ನೆಗೆದುವು.

ಹನುಮಂತನ ಅಗ್ನಿವಿದ್ಯೆ ಹೀಗೆ ಲಂಕೆಯನ್ನು ಸುಡಲು, ಅಲ್ಲಿ "ಛಟ ಛಟಲ್" ಎಂಬ ಭಯಂಕರ ಶಬ್ದವಾಯಿತು. ಉದ್ಧವಾದ ಉರಿ ನಾಲಗೆಗಳು ದಶಕಂಠನ ರಕ್ತದಿಂದ ಕುಣಿಯುವ ದಿನಗಳು, ರಾಮ ಬಾಣದಿಂದ ಹತ್ತಿರ ಬಂದವು ಎಂದು ರಾಗದಿಂದ ಕುಣಿಯುವ, ನಿನದಿಸುವ ಭೈರವಿಯ ಕೆನ್ನೀರಿನ ಜಟಾಪಟಲಗಳಂತೆ ಶೋಭಿಸಿದುವು.

ಆ ಸಮಯದಲ್ಲಿ ಅಗ್ನಿ ಶಿಲೆಯಿಂದ ದೂರವಿರುವ ಬಯಲು ಪ್ರದೇಶದ ಪುರಜನರು ಗಾಬರಿಯಿಂದ ಚಿಂತಿತರಾಗಿ 'ಜನಕಸುತೆಯನ್ನು ಬಯಸಿದ 'ಸುಕೃತ ಕ್ಷಯ' ಜಲವರ್ಷ ವಿದ್ಯೆ ಹೀಗೆ ಹಿಂದೆ ಜಾರಿತು. ದಶಾನನನು ವಧೂಜನ ಸಹಿತ ಪುಷ್ಪಕ ವಿಮಾನವನ್ನೇರಿದನು. ಅಗ್ನಿಗೆ ಆತ ಹೆದರುವುದು ಆಶ್ಚರ್ಯವಲ್ಲ. ಏಕೆಂದರೆ ಚರಿತ್ರ ಶುದ್ಧಿಯಿಲ್ಲದವನಿಗೆ ಯಾವುದೇ ವಿದ್ಯೆಯಾದರೂ ನೆರವಾಗುವುದೇ?

ಮಾನವ ದೂತನೆತ್ತ? ಸಾಗರವನ್ನು ದಾಟಿ ಬರಲು ಹೆದರದೆ ತನ್ನ ವಿಕ್ರಮದಿಂದ ಬಂದು ದಾನವಸೇನೆಯನ್ನು ಕೊಲ್ಲುವುದೆತ್ತ? ಲಂಕಾನಗರಕ್ಕೆ, ನಂದನವನಕ್ಕೆ ವಿನಾಶವನ್ನು ಒದಗಿಸುವುದೆತ್ತ? ಇದು ದಾನವರಾಜನ ಕೆಟ್ಟ ಕಾಮನೆಯ ಸಂಕಟಕ್ಕೆ ಸಿಕ್ಕಿದ ಫಲವಲ್ಲವೆ? ಎಂಬ ಮಾತುಗಳು ಕೇಳಿ ಬರುತ್ತಿರುವಂತೆ, ಲಂಕೆಯನ್ನು ಸುಟ್ಟು, ಆಕಾಶಕ್ಕೆ ನೆಗೆದು ತನ್ನ ಸೇನೆಯನ್ನು ಕೂಡಿಕೊಂಡು ಹನುಮಂತನು ಮತ್ತೆ ಕಿಷ್ಕಿಂಧೆಗೆ ಬಂದನು.

ಅಂಜನಾಪವನ

ಅರಳಿದ ಮುಖ, ಬರುವಿಕೆಯ ಉಲ್ಲಾಸವನ್ನು ಕಂಡು ಕಾರ್ಯಸಿದ್ಧಿಯಾದುದನ್ನು ತಿಳಿದು ರಾಮನಿಗೆ ಸಂತೋಷವಾಯಿತು. ಜತೆಗಿದ್ದವರಿಗೆ ಸಂತೋಷ, ಲಕ್ಷ್ಮಣನಿಗೆ ಮನಸ್ಸು ಪ್ರಫುಲ್ಲವಾಯಿತು.

ವಿರಹಾಂಧಕಾರವು ತಲೆ ತಗ್ಗಿಸಿತು. ಜಗತ್ಪತಿಯ ಕಣ್ಣು ಬೊಂಬೆ ಮೈಯಲ್ಲಿ ಮುಳುಗಿ ಪುಲಕವೇಳಲು ಚೂಡಾಮಣಿಯನ್ನು ಹನುಮಂತನು ರಾಮನಿಗೆ ಕೊಟ್ಟನು. ಕೊಟ್ಟು -

"ಮಳೆ ಬೀಳುವ ಸಮಯವನ್ನು ಮನಸ್ಸಿನಲ್ಲೇ ನೆನೆಯುತ್ತಿರುವ ಚಾತಕ ಪಕ್ಷಿಯಂತೆ ನನ್ನ ತಾಯಿ, ದೇವಾ, ಜೀವ ಹಿಡಿದು ಇದ್ದಾರೆ. ನಾನು ನಿಮ್ಮ ಸುದ್ದಿಯನ್ನು ಹೇಳುವವರೆಗೆ, ಅವರು ಬದುಕುವ ಆಸೆಯನ್ನು ತ್ಯಜಿಸಿ ಅನ್ನತ್ಯಾಗ ಮಾಡಿದರು. ಇಂಥವರು ಹಿಂದೆ ಯಾರಿದ್ದರು? ರಾವಣನು ಮಾಡಿದ ತಪ್ಪು ಕೆಲಸವನ್ನು ನೋಡಿದಂದಿನಿಂದ, ತಾಯಿಗೆ ಯಾವಾಗ ತಾನು ಪ್ರಾಣ ಬಿಡುವೆನೋ ಎಂದು ಅನಿಸುತ್ತಿತ್ತು. ಆದ್ದರಿಂದ ನಾವು ತಡ ಮಾಡದೆ ಅಸುರನನ್ನು ಕೊಲ್ಲದಿದ್ದರೆ ಅಲ್ಲಿ ಬದುಕುವುದು ಸಾಧ್ಯವಿಲ್ಲ!" ಎಂದು ಹನುಮಂತನು ವಿಜ್ಞಾಪಿಸಲು ಅದು ವೀರರಸವೆಂಬ ನದಿಗೆ ಸೇತುವೆಯಾಯಿತು.

'ಈ ಸಮುದ್ರದ ನೀರನ್ನು ಹೀರಲು ನನ್ನ ಅಗ್ನ್ಯಸ್ತ್ರವು ಯಾರು ಇದಿರು ನಿಂತರೂ ಸಾಕು! ಏಕೆಂದರೆ ನನ್ನ ಬಿಲ್ಲು ಬಾಣಗಳಿಗೆ ಜೀವಾಕರ್ಷಣೆ ಮಾಡುವ ವಿದ್ಯೆ ತಿಳಿದಿದೆ. ದಶಕಂಠನಿಗೆ ಅಣ್ಣನೇ ಸಾಕು! ಇನ್ನು ತಡವೇಕೆ?' ಎಂದು ಲಕ್ಷ್ಮಣನು ಸುಗ್ರೀವನಿಗೆ ಹೇಳುತ್ತ ಬದ್ಧ ಭ್ರುಕುಟಿಯಾದನು. ಸುಗ್ರೀವನು ಆ ಮಾತಿಗೆ ಒಡಂಬಟ್ಟು - 'ತಡೆಯುವುದೇಕೆ? ನಾಳೆಯೆ ರಣಕೇಳಿಗೆ ನಡೆಯುವ. ಬಡಬಾಗ್ನಿಯ ಭಯಂಕರಾಸ್ತ್ರವನ್ನು ತೊಡುವ ಅಗತ್ಯವೇನು? ಲಕ್ಷ್ಮಣದೇವಾ, ನಮ್ಮ ಸೇನೆ ಕಡಲನ್ನು ನಭೋಗಮನ ವಿದ್ಯೆಯೇ ಸೇತುವೆಯೆನ್ನುತ್ತ ದಾಟುತ್ತದೆ ಮತ್ತು ಇದಿರಾಳಿಯ ಪಡೆಯನ್ನು ನಾಶ ಮಾಡುತ್ತದೆ. ನಮ್ಮೊಡನೆ ಯುದ್ಧಕ್ಕೆ ಬರುವ ಗಂಡೆದೆಯವರು ಯಾರು?' ಎನ್ನುತ್ತ ವಿವ್ಯಾಧರೆಲ್ಲರೂ ರಾಮಲಕ್ಷ್ಮಣರ ಅಜ್ಞೆಯನ್ನು ನಿರೀಕ್ಷಿಸುತ್ತ ವಿಜಯ ಪ್ರಯಾಣಕ್ಕೆ ಸಿದ್ಧರಾದರು. ಅಷ್ಟರಲ್ಲಿ ದಶಕಂಠನ ಆಯುಷ್ಯವೇ ಅಸ್ತಮಿಸಿದಂತೆ ಭಾನುಮಂಡಲದ ಬೆಳಕು ಅಡಗಿತು. ರಾವಣನ ಕಲಂಕದಂತೆ ಹತ್ತು ದಿಕ್ಕುಗಳನ್ನು ಕತ್ತಲೆ ಆವರಿಸಿತು.

◆

೭. ರಾಮಲಕ್ಷ್ಮಣ ಪುಣ್ಯ ಪ್ರವಾಹ

ಸೂರ್ಯನು ಮೂಡಿದನು. ರಾಮನು ಜಿನೇಶ್ವರನಿಗೆ ಕೈ ಮುಗಿದು, ರಾಜಭೂಷಣ ತೊಟ್ಟು ಓಲಗ ಶಾಲೆಗೆ ಬಂದು, ಸುಗ್ರೀವಾಂಗದ ನಳನೀಲ ಜಾಂಬವ ಹನುಮಂತರೇ ಮುಂತಾದ ಪ್ರಮುಖರು ಸುತ್ತಲೂ ಕುಳಿತುಕೊಂಡಿರುವಾಗ ಪುರೋಹಿತನು ದಿಗ್ವಿಜಯಾರ್ಥವಾಗಿ ಸ್ವಸ್ತಿವಾಚನ ಮಾಡುತ್ತ, ಇದು ದಿಗ್ವಿಜಯ ಪ್ರಯಾಣಕ್ಕೆ 'ದಿವ್ಯಕಾಲ' ವೆಂದು ಬಿನ್ನವಿಸಲು ಸೇನಾಪ್ರಧಾನನಾದ ನಳನು ವಿಜಯ ದುಂದುಭಿಯನ್ನು ಹೊಯ್ಸಿದನು -

"ಲಂಕಾಧೀಶ್ವರ, ಕಾಳಗವು ನಿನಗೆ ಒಳ್ಳೆಯದಲ್ಲ! ಏಕೆಂದರೆ ವಾಸುದೇವನು ಪ್ರತಿ ವಾಸುದೇವನನ್ನು ಕೊಲ್ಲುವನು! ಇದರಲ್ಲಿ ಸಂದೇಹವಿಲ್ಲ. ಬದುಕುವ ಆಸೆಯಿದ್ದರೆ ಸೀತೆಯನ್ನು ಹಿಂದೆ ಕಳುಹಿಸು" ಎಂಬಂತೆ ಅಷ್ಟ ದಿಕ್ಕುಗಳಲ್ಲಿಯೂ ರಘುವೀರನ ವಿಜಯ ಪ್ರಸ್ಥಾನದ ಭೇರೀರವವು ಸಾರಿ ಹೇಳುವಂತಿತ್ತು. ಇದರೊಡನೆ - ಜತೆಗೆ ಬಂದ ಖೇಚರ ಸೈನ್ಯದ ಮುಖ್ಯರು ಧರಿಸಿದ ಕಿರೀಟಗಳ ರತ್ನಪ್ರಭೆಯು ಆಕಾಶವನ್ನು ತನ್ನೊಳಗೆ ಚಿತ್ರಿಸುತ್ತಿರುವಂತೆ ಲಕ್ಷ್ಮಣನೊಡನೆ ರಾಮನು ಶೋಭಿಸುತ್ತಿದ್ದನು.

ಮದಗಜಗಳ 'ದಾನಜಲ ಧಾರಾಸಾರ'ದಿಂದ ಗಾಳಿಯು ಚಲಿಸಲು ಸಾಧ್ಯವಾಗದೆ ನಡೆಗೆಟ್ಟು ನಿಂತಂತೆ, ಸೈನ್ಯದ ಪತಾಕೆಗಳು ಆಕಾಶಪಥದಲ್ಲಿ ನೂರ್ಮಡಿಯಾಗಿ ಕಾಣಿಸುವಂತೆ ಶಸ್ತ್ರಾಸ್ತ್ರ ಸಮೂಹದ ಬೆಳಗುವಿಕೆಯಿಂದ ಹಗಲೇ ರಾತ್ರಿಯಂತೆ ಕಾಣಿಸುತ್ತಿರಲು, ರಘು ಕುಲದ ಮಕ್ಕಳ ಚತುರಂಗ ಬಲವು ಶೋಭಿಸುತ್ತಿತ್ತು.

ಹೀಗೆ, ಎಣಿಕೆಗೆ ಸಿಗದ ಸೇನಾ ಸಮೂಹವು ದಕ್ಷಿಣ ಸಮುದ್ರಕ್ಕಭಿಮುಖವಾಗಿ ನಡೆಯುತ್ತಿರಲು, ಮುಂದೆ ನಡೆಯುತ್ತಿರುವ ನಳನ ಸೇನೆಯನ್ನು ಸಮುದ್ರರಾಜನೆಂಬ ವಿದ್ಯಾಧರನು ತಡೆಯಲು ನಳನು ಅವನನ್ನು ಕಟ್ಟಿ ರಾಮನಿಗೆ ಒಪ್ಪಿಸಲು, ಲಂಕಾದ್ವೀಪದ ಸಮೀಪವಿರುವ ಹಂಸದ್ವೀಪದಲ್ಲಿ ಬೀಡು ಬಿಟ್ಟು ಪ್ರಭಾಮಂಡಲನಲ್ಲಿಗೆ ದೂತರನ್ನಟ್ಟಿ ವಿದ್ಯಾಧರರ ಅಧಿರಾಜರ ಮೂಲಕ ಅವರನ್ನು ವಿಧೇಯರನ್ನಾಗಿ ಪರಿವರ್ತಿಸಿದನು.

ಇತ್ತ, ರಾವಣನು ಮಕ್ಕಳು ತಮ್ಮಂದಿರೊಡನೆ ಉಚಿತಾಸನಗಳಲ್ಲಿ ಕುಳಿತಿರಲು, ಪ್ರತ್ಯಂತ ಪರ್ವತವನ್ನು ಬಳಸಿ ನಿಂತ ನೀಲಾಚಲದಂತೆ ಕಾಣುತ್ತಿದ್ದನು. ಅವನ ಮನಸ್ಸಿನಲ್ಲಿ ಸೀತೆಯಿರಲು, ಪರಿಜನರು ನಿಯತಸ್ಥಾನದಲ್ಲಿರಲು ವಿರಹದ ಉದ್ದೀಪನವನ್ನು ಮರೆ ಮಾಡಿ ರಾವಣನು ದೇವೇಂದ್ರನಂತೆ ಓಲಗಗೊಟ್ಟಿರಲು ಅಲ್ಲಿಗೆ ಚಾರಕನೋರ್ವನು ಬಂದು –

"ಜಗತ್ತಿನಲ್ಲಿ ಇದುವರೆಗೆ ಮರೆತಾದರೂ ದೇವ ದಾನವ ಖೇಚರರೇ ಮೊದಲಾದವರು ನಿಮ್ಮೊಂದಿಗೆ ಕಾದಾಡಲು ಮನಸ್ಸು ಮಾಡಿದ ಉದ್ಧತರು ಯಾರೂ ಇಲ್ಲ. ಈಗ ಅಂಥವರು ಕಾಣುತ್ತಿರುವುದು ಒಂದು ಆಶ್ಚರ್ಯ. ಎಲ್ಲರ ಬದಲಿಗೆ ಸಾಮಾನ್ಯ ಮಾನವರಾದ ರಾಮಲಕ್ಷ್ಮಣರು" ಎಂದು ಬಿನ್ನವಿಸಲು ರಾವಣನು –

"ಹೌದು, ಸೀತೆಯನ್ನು ನಾನು ತಂದೆನು. ನನ್ನೊಡನೆ ಕಾದಾಡಿ ನನ್ನನ್ನು ಸೋಲಿಸಲು ಮನಸ್ಸು ಮಾಡಿ ಏಕಾಂಗಿಯಾಗಿ ಬರುತ್ತಿದ್ದರೆ, ಅವರೊಡನೆ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದೆ. ಆದರೆ ಬಂದವರು ಮೊದಲು ನನಗೆ ಕಪ್ಪ ಕೊಡುತ್ತಿದ್ದ ಖೇಚರರು. ಅವರು ಬಂದದ್ದು ಹೇಗಾಯಿತು ಗೊತ್ತೆ?" 'ಇನ್ನೊಬ್ಬರ ಕೈಯಿಂದ ಕಾಳಸರ್ಪ ಎಷ್ಟು ಮೊಳವಿದೆ' ಎಂದು ಅಳೆಯಲು ಆಸೆ ಪಟ್ಟಂತೆ ಆಯಿತು."

ಈ ಮಾತುಗಳನ್ನು ಕೇಳಿ, ಮೃಗರಾಜನಾದ ಸಿಂಹವು ಗರ್ಜಿಸಿದ್ದು ಆಕಾಶದಲ್ಲಿ ಮಾರ್ದನಿಗೊಂಡಂತಾಗಿ ಇಂದಗಿ, ಮೇಘವಾಹನರು ರೋಷ ಭೀಷಣರಾದರು. ರಾವಣನ ಮಾತಿಗೆ ಒತ್ತುಕೊಟ್ಟರು. ಇದನ್ನು ಕೇಳಿ ನಯವಂತನೂ, ವಿದ್ಯಾವಿನಯ ಭೂಷಣನೂ ಆದ ವಿಭೀಷಣನು ತನ್ನ ಬಿನ್ನಪವನ್ನು ಅವಧರಿಸಬೇಕೆಂದು ಹೀಗೆಂದನು –

"ಮನಸ್ಸು ಮರ್ಕಟನಂತೆ ನಾನಾ ಕಡೆ ಹರಿಯುತ್ತದೆ. ಅದನ್ನು ನಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕಾದುದು ನಮ್ಮ ಧರ್ಮ! ಕುಲಕ್ಕೆ ಅಪವಾದ ಬಾರದಂತೆ ನಡತೆ ಇಲ್ಲದಿದ್ದರೆ ಆ ಮನಸ್ಸು ಒಳ್ಳೆಯದಲ್ಲ! ಧರ್ಮಕ್ಕೆ ವಿರೋಧವಾಗದಂತೆ ಇಂದ್ರಿಯ ಸುಖವನ್ನು ಅನುಭವಿಸಬೇಕು. ಇಂದ್ರಿಯಗಳು ತನ್ನನ್ನು ಮೀರಿ ನಡೆಯದಂತೆ ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಬೇಕು. ಅದರಲ್ಲೂ ರಾಜನಾದವನು ಇಂದ್ರಿಯ ಸುಖವನ್ನು ಪಡೆದೂ ಆ ಇಂದ್ರಿಯಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳ ಬೇಡವೆ?"

"ಶುದ್ಧ ಕನ್ನಡಿಗೆ ಧೂಳು ತಾಗಿ ಕೊಳೆಯಾದರೆ ಪ್ರತಿಬಿಂಬ ಕಾಣದಂತಾಗುತ್ತದೆ. ಪರಸ್ತ್ರೀ ಸಂಪರ್ಕದಿಂದ ತನ್ನ ತೇಜಸ್ಸಿಗೆ ಕಲಂಕ ಹತ್ತಿಕೊಳ್ಳದಿರುತ್ತದೆಯೆ? ಸಾವು, ಸೆರೆ, ಸೋಲು, ಅಂಗಚ್ಛೇದಗಳೂ, ಅಪಖ್ಯಾತಿಯೂ ಕೆಲವು ದುರ್ಘಟನೆಗಳಿಂದ ಒದಗುತ್ತವೆ. ಆದರೂ ಖ್ಯಾತಿವಂತರು ಇವು ಯಾವುದನ್ನೂ ಲೆಕ್ಕಿಸದೆ ಅನ್ಯ ಪ್ರೇಯಸಿಯ ವಾರ್ತೆಯನ್ನು ತಲೆಗೆ ಹಚ್ಚಿಕೊಂಡು, ಸ್ವತಃ ಕೆಟ್ಟು ಮೆರೆಸುತ್ತಾರೆ"

"ರಾಮನೊಡನೆ ನಮಗೆ ಯುದ್ಧವೇಕೆ? ಯುದ್ಧವೆಂದರೆ ಮನುಷ್ಯಕ್ಷಯ! ಈ ಮಾತನ್ನು ಚೆನ್ನಾಗಿ ತಿಳಿದುಕೊಂಡು ಜಾನಕಿಯನ್ನು ರಾಮನಿಗೆ ಒಪ್ಪಿಸುವುದು ಲೇಸು. ಅಸತ್ಯವಾದ ಆಗ್ರಹವು

ಬೇಡ! ಪರಿಜನರೂ, ಆಪ್ತರೂ ಅಗಲೆ ಒಂದೆಡೆ ಸುಖವಾಗಿರುವಂತೆ ಜಾನಕಿಯನ್ನು ರಾಮನಿಗೆ ಒಪ್ಪಿಸುವುದು ಲೇಸು. ಇಲ್ಲದಿದ್ದರೆ ಎಲ್ಲರೂ ಒಂದಾಗಿರುವುದು ಸಾಧ್ಯವೆ?''

ವಿಭೀಷಣನ ಈ ಮಾತುಗಳಿಂದ ಇಂದಗಿ ಅವನನ್ನು ದೂಷಿಸುತ್ತ -

''ಅಯತ್ನವಾಗಿ ವನಿತಾರತ್ನವನ್ನು ತರುವುದು ಸುಲಭದಲ್ಲಿ ಸಾಧ್ಯವಾಯಿತು. ಅಂಥವಳನ್ನು ಮತ್ತೆ ಹಿಂದಿರುಗಿ ಕೊಡದಿದ್ದರೆ ಅಪಾಯ ಎಂಬ ಈ ಮಾತಿನಲ್ಲಿ ಹುರುಳಿಲ್ಲ. ಇದು ಮತ್ಸರಿಗಳ ಮಾತು ಎಂದು ಹೇಳಬೇಕು. ಏಕೆಂದರೆ ವಿದ್ಯಾಧರ, ಸಿದ್ಧ, ಕಿನ್ನರರನ್ನು ಯುದ್ಧದಲ್ಲಿ ಸೋಲಿಸುವ ರಾವಣನು ಸಾಮಾನ್ಯನೆ?'' ಎಂದನು. ವಿಭೀಷಣ ಆ ಮಾತಿನಿಂದ ಕುಪಿತನಾದ -

''ಸೋಲಿಗೆ ಹೆದರದೆ ನೀನು ತಂದೆಯ ರಾಜ್ಯಕ್ಕೆ ಆಸೆಪಟ್ಟು ಸಾಮರ್ಥ್ಯವಂತರಲ್ಲಿ ಕಲಹವನ್ನು ಬಯಸುತ್ತೀ. ಆದರೆ ರಣಭೂಮಿಯಲ್ಲಿ ರಾಮಬಾಣವು ಯಾರನ್ನಾದರೂ ಉಳಿಸುತ್ತದೆಯೆ? ಸೀತೆಯನ್ನು ತಂದು, ತನಗೆ ನಾಶವನ್ನು ತಂದು, ನಮ್ಮರಸನು ದೆಸೆದೆಸೆಗಳಲ್ಲೆಲ್ಲ, ನಮ್ಮ ಅಪಕೀರ್ತಿಯೆಂಬ ಬಾವುಟದ ಹಾರಾಟವನ್ನು ತಂದನು. ಮನಸ್ಸನ್ನು ಶಂಕೆಯ ಕತ್ತಲೆಯು ಆವರಿಸಿಲು ಯೋಚನೆ ಮಾಡಿದರೆ ಕಾಣುವುದೇನು? ನೀರಿನ ಗಾದಿಗೆಯಿಂದ ಆವರಿಸಿರುವ ಲಂಕೆ, ಅದನ್ನು ಸುತ್ತುವರಿದ ಸಮುದ್ರ, ಕೋಟೆ, ಎಲ್ಲ ವಿದ್ಯೆಗಳನ್ನು ಬಲ್ಲ ಅಸುರ ಬಲ, ಕಾವಲು ಭಟರು, ತೋಳ ಬಲ್ಪಿನಿಂದ ತಾರಾದ್ರಿಯನ್ನು ಅಲುಗಾಡಿಸಿದ ದಶಮುಖ ಇವರು ಮುಖ್ಯರೆಂದು ನೀವೆಲ್ಲ ಬಗೆದರೆ ಅದು ಲಂಕಾನಗರಕ್ಕೆ ಆತಂಕವಾದೀತು, ಅದನ್ನು ನೀನೇ ಕಾಣುತ್ತೀ' ಆದ್ದರಿಂದ ಸಂಧಿಯನ್ನು ಮಾಡಿಕೊಳ್ಳಬೇಕು, ಸೀತೆಯನ್ನು ಕೊಡಬೇಕು, ರಾಮಲಕ್ಷ್ಮಣರು ಬಾಂಧವರೆಂದು ತಿಳಿದುಕೊಳ್ಳಬೇಕು. ಅವರನ್ನು ಅಪಹಾಸ್ಯಕ್ಕೆ ಗುರಿಮಾಡಬಾರದು. ಅವರೇನು ನಮ್ಮ ಸಮಸ್ಕಂಧರೆ? ಯುದ್ಧವು ಅನರ್ಥಕಾರಿಯಾದುದು. ಯಾಕೆಂದರೆ ಅದರ ಪರಿಣಾಮ ಈ ಭೂಮಿ ಇರುವವರೆಗೆ. 'ಜಯ ಅಪಜಯ'ವೆಂಬುದು ಮಾತ್ರ ಶಾಶ್ವತವಾಗಿ ಉಳಿಯುವುವು. ಕಪಿಸೈನ್ಯವು ಸಮುದ್ರವನ್ನು ದಾಟಿ ಬರುವ ಮೊದಲು ಸೀತೆಯನ್ನು ಹಿಂದಿರುಗಿಸುವುದು ಉತ್ತಮ. ಕಲ್ಪಾಂತವೂ, ಯಮಸದೃಶವೂ ಆದ ರಾಮನ ಉಗ್ರ ಬಾಣಗಳು, ಲಂಕಾದ್ವಾರದ ಕವಾಟಗಳನ್ನು ಮುರಿಯುವ ಮೊದಲು, ಲಕ್ಷ್ಮಣನ ಬಿಲ್ಲಕೊಪ್ಪಿನ ಟಂಕಾರವು ಕಿವಿಗೆ ಬೀಳುವ ಮುನ್ನ ಸೀತೆಯನ್ನು ಮರಳಿಸುವುದು ಉಚಿತ....'' ಎಂದು ನಾನಾರೀತಿಯಲ್ಲಿ ಮನವರಿಕೆ ಮಾಡಲು, ಕಾರ್ಮುಗಿಲ ಗುಡುಗಿಗೆ ಸಿಟ್ಟೆದ್ದ ಸಿಂಹವಂತೆ ದಿಕ್ಕು ದಿಕ್ಕುಗಳಿಗೆ ನೋಡಿ, ಮಸಗಿ ಒರೆಯಿಂದ ಚಂದ್ರಹಾಸವನ್ನು ಸೆಳೆಯಲು ಅದು ಉಂಟುಮಾಡಿದ ಧ್ವನಿ ಸಿಡಿಲಂತೆ ಹೊರ ಸೂಸಿ, ಪ್ರಳಯ ಕಾಲದ ಮೋಡದಿಂದ ಸಿಡಿದ ಮಿಂಚಿನಂತೆ ಕೇಳಿಸಿತು.

ವಿಭೀಷಣನು ರಾವಣನ ಈ ಕ್ರೋಧವನ್ನು ಕಂಡು ವಜ್ರಮಯವಾದ ತನ್ನ ಗದಾದಂಡವನ್ನು ಹಿಡಿದು ನಿಂತಿರುವುದನ್ನು ಕಂಡು, ಕುಲವೃದ್ಧರು ಮಧ್ಯ ಪ್ರವೇಶಿಸಿದಾಗ ರಾವಣನು ಕೋಪವನ್ನು ಉಪಸಂಹರಿಸಿ ಮಂದಸ್ಮಿತನಾಗಿ ಹೀಗೆಂದನು:

''ನನಗಿಂತಲೂ ಶೂರನಿವನು ನಿಜ! ನಾನವನ ಅಭಿಪ್ರಾಯವನ್ನು ಕೇಳಿ ಒಪ್ಪಿಕೊಳ್ಳಲು ಸುಲಭವಾಗುತ್ತದೆ. ಆದರೆ ನಾನು ಚಂದ್ರಹಾಸವನ್ನು ಹಿಡಿದು ಬೀಸಿದರೆ ಅದರಿಂದ ಒಗೆವ ಉರಿ

ಆತನ ಮತ್ತು ಈತನ ಶೌರ್ಯವನ್ನು ನಿಲ್ಲಿಸುತ್ತದೆ. ಮೂರು ಕಣ್ಣಿನವನನ್ನು ಈ ಚಂದ್ರಹಾಸದಿಂದ ಸುಲಭವಾಗಿ ಸೋಲಿಸುತ್ತೇನೆ. ಆದ್ದರಿಂದ ಯುದ್ಧಕ್ಕೆ ಹೆದರುವ ಈ ಹೇಡಿಯನ್ನು ಲಂಕೆಯಿಂದ ಹೊರದಬ್ಬಿರಿ!'' ಎಂದು ಗರ್ಜಿಸಿದನು.

ಬೆಂಕಿ ತಗಲಿದ್ದ ಸಾನುವನದಿಂದ ಮದ್ದಾನೆಗಳ ಯೂಥನಾಥನು ಹಿಂದೆ ಸರಿಯುವಂತೆ, ದಶರಥಾತ್ಮಜರಿಂದ ನಾಶವಾಗಲಿದ್ದ ಲಂಕೆಯಿಂದ ವಿಭೀಷಣನು ತೊಲಗಿದನು. ಖಚರಾನ್ವಯ ರಾಜ್ಯಲಕ್ಷ್ಮಿಯನ್ನು ಧರಿಸಲಿದ್ದ ಪುಣ್ಯನಿಧಿಯನ್ನು ಅವನ ಸುಕೃತವು ತೊಲಗಿಸದೆ ಇದ್ದೀತೆ? ಹೀಗೆ, ವಿಭೀಷಣನು ಲಂಕಾದ್ವೀಪದಿಂದ ಹೊರಟು, ಹಂಸದ್ವೀಪಕ್ಕೆ ಬಂದು, ಪಾರುಪತ್ಯಗಾರನನ್ನು ಮುಂದಾಗಿ ಶ್ರೀರಾಮನೆಡೆಗೆ ಅಟ್ಟಿ ವಿಷಯವನ್ನು ತಿಳಿಸಿ, ದೂರದಲ್ಲಿ ನಿಂತು ತಲೆಬಾಗಿ -

"ದೇವಾ, ಮದ ಮತ್ತು ಮದಿರೆಯಿಂದ ಹುಚ್ಚನಾಗಿರುವ ನನ್ನ ಅಣ್ಣ ಹಿತವನ್ನು ಹೇಳಿದರೂ ಕೇಳದೆ ಅದನ್ನು ವಿಪರೀತವಾಗಿ ತಿಳಿದುಕೊಂಡ. ಈ ದುರಾತ್ಮನಲ್ಲಿ ನನಗೇನು ಸಂಬಂಧವೆಂದು ನಿಮ್ಮ ಪಾದದೆಡೆಗೆ ಬಂದು ನಿಮ್ಮ ಆಶ್ರಯಕ್ಕಾಗಿ ಶರಣಾಗುತ್ತಿದ್ದೇನೆ. ಇಂದಿನಿಂದ ನಾನು ತಮ್ಮ ರಕ್ಷಣೆಯನ್ನು ಅಪೇಕ್ಷಿಸುವ ವಿಭೀಷಣ" ಎಂದು ಬಿನ್ನವಿಸಿದ. ಪ್ರಮುಖ ಮಂತ್ರಿಗಳು ಆ ಮಾತನ್ನು ಕೇಳಿ 'ರಾವಣ ವಿಭೀಷಣರು ಒಡ ಹುಟ್ಟಿದವರು. ನಮ್ಮೆದುರಿಗೆ ಬಂದು ಹುಸಿ ಜಗಳವನ್ನು ಹಚ್ಚಿಕೊಂಡು, ಉಪಾಯದಿಂದ ನಮಗೆ ಅಪಾಯವನ್ನು ಬಗೆದಾರು - ಎಂಬುದನ್ನು ದೇವರು ಅವಧರಿಸಬೇಕು' ಎಂದು ಅನುಮಾನ ಪಟ್ಟರು. ಆಗ ರಾಮನು "ಈ ರಾಕ್ಷಸರು ನನಗೇನು ಮಾಡಬಲ್ಲರು? ಇದಿರಾಗಿ ನಿಂತು ಕಾದಾಡುವ ಸಾಮರ್ಥ್ಯವಿಲ್ಲದೆ ಹೆದರಿ ಆ ರಾವಣನು ಸೀತೆಯನ್ನು ಕಪಟದಿಂದ ಕದ್ದೊಯ್ದ. ಇಂಥ ಹೇಡಿಯಿಂದ ನನಗೇನು ಭಯ? ಇದಲ್ಲದೆ ಶರಣು ಬಂದವನಿಗೆ ಆಶ್ರಯ ಕೊಡುವುದೇ ನಮ್ಮ ಧರ್ಮವಲ್ಲವೆ?'' ಎನ್ನುತ್ತ ಮತ್ತೆ ಮುಂದುವರಿದು -

``ಬೇಡಿದವರಿಗೆ ಕೊಡದೆ, ಇದಿರು ನಿಂತು ಹೋರಾಡುವವರ ಜತೆಗೆ ಹೋರಾಡದೆ, ರಕ್ಷಣೆ ಬೇಡಿ ಬಂದವರನ್ನು ರಕ್ಷಿಸದೆ ಬಾಳುವ ಅರಸುಮಗನ ಭುಜಬಲ ಪರಾಕ್ರಮವು ನಿರರ್ಥಕ! ಅವನ ಕ್ಷತ್ರಿಯ ಜನ್ಮವೂ ವ್ಯರ್ಥ'' ಎಂದನು.

ಹನುಮಂತನು ಲಂಕೆಯ ಪ್ರಜೆಗಳಿಂದ ಕಲೆಹಾಕಿದ ಸಮಾಚಾರದಂತೆ - ಅಣ್ಣ ತಮ್ಮಂದಿರೊಳಗಣ ಭಿನ್ನಾಭಿಪ್ರಾಯಗಳನ್ನು ಕೇಳಿ ತಿಳಿದುಕೊಂಡು, ವಿಭೀಷಣನು ಗುಣವಂತ ನೆಂಬುದನ್ನು ಸ್ವತಃ ಕಂಡುಕೊಂಡುದರಿಂದ, ಆತನೇ ಸೀತಾಮಾತೆ ಇಂಥಲ್ಲಿ ಇರುವರೆಂದು ಹೇಳಿ ನನ್ನನ್ನು ಕಳುಹಿಕೊಟ್ಟನೆಂಬುದನ್ನು ಶ್ರೀರಾಮನಿಗೆ ಶ್ರುತಪಡಿಸಲು, ರಘುಕುಲಾಂಬರ ದ್ಯುಮಣಿ ವಿಭೀಷಣನನ್ನು ಮನ್ನಿಸಿ ಆತನು ಬಂದು ರಾಮನ ಪಾದಕ್ಕೆ ನಮಿಸಲು, ಅವನನ್ನು ಅಪ್ಪಿಕೊಂಡು ತಕ್ಕೈಸಿದನು.

ವಿಭೀಷಣನಿಗೆ ರಾವಣನಿಂದಾದ ಅಪಾರ ದುಃಖವು ಇಲ್ಲದಂತಾಯಿತು. ರಾಮನ ದಯದಿಂದ ದಾವಾನಲದಿಂದ ಬೆಂದ ಪರ್ವತ ಅಮೃತದ ಮಳೆ ಬಿದ್ದು ಆರಿದಂತಾಯ್ತು. ವಿಭೀಷಣನನ್ನು ಬೀಡಿಗೆ ಕಳುಹಿಸಿದನು. ಪ್ರಭಾಮಂಡಲನು ಸಹಸ್ರ ಅಕ್ಷೋಹಿಣೀ ಬಲದೊಡನೆ ರಾಮನನ್ನು

ಕೂಡಿದನು. ಮರುದಿನ ಅಲ್ಲಿಂದ ಮುಂದೆ ಸಾಗಿ, ಸಮುದ್ರ ತೀರಕ್ಕೆ ಬಂದು ಅದನ್ನು ನೋಡಿ ಮೆಚ್ಚುತ್ತಲಿರಲು ನಳನು -

ಬೆಟ್ಟ ಬೆಟ್ಟಗಳನ್ನು ಜೋಡಿಸಿ ದಾರಿ ಮಾಡುತ್ತ ಹೋಗುವ ವ್ಯಥೆ ಯಾಕೆಂದು ಸಮುದ್ರ ಸಮುದ್ರಗಳನ್ನು, ಆಕಾಶ - ಆಕಾಶಗಳಲ್ಲಿ ದಾರಿ ಮಾಡಿಕೊಂಡು, ಮುಂದೊತ್ತಿ ಸಾಗರದ ಮತ್ತೊಂದು ತಡಿಯನ್ನು ಮುಟ್ಟಲು ಆಕಾಶಕ್ಕೆ ತೂತು ಕೊರೆದಂಥ ಸಂಭ್ರಮ ಶೋಭಿಸಿತು. ಹೀಗೆ ಸಮುದ್ರವನ್ನು ದಾಟಿ, ಲಂಕೆಗೆ ಅಭಿಮುಖವಾಗಿ ಪಯಣಿಸಿ ವಿಸ್ತಾರವಾದ ರಣಭೂಮಿಯನ್ನು ಸಿದ್ಧಪಡಿಸಿ ಸೈನ್ಯವು ಬೀಡು ಬಿಟ್ಟಿತು.

ಸೈನಿಕರ ಕೋಲಾಹಲ, ಕಹಳೆಯ ಧ್ವನಿ, ಬೇರೆ ವಾದ್ಯಗಳ ಘನಘೋಷ ಶಂಖ ಭೇರಿ ಧ್ವನಿ, ಕುದುರೆಗಳ ಹೇಷಾರವ, ಆನೆಗಳ ಬೃಂಹಿತ, ಇವು ಲಯಕಾಲದ ಧ್ವನಿಯಂತೆ ಕಿವಿಗಳಿಗೆ ಅಪ್ಪಳಿಸಲು ರಾಕ್ಷಸನು ರಣಭೇರಿಯನ್ನು ಹೊಡೆಸಿದನು.

"ನನಗೆ ರಣರಭಸವು ಒದಗಿಬಂತು. ಇನ್ನೀಗ ನನ್ನ ತೋಳ್ಬಲದ ಹೆಚ್ಚಳವನ್ನು ತೋರಲು ಅವಕಾಶ ಒದಗಿತು" ಎಂದು ರಾವಣನು ಚಂಚಲವಾದ ಮನಸ್ಸಿನಿಂದ ಕಣ್ಣು ಕೆಂಪೇರಿಸಿದನು.

ಆಗ ಬಾರಿಸಿದ ಭೇರೀ ನಾದವು ಆಕಾಶವನ್ನು ಆವರಿಸಿತು. ಸೂರ್ಯ ಲೋಕವೇ ಮೊದಲ್ಗೊಂಡ ಹಲವು ಪಟ್ಟಣಗಳ ವಿದ್ಯಾಧರ ರಾಜರೆಲ್ಲ ಸೇನೆಯೊಡನೆ ಬಂದು ಅವನನ್ನು ಕೂಡಿಕೊಂಡರು. ಅವರನ್ನು ಸಮ್ಮಾನ ದಾನ ಸಮೇತ ಪುರಸ್ಕರಿಸಿ ಅಸಂಖ್ಯ ಅಕ್ಷೋಹಿಣೀ ಸೇನೆಯೊಡನೆ ರಾವಣನು ಯುದ್ಧವೆಂಬ ರಸವನ್ನು ಕಂಠದವರೆಗೆ ಹೀರಿದವನಂತೆ ಕಾಣುತ್ತಿದ್ದನು.

ಇತ್ತ ರಾಮ ಲಕ್ಷ್ಮಣರು ಸಾವಿರ ಅಕ್ಷೋಹಿಣೀ ಸೈನ್ಯಕ್ಕೆ ಅಧಿಪತಿಗಳಾದ ಸುಗ್ರೀವ, ಪ್ರಭಾಮಂಡಲ ಮತ್ತು ಇತರ ಮಹಾಶೂರ ವಿದ್ಯಾಧರರು ಬಂದು ಸೇರಿದರು. ಹೀಗೆ ಸಂಗ್ರಾಮದ ಉತ್ಸುಕತೆಯನ್ನು ಪ್ರಕಟಿಸುತ್ತ, ಉಭಯ ಬಲಗಳೂ ಆಕಾಶ ನೆಲಗಳನ್ನು ಒಂದು ಮಾಡುವಂತೆ ಯುದ್ಧ ಸನ್ನದ್ಧವಾಗಲು, ವ್ಯೂಹ ಪ್ರತಿವ್ಯೂಹಗಳನ್ನು ಯೋಜಿಸಿ, ಸಿಟ್ಟಿಗೇಳುತ್ತ, ಕದನ ಕೇಳೀ ಕುತೂಹಲದಲ್ಲಿರಲು, ಇತ್ತ ನಳ ನೀಲರು ಅತ್ತ ಹಸ್ತ ಪ್ರಹಸ್ತರು ಜತೆಯಾಗಿ ಲಯಕಾಲದ ವಿಷದ ಗಾಳಿಯಂತೆ ಕೈ ಬೀಸಿದರು.

ಭೂಮಿಯೇ ನಡುಗುವಂತೆ ಉಭಯ ಬಲಗಳೂ ಒಂದು ಇನ್ನೊಂದರೊಡನೆ ತಾಗಲು ವಾದ್ಯಸ್ವರವೂ, ಕೋದಂಡ ಠಂಕಾರ, ಆನೆಗಳ ದಂತ ದಂತಗಳು ತಾಗಿ ಉಂಟಾದ ನಿನಾದವೂ, ಯೋಧರ ಬಾಣಗಳು ಪರಸ್ಪರ ಹೆಣಗಿದ ಶಬ್ದವೂ ಖಡ್ಗ ಖಡ್ಗಗಳು ತಾಗಿದ ಝಣತ್ಕಾರವೂ, ಲಯಕಾಲದ ಸಮುದ್ರವೇ ಕುದಿಯುವಂತೆ ಭಯಾವಹವಾಗಿತ್ತು.

ಶರಸಂಧಾನ ಸಮರ್ಥರು ಪರಸ್ಪರ ಬಾಣವೆಸೆಯಲು ಅವರ ರುದ್ರ ಶರಸಮೂಹವು ರೋಮಾಳಿಯನ್ನು ಸಡಿಲು ಮಾಡಿತು. ಅದರಿಂದ ಹುಟ್ಟಿದ ಗಾಳಿಯು ಎಲ್ಲೆಡೆ ಹಬ್ಬಿ ಆ ಬೆಂಕಿಯ ಜ್ವಾಲೆಯಲ್ಲಿ ಎರಡೂ ಬಲಗಳ ರಣ ಕುಶಲರು ಶೋಭಿಸಿದರು.

ರಾಮಲಕ್ಷ್ಮಣ ಪ್ರಾಣ ಪ್ರವಾದ

ಖಡ್ಗದ ತುದಿ ಹಾರಿ ನೆಲಕ್ಕೆ ಬೀಳಲು ಹಗಲಲ್ಲೇ ಉಲ್ಕಾಪಾತವಾದಂತೆ, ಕಲ್ಪಕಾಲದ ಅವಸಾನದ ಸಂಜೆಯ ಮುಗಿಲುಗಳಂತೆ, ಸಿಡಿದ ರಕ್ತವೂ ಕೋಳ್ಮಿದುಳೂ ಭೂಮಿಗೆ ಬಿದ್ದ ನಕ್ಷತ್ರಗಳಂತೆ ಕಾಣಿಸಲು ಕುದುರೆಗಳ ಯುದ್ಧ ಭಯಂಕರವಾಯ್ತು.

ಯುದ್ಧದಲ್ಲಿ ತೃಪ್ತಿಯಾಗುವಂತೆ ಕಾದಾಡಿ, ಬಾಣಗಳಿಂದ ಮಹಾರಥರ ರಥಚಕ್ರಗಳ ಕೀಲನ್ನು ಸಡಿಲಿಸಿ ನುಚ್ಚು ನೂರಾಗಿಸಿ, ರಥದ ಚಿತ್ರವೇ ರೂಪುಗೆಡಲು, ಕುದುರೆ ನಡೆಯದಂತಾಗಿ, ಪತಾಕೆ ಕೆಳಗೆ ಬೀಳಲು ಸಾರಥಿಗಳು ಮಡಿಯುವಂಥ ಶರಪ್ರಹಾರಗಳನ್ನು ಉಭಯ ಸೈನಿಕರೂ ಅನುಭವಿಸಿದರು.

ಎಂಟು ಬಗೆಯ ಮದಜಲಧಾರೆ ನದಿಗಳೋಪಾದಿ ಹರಿವಂತೆ, ಮದಗಜಗಳ ದಂತಗಳು ಬಳ್ಳಿ ಮಿಂಚಿನಂತೆ, ಫಕ್ಕನೆ ಬಿಟ್ಟ ದೃಷ್ಟಿ ಸಿಡಿಲ ಗರ್ಜನೆಯಂತೆ ಕಾರ್ಮುಗಿಲ ರಾಶಿ ಬಂದು ಆಕಾಶದ ಮುಗಿಲನ್ನು, ಆನೆಗಳ ಸಮೂಹ ಇದಿರಾಳಿ ಆನೆಗಳನ್ನು ತಾಗುವಂತೆ ಬೃಂಹಿತ ಸ್ವರವು ಗುಡುಗುತ್ತ, ಹಲವು ದಿನಗಳವರೆಗೆ ಎರಡೂ ಸೇನೆಗಳ ಬಲಾನ್ವಿತ ಸೈನಿಕರು ಕಾದಿ ಮೃತರಾಗಲು, ಹಸ್ತ ಪ್ರಹಸ್ತರು ಸಮೇತ ಅಸ್ತಮಿಸಲು, ಹನುಮಂತನು ಕುಂಭಕರ್ಣನ ಮಕ್ಕಳಾದ ಮಾಲಿ, ಜಂಬುಮಾಲಿಗಳಿಗೆ ಇದಿರಾಗಿ ಕಾದಿ ಯಮನ ಪಟ್ಟಣವನ್ನು ಕಾಣಿಸಿದನು. ಅದನ್ನು ತಿಳಿದು ಕುಂಭಕರ್ಣನು ಉತ್ಕಟ ಕೋಪದಿಂದ, ವಿಶೇಷವಾದ ದುಃಖದಿಂದ ಪ್ರಳಯ ಭೈರವನಂತೆ ಅತಿ ಭಯಂಕರವಾದ ತ್ರಿಶೂಲವನ್ನು ಹಿಡಿದು ಯುದ್ಧಕ್ಕೆ ಸಿದ್ಧನಾದನು.

ಸುಗ್ರೀವ, ಹನುಮಂತ ಮೊದಲಾದ ಕಪಿ ಧ್ವಜರ ನಾಯಕರು ರಕ್ಕಸ ಪಡೆಯೊಡನೆ ಕಾದುತ್ತಿರಲು ಕುಂಭಕರ್ಣನು ಅಮರಾಚಲವನ್ನೇ ಚಲಿಸುವಂತೆ ಮಾಡಿದನೋ, ಸೂರ್ಯ ಮಂಡಲವನ್ನೇ ಭೂಮಿಗಿಳಿಸಿದನೋ ಎಂಬಂತೆ ಯುದ್ಧದಲ್ಲೇ ಆಸಕ್ತನಾಗಿದ್ದ ರಾವಣನು ಸಿಟ್ಟಿಗೆದ್ದನು.

ಇದನ್ನು ಇಂದಗಿ ಕಂಡನು. ಮುಂದೆ ಬಂದು – 'ನೀವು ಬರುವವರೆಗೂ ಈ ಯುದ್ಧ ಮುಂದುವರಿಯುವುದೆಂದು ನಾನು ಭಾವಿಸಿರಲಿಲ್ಲ. ನಿಮ್ಮೊಡನೆ ಕಾದಾಡುವವರು ಯಾರು ಎಂದು ನನ್ನಲ್ಲಿ ಹೇಳಿರಿ. ಅವರ ತಲೆಯನ್ನು ತುಂಡರಿಸಿ ತಂದು ತೋರುತ್ತೇನೆ.' ಎಂದು ಹೋದನು. ಹೀಗೆ ಹೇಳುತ್ತ ತ್ರೈಲೋಕ್ಯ ಕಂಟಕವೆಂಬ ತನ್ನ ಆನೆಯನ್ನು ಏರಿ ಬರುತ್ತಿರಲು ವಾನರಸೇನೆಯು ಹಿಂಜರಿಯಿತು. ಸುಗ್ರೀವನು ಪ್ರಭಾಮಂಡಲನೊಡನೆ ಕೂಡಿ ರಾಕ್ಷಸ ಬಲವನ್ನು ತಡೆಯಲು ಮುಂದಾದಾಗ ಇಂದ್ರಜಿತು –

"ಕಪಿಗಳಿಗೆ ನಿಸರ್ಗದತ್ತವಾಗಿ ಚಪಲತೆ ಇದೆ ಎಂಬುದನ್ನು ಒಪ್ಪಬೇಕು ಏಕೆಂದರೆ ಖಚರೇಂದ್ರನಾದ ರಾವಣನ ಪಾದಸೇವೆಯನ್ನು ಬಿಟ್ಟು, ಇದೀಗ ಎಲೆ ಪಶುವೇ ಭೂಚರನಾದ ರಾಮನ ಕಿಂಕರನಾದೆಯಲ್ಲ! ನಿನ್ನ ಸಾಮರ್ಥ್ಯವನ್ನು ತಿಳಿಯದೆ ನನ್ನೊಡನೆ ಯುದ್ಧಕ್ಕೆ ಬಂದೆ ನಿನ್ನನ್ನು ಕೊಲ್ಲುವ ಕಾಲಕ್ಕೆ ಕಾಯುವವರು ಯಾರು?" ಎನಲು ಕೋಪಿಸಿ "ಯುದ್ಧ ಮಾಡುವುದನ್ನು ಬಿಟ್ಟು, ಹೆಂಗಸರಂತೆ ಮಾತಾಡುವ ಯುದ್ಧದಲ್ಲಿ ತೊಡಗಿದೆಯಲ್ಲಾ! ಬಿಡು. ಕಾಳಗ ಮಾಡುವುದಿದ್ದರೆ ಕ್ರೂರ ಶರಪ್ರಯೋಗಿಸಿ ನೋಡು" ಎಂದು ದಶಗ್ರೀವನ ಮಗನನ್ನು ಸುಗ್ರೀವನು ಪರಿಹಾಸಕ್ಕೆ ಗುರಿ ಮಾಡಿದನು.

ಹೀಗೆ ಅವರಿಬ್ಬರೂ ಪರಸ್ಪರ ಮೂದಲಿಕೆಗಳಿಂದ ಕಾದುತ್ತಿರಲು, ಇತ್ತ ಜನಕಾತ್ಮಜನಾದ

ಪ್ರಭಾಮಂಡಲನೊಂದಿಗೆ, ರಾವಣನ ಮಗ ಮೇಘವಾಹನನು ಬಿಲ್ಲಿಡಿದು ಬಾಣದ ಮಳೆಯನ್ನೇ ಸುರಿಸಿದನು. ಅದು ಲಯಕಾಲದ ಮಳೆಯ ಮೋಡಗಳಂತೆ ಕಾಣಿಸಿತು. ಅವನು ಬಿಟ್ಟ ಬಾಣಗಳನ್ನು ಮಧ್ಯಮಾರ್ಗದಲ್ಲಿ ಖಂಡಿಸಿ ರಾವಣಾತ್ಮಜನು ಸರ್ಪಬಾಣ ವನ್ನು ಬಿಡಲು ಅದು ಅವನನ್ನು ಮೂರ್ಛೆಗೊಳಿಸಿತು. ಆತ ಭೂಮಿಯಲ್ಲಿ ಬಿದ್ದನು.

ಇತ್ತ ಇಂದ್ರಜಿತುವು ಸುಗ್ರೀವನ ರಥವನ್ನು ಪುಡಿ ಪುಡಿ ಮಾಡಿದನು. ಸರ್ಪಾಸ್ತ್ರವು ಸುಗ್ರೀವನ ಚೈತನ್ಯವನ್ನೇ ಉಡುಗಿಸಿತು. ಅವನು ಮೂರ್ಛೆಗೆ ಸಂದನು. ಈ ಜಯದಿಂದ ದಾನವ ಸೈನ್ಯದ ಜಯಘೋಷವು ವಿಜೃಂಭಿಸಿತು.

ಮತ್ತೊಂದು ಕಡೆಯ ಯುದ್ಧ ಬಗೆ ಬಗೆಯದಾಗಿ ಸಾಗಿತು. ಮಾಯಾಯುದ್ಧ, ಆಯುಧ ಯುದ್ಧಗಳಲ್ಲಿ ಇಬ್ಬಲದ ಸೈನಿಕರು ಪರಸ್ಪರರನ್ನು ಸೋಲಿಸಿದರು. ಕುಂಭಕರ್ಣ, ಹನುಮಂತ ರೊಳಗಣ ಯುದ್ಧ ತೀವ್ರವಾಯಿತು.

ರಣಕರ್ಕಶನಾದ, ಕುಂಭಕರ್ಣನು ಖಚರ ಕುಲಾಧಿಪತಿಯಾದ ಹನುಮಂತನನ್ನು ವಿರಥನನ್ನಾಗಿ ಮಾಡಿ ಸೆರೆವಿಡಿದನು. ಹೀಗೆ ಇಂದಗಿ, ಮೇಘವಾಹನ, ಕುಂಭಕರ್ಣರಿಂದ ಸುಗ್ರೀವ, ಪ್ರಭಾಮಂಡಲ, ಹನುಮಂತರು ನಾಗಪಾಶಕ್ಕೆ ಕಟ್ಟು ಬಿದ್ದಿರಲು, ವಿಭೀಷಣನು ತಿಳಿದು, ರಾಮಲಕ್ಷ್ಮಣರಿಗೆ "ನನ್ನ ಸೈನ್ಯದೊಡನೆ ನೀವಿರುವುದು, ಕೂಡಲೆ ನಾನು ನಾಗಪಾಶಕ್ಕೆ ಸೆರೆಸಿಕ್ಕವರನ್ನು ಬಿಡಿಸಿಕೊಂಡು ಬರುವೆನು" ಎಂದು ಆ ಕಡೆ ಸರಿದನು.

ಅತ್ತ ಅಂಗದನು, ತಾನು ಯುದ್ಧಕ್ಕೆ ಸಿದ್ಧನಾಗಿ ಕುಂಭಕರ್ಣನ ಸನಿಯಕ್ಕೆ ಬಂದು, ಯುದ್ಧದಲ್ಲಿ ಪ್ರತಿಸ್ಪರ್ಧಿಯಾದ ಕುಂಭಕರ್ಣನಿಂದ ಬೆಂಕಿಯನ್ನುಗುಳುವಂಥ ಸಿಡಿಲಪ್ಪಳಿಸುವಂಥ ಆಘಾತವನ್ನು ಇದಿರಿಸಿದನು.

ಶರಭವು ಬಂಧಿಸಿದ ಸಿಂಹವನ್ನು, ಭೇರುಂಡವು ಸೆಳೆದುಕೊಳ್ಳುವಂತೆ ಕುಂಭಕರ್ಣನಿಂದ, ಹನುಮಂತನನ್ನು ಬಿಡಿಸಿದನು. ಹೀಗೆ ಅಲಂಘ್ಯ ಬಲನಾದ ಕುಂಭ ಕರ್ಣನೊಡನೆ ಕಾದಿ, ಅಂಗದನು ಜಯಶ್ರೀಯನ್ನು ಒಲಿಸಿಕೊಂಡು, ಆಕಾಶಕ್ಕೆ ನೆಗೆದು ಹನುಮಂತನೊಡನೆ ರಾಮನ ಸಮೀಪಕ್ಕೆ ಬಂದನು.

ಇತ್ತ ವಿಭೀಷಣನು ಯುದ್ಧಕ್ಕೆ ಮುಂದಾದನು. ಇಂದಗಿ, ಮೇಘವಾಹನರು ಚಿಕ್ಕಪ್ಪನೊಡನೆ ತಾವು ಕಾದಾಡುವುದು ತಕ್ಕುದಲ್ಲ ಎಂದು ಹಿಂದೆಗೆಯಲು ವಿಭೀಷಣನು ಹತ್ತಿರ ಹೋಗಿ – ನಾಗಪಾಶದಿಂದ ಬಂಧಿತರಾಗಿದ್ದ ಸುಗ್ರೀವ, ಪ್ರಭಾಮಂಡಲರನ್ನು ಕಂಡು ಏನೂ ಮಾಡಲಾಗದೆ, ಬರಿದೆ ನೋಡುತ್ತಿರಲು ಲಕ್ಷ್ಮಣನು ಅಣ್ಣನೊಡನೆ –

ನಾಗಪಾಶದಿಂದ ಒದಗುವ ಮೂರ್ಛಾವಸ್ಥೆಯಿಂದ ಬಂಧಮುಕ್ತರನ್ನಾಗಿ ಮಾಡಲು ಏನುಪಾಯ? ಇವರು ಹೇಗೆ ಕ್ಷೇಮವನ್ನು ಪಡೆದಾರು ಎಂದು ಕೇಳಲು - ರಾಮನು - ನಾಗಪಾಶದ ಉಪದ್ರವವನ್ನು ತಡೆಯಲು ಒಂದೇ ಉಪಾಯ - ಅದು ಬರಮಿತ್ರನನ್ನು ಬರಿಸುವುದು - ಎಂದನು. ಲಕ್ಷ್ಮಣನು ಕೂಡಲೇ ಬರಮಿತ್ರನನ್ನು ನೆನೆದನು.

ಬರಮಿತ್ರನಿಗೆ ತಕ್ಷಣದಲ್ಲಿ ಆಸನ ಕಂಪನವಾಯಿತು. “ರಘುವೀರನಿಗೆ ಯುದ್ಧದ ಸಂದರ್ಭದಲ್ಲಿ ನನ್ನ ನೆನಪಾಯಿತು” ಎಂದು ಅವಧಿ ಜ್ಞಾನದಿಂದ ಕವಚಗಳನ್ನು ಒಯ್ದು ಕೊಡು ಎಂದು ತನ್ನ ಅನುಚರ ಚಿಂತಾವೇಗನಿಗೆ ಹೇಳಲು, ಆತನು ಸಿಂಹವಾಹಿನಿಯನ್ನು ರಾಮನಿಗೂ, ಗರುಡವಾಹಿನಿಯನ್ನು ಲಕ್ಷ್ಮಣನಿಗೂ ನೀಡಲು ಚಿಂತಾವೇಗ ಮಹೋನ್ನತನನ್ನು ಜಿನಪೂಜೆಗೈದು ಮನ್ನಿಸಲು ಅದರಿಂದ ಹರುಷೋತ್ಪನ್ನರಾದ ರಾಮಲಕ್ಷ್ಮಣರು ಸಂತುಷ್ಟರಾದರು.

೮. ರಘುವೀರ ವಿಜಯ

ಗರುಡವಾಹಿನಿಯ ದೇಹಪ್ರಭೆಯು ಕತ್ತಲೆಯನ್ನು ಉಂಟುಮಾಡಲು, ಅದರ ಪಕ್ಷಗಳಿಂದ ಹೊರಬಿದ್ದ ಗಾಳಿಯ ರಭಸಕ್ಕೆ ನಾಗಪಾಶವಿದ್ಯೆ ಸಡಿಲಾಯಿತು. ಕೂಡಲೆ ಪಾಶಬಂಧನದಿಂದ ಬಿಡುಗಡೆಗೊಂಡು ರಾಮಲಕ್ಷ್ಮಣರ ಪುಣ್ಯ ಪ್ರಭಾವಕ್ಕೆ ಸಂತೋಷಪಟ್ಟರು. ಮುಂದಿನ ಯುದ್ಧವು ರಾವಣನಿಗೆ ಅಪಜಯವನ್ನು ಉಂಟು ಮಾಡುತ್ತದೋ ಎಂಬಂತೆ ಸೂರ್ಯನು ಉದಯಗಿರಿ ಶಿಖರದಲ್ಲಿ ಕಾಣಿಸಿಕೊಂಡನು.

ಹೀಗೆ ನೇಸರು ಮೂಡುತ್ತಿರಲು, ದಶಕಂಠನು ಎಂದಿನಂತೆ ರಣಭೂಮಿಗೆ ಬಂದು ಯುದ್ಧಕ್ಕೆ ಒಡ್ಡಿ ನಿಲ್ಲಲು ಇತ್ತ ರಾಮಲಕ್ಷ್ಮಣರು ಚಿಂತಾವೇಗ ದೇವತೆಯಿತ್ತ ದಿವ್ಯಕವಚವನ್ನು ಧರಿಸಿ, ಸಿಂಹ –ಗರುಡವಾಹನಗಳನ್ನೇ ಹಾರಿಸಿ, ದೇವನಿರ್ಮಿತ ಕೊಡೆಗಳನ್ನು ಹಿಡಿಸಿಕೊಂಡು, ಸುಗ್ರೀವ ಪ್ರಭಾಮಂಡಲ, ಹನುಮಂತ, ವಿಭೀಷಣನೇ ಮೊದಲಾದ ಪ್ರಮುಖವೀರರು ಸುತ್ತಲೂ ಬಳಸಿ ಬರುತ್ತಿರಲು ರಣಭೂಮಿಗೆ ಬಂದು ತಾವೂ ಒಡ್ಡಿನಿಂತರು. ವಾನರಸೇನೆ, ದಾನವಸೇನೆ ಯೊಡನೆ ಭಯದಿಂದ ಕಾದಲು ಇದನ್ನು ಕಂಡು ರಾವಣನು ಪಂಚಾನನನಂತೆ ಎರಗಲು ಕಪಿಸೇನೆ ದೀನಮುಖದಿಂದ ಹಿಂಜರಿಯಿತು. ತಕ್ಷಣ ವಿಭೀಷಣನೇ ಸೇನೆಯ ಅಧಿಪತಿಯಾಗಿ ಮುಂದರಿದು ಬಂದನು. ದಶಕಂಠನು ಅವನನ್ನು ಕಂಡು –

"ನನ್ನ ತಮ್ಮನಾಗಿ ಹುಟ್ಟಿದ ನೀನು, ಖಚರಕುಲಕ್ಕೆ ಅವಮಾನವಾಗುವಂತೆ ನಮ್ಮ ಯೋಗ್ಯತೆಯನ್ನು ತಿಳಿಯದೆ ಸೇವಕನಂತೆ ವರ್ತಿಸಿ ನಗೆಗೀಡಾದೆಯಲ್ಲ" ನನ್ನ ಇದಿರಿನಿಂದ ತೊಲಗು" ಎಂದನು. ಈ ದುರುಕ್ತಿಗೆ ವಿಭೀಷಣ ಕೋಪಿಸಿಕೊಂಡು "ಮೋಹಾವೇಶನಾದ ನಿನಗೆ ಹಿತವನ್ನು ಹೇಳಿದರೆ ನನ್ನನ್ನು ಲಂಕೆಯಿಂದ ಹೊರಗಟ್ಟಿ ನಿನ್ನ ಬಂಧುಪ್ರೇಮವನ್ನು ದಯೆಯನ್ನು ತೋರ್ಪಡಿಸಿದೆ. ಆದರೂ ಇನ್ನೂ ನಿನಗೆ ಹಿತವನ್ನು ಹೇಳುತ್ತೇನೆ, ಕೇಳು – ಮೂರು ಲೋಕಗಳಲ್ಲಿಯೂ ಪೂಜ್ಯವಾದ ತೋಯದವಾಹನ ಕುಲಕ್ಕೆ ಕಲಂಕ ಬರುವಂತೆ ಪರಸ್ತ್ರೀಯರ ಬಗೆಗೆ ಆಸೆ ಪಟ್ಟ ನಿನ್ನ ದುರ್ಬುದ್ಧಿಯನ್ನು ಬಿಟ್ಟು ನಿನಗೂ ನಿನ್ನ ವಂಶಕ್ಕೂ ಅಕಾಲ ಮೃತ್ಯುವನ್ನು ತಂದುಕೊಳ್ಳದೆ

ರಾಮಸ್ವಾಮಿಗೆ ಜಗನ್ಮಾತೆಯಾದ ಸೀತೆಯನ್ನು ಒಪ್ಪಿಸಿ ನಿನ್ನ ಸಾಮ್ರಾಜ್ಯ ಪದವಿಯಲ್ಲಿ ಕ್ಷೇಮದಿಂದ ಬಾಳುವುದು'' ಎನ್ನಲು ರಾವಣನು ಕೋಪಿಸಿಕೊಂಡು ಧನುಸ್ಸಿಗೆ ಬಾಣವನ್ನು ಹೂಡಿ, ಹತ್ತಿರ ಬಂದು ಬಿಡಲು, ವಿಭೀಷಣನು ಅದನ್ನು ಖಂಡಿಸಿದನು.

ಆಗ ಇಂದ್ರಜಿತುವು ಮಧ್ಯೆ ಪ್ರವೇಶಿಸಿ ವಿಭೀಷಣನೊಡನೆ ಕಾದಲು ಅನುವಾಗಿ ಬರುತ್ತಿರಲು ರಥಕ್ಕೆ ಅಡ್ಡವಾಗಿ ಲಕ್ಷ್ಮಣನು ತನ್ನ ರಥವನ್ನು ಚಾಚಿ ''ಈ ಕಡೆ, ಈ ಕಡೆ ತಿರುಗು'' ಎಂದು ಅತ್ತಣಿಂದ - ರಾಮಾನುಜನು ಯುದ್ಧಕ್ಕೆ ಸಿದ್ಧನಾದನು. ಅತ್ತ ರಾಮನು ಸುಭಟೋತ್ತಮನಾದ ಕುಂಭಕರ್ಣನೊಡನೆ ಪ್ರತಿಸ್ಪರ್ಧಿಯಾಗಿ ನಿಂತನು.

ಆಕಾಶಮಾರ್ಗದಲ್ಲಿ ದೇವತಾ ಸಮೂಹವು ನಿಂತು ಈ ಯುದ್ಧವನ್ನು ನೋಡುತ್ತಿತ್ತು. ಕತ್ತಲೆಯಂಥ ಬಾಣವನ್ನು ಸೂರ್ಯಪ್ರಭಾ ಬಾಣದಿಂದ, ಸರ್ಪಬಾಣವನ್ನು ಗರುಡಾಸ್ತ್ರದಿಂದ ತುಂಡು ಮಾಡಿ ದಿವ್ಯಾಸ್ತ್ರಗಳಿಂದ ಲಕ್ಷ್ಮಣನು ಇಂದಗಿಯನ್ನು ಗೆದ್ದನು. ಆ ಗೆಲವು ಲಯಕಾಲದ ಗೆಲವಿನಂತಿತ್ತು.

ಹೀಗೆ ಗೆದ್ದು ನಾಗಪಾಶದಿಂದ ಕಟ್ಟಿ ವಿರಾಧಿತನ ಕೈಯಲ್ಲಿ ಬೇಡಿಗೆ ಕೊಟ್ಟು ಕಳುಹಿಸಲು ಇತ್ತ ಕುಂಭಕರ್ಣನು ಕದನ ಕರ್ಕಶನಾಗಿ ಕಾದುತ್ತ ರಾಮನ ಮುಂದೆ ಶಸ್ತ್ರಾಸ್ತ್ರ ತನುತ್ರ ಪತಾಕಾ ದಂಡಗಳನ್ನು ಖಂಡಿಸಲು, ಮಿಕ್ಕ ಮಹಾರಥರು ವಿರಥನಾದ ವಿಷ್ಣುವಿನಂತೆ, ಈಶ್ವರ ಕಿರೀಟವು ನಾಗಪಾಶಕ್ಕೆ ಒಳಗಾಯಿತೆಂಬಂತೆ, ರಜೋಮಯನಾದ ಬ್ರಹ್ಮನು ರಾಮನಿದಿರಲ್ಲಿ ಚೇತನ ಹೀನನಾದನು - ಎನ್ನುವಾಗ ಯುದ್ಧ ಮಾಡಿ ಬದುಕುವವರು ಯಾರು?

ಹೀಗೆ ಬಂಧನಕ್ಕೆ ಸಿಲುಕಿದ ಕುಂಭಕರ್ಣನನ್ನು ಪ್ರಭಾಮಂಡಲನಿಗೊಪ್ಪಿಸಿ, ಪ್ರಭಾಮಂಡಲನು ಮೇಘವಾಹನನನ್ನು ನಾಗಪಾಶದಿಂದ ಬಂಧಿಸಿ, ಕುಂಭಕರ್ಣನೊಂದಿಗೆ ಬೇಡಿಗೆ ಹೋಗಲು ವಿಭೀಷಣನನ್ನು ರಾವಣನು ನೋಡಿ, ಅವನನ್ನು ಕೊಲ್ಲಲೆಂದು ಶೂಲಾಯುಧವನ್ನು ಪ್ರಯೋಗಿಸಲು ಲಯಕಾಲದ ಮಹೋರಗನಂತೆ ಅದು ಮುನ್ನುಗ್ಗುತ್ತಿರುವಾಗ ಲಕ್ಷ್ಮಣನು ತಿಳಿದು ಪ್ರತಿಬಾಣ ಪ್ರಯೋಗಿಸಿ ಶೂಲಾಯುಧವನ್ನು ತುಂಡು ತುಂಡು ಮಾಡಿದನು.

ವಿಭೀಷಣನನ್ನು ಹೀಗೆ ಹಿಂದಿಕ್ಕಿ ಲಕ್ಷ್ಮಣನು ಮುಂದೆ ನಡೆಯಲು ರಾವಣನು ಮುನ್ನುಗ್ಗುವುದನ್ನು ತಡೆಯಲು ಆತ ''ನೀನು ಕಾದಿ ವಿಭೀಷಣನನ್ನು ಕೊಲ್ಲಲೆಂದಿಟ್ಟ ಶೂಲವನ್ನು ಖಂಡಿಸಿದೆ. ಈಗ ನಿನ್ನನ್ನು ಕಾಯುವವರು ಯಾರು'' ಎಂದು ರಾವಣನು ತನ್ನ ದಿವ್ಯಶಕ್ತಿಯನ್ನು ಪ್ರಯೋಗಿಸಲು ಮುಂದಾದನು. ಅದು ಸರ್ಪದ ಹಲ್ಲೋ, ಯಮನ ದಾಡೆಯೋ, ಅಲ್ಲ ಪ್ರಳಯಕಾಲದ ನಾಲಗೆಯೋ, ಜಲಧಿಯನ್ನು ಆಪೋಷಿಸುವ ಬೆಂಕಿಯ ಜ್ವಾಲೆಯೋ ಅನ್ನುವಂತೆ ರುದ್ರರೂಪವನ್ನು ತಳೆದು ಕಪಿ ಧ್ವಜರು ನಡುಗುವಂತೆ ಮಾಡಿತು. ಆ ಶಕ್ತ್ಯಾಯುಧವು ನಿಶ್ಚಲ ಶಕ್ತಿಯೆನ್ನುವಂತೆ ಜನಾರ್ದನನ ಎದೆಗೆ ನೆಟ್ಟು ನಿಂತಂತೆ ಆತನು ಮೂರ್ಛಿತನಾದನು.

''ಯುದ್ಧದಲ್ಲಿ ನನಗೆ ಸಮನಾದವನು ಆತನೊಬ್ಬನೆ'' ಎಂದು ಹೊಗಳುತ್ತ ''ಬಿದ್ದವನನ್ನು ಇರಿಯಬಾರದು ಎಂಬ ಪರಮ ಸತ್ಯವನ್ನು ಪಾಲಿಸುವವನು ಇನ್ನಾರು ಎನ್ನುವಂತೆ ರಾವಣನಿದ್ದನು.

ಪಂಪ ರಾಮಾಯಣ

ತಮ್ಮನು ಮೂರ್ಛೆಗೆ ಸಂದ ದುಃಖವೇ ಕೋಪವನ್ನುಂಟು ಮಾಡಲು ಕುಲಪರ್ವತಗಳನ್ನೇ ಕೀಳುವೆನೋ, ಕಡಲನ್ನೇ ಕುಡಿಯುವೆನೋ, ಸೂರ್ಯಚಂದ್ರರನ್ನು ಭೂಮಿಗೆ ತರುವೆನೋ, ಆಕಾಶಮಂಡಲವನ್ನು ಎತ್ತುವೆನೋ ಎಂದು ಒದರುತ್ತ ರಾಮನು ರಾವಣನೊಡನೆ ಹೋರಾಡಿದನು.

ಕೋದಂಡ, ಬಾಣ, ಪತಾಕೆ, ವಜ್ರಕವಚ, ರಥ, ಕುದುರೆ ಇವನ್ನೆಲ್ಲ ಕಡಿದು ತುಂಡು ಮಾಡಿ, ಏಳು ಬಾರಿ ರಾವಣನನ್ನು ವಿರಥನನ್ನಾಗಿಸಿದ ರಾಮನ ಪರಾಕ್ರಮವನ್ನು ಯಾರು ಹೊಗಳಲು ಸಾಧ್ಯವೆಂದು, ಅಷ್ಟರಮಟ್ಟಿಗೆ ಕಾದಾಡುವುದು ತನ್ನಿಂದ ಮಾತ್ರ ಸಾಧ್ಯವೆಂದು ರಾವಣನು ಅಭಿಮಾನ ಪಟ್ಟನು. ಹೀಗೆ ಹಲವು ಬಾರಿ ರಾವಣನು ವಿರಥನಾದರೂ ಅವನ ಕವಚಕ್ಕೆ ದೇಹಕ್ಕೆ ಒಂದಿನಿತೂ ಗಾಯವಾಗದಿತ್ತು. "ನನ್ನ ಬಾಣಗಳು ಕುಲಪರ್ವತಗಳನ್ನೇ ಚೂರು ಚೂರು ಮಾಡುವ ಸಾಮರ್ಥ್ಯದವು. ಆದರೆ ಅವು ಈ ರಾವಣನ ದೇಹವನ್ನು ಒಂದಿನಿತೂ ಛಿದ್ರ ಮಾಡಲಿಲ್ಲ, ಇದು ವಿಸ್ಮಯ, ಅಲ್ಪಾಯುವಲ್ಲ ಈ ರಾವಣ" ಎಂದು ರಾಮನು ಯೋಚಿಸಿದನು!

ಅಷ್ಟರಲ್ಲಿ ಸೂರ್ಯನು ಮುಳುಗಿದನು. ಎರಡೂ ಸೈನ್ಯಗಳು ಅಪಹಾರ ತೂರ್ಯವನ್ನು ಮೊಳಗಿ ತಮ್ಮ ತಮ್ಮ ಶಿಬಿರಕ್ಕೆ ಮರಳಿದವು. ರಾವಣನಿಗೆ ಮನಸ್ಸಿನಲ್ಲಿ ಹರ್ಷವೂ, ವಿಷಾದವೂ ಉಂಟಾದುವು. ಒಬ್ಬ ವೈರಿಯನ್ನಾದರೂ ಸೋಲಿಸಿದೆನೆಂಬ ಹರ್ಷ. ಅವನು ಮಹಾಬಲಶಾಲಿ. ಆದರೆ ತನ್ನ ಪಕ್ಷದಿಂದ ಸ್ವಂತ ಮಕ್ಕಳಾದ ಇಂದಗಿ, ಮೇಘವಾಹನ, ಸಹೋದರ ಕುಂಭ ಕರ್ಣರನ್ನೂ ಕಳಕೊಂಡೆ ಎಂಬ ದುಃಖ! ಇದು ಅತ್ಯಂತ ಕೆಟ್ಟ ಲಕ್ಷಣ ಎಂದು ವಿಷಾದಿಸಿ ಉದ್ವೇಗಕ್ಕೆ ರಾವಣನು ಒಳಗಾದನು. ಲಂಕೆಗೆ ಹೋಗಿ - ಈ ಇರುಳಿನ ಒಳಗೆ ಸಾಯದೆ ಉಳಿಯನು. ಸತ್ತನಾದರೆ, ಸೆರೆ ಸಿಕ್ಕವರನ್ನು ಬಿಟ್ಟೆನಾದರೆ ಅಂಥವರಿಂದ ಅಪಾಯ ತಪ್ಪದು. ಇದಕ್ಕೇನು ಉಪಾಯ? ಎಂದು ಆತ ಯೋಚಿಸುತ್ತಿದ್ದನು.

ಇತ್ತ ರಾಮನು ಮೂರ್ಛಿತನಾದ ತಮ್ಮನನ್ನು ಕಂಡು, ವಿಹ್ವಲಚಿತ್ತನಾಗಿ, ತಮ್ಮನ ಹತ್ತಿರ ಬರಲು, ಸುಷೇಣನೇ ಮೊದಲಾದ ಮಂತ್ರಿಗಳು ರಾಮನೊಡನೆ - ದಿವ್ಯ ಶರಗಳಿಂದಾದ ವೇದನೆ, ಕರಸ್ಪರ್ಶದಿಂದ ಹೆಚ್ಚಾಗುತ್ತದೆ - ಆದ್ದರಿಂದ ಮುಟ್ಟಬೇಡಿರಿ - ನೀವು ಚಿಂತಿಸಬೇಕಾದ ಕಾರಣವಿಲ್ಲ, ಏಕೆಂದರೆ ಲಕ್ಷ್ಮಣನೆಂದರೆ ಎಂಟನೆಯ ಕೇಶವನು, ಆತನ ಕೈಯಿಂದ ರಾವಣನಿಗೆ ಅಪಾಯವಲ್ಲದೆ, ರಾವಣನಿಂದ ಲಕ್ಷ್ಮಣನಿಗೆ ಏನೂ ಅಪಾಯ ಬರದು, ಎಂದು ತಿಳಿಸಿ ದಿವ್ಯ ಶಸ್ತ್ರ ಪ್ರಹರಣದಿಂದಾದ ತಾಪವನ್ನು ಪರಿಹರಿಸುವ ಔಷಧೀ ಪ್ರಯೋಗದಿಂದ ರಾಮನ ಶೋಕೋದ್ವೇಗವನ್ನು ಉಪಶಮಿಸಿದರು.

ಸೌಮಿತ್ರಿಯನ್ನು ಮಲಗಿಸಿದ ರಣಭೂಮಿಯ ಸುತ್ತಲೂ ಸಮತಟ್ಟಾಗಿ ನೇರ್ಪಡಿಸಿ ಕಪಿ ಕೇತು ಕುಲಗ್ರಾಮಣಿಯಾದ ಸುಗ್ರೀವನು ವಿದ್ಯಾಮಯವಾದ ಸಪ್ತಗುಪ್ತಿಯನ್ನು ನಿರ್ಮಿಸಿದನು.

ಹೀಗೆ ನಿರ್ಮಿಸಿದ ವಿದ್ಯಾಪ್ರಾಕಾರಗಳ ಒಳ ಹೊರ ಭಾಗಗಳಲ್ಲಿ ಹಲವರು ವಿದ್ಯಾಧರರನ್ನು ಕಾವಲು ನೇಮಿಸಿದರು. ಲಕ್ಷ್ಮೀಧರನ ಅಗಣ್ಯ ಪುಣ್ಯ ಪ್ರಭಾವದಿಂದ ಗಗನ ಚರನೊಬ್ಬನು ಬಂದು

- ವಿಶಲ್ಯಸುಂದರಿಯು ಮಿಂದ ಗಂಗೋದಕದ ಮಹಿಮೆಯನ್ನು ಹೇಳಲು ರಾಮನು ಮೆಚ್ಚಿ, ಉಡುಗೊರೆ ಕೊಟ್ಟು ಅದನ್ನು ತರಲೆಂದು ಹನುಮಂತ, ಅಂಗದ, ಪ್ರಭಾಮಂಡಲರನ್ನು ಕಳುಹಿಸಲು, ಅವರು ವಿಮಾನಗಳನ್ನೇರಿ ಸಾಕೇತಪುರವನ್ನು ಹೊಕ್ಕು ಭರತನನ್ನು ಕಂಡು, ಗಂಗೋದಕವನ್ನು ಕೇಳಲು, ವಿಶಲ್ಯಸುಂದರಿಯು ಗಂಗೋದಕದೊಡನೆ ಸಿದ್ಧಳಾಗಿ ನಿಂತಳು. ಅವರೆಲ್ಲರೂ ಪುನಃ ವಿಮಾನಾರೂಢರಾಗಿ ನಕ್ಷತ್ರಮಾರ್ಗದಿಂದ ಕ್ಷಣದಲ್ಲಿ ರಣಭೂಮಿಗೆ ಬಂದು ಭೂತಳದಲ್ಲಿ ನಿಂತರು. ಕೂಡಲೆ ವಿಶಲ್ಯಸುಂದರಿ ಎಷ್ಟೆಷ್ಟು ಲಕ್ಷ್ಮಣನ ದೇಹದ ಹತ್ತಿರ ಸರಿದಳೋ, ಅಷ್ಟಷ್ಟು ವೈರಿ ವಿದ್ಯಾಶಕ್ತಿ ಶಕ್ತಿಗೆಟ್ಟು, ಕೊನೆಗೆ ಲಕ್ಷ್ಮಣನ ಎದೆಯ ಭಾಗವನ್ನು ತ್ಯಜಿಸಿ ಮೇಲೆ ಒಗೆಯಲ್ಪಟ್ಟಿತು. ವಿಶಲ್ಯಸುಂದರಿಯ ಕರಸ್ಪರ್ಶದ ಪವಿತ್ರ ಸುರಭಿಯ ಸಲಿಲದಿಂದ ಬಿಟ್ಟುಹೋಯಿತು!

ತಕ್ಷಣದಲ್ಲಿ ಮೂರ್ಛಿತನಾಗಿದ್ದ ಲಕ್ಷ್ಮಣನು ಮುಖದಲ್ಲಿ ಕೋಪದ ಅಚ್ಚು ಒತ್ತಿಸಿ ಕೊಂಡವನಂತೆ, ಕಣ್ಣು ಕೆಂಪಾಗಿಸಿ 'ಎಲ್ಲಿರುವನು ರಾವಣ?' ಎಂದು ಪ್ರಶ್ನಿಸುತ್ತಾ ಎದ್ದು ಕುಳಿತುಕೊಂಡನು.

ಚಾರಕರು ಈ ವಿಷಯವನ್ನು ಮೃಗಾಂಕನೇ ಮೊದಲಾದ ಮಂತ್ರಿಮುಖ್ಯರ ಮೂಲಕ ತಿಳಿಸಲು ಬಂದರು. ಬಂದು ಕೈಮುಗಿದು "ದೇವಾ, ರಾತ್ರಿಯಲ್ಲೇ ವಿಶಲ್ಯಸುಂದರಿ ಬರಲು ನೀವು ಪ್ರಯೋಗಿಸಿದ ಶಕ್ತಿ, ಶಕ್ತಿ ಕುಂದಿತು - ಆದ್ದರಿಂದ ಸೀತೆಯನ್ನು ರಾಮನಿಗೆ ಒಪ್ಪಿಸಿ, ಅವನೊಡನೆ ಸಂಧಿಯನ್ನು ಮಾಡಿಕೊಳ್ಳುವುದು ಒಳ್ಳೆಯದು. ಸಂಗ್ರಾಮವು ತಕ್ಕುದಲ್ಲ - ಎಷ್ಟಿದ್ದರೂ ಅವರು ಬಲಶಾಲಿಗಳು" ಎಂದರು.

"ನಾವು ಗೆದ್ದರೂ ಆಪತ್ತಿಗೆ ಸಿಲುಕಿದ ಕುಂಭಕರ್ಣಾದಿಗಳನ್ನು ಏನು ಮಾಡಬಹುದು? ಗೆದ್ದರೂ ಫಲವುಂಟೆ?" ಎಂದು ಮತ್ತೆ ಬೋಧಿಸಲು ರಾವಣನು ಕೆರಳಿ "ದೇವೇಂದ್ರನನ್ನೂ ಗೆದ್ದ ನನ್ನನ್ನು ಉಪೇಂದ್ರನು ಗೆಲ್ಲುವನೆ? ಗೆದ್ದರೂ ಈ ಜೀವನವು ಸೂರ್ಯಚಂದ್ರರಿರುವವರೆಗೆ ಇರುತ್ತದೆಯೆ? ನನ್ನ ಖ್ಯಾತಿಗೆ ಕಳಂಕ ಆಗದಂತೆ ಮಾಡುತ್ತೇನೆ, ನಿಮ್ಮ ಮಂತ್ರಾಲೋಚನೆ ಬೇಡ, ನೀವೆಲ್ಲರೂ ಸುಮ್ಮನಿರಿ" ಎಂದು ಮಂತ್ರಿಗಳನ್ನು ಗದರಿಸಿದನು.

ರಾವಣನ ನಿಶ್ಚಲ ಮನಸ್ಸಿಗೆ ಮಯನು ವಿಸ್ಮಯ ಪಟ್ಟು "ಆಗಲಿ ನೀವು ಕಪಿಧ್ವಜರಿಗೆ ಸೆರೆ ಸಿಕ್ಕದಂತೆ ಕಾದಾಡಿ ಗೆಲ್ಲುವುದು" ಎಂದಾಗ ಆ ಮಾತಿಗೆ ಒಪ್ಪಿ, ರಾಮಲಕ್ಷ್ಮಣರ ಪುಣ್ಯಪ್ರಭಾ ಭಾವಕ್ಕೆ ಆಶ್ಚರ್ಯಪಟ್ಟರು. ರಾವಣನು ಮನಸ್ಸಿನಲ್ಲೇ ಯೋಚಿಸುತ್ತಿದ್ದನು. "ನನ್ನ ತಮ್ಮ ಮತ್ತು ಮಕ್ಕಳನ್ನು ಸೋಲಿಸಿ ಕೊಂಡೊಯ್ದರು, ನನ್ನ ಉರಗೇಂದ್ರ ಶಕ್ತಿಯನ್ನು ಸುಲಭದಲ್ಲಿ ಗೆದ್ದರು. ಇವರು ಅಲ್ಪ ಬಲರು ಎಂದು ತಿಳಿದು ಕಾದಾಡಿದೆನಾದರೆ, ಕಾರ್ಯಹಾನಿ ನಿಶ್ಚಯ" ಎಂಬುದು ಅವನ ಮನಸ್ಸಿಗೆ ಮುಟ್ಟಿತು.

"ಇವರು ಸಾಮಾನ್ಯರು ಎಂದು ತಿಳಿದುದೇ ತಪ್ಪಾಯಿತು. ಆದರೂ ಬಹುರೂಪಿಣೀ ವಿದ್ಯಾಪ್ರಯೋಗದಿಂದ ಇವರನ್ನು ಸೋಲಿಸುತ್ತೇನೆ" ಎಂದು ನಿಶ್ಚಯಿಸಿ - ಲಂಕಾನಗರದಲ್ಲಿ,

ಅದರ ಸುತ್ತ ಮುತ್ತಣ ಪ್ರದೇಶಗಳಲ್ಲಿ ಎಲ್ಲಿಯೂ ಹಿಂಸೆ ಸಲ್ಲದು ಎಂದು ಬಹಿರಂಗ ಘೋಷಣೆಯನ್ನು ಪಸರಿಸಿ, ''ಸೈನಿಕರೆಲ್ಲ ಎಲ್ಲ ಹಿಂಸೆಯನ್ನು ಸಹಿಸಿಕೊಂಡಿರಬೇಕು'' ಎಂದು ಘೋಷಿಸಿದಾಗ ಅದನ್ನು ತಿಳಿದ ವಿಭೀಷಣನು ಇದು ಬಹುರೂಪಿಣೀ ವಿದ್ಯೆಯನ್ನು ಪ್ರಯೋಗಿಸುವ ಹವಣಿಕೆ ಎಂದು ತಿಳಿದು, ಆ ವಿಚಾರವನ್ನು ತಮ್ಮ ಸಂಗಾತಿಗಳೊಳಗೆ ಹಬ್ಬಿಸಿದರು.

ರಾವಣನೊಬ್ಬನನ್ನು ರಾಮನು ಕೊಲ್ಲುವುದು ಅಸಾಧ್ಯ. ಅವನು ಸಾಧಿಸುವ ವಿದ್ಯೆ ಯೊಡನೆ ಅವನನ್ನು ಗೆಲ್ಲಬೇಕು, ವಿದ್ಯಾಸಾಧನೆಗೆ ಮೊದಲೇ ಅವನನ್ನು ಕೊಲ್ಲಬೇಕು, ಲಂಕಾಪಟ್ಟಣವನ್ನು ವಶಪಡಿಸಿಕೊಳ್ಳಬೇಕು ಎಂದು ಯೋಚಿಸಿ -

ಸ್ತ್ರೀಯರನ್ನು ಮೋಸದಿಂದ ತಂದವರಿಗೆ, ಇದಿರಿದಿರು ನಿಂತು ಯುದ್ಧ ಮಾಡದವರಿಗೆ ಕ್ಷತ್ರಿಯರು ಮುನಿಯುವುದು ಧರ್ಮವಲ್ಲ, ನಿಯಮಸ್ಥಿತನಾಗಿ, ಜಿನೇಂದ್ರನ ಮರೆ ಹೊಕ್ಕು ವಿದ್ಯೆಯನ್ನು ಸಾಧಿಸುತ್ತಾನೆ - ಅದನ್ನು ಆಗಗೊಡಬಾರದು ಎಂದು ಬಗೆದು

ಮನೆಮಂದಿರಗಳನ್ನು ಹೊಕ್ಕು ಅವನ್ನು ಒಡೆಯುತ್ತ, ತೋಟ ತೋಟಗಳನ್ನು ಕಡಿಯುತ್ತ

ನೆಲಜಲವನ್ನು ಕೆಡಿಸುತ್ತ, ಲಂಕೆಗೆ ನಡೆದು ಎಲ್ಲವನ್ನು ಹಾಳುಗೆಡವಿದರು. ಕುಲವನಿತೆಯರನ್ನು ಮನೆಮನೆಯಿಂದ ಎಳತಂದು ಹೊಡೆಯುತ್ತ ಅವರು ಗೋಳಿಡುತ್ತಿರಲು, ಇದನ್ನು ಕೇಳಿಯೂ ರಾವಣನು ಲಕ್ಷ್ಯ ಕೊಡದೆ ವಿದ್ಯಾಸಿದ್ಧಿಗೆ ಗಮನ ಕೊಟ್ಟು. ಜಪಿಸುತ್ತಿದ್ದನು ಮತ್ತು ನೀಲಾಚಲ ಪರ್ವತದಂತೆ ನಿಶ್ಚಲನಾಗಿದ್ದ ರಾವಣನನ್ನು ನೋಡಿ ಅಂಗದನು ಹೀಗೆಂದನು -

"ಎಲಾ ರಾವಣ, ರಾಮಬಾಣಗಳ ಶಕ್ತಿಗೆ ಹೆದರಿ, ಮನೋಭಂಗವನ್ನು ಮಾಡಿಕೊಂಡು, ಯಾಕೆ ಜಪಿಸುತ್ತಿರುವೆ? ನಿನ್ನ ದುಷ್ಟ ಕೆಲಸವನ್ನು ನೆನೆದುಕೋ! ಕೆಟ್ಟ ಆಲೋಚನೆ ಮಾಡುವ ನೀನು ಖೇಚರಾನ್ವಯದಲ್ಲಿ ಹುಟ್ಟಿ, ಶುದ್ಧಾಚಾರವನ್ನು ಬಿಟ್ಟು -'ರಾವಣನೆಂದರೆ ಒಬ್ಬ ದುಷ್ಟ' ಕಾಪುರುಷ' ಎಂದು ಒಳ್ಳೆಯವರು ದೂಷಿಸುವಂತೆ, ಪರದಾರಪ್ರಿಯನಾಗಿ, ಪಾತಕವನ್ನು ತಲೆಯಲ್ಲಿ ಹೊತ್ತುಕೊಂಡು, ಯುದ್ಧಕ್ಕೆ ಹೆದರಿ, ಶುದ್ಧಾತ್ಮನಂತೆ ಶಾಂತೀಶನ ಮುಂದೆ ಇದೇನು ಬೇಡುತ್ತಿರುವೆ? ನಿನ್ನ ಬಲವು ಕುಂದಿಹೋಯಿತು. ನಿನ್ನ ಬಾಹುಬಲವನ್ನು ಹಿಂದಿಕ್ಕಿ, ವಿದ್ಯಾಬಲದಿಂದ ರಾಮಲಕ್ಷ್ಮಣರನ್ನು ಗೆಲ್ಲುವುದು ಸಾಧ್ಯವೆಂದು ಬಗೆದೆಯಾ? ಮನೆಗೆ ಬೆಂಕಿ ಬಿದ್ದ ಮೇಲೆ ಬಾವಿ ತೋಡಿಸಲು ಹೊರಟ ನೀನು, ಕಣ್ಣುಮುಚ್ಚಿ ಇದೇನು ಜಪಿಸುತ್ತಿರುವೆ? ರಾಮಬಾಣಗಳಿಂದ ನಿನ್ನನ್ನು ದೇವತೆಗಳೂ ಕಾಯಲು ಸಾಧ್ಯವೆ?" ಎಂದು ಹಲವು ರೀತಿಯಲ್ಲಿ ರಾವಣನ ಹುಳುಕುಗಳನ್ನು ಎತ್ತಿ ಹೇಳುತ್ತ ಉತ್ತರೀಯದ ತುದಿಯಿಂದ ಮುಖದ ಮೇಲೆ ಹೊಡೆಯುತ್ತ ಕೊಟ್ಟ ಅಕ್ಷಮಾಲೆಯನ್ನು ತುಂಡು ಮಾಡುತ್ತ, ಸ್ತ್ರೀಯರ ಆಭರಣಗಳನ್ನು ಒಗೆಯುತ್ತ, ಬೇಡವಾದುದನ್ನು ಹೇಳುತ್ತ ಇದ್ದರು. ಆಗ ಮಂಡೋದರಿಯ ರೋದನ ಕೇಳಿಸಿತು. ಆಕೆಯ ತಲೆಗೂದಲನ್ನು ಹಿಡಿದು ಎಳತಂದು, ''ನನ್ನ ತಂದೆಗೆ ಚಾಮರ ಬೀಸಲು ನೇಮಿಸುತ್ತೇನೆ, ಅವಳನ್ನು ರಕ್ಷಿಸುವ ಸಾಮರ್ಥ್ಯವಿದ್ದರೆ ಏಳು, ಯುದ್ಧ ಸನ್ನದ್ಧನಾಗು'' ಎಂದು ಆ ಹೆಂಗಸರಿಗೆ ಅಂಗದನು ಹೇಳಿದನು.

“ನೀನೀ ವಿದ್ಯೆಯನ್ನು ಸಾಧಿಸಿ ಏನು ಪಡೆಯುತ್ತೀ, ನಿನ್ನ ಪಕ್ಕದಲ್ಲಿ ನಿಂತು ಮೂರ್ಛೆಗೆ ಸಂದಂತೆ ಕಾಣಿಸಿಕೊಂಡು, ನಿನ್ನ ಸೇರುವಿಕೆಗೆ ಬಯಸುವ ವಧೂಸಮೂಹವು ಉಚ್ಚಕಂಠದಿಂದ, ಅಂತಃಪುರದಿಂದ ಮಾಡುವ ರೋದನ ನಿನಗೆ ಕೇಳಿಸುವುದಿಲ್ಲವೆ?”

ಎಂದು ಭೇಡಿಸಿದರೂ ಆತ ನಿಶ್ಚಲನಾಗಿ, ಧ್ರುವ ಮಂಡಲದಂತೆ ಚಲನೆಯಿಲ್ಲದೆ ಮನಸ್ಸನ್ನು ಏಕಾಗ್ರತೆಯಲ್ಲಿಟ್ಟುಕೊಂಡು ದಿವ್ಯಮಂತ್ರವನ್ನು ಸಾಧಿಸಿದನು –

ಆಗ ತಾನೆ ಪ್ರಾರಂಭವಾದ ಮಳೆಗಾಲದ ಸಿಡಿಲಿನ ಗರ್ಜನೆಯನ್ನು ಮೀರಿ ಯಮನ ನಾಲಗೆ ‘ಹೇಳು ಹೇಳು’ ಎಂದು ಬೇಡಿಕೊಳ್ಳುವಂತೆ ದಿವ್ಯಮಂತ್ರದ ವಿದ್ಯೆ ರಾವಣನ ಇದಿರಿಗೆ ನಿಂತಿತು.

ಹೀಗೆ ಸಿದ್ಧವಾಗಿ ನಿಂತ ವಿದ್ಯೆ ಚಕ್ರಧರನಾದ ಲಕ್ಷ್ಮಣನನ್ನು ಮತ್ತು ಚರಮ ದೇಹಧಾರಿಯಾದ ರಾಮನನ್ನು ಹೊರತುಪಡಿಸಿ ಉಳಿದವರ್‍ಯಾರನ್ನೂ 'ಬದುಕಲೀಯೆನು' ಎಂದು ಯೋಚಿಸುತ್ತಾ, ಯಾರು ಅಳಿದರೂ ಉಳಿದರೂ ತನಗೇನು ಎನ್ನುತ್ತ ಶಾಂತಿಜಿನ ಭವನಕ್ಕೆ ಮೂರು ಪ್ರದಕ್ಷಿಣೆಗೈದು ಬರಲು, ಅಂಗದನೇ ಮೊದಲಾದವರು ತಮ್ಮ ಬಿಡಾರವನ್ನು ಹೊಕ್ಕರು.

ಇತ್ತ ರಾವಣನು, ತನ್ನ ರಾಣೀವಾಸದವರನ್ನು ಅಪಹಾಸ್ಯ ಮಾಡಿ ಕಾಡಿದ, ಉದ್ಧತ ವಿರೋಧಿಗಳನ್ನು ಇದಿರಿಸಿ ಸೋಲಿಸುವ ಹವಣಿಕೆಯಲ್ಲಿ ಸಿಟ್ಟಾದ ಸಿಂಹದಂತೆ ಗರ್ಜಿಸಿ, ಕೆಂಪು ಗರಿಮೂಡಿದ ಭೃಂಗಾಳಿ ಮಾಲೆಯನ್ನು ನೋಡಿದಂತೆ ಮಂಡೋದರಿಯ ಬಾಡಿದ ಮುಖಪದ್ಮವನ್ನು ನೋಡಿದನು.

ಆಕೆಯನ್ನು, ಅಂತಃಪುರದ ಸಮಸ್ತ ಸತೀ ಸಮುದಾಯವನ್ನು ನೋಡಿ, ' ನಿಮಗೆ ಇಂತಹ ಅವಮಾನವನ್ನು ಮಾಡಿದ ಅಂಗದನೇ ಮುಂತಾದವರನ್ನು ಕಣ್ಣು ಮುಚ್ಚಿ ತೆರೆಯುವುದರೊಳಗೆ ಸೆರೆ ಹಿಡಿದು ನಿಮ್ಮ ಮುಂದೆ ನಿಲ್ಲಿಸಿ ಸೋಲಿಸುವೆನೆಂದು ಸಂತೈಸಿ, ಶಾಂತಿ ಜಿನಮಂದಿರದಲ್ಲಿ ಮಹಾಪೂಜೆಯನ್ನು ಮಾಡಿಸಿ, ನಿತ್ಯದಂತೆ ಉಪವಾಸದ ಆಹಾರವನ್ನು ಸೇವಿಸಿ, ಅನಂತರ ಬಹುರೂಪೀ ವಿದ್ಯಾಪ್ರಭಾವವನ್ನು ಪರೀಕ್ಷಿಸಿ –

“ಇನ್ನು ನನಗೆ ಸಮಾನರೂ, ನನ್ನಿಂದ ಅಧಿಕ ವಿಕ್ರಮಿಗಳೂ, ಮೂರು ಲೋಕಗಳಲ್ಲಿ ಯಾರಿದ್ದಾರೆ? ನನ್ನೊಡನೆ ಇದಿರಾಗಿ ಕಾದಾಡುವವರು ಯಾರು?” ಎಂದು ಭುಜದಂಡಗಳನ್ನು ಮುಟ್ಟಿ, ಮುಟ್ಟಿ, ನೋಡಿ, ಸೀತೆಯ ಮುಖಕಮಲವನ್ನು ಅವಲೋಕಿಸುವ ಕಾತರದಿಂದ ರಾವಣನು ಪ್ರಮದವನಕ್ಕೆ ಹೂವಿನ ಬಾಣಗಳಿಲ್ಲದ ಕಾಮುಚಕ್ರೇಶ್ವರನಂತೆ ಬಂದನು.

ಭೋಂಕನೆ ಬಂದ ರಾವಣನ ಚೆಲುವಿಕೆಯನ್ನು ಪಕ್ಕದಲ್ಲಿದ್ದ ಖೇಚರಕಾಂತೆಯರು ಸೀತೆಗೆ ತೋರುತ್ತಿರಲು, ರಾವಣನ ರೂಪವು ಸೀತೆಗೆ ತೃಣಸಮಾನವಾಗಿ ಕಂಡಿತು. ಪತಿಭಕ್ತಿಯಲ್ಲಿ ಈ ಸೀತೆಯನ್ನು ಹೋಲುವ ಪುಣ್ಯವತಿಯರು, ಸದ್ಭಾವನೆಯನ್ನು ಒಳಗೊಂಡ ಸತಿಯರು ಯಾರು ಎಂಬಂತೆ ಆಕೆ ಇದ್ದಳು.

ಸೀತೆ ತನ್ನ ಮನಸ್ಸಿನಲ್ಲಿ ಲಕ್ಷ್ಮಣನ, ರಾಮನ ಕುರಿತಾಗಿ, ಏನು ಕೆಟ್ಟವಾರ್ತೆಯನ್ನು ಕೇಳುವೆನೋ ಎಂಬಂತೆ ದಶಕಂಠನ ಬರವಿನಿಂದ ತಲ್ಲಣಗೊಂಡಳು. ಇಂಥ ಸೀತೆಯ ಬಳಿಗೆ ರಾವಣನು ಬಂದು "ನಾನೀಗ ಬಹುರೂಪಿಣೀ ವಿದ್ಯೆಯನ್ನು ಸಾಧಿಸಿದೆನು. ಇನ್ನು ನನ್ನನ್ನು ಇದಿರಿಸುವ ಇನ್ನೊಂದು ಪಕ್ಷವಾಗಲೀ, ಮನುಷ್ಯನಾಗಲೀ ಇಲ್ಲ! ನಿನ್ನ ಪ್ರೀತಿಯ ರಾಮನನ್ನು ಬಿಟ್ಟು ನನ್ನೊಡನೆ ಬಾ, ಜತೆಗೆ ಸಾಮ್ರಾಜ್ಯ ಸುಖವನ್ನು ಅನುಭವಿಸು" ಎನಲು ಸೀತೆ ವಿಹ್ವಲಳಾಗಿ "ಎಲೈ ರಾವಣ, ರಾಮನ ಆಯುಷ್ಯವಿರುವವರೆಗೆ ನೀನು ನನ್ನ ಹತ್ತಿರ ಬರಬೇಡ! ಅದನ್ನು ನೆನಪಿಡು" - ಎಂದು ಹೇಳುತ್ತ ಕೆಳಗೆ ಬಿದ್ದು ಮೂರ್ಛಿತಳಾದಳು.

ಸೀತೆ ಮೂರ್ಛಾಗತಳಾದುದನ್ನು ಕಂಡು ರಾವಣನಿಗೆ ಅವಳ ಮೇಲೆ ಅನುಕಂಪ ಹುಟ್ಟಿತು. ತನ್ನನ್ನು ತಾನೇ ಹಳಿದುಕೊಂಡು ತನ್ನ ಕರ್ಮಕ್ಕೆ ಅಧೀನವಾಗಿ ಇಂಥ ದುಷ್ಪರಿಣಾಮವಾಯಿತಲ್ಲ ಎಂದು ಆತ ಹಳಹಳಿಸಿದನು.

ಕದಡಿದ ನೀರು ತಿಳಿಯಾಯಿತು. ತನ್ನನ್ನು ತಾನೆ ತಿಳಿದುಕೊಂಡ ರಾವಣನು ವೈರಾಗ್ಯ ತಾಳಿದನು. ಉದಾತ್ತನಾದವನಲ್ಲಿ ದೃಢವಾದ ಪ್ರೀತಿ ಹುಟ್ಟದಿರುವುದು ಸಹಜವಲ್ಲವೆ? ಸಂಧ್ಯಾರಾಗದ ಪ್ರೀತಿಯನ್ನು ಸೂರ್ಯನು ಬಿಡದಿರಲು ಸಾಧ್ಯವೆ? ಇಲ್ಲ! ಒಮ್ಮೆಗೆ ಹುಟ್ಟಿದ ಅನುರಾಗವು ಕೊನೆಯ ಗಳಿಗೆಯಲ್ಲಿ ಸಲ್ಲದು ಎನಿಸುವಂತೆ ಉದಾತ್ತನಾದವನು ಅದನ್ನು ದೂರೀಕರಿಸದೆ ಇರಲಾರನು.

ಹೀಗೆ ಚಿಂತಿಸಿ ರಾವಣನು ತನ್ನ ಮನಸ್ಸಿನಲ್ಲಿ ಹುದುಗಿದ್ದ ಸೀತೆಯ ಕುರಿತಾದ ಅನುರಾಗವನ್ನು ಕಚ್ಚಿ ಕಳೆದು, ತನ್ನ ಸ್ವಕೀಯ ಆಪ್ತರಿಗೆ ಹೀಗೆಂದು ಹೇಳಿದನು -

"ತನ್ನ ಗುಣ ಪರಿಪಾಲನೆಗಾಗಿ ನನಗೆ ಈಕೆ ಕೆಡುಕೆಣಿಸಲಿಲ್ಲ! ದಿವ್ಯಭೂಷಣ, ವಸನ, ಆಭರಣಗಳನ್ನೊಲ್ಲದೆ ನನ್ನೀ ರಾಜ್ಯಲಕ್ಷ್ಮಿಯನ್ನು ಹುಲ್ಲುಕಡ್ಡಿಯೆಂದು ಬಗೆದ ಈಕೆ ನನ್ನಂಥ ಪೌರುಷ ಪ್ರಾಣಿಯನ್ನು ಅಪೇಕ್ಷಿಸುವಳೆ? ನನ್ನ ಪಾಪವು ನನಗೆ ಹಾನಿಯನ್ನು ಮಾಡಿತು. ಇವರು ಪರಸ್ಪರ ಪ್ರಾಣಪ್ರಿಯರು. ಕಾರಣವಿಲ್ಲದೆ ಕರ್ಮವಶದಿಂದ, ಕಾಮವಿಮೋಹದಿಂದ ಅಗಲಿಸಿದೆ. ಅದರಿಂದ ಅವರಿಗೇನೂ ಹಾನಿಯಾಗದೆ ನನ್ನ ಕುಲದ ಗೌರವ ಮಾತ್ರ ಹಾಳಾಯಿತು. ರಾಮನಿಂದ ಅಗಲಿಸಿ ತಂದ ಈ ಮಾನಿನಿಗೆ ಇಂಥ ದುಃಖವನ್ನು ಒದಗಿಸಿದ ನಾನು ಮತ್ತು ನನ್ನ ಖ್ಯಾತಿಯೆಂಬ ಪತಾಕೆ ಕರಿಪತಾಕೆಯಾಗಿ ಹಾರಾಡುತ್ತಿದೆ. ನನ್ನ ತಮ್ಮ ವಿಭೀಷಣನು ಹಿತೋಪದೇಶ ಮಾಡಿದ. ಆದರೆ ಆತನ ಮಾತನ್ನು ನಾನು ಕೇಳದೆ ಅವನನ್ನು ಜರೆದು ವಿನೀತನಾಗಿದ್ದವನನ್ನು ವೈರಿಯಾಗಿಸಿಕೊಂಡೆ! ಕಾಮವ್ಯಸನಾಧೀನನಾದವನು ಹಿತಾಹಿತದ ಚಿಂತೆಯನ್ನು ಯಾಕಾದರೂ ಮಾಡುತ್ತಾನೆ? ತನ್ನ ಯಶಸ್ಸಿನ ಅಳಿವನ್ನು, ಸೋಲಿನ ಹಿಡಿತವನ್ನು ಕ್ಷಣಕ್ಷಣಕ್ಕೆ ಕಳೆದುಕೊಳ್ಳುತ್ತಿರುವ, ತಮ್ಮ ಮನಸ್ಸಿನ ಸಂಕಟವನ್ನು ತಿಳಿದುಕೊಳ್ಳದ ಜನಾಪವಾದ ಹೊರುವ ಕಾಮವ್ಯಸನಿಗಳು ತಿಳಿಯುವರೆ?" ಎಂದು ಉದ್ವೇಗಪರವಾಗಿ ನುಡಿದು ಹೀಗೆ ನಿಶ್ಚೈಸಿದನು.

– ಸೀತೆಯನ್ನು ಈಗಲೆ ಕೊಂಡೊಯ್ದು ಕೊಟ್ಟರೆ, ನನ್ನ ಶೌರ್ಯ, ಹೆಚ್ಚುಗಾರಿಕೆ, ಬಿರುದು ವ್ಯರ್ಥವೆಂದು ಲೋಕಕ್ಕೆ ಕಂಡೀತು. ಹಾಗಾಗಬಾರದು. ರಾಮಲಕ್ಷ್ಮಣರೊಡನೆ ಖಾಡಾಖಾಡಿ ಯುದ್ಧ ಮಾಡಿ, ಅವರನ್ನು ಸೋಲಿಸಿ, ಮತ್ತೆ ವಿರಥರನ್ನಾಗಿ ಮಾಡಿ ಸೆರೆಹಿಡಿದು ಮತ್ತೆ ಸೀತೆಯನ್ನು ತಂದು ಒಪ್ಪಿಸುತ್ತೇನೆ –

ಎಂದು ನಿಶ್ಚೈಸಿ – ತನ್ನ ನಿವಾಸಕ್ಕೆ ಬಂದು, ಅಂಗದ, ಪ್ರಭಾಮಂಡಲ, ಸುಗ್ರೀವ, ಹನುಮಂತರೇ ಮೊದಲಾದವರ ದುರಾಗ್ರಹಕ್ಕೆ ಕೋಪಿಸಿ ಅವರನ್ನು ರಾಮಲಕ್ಷ್ಮಣರೊಡನೆ ಕೊಲ್ಲುವೆನೆಂದು ಸಿದ್ಧತೆ ಮಾಡುತ್ತಿರುವಾಗ – ಆಕಾಶದಲ್ಲಿ ಕಾಣಿಸುವ ಕೆಲವು ಪರಿವರ್ತನೆಗಳನ್ನು ಕಂಡು ಆಶ್ಚರ್ಯ ಚಕಿತನಾದನು!

ಸೂರ್ಯಬಿಂಬದಲ್ಲಿ ನಡುವಿರುಳು ಕಾಮನ ಬಿಲ್ಲು ಮೂಡಿತು. ಗಿರಿಶಿಖರಗಳು ಜರಿದು ಬಿದ್ದುವು. ನೆಲವೇ ಸಿಡಿದಂತೆ ಕೇಳಿಸಿತು. ಹೆಣ್ಣಾನೆಗೆ ಮದವೇರುವುದನ್ನು, ಗಂಡಾನೆಗೆ ಮದವು ಇಳಿಯುವುದನ್ನು, ಗೃಹದೇವತೆಗಳು ಗುಂಪಾಗಿ ಅಳುವುದನ್ನು, ಆಕಾಶದಲ್ಲಿ ಧೂಮಕೇತು ಮೂಡುವುದನ್ನು ರಾವಣನು ಕಂಡನು!

ಹಗಲೇ ಉಲ್ಕಾಪಾತವಾಯಿತು, ಭೂಮಿ ನಡುಗಿತು. ನರಿಗಳು ಊಳಿಟ್ಟವು. ಆಯುಧಗಳು ಮುರಿದು ಬಿದ್ದವು. ಸೂರ್ಯಚಂದ್ರರು ಮಾಯವಾದರು. ಅರಮನೆಯ ಮಣಿಕಲಶ ಉದುರಿ ಕೆಳಬಿದ್ದಿತು. ಇವನ್ನೆಲ್ಲ ಕಂಡು ನೈಮಿತ್ತಿಕರು 'ನಾಳಿನ ಯುದ್ಧದಲ್ಲಿ ರಾವಣನಿಗೆ ಅಪಾಯತಪ್ಪದು' ಎಂದು ಆಡಿಕೊಂಡರು.

ಹೀಗೆ ಆಡುತ್ತಿರುವುದನ್ನು ರಾವಣನು ಕೇಳಿಸಿಕೊಂಡು, ಸೆರೆಯಲ್ಲಿದ್ದ ಮಕ್ಕಳು, ತಮ್ಮಂದಿರನ್ನು ನೆನೆದು ಕೋಪಿಸಿ ಕಾಳಗಕ್ಕೆ ಹೊರಡಲು ಸಿದ್ಧನಾಗಿ ಆಯುಧಶಾಲೆಯನ್ನು ಹೊಗಲು, ಮಂಡೋದರಿಯು ಕಂಡು, ಮಂತ್ರಿಗಳನ್ನು ಕರೆಸಿ ಈ ಯುದ್ಧವನ್ನು ನಿಲ್ಲಿಸುವಂತೆ ಮಾಡುವುದೆಂದು ಹೇಳಲು, ಅವರು "ನಾವೆಷ್ಟು ಬಾರಿ ಹೇಳಿದರೂ ಇನ್ನೊಬ್ಬರ ಮೂಲಕ ಹೇಳಿಸಿದರೂ ಕೇಳಲಿಲ್ಲ – ನೀವೇನಾದರೂ ಹೇಳಿ ಒಡಂಬಡಿಸಿರಿ" ಎನ್ನಲು ಆಕೆ ರಾವಣನ ಸನಿಯಕ್ಕೆ ಬಂದು.

"ನಾನೀ ಸೀತೆಯನ್ನು ರಘುರಾಮನಿಗಿತ್ತು, ಅವನ ಸೆರೆಯಲ್ಲಿರುವ ಮಕ್ಕಳು ತಮ್ಮಂದಿರನ್ನು ಬಿಡಿಸಿಕೊಂಡು ಬರುವೆನು. ಯುದ್ಧ ವ್ಯಸನದಿಂದ ಮರಣವೇ ಪ್ರಾಪ್ತವಾಗುವುದು. ಬಂಧುಗಳು, ನಮ್ಮ ಸಂತಾನ ಎಲ್ಲವೂ ನಾಶವಾಗುವುದು – ಯುದ್ಧವನ್ನು ನಿಲ್ಲಿಸುವುದು" ಎನ್ನಲು ರಾವಣನು "ನೀನಿಲ್ಲಿಂದ ತೊಲಗು" ಎಂದು ಗರ್ಜಿಸಿ, ಮಂಡೋದರಿಯನ್ನು ಗದರಿಸಿದನು.

ಮಂಡೋದರಿ ಹಿಂಜರಿಯದೆ "ಇವರು ಎಂಟನೆಯ ಅರ್ಧ ಚಕ್ರವರ್ತಿಗಳು. ನಿನಗಿವರು ಶತ್ರುಗಳಾಗಿರುವುದರಿಂದ, ಯುದ್ಧವನ್ನು ನಿಲ್ಲಿಸಿ ಸಂಧಿಗೆ ಒಡಂಬಟ್ಟು, ವಿದ್ಯಾಧರ ರಾಜರ ಸುಖವನ್ನು ಅನುಭವಿಸುವುದು" ಎಂದು ಹೇಳಲು, ರಾವಣನು –

"ಅವರು ಯುದ್ಧದಲ್ಲಿ ನನ್ನೆದುರಿಗೆ ನಿಂತು ಕಾದುವ ಸಮರ್ಥರಲ್ಲ, ಅದಕ್ಕೆ ನೀನು ಹೆದರುವ ಕಾರಣವಿಲ್ಲ" ಎಂದು ಹೇಳುತ್ತ ಸನ್ನಾಹ ಭೇರಿಯನ್ನು ಹೊಡೆಸಿದನು. ಚಂದ್ರಹಾಸವನ್ನು ಜಡಿಯುತ್ತ,

ಸಾವಿರ ಆನೆಗಳ ಹೆಗಲಲ್ಲಿ ವಿದ್ಯಾದೇವತೆ ನಿರ್ಮಿಸಿದ ರಥವನ್ನೇರಿ ಬಂದು ಯುದ್ಧ ಭೂಮಿಯಲ್ಲಿ ನಿಲ್ಲುತ್ತಲೂ ಲಕ್ಷ್ಮಣನೂ ಸನ್ನಾಹ ಭೇರಿಯನ್ನು ಹೊಯ್ಸಿ ಸಿಂಹರಥವನ್ನೇರಿ 'ರಣಭೂಮಿಯಲ್ಲಿ ಇಂದು ರಾವಣನನ್ನು ಸೋಲಿಸಿ ಜಯಲಕ್ಷ್ಮಿಯೊಡನೆ ಶೋಭಿಸುವೆನು" ಎಂದನು.

ರಾಮಲಕ್ಷ್ಮಣರು ಹೀಗೆ ರಥವೇರಿ ಬರುತ್ತಿರಲು ಶುಭಶಕುನಗಳಾದವು ರಣಭೂಮಿಗೆ ಬರುತ್ತ ರಾವಣನನ್ನು ಕಂಡು ಕೈ ಬೀಸುತ್ತ ಉಭಯ ಬಲಗಳೂ ಪರಸ್ಪರ ಕಾದಾಟದಲ್ಲಿ ತೊಡಗಿದವು.

ಆಗ, ಕಾಡಾನೆಗಳ ಹಿಂಡನ್ನು ಅಟ್ಟುವ ಸಿಂಹದಂತೆ ಮುಂದೆ ಬಂದು, ರಾಮಸೈನ್ಯವು ಹೆದರಿ ಓಡುವಂತೆ, ಹನುಮಂತನು ಕೂಡಾ ಹಿಂಜರಿವಂತೆ ಕಾದಾಡುತ್ತ ಯುದ್ಧದಲ್ಲಿ ದುರ್ಜಯನೆನಿಸಿದ ಮಯನು ಯುದ್ಧ ಮಾಡುತ್ತಿದ್ದನು.

ಹೀಗೆ ಯುದ್ಧ ಮಾಡುತ್ತ ಹನುಮಂತ, ಪ್ರಭಾಮಂಡಲ, ವಿಭೀಷಣ, ಸುಗ್ರೀವರನ್ನು ಶಸ್ತ್ರಹೀನರನ್ನಾಗಿ ಮಾಡುವುದನ್ನು ಕಂಡು ರಾಮನು ಕೋಪಿಸಿ ಧನುಷ್ಟಂಕಾರ ಮಾಡಲು -

ರಾವಣನ ದಿವ್ಯರಥದ ಆನೆಗಳು ಭಯಗೊಳ್ಳುವಂತೆ, ಸೂರ್ಯನ ಕುದುರೆಗಳು ಬೆಚ್ಚಿ ಬೀಳುವಂತೆ ರಾಮನ ಕೋದಂಡದ ನಾರೀರವವು ಭಯವನ್ನು ಹುಟ್ಟಿಸಿತು. ಆಗ ಪ್ರಳಯಕಾಲದ ಯಮನಂತೆ ಕೋಪಾವಿಷ್ಟನಾಗಿ ಮಯನು ಹತ್ತಿರ ಬಂದು ಯುದ್ಧ ಮಾಡುತ್ತಿರಲು ಅವನನ್ನು ರಾಮನು ಸೆರೆಹಿಡಿಯಲು, ಅದನ್ನು ಕಂಡು ರಾವಣನು ತಕ್ಷಣ ಅತ್ತ ತಿರುಗಿ ಯುದ್ಧ ಸನ್ನದ್ಧನಾದನು. ಲಕ್ಷ್ಮಣನು ನೋಡಿದೊಡನೆ 'ಇತ್ತ ಕಡೆ, ಇತ್ತ ಕಡೆ' ಎಂದು ಮಧ್ಯ ಪ್ರವೇಶಿಸಿ ಸಿಡಿಲ ಘರ್ಜನೆಯಂತೆ ನುಡಿಯಲು ಅದು ಯಮನ ಕರೆಯಂತೆ ಕೇಳಿಸಿತು.

‘‘ಕೊನೆಗೂ ನನ್ನ ಕಣ್ಣಿಗೆ ಬಿದ್ದೆ. ರಾಮನ ಅಮೋಘ ಬಾಣಗಳಿಗೆ ಇದಿರಾಗುವವರು ಈ ಭೂಮಿಯಲ್ಲಿ ಯಾರಿದ್ದಾರೆ? ಇದಿರಾದರೂ ಜಯಿಸುವವರು ಯಾರು? ಆದ್ದರಿಂದ ಸದ್ಯ ನನ್ನೊಡನೆ ಯುದ್ಧ ಮಾಡು, ನನ್ನ ಬಾಣಗಳ ತೀಕ್ಷ್ಣತೆಯನ್ನು ತಿಳಿದುಕೊ, ಪರೀಕ್ಷಿಸು’’ ಎಂದು ಕೊನೆಗಾಲದ ಯಮನಂತೆ ಕಣ್ಣು ಕೆಂಪೇರಿದ ಲಕ್ಷ್ಮಣನು ಗರ್ಜಿಸಿದನು.

ಹೀಗೆ ಗರ್ಜಿಸುವುದನ್ನು ಕೇಳಿ ರಾವಣನು ಕೆರಳಿ, ಸಾವಿರ ಆನೆಗಳನ್ನು ಹೂಡಿದ ರಥವು ನಡೆಯುತ್ತಿರುವ ಕುಲಪರ್ವತವೋ ಎನ್ನುವಂತೆ ಮುಂದೊತ್ತಿ ಬರುತ್ತ ಲಕ್ಷ್ಮಣನಿಗೆ ಇದಿರಾದನು.

ಆ ಕ್ಷಣದಲ್ಲಿಯೆ ಲಂಕೆಯ ಪರ್ವತವೇ ಎದ್ದು ಬರುವಂತೆ ಲಕ್ಷ್ಮಣನ ರಥವು ಬಂದು ಗರುಡಸೇನೆಯ ಬಿರುಗಾಳಿಯ ಆಘಾತದಿಂದ ಸಮುದ್ರದ ಅಲೆಗಳೇಳುವಂತೆ ಪ್ರತಿಸೈನ್ಯದ ಮೇಲೆರಗಿ ನಿಂತಿತು.

ಹೀಗೆ ಇಬ್ಬಲಗಳೂ ತಮ್ಮ ಸೇನೆಗಳನ್ನು ಸಾಕಷ್ಟು ದೂರ ನಿಲ್ಲಿಸಿ - ಇವು ದೃಷ್ಟಿಯಲ್ಲಿ ವಿಷವಿರುವ ಸರ್ಪಗಳ ನಾಲಗೆಯ ಪ್ರಭೆಯೆನ್ನುವಂತೆ ಅವರ ಕಣ್ಣುಗಳ ಕೆಂಪು ಪ್ರತಿಸ್ಪರ್ಧಿಗಳನ್ನು ಪರಸ್ಪರ ನುಂಗುವಂತೆ ನೋಡುತ್ತಿರಲು ಲಕ್ಷ್ಮಣನು -

‘‘ಅನೇಕ ದಿನಗಳಿಂದ ನೀನು ಎಂದು ಯುದ್ಧಕ್ಕೆ ಬರುತ್ತೀ ಎಂದು ಕಾಯುತ್ತಿದ್ದೆ. ಇಂದು ಸಿಕ್ಕಿದೆ. ಮುಂದೆ ನೀನು ಬಾಳುವ ಆಸೆಯನ್ನು ಬಿಟ್ಟು ಬಿಡು. ರಾಮನ ಕಾಲ್ಗಳಿಗೆರಗಿ

ಮೃತ್ಯುಂಜಯನಾಗಿ ಬಾಳು'' ಎಂದು ಹೇಳಿದನು.

ಈ ಮಾತುಗಳನ್ನು ಕೇಳಿ ರಾವಣನು ಸುಮ್ಮನಿರುವನೆ?

''ಮೂರು ಲೋಕಗಳಲ್ಲಿರುವ ಭೂಭುಜರನ್ನು ನನ್ನ ಭುಜಬಲ ಪ್ರತಾಪದಿಂದ ಕಾಲಿಗೆರಗಿಸಿಕೊಂಡೆನು. ಈಗ ನಿನ್ನನ್ನು ಕಾಲಿಗೆರಗಿಸಿಕೊಂಡು ನಿನ್ನ ದೇಹವನ್ನು ಹದ್ದು ಕಾಗೆಗಳಿಗೆ ಆಹುತಿ ಕೊಡುತ್ತೇನೆ'' ಎಂದು ಹೇಳುತ್ತ ''ಮಾತಾಡದೆ ಬಾಣ ಪ್ರಯೋಗ ಮಾಡು'' ಎಂದು ಮೂದಲಿಸುತ್ತ ಲಕ್ಷ್ಮಣ - ರಾವಣರು ತಮ್ಮ ಧನುಸ್ಸುಗಳನ್ನು ಏರಿಸಿ ಕಾದುತ್ತಿರಲು -

ರಾವಣನ ಆನೆ ರಥಗಳಿಂದ, ಮನುಜೇಂದ್ರನ ಗರುಡ ರಥಗಳಿಂದ ಬಿಟ್ಟ ಬಾಣಗಳು ಆ ಯುದ್ಧರಂಗದಲ್ಲಿ ಶರಪಂಜರಗಳನ್ನೇ ಹೆಣೆದಂತೆ ಕಾಣಿಸಿತು.

ಒಬ್ಬೊಬ್ಬರು ಬಿಟ್ಟ ಬಾಣಗಳನ್ನು ಪರಸ್ಪರರು ತುಂಡು ಮಾಡಿ, ಮತ್ತೆ ಬಾಣಗಳನ್ನು ಬಿಡಲು ಅವು ಮುಗಿಲು ಮುಸುಕಿದ ಆಕಾಶದಿಂದ ಸುರಿವ ನೀರಧಾರೆಯಂತೆ ಕಂಡವು.

ಲಕ್ಷ್ಮಣನ ಬಾಣಗಳು ರಾವಣನನ್ನು ಚುಚ್ಚಲಾರವೆ? ರಾವಣನ ಬಾಣಗಳು ಲಕ್ಷ್ಮಣನನ್ನು ಚುಚ್ಚಲಾರವೆ?

ಇದಿರಾಳಿಗಳಿಬ್ಬರೂ ಅಸ್ತ್ರ ಶಸ್ತ್ರ ಬಲದಲ್ಲಿ ಸರಿಸಮಾನರು, ಸದೃಢ ಶರೀರರು. ಸಾಹಸದಲ್ಲಿ, ಯುದ್ಧವಿದ್ಯೆಯಲ್ಲಿ, ಪೌರುಷದಲ್ಲಿ ಸರಿಸಮಾನರು. ಆದರೆ ಪ್ರತಿ ವಾಸುದೇವನಾದ ರಾವಣನ ಜೀವನಕ್ರಮ ನಡತೆಗೆಟ್ಟುದರಿಂದ ವಾಸುದೇವನೇ ಮೇಲ್ಗೈ ಎಂದು ಕಾಣುವುದು ಸ್ವಾಭಾವಿಕ! ರಾವಣ ಲಕ್ಷ್ಮಣರು ಅತ್ಯಂತ ರೋಷಾವೇಷದಿಂದ ಬಾಣ ಪ್ರಯೋಗಿಸಿ, ಹೊಡೆದು, ಇರಿದು, ನೋಡುತ್ತಿರುವಂತೆ ಕಾದಾಡಿದರು. ಹೀಗೆ ಕಾದಾಡಿದರೂ ಲಕ್ಷ್ಮಣನನ್ನು ರಾವಣನು ಗೆಲ್ಲಲಾರದೆ ತನ್ನಲ್ಲೆ ಸಿಡಿಮಿಡಿಗೊಂಡು, ತನ್ನ ಮನಸ್ಸಿನಲ್ಲಿ ಹುಟ್ಟಿದ ಬೆಂಕಿಯೇ ತನ್ನನ್ನು ಸುಡುತ್ತಿರಲು, ಆ ಬೆಂಕಿಯ ತೀವ್ರತೆಯಿಂದ ನಿಲ್ಲಲಾರದೆ ಮುಳಿಸಿ ಬಹುರೂಪಿಣೀ ವಿದ್ಯೆಯನ್ನು ನೆನೆದು ಅಪಾರವಾದ ದೇಹಧಾರಿಗಳನ್ನು ಪಡೆದನು.

ಆ ವಿದ್ಯೆಯ ಸಾಮರ್ಥ್ಯವನ್ನು ಏನೆಂದು ಹೊಗಳುವುದು? ಲಕ್ಷ್ಮಣನು ಸುತ್ತಮುತ್ತ ಎತ್ತ ನೋಡಿದರೂ ರಾವಣರೇ ಗೋಚರಿಸಿದಂತಾಯಿತು. ಇಡಿಯ ಭೂಮಂಡಲ, ಆಕಾಶ, ದಿಕ್ಕುಗಳಲ್ಲೆಲ್ಲ ರಾವಣರೇ ತುಂಬಿದರು. ಕೆಲವರು ಬಾಣ ಪ್ರಯೋಗಿಸಿದರು. ಕೆಲವರು ಖಡ್ಗದಿಂದ ಇರಿದರು. ಕೆಲರು ಒಟ್ಟಾಗಿ ಬಂದು ಕಾದಾಡಿದರು, ಕೆಲವು ಬೊಬ್ಬಿಟ್ಟರು - ಹೀಗೆ ಯುದ್ಧರಂಗದಲ್ಲಿ ರಾವಣರದೇ ರಾದ್ಧಾಂತವಾಯಿತು.

ಇಂತು ಯುದ್ಧದ ತೀವ್ರತೆ ಹೆಚ್ಚುತ್ತಿರಲು, ರಾವಣಮಯವಾದ ರಣರಂಗದಲ್ಲಿ ಒಬ್ಬನೇ ಲಕ್ಷ್ಮಣನು - ಕೋಟಿ, ಕೋಟಿ ಲೆಕ್ಕದ ರಾವಣರೊಡನೆ ಬಗೆಬಗೆಯ ಶಸ್ತ್ರಾಸ್ತ್ರಗಳಿಂದ ಹೋರಾಡಿದನು. ರಾವಣರು ಹುಟ್ಟಿದರು, ಸತ್ತರು - ಮತ್ತೆ ಹುಟ್ಟಿದರು ಮತ್ತೆ ಸತ್ತರು. ಇದೇನು ದುರ್ಧರನಾದ ಲಕ್ಷ್ಮಣನ ಅದ್ಭುತ ಶಕ್ತಿಯೊ?

ರಾವಣ ಕೋಟಿಯ ತಲೆ ಸರೋವರದಲ್ಲಿ ಕೆಂದಾವರೆಯನ್ನು ಕಡಿದಂತೆ ರಣರಂಗದಲ್ಲಿ

ಕಾಣುತ್ತಿರಲು ಈ ಬಗೆಯ ಸಾಮರ್ಥ್ಯ ಲಕ್ಷ್ಮಣನಿಗಲ್ಲದೆ ಬೇರೆ ಯಾರಿಗೆ ಇದ್ದೀತು? ರಾವಣನು ಬಹು ರೂಪಿಣೀ ವಿದ್ಯೆಯನ್ನು ಬಿಟ್ಟು, ಸಿಟ್ಟನ್ನು ಬಿಡದೆ, ಚಂದ್ರಹಾಸದೊಡನೆ ಲಕ್ಷ್ಮಣನಿಗೆ ಇದಿರಾದನು. ಲಕ್ಷ್ಮಣನು ಸೂರ್ಯಹಾಸದಿಂದ ಅದನ್ನು ತಡೆದನು. ರಾವಣನು ವೈರಿಗಳಿಗೆ ಕಾಲನಾದ ತನ್ನ ಆತ್ಮೀಯ ಚಕ್ರಕ್ಕೆ ಕೈಯಿಕ್ಕಿದಾಗ ಆ ಚಕ್ರವು ಕೋಟಿ ಕೋಟಿ ಸೂರ್ಯಪ್ರಭೆಯಂತೆ ಹೊಳೆಯುತ್ತ ಬಂದ ವಜ್ರಾಯುಧದಂತೆ ಕಂಡಿತು.

ಹೀಗೆ ವೀರ ಪುರುಷನಾದ ರಾವಣನ ಕೈಗೆ ಚಕ್ರರತ್ನವು ಬರುತ್ತಿರಲು ಲಕ್ಷ್ಮಣನ ಇದಿರಾಗಿ ರಾವಣನು ಸಾಮಾನ್ಯ ಕಾದಾಳಿನೊಡನೆ ನಾನು ಕಾದಾಡುವುದಲ್ಲ ಎಂದು ತಿಳಿದು ಶಕ್ತಿಯಲ್ಲಿ ಮೊದಲಾದ ಸೋಲನ್ನು ಮೀರಿ ನಾನೀಗ ಈ ಧಾರಾಚಕ್ರವನ್ನು ಪ್ರಯೋಗಿಸುತ್ತಿದ್ದೇನೆ! ಸಾಹಸವಿದ್ದರೆ ಗೆಲ್ಲು" ಎಂದು ಮೂದಲಿಸಿದನು.

ಭೂಮಿಯೆಂಬ ಚಕ್ರವನ್ನು ಕುಂಬಾರನ ಚಕ್ರದಂತೆ ತಿರುಗಿಸುತ್ತಿರಲು ಅಷ್ಟ ದಿಕ್ಕುಗಳಲ್ಲಿಯೂ ಬೆಂಕಿ ತಗಲಿ ಉರಿದವು. ಆ ಬೆಂಕಿಗೆ, ಮೇಲೆ ಆಕಾಶದಲ್ಲಿ ಯುದ್ಧವನ್ನು ನೋಡುತ್ತ ನಿಂತ ದೇವತಾ ಸಂಕುಲವು ಹೆದರಿ ಇದ್ದಲ್ಲಿಂದ ದೂರ ಸರಿಯಿತು. ಅದನ್ನು ಕಂಡು – ಲಕ್ಷ್ಮಣನನ್ನು ಕಾಯುವವರು ಯಾರು, ಸೀತೆಯ ದುಃಖಕ್ಕೆ ಕಾಲಾವಧಿ ಇಲ್ಲವಲ್ಲಾ ಎಂದು ಆಕಾಶದಿಂದ ನೋಡುತ್ತಿದ್ದ ದೇವತೆಗಳು ಎತ್ತೆತ್ತಲೋ ಓಡುತ್ತಿರಲು ರಾವಣಸೈನ್ಯವೂ, ಕಪಿಬಲವೂ ಯುದ್ಧವನ್ನು ಬಿಟ್ಟು ಸಿಕ್ಕಿದೆಡೆ ಪಲಾಯನ ಗೈಯಲು ತ್ರಿಲೋಕವನ್ನು ತಲ್ಲಣಿಸಿದ ರಾವಣನು ಸುದರ್ಶನವೆಂಬ ದಿವ್ಯಚಕ್ರವನ್ನು ಪ್ರಯೋಗಿಸಿದನು.

ಪ್ರಯೋಗಿಸಿದ ಸುದರ್ಶನ ಚಕ್ರವು ಲಕ್ಷ್ಮಣನ ಸಮೀಪಕ್ಕೆ ಬಂದು, ಮೂರು ಬಾರಿ ಅವನಿಗೆ ಪ್ರದಕ್ಷಿಣೆ ಮಾಡಿ, ಅವನ ಪಕ್ಕದಲ್ಲಿ ನಿಂತಿತು. ನೋಡುತ್ತಿರುವಂತೆ ರಾಮನು ಲಕ್ಷ್ಮಣನ ಹತ್ತಿರ ಬಂದು "ಲಕ್ಷ್ಮಣಾ ನಿನಗೆ ಚಕ್ರವು ಶರಣಾಗಿದೆ, ಅದನ್ನು ಸ್ವೀಕರಿಸಿಕೊ" ಎಂದು ಹೇಳಲು, ದಕ್ಷಿಣ ಭರತಭೂಮಿಗೆ ಅಭಯಹಸ್ತನೆನಿಸುವ ತನ್ನ ದಕ್ಷಿಣ ಹಸ್ತವನ್ನು ಲಕ್ಷ್ಮಣನು ನೀಡಲು –

ಲಂಕಾಧೀಶನ ಜಯಶ್ರೀ ಪಂಕಜನಾಭನಾದ ಲಕ್ಷ್ಮಣನಲ್ಲಿ ಪ್ರೀತಿ ತೋರಿ, ಯುದ್ಧದಲ್ಲಿ ತನ್ನನ್ನೇ ಸಮರ್ಪಿಸಿಕೊಂಡಂತೆ ಲಕ್ಷ್ಮಣನ ಕೈಗೆ ಬಂತು!

ಆಗ ಲಕ್ಷ್ಮಣನು "ರಾವಣಾ, ನಿನ್ನ ಪ್ರೀತಿಯ ಚಕ್ರವು ನೀನು ಹೇಳಿದಂತೆ ಕೇಳದೆ ನನ್ನ ಆಶ್ರಯಕ್ಕೆ ಬಂದಿದೆ! ನೀನೀಗ ಅದರ ಬಲವುಂಟೆಂದು ನನ್ನಲ್ಲಿ ಯುದ್ಧ ಮಾಡಿ ಸಾಯದೆ. ಲಂಕೆಯಲ್ಲಿ ನಿನ್ನ ಮಕ್ಕಳು, ಹೆಂಡಂದಿರು, ಮಿತ್ರರೊಡನೆ ರಾಜನಾಗಿ ನನ್ನ ಅಣ್ಣನಲ್ಲಿ ಅಭಯವನ್ನು ಕೇಳಿ ಪಡೆದು ಮತ್ತೆ ಸುಖವಾಗಿರು. ವಿವೇಕವಿಲ್ಲದ ನಿನ್ನ ಆಗ್ರಹವನ್ನು ಬಿಟ್ಟು, ಜಗಜ್ಜನನಿಯಾದ ಸೀತಾದೇವಿಯನ್ನು ಪೂಜಿಸಿ, ರಾಮನ ಚರಣಾರವಿಂದಗಳಿಗೆ ಒಪ್ಪಿಸು ಮತ್ತು ಮಾಡಿದ ತಪ್ಪಿಗಾಗಿ ಕಿರೀಟ ಹೊತ್ತ ತಲೆತಗ್ಗಿಸಿ ಅವರ ಪಾದಾರವಿಂದಗಳಿಗೆ ನಮಿಸು! ಎನಲು ರಾವಣನು ಹೊತ್ತಿ ನಂದುವ ದೀಪದಂತೆ ಕ್ಷೀಣಿಸುತ್ತಾ ಹೇಳಿದನು:

"ಚಕ್ರರತ್ನವು ನನ್ನನ್ನು ಅಗಲಿತೆಂದರೆ ಎಲೈ ಸುಮಿತ್ರಾಪುತ್ರನೆ, ನನ್ನ ಪೌರುಷ ಹಾನಿಯಾಯಿತೆ? ನೀನು ಗೆದ್ದಂತೆ ಕಲ್ಪಿಸಿಕೊಳ್ಳು, ಮಾತನ್ನು ಗಳಹಬೇಡ! ಕೈಲಾಸ ಪರ್ವತವನ್ನು

ತೂಗಿದ ಈ ಕೈ, ಈ ಕೈಯನ್ನು ಇದಿರಿಸುವ ಯಾವ ಗಂಡು ಇದ್ದಾನೆ ಈ ಪ್ರಪಂಚದಲ್ಲಿ" ಎಂದು ವೀರನಾದ ರಾವಣನು ರಥದಿಂದ ನೆಲಕ್ಕೆ ಧುಮುಕುತ್ತ ಹೇಳಿದನು.

ಹೀಗೆ ಸೋತರೂ ಸೋತಂತೆ ಕಾಣಿಸಿಕೊಳ್ಳದೆ ಚಂದ್ರಹಾಸವನ್ನು ಹಿರಿದು ಬೀಸಿ ಕಡಿಯಲು ಅಣಿಗೆಯ್ಯುತ್ತಿರಲು 'ಕೋಟಕ' ಶಿಲೆಯನ್ನೆತ್ತಿದ ಸತ್ವಶಾಲಿಯಾದ ಲಕ್ಷ್ಮಣನು ಸುದರ್ಶನ ಚಕ್ರವನ್ನು ಎತ್ತಿ ರಾವಣನ ಮೇಲೆ ಪ್ರಯೋಗಿಸಲು -

ರಾವಣನ ಹೃದಯವು ಸೀತೆಯ ಕಾರಣದಿಂದ ಕಾಮನು ತನ್ನ ಐದು ಬಾಣಗಳಿಂದ ಎಸೆದುದು ಚಕ್ರಕ್ಕೆ ಸುಲಭವಾಯಿತೆನ್ನುವಂತೆ ಎದೆಯನ್ನು ಹೊಕ್ಕು ಬೆನ್ನಿನ ಮೂಲಕ ಹೊರಬಂದಿತು. ರಾವಣನು ವಿಗತ ಪ್ರಾಣನಾಗಿ ನೆಲವೇ ನಡುಗಿವಂತೆ ಬಿದ್ದನು!

ರಾವಣನ ಅನರ್ಘ್ಯ ಮಣಿಭೂಷಣದ ಪ್ರಭೆಯಿಂದ ಮಿನುಗುವ ಪದ್ಮರಾಗದ ಶೋಭೆಯೊಡನೆ ಹೊರಬೀಳುವ ರಕ್ತಧಾರೆಯನ್ನು ವೀಕ್ಷಿಸಲು ನೆರೆದ ಅಪ್ಸರ ಸಮೂಹಕ್ಕೆ ರಾಕ್ಷಸ ಕುಲಾಧಿದೇವತೆಯೇ ಚಿಂತೆಯೆಂಬ ಬೆಂಕಿಯಿಂದ ಸುಡುವಂತೆ ರಾವಣನು ರಣಧಾರಿಣಿಯಲ್ಲಿ ಕಂಡನು. ಚಂದ್ರಹಾಸ ಖಡ್ಗ, ಚಕ್ರರತ್ನ, ಅಮಿತ ಶಸ್ತ್ರಾದಿಗಳ ಬಲ, ಕೈಲಾಸ ಪರ್ವತವನ್ನೆ ಅಲ್ಲಾಡಿಸಿದ ಹಿರಿಮೆ, ದಿಕ್ಪಾಲಕರನ್ನು ಸೋಲಿಸಿದ ಶೌರ್ಯ ಇವು ತಮ್ಮ ಇದಿರಲ್ಲೇ ಮರಣವನ್ನು ಅಪ್ಪುವುದೆಂದರೆ ಪರಸತೀ ವ್ಯಾಮೋಹದಿಂದ ಸಾಯುವುದು ಆಶ್ಚರ್ಯವೆ?

ಹೀಗೆ ರಾವಣನು ಯಮನ ಮುಖವನ್ನು ಹೊಗಲು - ಆಕಾಶದಿಂದ ಪುಷ್ಪವೃಷ್ಟಿಯಾಯಿತು. ಸುರದುಂದುಭಿ ಮೊಳಗಿತು. ಉಪೇಂದ್ರನನ್ನು ಸುರ ಸಮೂಹ ಕೊಂಡಾಡಿತು. ಜಯಧ್ವಜ ಹಾರಾಡಿತು. ನಿಶಾಚರ ಸೈನ್ಯ ಓಡಿತು. ಅಭಯಘೋಷವು ಭರತದ ಶರಧಿಯೋಪಾದಿಯಲ್ಲಿ ಹೆಚ್ಚಾಯ್ತು. ವಾನರಸೇನೆಯಲ್ಲಿ ವಿಜಯ ದುಂದುಭಿ ಮೊಳಗಿತು.

ಅಗ, ಭೂಮಿಯಲ್ಲಿ ಬಿದ್ದಿದ್ದ ಅಣ್ಣನ ದುಸ್ಥಿತಿಯನ್ನು ವಿಭೀಷಣನು ಕಂಡು ಸೋದರ ಸ್ನೇಹದಿಂದ ಮೂರ್ಛಿತನಾಗಿ ಮತ್ತೆ ಎದ್ದು ಹುಚ್ಚನಂತೆ ಪ್ರಲಾಪಿಸಿದನು. ರಾವಣನ ದೇಹಾವಸಾನವಾದುದನ್ನು ತಿಳಿದು ಮಂಡೋದರಿಯೇ ಮೊದಲಾದ ಅಂತಃಪುರ ಸ್ತ್ರೀಯರು ಬಂದು ರಾವಣನ ಕಳೇಬರವನ್ನು ಕಂಡು ಮೂರ್ಛಿತರಾಗಿ ಮತ್ತೆ ಎಚ್ಚತ್ತು -

"ನಿನ್ನ ಅಂತಃಪುರದ ಕಾಂತೆಯರನ್ನು ನೋಡದೆ, ನುಡಿಯದೆ, ಮನ್ನಿಸದೆ ಕೋಪಿಸಿದಂತೆ ಕ.ಇಲು ಖೇಚರ ಪತಿಯೇ ಏನು ಕಾರಣ?' ಆನೆ ಸಿಂಹ, ಮೃತ್ಯು, ಮುಂತಾದ ಮಹಾಧ್ವಜಗಳು ದ್ವಾರ ಮುಂದೆ ನಿರ್ಭೀತಿಯಿಂದ ಮೆರೆಯುತ್ತಿದ್ದುವೊ ಯಾರು ನಿನ್ನ ಅಪ್ಪಣೆಗೆ ಕಾಯುತ್ತಿದ್ದರೋ ಅವರನ್ನೆಲ್ಲ ನೀನು ತ್ಯಜಿಸಿ ಹೋದರೆ ಭರತ ಭೂಮಿಯನ್ನು ರಕ್ಷಿಸುವವರು ಇನ್ನಾರು ರಾವಣೇಶ್ವರಾ?

ನಿನ್ನ ಬಾಣ ಪ್ರಯೋಗದ ವೇಗದಿಂದ, ದಿಕ್ಪಾಲಕರೇ ಹೆದರುವಂತೆ ತ್ರಿಜಗದ್ಭೂಷಣವನ್ನು ಅಂಕಿತದಲ್ಲಿಟ್ಟುಕೊಂಡು. ದಿಗ್ಗಜಗಳನ್ನು ಓಡಿಸಲು. ವಿಜಯಾರ್ಧಶೈಲದ ತೆಂಕಣ ಭಾಗಕ್ಕೆ ತಾನೊಬ್ಬನೇ ಕಂಕಣ ತೊಟ್ಟು, ವಶಪಡಿಸಿಕೊಂಡವನೆಂಬ ಅಗ್ಗಳಿಕೆಗೆ ಪಾತ್ರನಾಗಿ, ಲಂಕೆಯನ್ನು ಆಳಲು ಸಮರ್ಥನಾದವನು ನೀನಲ್ಲದೆ ಇನ್ನಾರು ದಶಾನನಾ?"

"ಇದಿರಾದವರನ್ನು ಹೆದರಿಸಿ, ಭುಜ ಬಲಶಾಲಿಗಳಾದವರನ್ನು ಸೋಲಿಸಿ, ಸಹಸ್ರ ಬಾಹುವಿನಂಥ ವೀರಾಗ್ರಣಿಯನ್ನು ನಿನ್ನ ದಾಸನ್ನಾಗಿ ಮಾಡಿಕೊಂಡ ಅರಸು ನೀನೊಬ್ಬನಲ್ಲದೆ ಇನ್ಯಾರು ದಶಕಂಠಾ?"

"ಅಕಟಾ, ದೇವಲೋಕಕ್ಕೆ ನೀನು ಅತಿಥಿಯಾದೆ. ಇನ್ನು ನಿನ್ನೀ ಮುಖಭೂಷಣವನ್ನು ತೊಡುವವರು ಯಾರು? ಇಷ್ಟ ಬಂದಾಗ ಮನಸ್ಸಂತೋಷಕ್ಕಾಗಿ ಈ ಪುಷ್ಪಕ ವಿಮಾನವನ್ನು ಏರುವವರು ಯಾರು?"

"ಇದಿರಾಳಿಗಳು ಉತ್ಸವ ಪತಾಕೆಗಳನ್ನು ಎತ್ತುವಂತೆ, ಜಯಜಯಕಾರವನ್ನು ಹಾಡುವಂತೆ, ಯಮನ ಬಾಯಿಗೆ ಆಹಾರವಾದೆ. ಅದೂ ಎಲ್ಲಿ? ವಿರೋಧಿ ಭೂಭುಜ, ಖೇಚರ ರಾಜರ ರಾಜಧಾನಿಯಾದ ಈ ಲಂಕೆಯಲ್ಲಿ!"

ಎಂದು ಅತಿಯಾಗಿ ಪ್ರಲಾಪಿಸುತ್ತ ರಾವಣನ ಕಾಲಡಿಯಲ್ಲಿ ಬಿದ್ದು ಹೊರಳಾಡುತ್ತ ಅವನ ಕುಲಸ್ತ್ರೀಯರು ಹಲುಬುತ್ತಿರಲು ಅವರನ್ನು ಕಂಡು ರಾಮನು 'ರಾವಣನ ಈ ಬಗೆಯ ಮರಣವು ನಮ್ಮಿಂದಾದುದಲ್ಲ, ಅದು ಅವನ ದುರ್ವ್ಯಸನದಿಂದಾದುದು" ಎಂದು ಅವರನ್ನು ಬಗೆಬಗೆಯಾಗಿ, ವಿಭೀಷಣನೊಡನೆ ಸಂತೈಸಿದನು. ಅನಂತರ –

"ಯಾರು ಹೆಣ್ಣಿಗಾಗಿ ಯುದ್ಧ ಮಾಡಿದನೋ, ಅವನ ಅವಸಾನವಾಯ್ತು. ಅವನೊಡನೆ ಹಗೆತನ ಸಾಧಿಸುವುದು ಸರಿಯಲ್ಲ" ಎಂದು ಹೇಳಿ ತಾನೂ ಲಕ್ಷ್ಮಣನೂ ಕರ್ಪೂರ, ಅಗರು, ಚಂದನ, ಗೋ ಶೀರ್ಷಗಳಿಂದ ರಾವಣನ ಕಳೇಬರವನ್ನು ಸಂಸ್ಕರಿಸಿ, ಅನಂತರ ಇಂದಗಿ, ಮೇಘವಾಹನ, ಕುಂಭಕರ್ಣಾದಿಗಳನ್ನು ಸೆರೆಯಿಂದ ಬಿಡಿಸಿ, ಬರಮಾಡಿ, ಅವರ ದುಃಖದ ಆವೇಗವನ್ನು ಉಪಶಮಿಸಿದರು. ಮತ್ತೆ –

"ರಾವಣನೊಬ್ಬನನ್ನೇ ಕಳೆದುಕೊಂಡಿರಿ ನೀವಿಷ್ಟು ಜನರೂ ಪ್ರೀತಿಯಿಂದ ವಿಭೀಷಣನನ್ನು, ಸದ್ಭಾವದಿಂದ ಮನ್ನಿಸಿ, ಖೇಚರರ ಸೌಭಾಗ್ಯವನ್ನು ಎಂದಿನಂತೆ ಅನುಭವಿಸಿರಿ" ಎಂದು ಹೇಳಲು – ಕುಂಭಕರ್ಣಾದಿಗಳು. ರಾಮಲಕ್ಷ್ಮಣರ ನಿರ್ಮಲ ಅಂತಃಕರಣವನ್ನು, ಸಂಸಾರದೊಡನೆ ಬಾಳುವ ಧೈರ್ಯವನ್ನು, ಬಾಹುಬಲವನ್ನು ಮೆಚ್ಚಿ, ಹೊಗಳಿ, ಇನ್ನು ನಮಗೆ ಸಂಸಾರ ಸುಖವು ಸಾಕು ಎಂದು ಭೋಗದ ಮೇಲೆ ವೈರಾಗ್ಯ ಹೊಂದಿ, ರಾಮಲಕ್ಷ್ಮಣರೊಡನೆ ಪದ್ಮ ಸರೋವರದಲ್ಲಿ ರಾವಣನಿಗೆ ಜಲದಾನ ಕ್ರಿಯೆಯನ್ನು ಮಾಡಿದರು. ಆ ಬಳಿಕ ಮಂಡೋದರಿ ಸಹಿತ ನಲ್ವತ್ತೆಂಟು ಸಾವಿರ ವಿದ್ಯಾಧರಿಯರೊಂದಿಗೆ ದೀಕ್ಷೆಗೊಂಡು ಶುಭಧ್ಯಾನನಿರತರಾದರು.

◆

೯. ಸೀತಾ ಪರಿತ್ಯಾಗ, ರಾಮಪರಿನಿರ್ವಾಣ

ಸುಗ್ರೀವ, ಅಂಗದ, ಪ್ರಭಾಮಂಡಲ ಮೊದಲ್ಗೊಂಡ ವಿದ್ಯಾಧರ ಪರಿವಾರದೊಡನೆ ರಾಮಲಕ್ಷ್ಮಣರು ತ್ರಿಜಗದ್ಭೂಷಣ ಗಜಾರೂಢರಾಗಿ ಲಂಕಾಪುರವನ್ನು ಹೊಕ್ಕು ಸೀತಾದೇವಿ ಇದ್ದ ನಂದವನದ ಬಳಿ ಬಂದರು. ಬಾಡಿ ಬಸವಳಿದು ಕಮಲದ ಬಳ್ಳಿಯಂತಿರುವ ಜಾನಕಿಯನ್ನು ನೀಲಾಂಬರನು ನೋಡಿ, ಆನೆಯಿಂದ ಕೆಳಗಿಳಿದನು. ಆಗ ಸೀತೆ, ಇದಿರು ಬಂದು ಕೈಗಳನ್ನು ಮುಗಿದು ರೋಮಾಂಚನವುಂಟಾಗಿ ಬೆವರ ಹನಿಗಳು ತೊಟ್ಟಿಕ್ಕುತ್ತಿರಲು, ರಾಮನ ಚರಣಾರವಿಂದಗಳಿಗೆ ಎರಗಿದಳು. ಅವಳ ಕೆದರಿದ ತಲೆಗೂದಲು ಮರಿತುಂಬಿಗಳನ್ನು ಮರೆಸಿತು.

ಸೀತೆಯ ಪತಿವ್ರತಾಗುಣಾಧಿಕ್ಯಕ್ಕೆ, ಅವಳ ನಿಷ್ಠೆಗೆ, ದರ್ಶನ ಶುದ್ಧಿಗೆ ಪ್ರೀತಿಯಿಂದ ಸ್ತುತಿಸಿ ದೇವತೆಗಳು ಪುಷ್ಪವೃಷ್ಟಿಯನ್ನು ಸುರಿಸಿದರು. ಅವಳನ್ನು ದಿವ್ಯ ವಸನಾಲಂಕಾರಗಳಿಂದ ಸಿಂಗರಿಸುತ್ತಿರಲು, ಖಚರಾಧಿನಾಯಕರು ಕೈ ಮುಗಿಯಲು ನೆರೆದ ಜನರೆಲ್ಲ ವಿಸ್ಮಿತರಾದರು.

ಲಕ್ಷ್ಮೀಧರನು ತನಗೆ ನಮಸ್ಕರಿಸಲು, ಅವನನ್ನು ಹರಸಿ, ಮನ್ನಿಸಿ "ನನ್ನ ಕಾರಣದಿಂದ ಕಷ್ಟಪಟ್ಟಿರಿ" ಎಂದು ದುಃಖಿಸಲು, ರಾಮಲಕ್ಷ್ಮಣರು ಸಂತೈಸಿದ ಬಳಿಕ ಪ್ರಭಾಮಂಡಲನನ್ನು ಕಂಡು, ಅವಳಿಗೆ ನಮಸ್ಕರಿಸಿ, ಎಲ್ಲರ ಉಪಕಾರವನ್ನು ಸ್ಮರಿಸಿ ಸಂತೋಷಪಟ್ಟರು.

ಸತಿಯೂ ತಾನೂ ಆನೆಯನ್ನೇರಿ ವಿದ್ಯಾಧರಾಧೀಶ್ವರನ ಮಕ್ಕಳೊಡನೆ ಪೂರ್ಣಚಂದ್ರಾಕೃತಿಯಂತೆ ಸುತ್ತಲೂ ಮಂಡಲಿಸಿ ನಡೆಯುತ್ತಿರಲು, ಅದೇ ಒಂದು ಚಂದ್ರ ಮಂಡಲವಾಯಿತೋ ಎಂಬಂತೆ ಕಂಡು, ಮುಂದೆ ಬಂದು ರಾವಣನ ಅರಮನೆಯನ್ನು ಹೊಕ್ಕಿತು.

ಅವರನ್ನು ಆದರದಿಂದ ಬರಮಾಡಿಕೊಂಡು, ಅವರಿಗೆ ಸಕಲ ಸೌಭಾಗ್ಯದ ಉಡುಗೊರೆಯನ್ನು ಕೊಟ್ಟು, ದಿವ್ಯ ಮಣಿಭೂಷಣ, ದಿವ್ಯವಿಲೇಪನ, ದಿವ್ಯಾಂಬರಗಳನ್ನು ಕೊಟ್ಟು ವಿಭೀಷಣನು ಮನ್ನಿಸಿದನು.

ರಾಮಲಕ್ಷ್ಮಣರು ಹೀಗೆ ಚಕ್ರವರ್ತಿಗಳಾಗಿ ಕೆಲವು ಕಾಲ ಇದ್ದು, ತಾಯಂದಿರನ್ನು ಅಗಲಿ, ಬಹುಕಾಲ ಕಳೆದು ಹೋಯ್ತೆಂದು ತಿಳಿದು ವಿಭೀಷಣನನ್ನು ಕರೆಸಿ -

“ಅವಧಿಯ ವರ್ಷಗಳು ಮುಗಿಯುತ್ತ ಬಂದವು. ನಾವೀಗ ಅಯೋಧ್ಯೆಗೆ ಹೋಗದಿದ್ದರೆ ತಾಯಂದಿರು, ಬಾಂಧವರು ಖೇದಪಡುವರು. ಆದ್ದರಿಂದ ಹೋಗಲೇಬೇಕು” ಎಂದು ತಿಳಿಸಿ - ಪ್ರಯಾಣ ಭೇರಿಯನ್ನು ಹೊಡೆಸಿದರು.

ಬಲದಲ್ಲಿ ಲಕ್ಷ್ಮೀಧರ, ಎಡದಲ್ಲಿ ಸೀತೆ, ಸುತ್ತಲೂ ಖೇಚರನಾಯಕರು ಮತ್ತು ಅವರ ವಿಮಾನಗಳು ಮಂಡಲಿಸುತ್ತ, ಅಯೋಧ್ಯಾಭಿಮುಖವಾಗಿ ಸಮುದ್ರವನ್ನು ದಾಟಿ, ದಂಡಕಾರಣ್ಯದವರೆಗೆ ಬಂದು, ಚಾರಣ ಮುನಿಗಳ ಜೋಡಿಯೊಂದಕ್ಕೆ ಆಹಾರವಿತ್ತು, ಅಲ್ಲಿ ತಾವಿದ್ದ ಲತಾಗಾರದ ತೋಟವನ್ನು ರಾಮನು ಸೀತೆಗೆ ತೋರಿಸಿದನು. ಆಕಾಶ ಮಾರ್ಗದಿಂದ ಮನೋವೇಗದಲ್ಲಿ ಬರುತ್ತಿದ್ದ ವಿಮಾನವು ಅಯೋಧ್ಯೆಯ ಹೊರ ಪ್ರದೇಶವನ್ನು ಪ್ರವೇಶಿಸಿತು. ಇದನ್ನು ತಿಳಿದ ಭರತನು ಮುದಿತ ಹೃದಯನಾಗಿ, ಶತ್ರುಘ್ನನೊಡನೆ ಅಯೋಧ್ಯೆಯಿಂದ ಹೊರಬಂದುದನ್ನು ದೂರದಿಂದ ರಾಮನು ಕಂಡು, ಪುಷ್ಪಕ ವಿಮಾನವನ್ನು ಆಕಾಶ ಮಾರ್ಗದಿಂದ ಕೆಳಗಿಳಿಸಿ ನಿಲ್ಲಿಸಲು, ಭರತ, ಶತ್ರುಘ್ನರು ಆನೆಯನ್ನಿಳಿದು ಬಂದು ರಾಮಲಕ್ಷ್ಮಣರಿಗೆ ಸರ್ವಾಂಗ ಪ್ರಣತರಾಗಲು, ಅವರನ್ನು ಶ್ರೀರಾಮನು ತೆಗೆದಪ್ಪಿ, ಆಶೀರ್ವದಿಸಿದ ಬಳಿಕ ಸೀತೆಗೂ, ಲಕ್ಷ್ಮೀಧರನಿಗೂ ನಮಸ್ಕರಿಸಿ ಅವರಿಂದ ಆಶೀರ್ವಾದವನ್ನು ಪಡೆದು ಪರಸ್ಪರ ಕುಶಲವಾರ್ತೆಯನ್ನು ಹೇಳಿ - ಕೇಳಿ ಸಂತುಷ್ಟರಾದರು. ಅನಂತರ ಪಟ್ಟಣವನ್ನು ಹೊಕ್ಕು, ತಾಯಂದಿರನ್ನು ಕಂಡು ನಮಸ್ಕರಿಸಿ, ಆಶೀರ್ವಾದಗಳನ್ನು ಕಿವಿಗಳಲ್ಲಿ ಅಲಂಕರಿಸಿಕೊಂಡು, ಓರೋರ್ವರು ಕೇಳಿ ತಿಳಿದು ಸಂತುಷ್ಟಿಪಟ್ಟರು. ಒಂದು ಶುಭ ಮುಹೂರ್ತದಲ್ಲಿ ಶ್ರೀರಾಮನು ರಾಕ್ಷಸ ದ್ವೀಪ ಸಹಿತವಾದ ನಗರವನ್ನು ಸುಗ್ರೀವನಿಗೂ, ಶ್ರೀಪರ್ವತನಗರವನ್ನು ಹನುಮಂತನಿಗೂ ಪಾತಾಳ ಲಂಕೆಯನ್ನು ವಿರಾಧಿತನಿಗೂ, ರಥ ನೂಪುರ ಚಕ್ರವಾಳ ಪುರವನ್ನು ಪ್ರಭಾ ಮಂಡಲನಿಗೂ ರಾಜ್ಯಾಭಿಷೇಕ ಸಹಿತ ಕೊಟ್ಟು, ಉಪಕರಿಸಿದ ಎಲ್ಲರಿಗೆ ನಾಡನ್ನು ಬೀಡನ್ನು ಕೊಡಿಸಿ ಲಕ್ಷ್ಮಣನನ್ನು ತ್ರಿಖಂಡ ಮಂಡಲಕ್ಕೆ ಅಧಿರಾಜನನ್ನಾಗಿ ನೇಮಿಸಿ, ಭರತನು ಮುನ್ನಿನಂತೆ ಆಳ್ವುದೆಂದು ಆಜ್ಞಾಪಿಸಲು -

ಭರತನು - “ಅಣ್ಣಾ ನಿಮ್ಮ ಆಜ್ಞೆಯನ್ನು ಮೀರದೆ ಇದುವರೆಗೆ ಈ ರಾಜ್ಯವನ್ನು ಕಾಯ್ದುಕೊಂಡಿದ್ದೆ. ಇನ್ನು ನಾನು ಅಧಿಕಾರವನ್ನು ಕೈಕೊಳ್ಳಲಾರೆ. ವಿಷಯಸುಖವು ನನಗೆ ಬೇಡವಾಗಿದೆ. ಮೋಕ್ಷಲಕ್ಷ್ಮಿಯನ್ನು ಸೇರಲು ಆತುರಪಡುತ್ತೇನೆ. ಆದ್ದರಿಂದ ಇದೋ ನಿನಗೆ ಕೈಮುಗಿದು ಬೇಡುತ್ತಿದ್ದೇನೆ, ಅನುಗ್ರಹಿಸು” ಎಂದು ಕೇಳಿಕೊಂಡನು.

ತಪಸ್ಸಿಗೆ ಮನಸ್ಸು ಮಾಡಿ ಭರತನು ಕೇಳುತ್ತಿರಲು ರಾಮನು “ಮೊದಲು ನಮಗೆ ಭೂಚರರು ಸೇವೆ ಸಲ್ಲಿಸಿದರು. ಈಗ ಖೇಚರರೂ ಸೇವೆಗೆ ಆತುರಪಡುತ್ತಾರೆ. ಇನ್ನು ಕೆಲವು ಕಾಲ ಸುಖವನ್ನು ಅನುಭವಿಸಿ ನಾವೆಲ್ಲ ಜೊತೆಜೊತೆಯಾಗಿ ತಪಸ್ಸಿಗೆ ಮನಸ್ಸು ಮಾಡುವ” ಎನಲು ಭರತನು “ಅಣ್ಣಾ ನೀನು ನನ್ನಲ್ಲಿ ಕರುಣೆ ತೋರಿಸು. ನನ್ನನ್ನು ಹೋಗಲು ಬಿಡು, ನನಗೆ ಇನ್ನು ಉಳಿದುದು ತಪಸ್ಸು ಒಂದೇ. ನೀನಿದನ್ನು ತಪ್ಪಿಸಬಾರದು” ಎನ್ನುತ್ತ ಉತ್ತರಕ್ಕೆ ಕಾಯದೆ, ಪ್ರತಿಜ್ಞೆ ಮಾಡಿ ವಿಜ್ಞಾಪಿಸಿ, ಬೇರೆ ಮಾತಿಗೆ ಅವಕಾಶವಿಲ್ಲದಂತೆ, ರಾಜಭವನದಿಂದ ಹೊರಟು ಹೋಗಿ ತಪಸ್ಸಿಗೆ ಕುಳಿತನು.

೨೭. ಪರಿತ್ಯಾಗ, ರಾಮ ನಿರ್ವಾಣ

ಕೈಕೆಯೂ, ಮುನ್ನೂರು ಜನ ಸ್ತ್ರೀಯರೊಡನೆ ಹೋಗಿ ವಿಧಿ ವಿಧಾನಗಳಿಂದ ತಪಸ್ಸಿಗೆ ನಿಂತಳು.

ರಾಮಲಕ್ಷ್ಮಣರು ಈ ಧರೆಯನ್ನು ಖೇಚರ, ಭೂಚರ, ರಾಜರುಗಳೊಡನೆ ನಿರಂತರ ಸುಖದಿಂದ, ದೇವೇಂದ್ರನ ವೈಭವದೊಡನೆ ರಾಜ್ಯವನ್ನಾಳಿದರು.

ಹೀಗೆ ಸುಖದಿಂದಿರಲು ಒಂದು ದಿನ ಕತ್ತಲೆ ಕಳೆಯುವ ಸಮಯದಲ್ಲಿ ಶರಭಗಳೆರಡು ತನ್ನ ಮುಖವೆಂಬ ತಾವರೆಯನ್ನು ಹೊಕ್ಕಂತೆಯೂ ಅಲ್ಲಿಂದ ಅವು ಪುಷ್ಪಕ ವಿಮಾನದಿಂದ ಕೆಳಗೆ ಬೀಳುತ್ತಿರುವಂತೆಯೂ ಸೀತೆಯು ಒಂದು ಕನಸನ್ನು ಕಂಡಳು. ಕಂಡ ವಿಷಯವನ್ನು ಶ್ರೀರಾಮನಿಗೆ ತಿಳಿಸಿದಳು.

ಕನಸಿನಲ್ಲಿ ಎರಡು ಶರಭಗಳನ್ನು ಕಾಣುವುದೆಂದರೆ ಪರಾಕ್ರಮಿಗಳಾದ ಅವಳಿ ಮಕ್ಕಳು ಹುಟ್ಟುವುದು ಎಂಬ ಸಂಕೇತ. ಇನ್ನು ಪುಷ್ಪಕ ವಿಮಾನದಿಂದ ಅವರು ಕೆಳ ಬೀಳುವುದು ಒಳ್ಳೆಯ ಲಕ್ಷಣವಲ್ಲ! ಅದು ದುಃಖದ ಸಂಕೇತ ಎಂದು ರಾಮನು ಹೇಳುತ್ತ ಇಬ್ಬರೂ ಕೊರಗುತ್ತಿದ್ದರು. ಹೀಗಿರಲು ಕೆಲವು ದಿವಸಗಳು ಕಳೆದುವು. ಸೀತೆಗೆ ಗರ್ಭ ನಿಂತ ಚಿಹ್ನೆ ಕಾಣಿಸಿತು. ಕಂಡದ್ದನ್ನೆಲ್ಲ ತಿನ್ನುವ ಬಯಕೆ ಹುಟ್ಟಿತು. ಅನುದಿನವೂ ಜಿನಪೂಜೋತ್ಸವವನ್ನು ಮಾಡುತ್ತ ಒಂದು ದಿನ -

ಆಗಬೇಕಾದ್ದನ್ನು ನಿಲ್ಲಿಸುವವರು ಯಾರು? ಧರ್ಮಮಾರ್ಗದಲ್ಲಿ ನಡೆದವರನ್ನು ಕಷ್ಟದ ಹಾದಿಗೆ ದೂಡುವಂತೆ ಸೀತೆಯ ಎಡಗಣ್ಣು ಹಾರತೊಡಗಿತು. ಇಂತಹ ಅವಲಕ್ಷಣಕ್ಕೆ ಸೀತೆ ಭಯಸ್ಥೆಯಾಗಿ, ಗೃಹ ಪುರೋಹಿತರನ್ನು ಕರೆದು "ಯಾರು ಏನು ಬೇಡಿದರೂ ದಾನ ಮಾಡಬೇಕು" ಎಂದು ಹೇಳಿ ತಾನೂ ಜಿನಾಭಿಷೇಕ, ಜಿನಪೂಜೆಗಳನ್ನು ಮಾಡುತ್ತ ಮಾಡಿಸುತ್ತಾ ಇರಲು, ಜನಪದರು ರಾಮನನ್ನು ಕಾಣಲು ಬಂದು ಕಾದಿದ್ದರೂ ಪರಿಜನರು ಅವರನ್ನು ಬಿಡದಿರಲು, ರಾಮನು ತಿಳಿದು, ಅವರನ್ನು ತಾನೇ ಕಂಡು "ಏನು ಕಾರಣ, ಏನು ವಿಷಯ" ಎಂದು ಕೇಳಲು - ಎಲ್ಲರ ಪರವಾಗಿ ವಿಜಯನೆಂಬುವನು ಹೀಗೆಂದನು.

"ವ್ಯಸನಿಯೂ, ದುಷ್ಟನೂ ಆದ ರಾವಣನು ಸುಂದರಿಯಾದ ಸೀತೆಯನ್ನು ಕಾಮಿಸಿ, ಆಕೆಯನ್ನು ತನ್ನರಮನೆಯಲ್ಲಿ ಇರಿಸಿದ್ದನು. ಅದನ್ನು ವಿಚಾರಿಸದೆ ಅವಳನ್ನು ಪುನಃ ಒಡಗೂಡಿಕೊಂಡು ಬಂದು ಮೊದಲಿನಂತೆ ಇರುವುದು ವಂಶಕ್ರಮವೆ? ರಾಜ್ಯವಾಳುವ ಅರಸನೇ ಹೀಗೆ ಮಾಡಿದರೆ ಧರ್ಮವನ್ನು ಪರಿಪಾಲಿಸುವವರು ಯಾರು?" ಎಂದು ಜನರ ಅಭಿಪ್ರಾಯವನ್ನು ಪ್ರಕಟಿಸಿದನು.

ರಾಮನು ಈ ಮಾತನ್ನು ಕೇಳಿ "ಜನರು ಅನುಮಾನ ಪಡುವಂತಹ ಸ್ಥಿತಿ ಬಂತೆ?' ನಾನಿದನ್ನು ಮೊದಲು ಯೋಚಿಸದೆ ಹೋದೆನಲ್ಲ" ಎಂದು ಪಶ್ಚಾತ್ತಾಪ ಪಟ್ಟು, ಮನಸ್ಸಿಗೆ ಉದ್ವೇಗವನ್ನು ಹಚ್ಚಿಕೊಂಡು ದುಃಖಿಸಿದನು.

"ಯಶಸ್ಸನ್ನು, ಧರ್ಮದ ಉಳಿವನ್ನು ಬಯಸುವುದು ಮನುಷ್ಯ ಜನ್ಮದ ಸಾರ್ಥಕತೆ. ಆದ್ದರಿಂದ ಸೀತೆಯನ್ನು ತ್ಯಜಿಸುವುದೇ ಮನುವಂಶದವರ ಧರ್ಮ, ಅದನ್ನು ಮೀರುವುದು ಸರಿಯಲ್ಲ" ಎಂದು ಯೋಚಿಸಿ ಸೀತೆಯೊಡನೆ ಅತಿ ಪ್ರೀತಿಯನ್ನು ತೋರಿದರೂ, ಜನಾಪವಾದಕ್ಕೆ ಹಿಂಜರಿದು ಅದನ್ನು ನಿವಾರಿಸಬೇಕೆಂದು ನಿಶ್ಚೈಸಿ, ಲಕ್ಷ್ಮಣನನ್ನು ಬರಹೇಳಿ, ಏಕಾಂತದಲ್ಲಿ ವಿಷಯವನ್ನು

ತಿಳಿಸಲು, ಲಕ್ಷ್ಮಣನು ಕೋಪಿಸಿಕೊಂಡು "ಇದೇಕೆ ಅಣ್ಣ ನೀವೂ ಅವಿವೇಕಿಗಳಂತೆ ನುಡಿಯುತ್ತೀರಿ" ಎಂದನು. ಮತ್ತೆ ಮುಂದುವರಿದು "ಸತಿಯಾದ ಸೀತಾಮಾತೆ ಪತಿವ್ರತಾದಿ ಗುಣಭೂಷಣಗಳನ್ನು ಹೊಂದಿದವಳು. ಅವಳಲ್ಲಿ ಅವಗುಣಗಳನ್ನು ನಿಮ್ಮಂತಹ ಜ್ಞಾನಿಗಳು ಗುರುತಿಸುವುದು ಅನುಚಿತ!" ಎನ್ನಲು, "ರಾಮನು ಪುರುದೇವನೇ ಮೊದಲಾದ ಇಕ್ಷ್ವಾಕುವಂಶದ ರಾಜರಲ್ಲಿ, ನನ್ನಲ್ಲಿವರೆಗೆ ದುಶ್ಚರಿತ್ರದಿಂದ ವರ್ತಿಸಿದವರಿಲ್ಲ! ಈಗ ಈ ಕಾರಣದಿಂದ ನನಗೆ ಅಪಖ್ಯಾತಿ ಬಂದರೆ ನನ್ನ ಚಾರಿತ್ರ್ಯವು ಹಾಳಾಗದೆ?" ಎಂದನು.

ಆಗ ಲಕ್ಷ್ಮಣನು "ಸೀತೆ ದುರ್ಗುಣವಂತೆಯಾದರೆ ಈ ಭೂತಳವೇ ನಾಶವಾಗುತ್ತದೆ, ಅಂದು ಈ ಸೀತೆಯನ್ನು ದೇವಾದಿದೇವತೆಗಳು ಪೂಜಿಸಿ ಆಕಾಶದಿಂದ ಹೂಮಳೆ ಸುರಿಸುತ್ತಿದ್ದರೆ?" ಎಂದು ಹೇಳುತ್ತ "ಈ ಸಲ್ಲದ ಅಪವಾದವನ್ನು ಪ್ರಚಾರ ಮಾಡಿದವರ ನಾಲಗೆಯನ್ನೇ ಕತ್ತರಿಸುತ್ತೇನೆ" ಎಂದುಸಿರಲು, ರಾಮನು ಲಕ್ಷ್ಮಣನ ಕೈ ಹಿಡಿದು "ಇಂಥದ್ದೊಂದನ್ನು ಮಾಡಬೇಡ, ಮಾಡುವುದಿಲ್ಲವೆಂದು ನನ್ನೆದುರು ಪ್ರತಿಜ್ಞೆ ಮಾಡು" ಎಂದು ಕೃತಾಂತವಕ್ತ್ರನನ್ನು ಕರೆದು, "ಅಯೋಧ್ಯೆಯ ಸಮ್ಮೇದ ಪರ್ವತದ ಸಮೀಪದಲ್ಲಿರುವ ಜಿನಾಲಯಗಳನ್ನು ನೋಡಿ, ಕೈಮುಗಿದು ನಿಮ್ಮ ಬಯಕೆಗಳನ್ನು ತೀರಿಸಿ ಬರುವ, ಬನ್ನಿ" ಎಂದು ಸೀತೆಗೆ ತಿಳಿಸಿ ಅವಳನ್ನು ಅಲ್ಲಿಗೊಯ್ದು "ಭೀಮಾವಿಜಯ ನಿರ್ಜಂತುಕ ಪ್ರದೇಶದಲ್ಲಿ ಬಿಟ್ಟು ಬಾ" ಎನ್ನಲು - 'ಪರಸೇವೆ- ಪರಮ ಕಷ್ಟ' ವೆಂಬಂತೆ ರಾಮನ ಮಾತನ್ನು ಕೇಳಿ ಬೆಚ್ಚಿ ಬಿದ್ದು ಆ ಮಾತನ್ನು ಮೀರಲಾರದೆ, ಸೀತೆಯ ಬಳಿ ಬಂದು, ರಾಮನು ಹೇಳಿಕೊಟ್ಟಂತೆ ತಿಳಿಸಿ, ರಥವನೇರಿಕೊಂಡು ಭಯಂಕರವಾದ ಭೀಮಾಟವಿಯ ಆನೆಸಿಂಹಗಳ ಆಡುಂಬೊಲದಂತಹ ಕಾಡಿಗೆ ಬಂದನು.

ಕಾಡನ್ನು ಹೊಕ್ಕು ಎಲ್ಲಿ ನೋಡಿದರೂ ಸದಾ ವಾರಿಧಾರೆಯನ್ನು ಸುರಿಸುವ ಝರಿ ಗಳಿಂದಲೂ, ಶೋಭಿಸುವ ಅಡವಿಯ ಮಧ್ಯದಲ್ಲಿ ಸೀತೆಯನ್ನು ರಥದಿಂದ ಇಳಿಸಿ ಗದ್ಗದ ಕಂಠನಾಗಿ ಕಣ್ಣೀರು ಸುರಿಸುತ್ತಿರುವ ಕೃತಾಂತ ವಕ್ತ್ರನನ್ನು ಕಂಡು ಸೀತೆ "ಇದೇಕೆ ಹೀಗೆ ಶೋಕಿಸುತ್ತೀ" ಎಂದು ಕೇಳಲು, ಆತನು, "ಅಮ್ಮಾ ನಿಮ್ಮ ಮೇಲೆ ಲೋಕವೆಲ್ಲ ಅಪವಾದವನ್ನು ಹೊರಿಸಿತು. ಹಾಗಾಗಿ ಶ್ರೀರಾಮ ಭೀಮಾಟವಿಯ ಗೊಂಡಾರಣ್ಯದಲ್ಲಿ ನಿಮ್ಮನ್ನು ಬಿಟ್ಟು ಬರಲು ಆದೇಶಿಸಿದರು. ಅದರಿಂದ ಇಲ್ಲಿಗೆ ನಿಮ್ಮನ್ನು ಕರಕೊಂಡು ಬಂದೆ" ಎಂದು ಹೇಳಿದಾಗ, ಸೀತೆ ಅದನ್ನು ಕೇಳಿ ಮೂರ್ಛಿತಳಾದಳು. ಕ್ಷಣದಲ್ಲಿ ಮೂರ್ಛೆ ತಿಳಿದೆದ್ದು :

"ರಾಮ ದೇವರು ಸಕಲ ವಸುಧಾತಳವನ್ನು ನ್ಯಾಯದಿಂದ ಪರಿಪಾಲಿಸಲಿ, ದೇವ, ಗುರುಪೂಜೆಯನ್ನು ಮರೆಯದಿರಲಿ, ಜನಾಪವಾದ ಭಯದಿಂದ ನನ್ನನ್ನು ಬಿಟ್ಟಂತೆ ಸುಳ್ಳು ಅಪವಾದಗಳನ್ನು ಕೇಳಿ ಅರ್ಹತ್ ಪರಮೇಶ್ವರ ಶ್ರೀಧರ್ಮವನ್ನು ಬಿಡದೆ ಇರಲಿ - ಇದೇ ನನ್ನ ಮೇಲೆ ಶ್ರೀರಾಮನು ತೋರುವ ಅನುಗ್ರಹ - ಎಂಬುದನ್ನು ಅವರಿಗೆ ತಿಳಿಸು" ಎಂದು ಹೇಳುತ್ತ ನೆಲಕ್ಕೆ ಬಾಗಿ ಕೂತವಳನ್ನು ಕೃತಾಂತ ವಕ್ತ್ರನು ನೋಡಿ:

"ಅಮ್ಮಾ, ಕೈಹಿಡಿದ ಹೆಂಡತಿಯನ್ನು ಅರಣ್ಯದಲ್ಲಿ ಬಿಟ್ಟು ಬಾ ಎಂದು ಗಂಡನೇ ಹೇಳಲು, ನನ್ನಂಥ ಮೂರ್ಖನು ಆ ಮಾತನ್ನು ಕೇಳಿ ಈ ಹೇಯ ಕೃತ್ಯವನ್ನು ಮಾಡಿದೆನು. ಸೇವಕ ವೃತ್ತಿಯು ಎಂಥ ಕೆಟ್ಟ ಕೆಲಸವನ್ನೂ ಮಾಡಿಸುತ್ತದೆ." ಎಂದು ತನ್ನನ್ನು ತಾನೆ ನಿಂದಿಸಿಕೊಂಡು, "ಅಮ್ಮಾ ನನ್ನನ್ನು ಕ್ಷಮಿಸಿರಿ" ಎಷ್ಟು ಸಾಷ್ಟಾಂಗ ನಮಸ್ಕರಿಸಿ ಹಿಂದಿರುಗಿದನು.

ಗುಣವತಿಯಾದ ಸೀತೆಯು ರಾಮನನ್ನು, ಲಕ್ಷ್ಮಣನನ್ನು ನೆನೆನೆನೆದುಕೊಂಡಾಗ ದುಃಖವೆಂಬ ಬೆಂಕಿಯಲ್ಲಿ ಬಿದ್ದು, ಅದರ ಜ್ವಾಲೆಗಳಿಂದ ಕಂಬನಿ ಸುರಿಸುತ್ತ ತನಗೆ ಯಾರು ದಿಕ್ಕು ಎಂದು ಸೀತೆ ದುಃಖಿಸುತ್ತಿದ್ದಳು.

ಆಪ್ತೇಷ್ಟರ ವಿಯೋಗದಿಂದ ಕಂಗಾಣದೆ, ಅತ್ತಿತ್ತ ದೃಷ್ಟಿ ಹರಿಸುತ್ತಿದ್ದಿರಲು "ತಾನು ಜಿನಮುನಿಗಳನ್ನು, ಪ್ರಾಣಿಗಳನ್ನು ಪೂರ್ವಜನ್ಮದಲ್ಲಿ ನೋಯಿಸಿರಬೇಕು, ಅದಲ್ಲದಿದ್ದರೆ ತನಗೆ ಈ ಅವಸ್ಥೆ ನಿಷ್ಕಾರಣವಾಗಿ ಬರುವುದೆ" ಎಂದು ತನ್ನಲ್ಲೆ ತಾನು ಯೋಚಿಸಿಕೊಂಡು ತನ್ನನ್ನು ತಾನೇ ನಿಂದಿಸಿಕೊಂಡು, ಮತ್ತೆ ತಾನಿರುವ ಈ ಗಹನವಾದ ಕಾಡು ಅನೇಕ ಋಷಿಮುನಿಗಳು ತಪಸ್ಸನ್ನು ಮಾಡಿ, ಜನ್ಮಸಾರ್ಥಕ್ಯವನ್ನು ಪಡೆಯುವ ಸುಸ್ಥಳವಾಗಿದೆ. ನನ್ನ ಪುಣ್ಯಫಲದಿಂದ ಇಂತಹ ವನವು ತನಗೆ ದೊರಕಿತು. ಮುಂದೆ ಇಲ್ಲಿಯೇ ಸಂನ್ಯಾಸದಿಂದ ಪರಲೋಕವನ್ನು ಸಾಧಿಸುವೆನೆಂದು ಯೋಜಿಸುತ್ತಿರಲು –

ಸೀತೆಯ ಪುಣ್ಯವೆ ಮನುಷ್ಯ ರೂಪಾಗಿ ರಾಜಕುಮಾರನೊಬ್ಬನು ತನ್ನ ಸೈನಿಕರೊಡನೆ ಗಜಬೇಟೆಗೆ ಬಂದನು –

ವನದೇವತೆಯೋ, ಲಕ್ಷ್ಮಿಯೋ ಆಕಾಶದಿಂದ ಇಳಿದು ಬಂದ ಮೇನಕೆಯೋ ಎಂಬಂತೆ ಸೀತೆಯನ್ನು ವಜ್ರಜಂಘನು ಕಂಡನು. ಕಂಡು, ಹತ್ತಿರಬಂದು ವಿಸ್ಮಯದಿಂದ "ಅಮ್ಮಾ ನೀವು ಯಾವ ಕಾರಣದಿಂದ ಈ ಭಯಂಕರವಾದ ಕಾಡಿಗೆ ಬಂದಿರಿ" ಎಂದು ಕೇಳಲು, ಅವನನ್ನು ಆಪಾದ ಮಸ್ತಕ ನೋಡಿ, ಅವನು ಸಾಧು ಸಜ್ಜನನೆಂದು ತಿಳಿದು, 'ನಾನು' ಜನಕರಾಜನ ಮಗಳು, ಪ್ರಭಾಮಂಡಲನ ತಂಗಿ, ಶ್ರೀರಾಮನ ಹೆಂಡತಿ. ನನ್ನ ಮೇಲೆ ರಾಜ್ಯದ ಪ್ರಜೆಗಳು – ಕಾಮುಕನಾದ ರಾವಣನು ಕದ್ದೊಯ್ದ ಸೀತೆಯನ್ನು ವಿಚಾರಿಸದೆ ಮತ್ತೆ ರಾಣಿಯಾಗಿ ಸ್ವೀಕರಿಸುವುದು ಅನುಚಿತವೆಂಬ ದೂಷಣೆಯನ್ನು ಮಾಡಿದರೆಂದು ಕೃತಾಂತ ವಕ್ತ್ರನೆಂಬ ಕಾಲಾಳಿನ ಮೂಲಕ "ಈ ಭೀಮಾಟವಿಯ ಘೋರ ಕಾನನದಲ್ಲಿ ಬಿಟ್ಟು ಹೋದರು. ನಾನು ನಿರಪರಾಧಿನಿ" ಎಂದು ಕಣ್ಣೀರುಗರೆಯುತ್ತ ಸೀತೆ ಹೇಳಿದಳು.

ಆಕೆಯ ವರ್ತಮಾನವನ್ನು ತಿಳಿದು, ವಜ್ರಜಂಘನು, ತಾನು ಪುಂಡರೀಕಿಣೀಪುರದ ಚಂದ್ರವಂಶದ ಅರಸನು. ಜಿನಧರ್ಮ ನಡವಳಿಕೆಯಲ್ಲಿ ನೀವು ನನಗೆ ತಂಗಿ. ನನ್ನ ಜತೆಗೆ ಬಂದು ನನ್ನ ಅರಮನೆಯಲ್ಲಿರುವುದು ಲೇಸು ಎಂದು ಪಲ್ಲಕಿಯಲ್ಲಿ ಕುಳ್ಳಿರಿಸಿ, ಕಾನನವನ್ನು ದಾಟಿ, ಅರಮನೆಗೆ ಬಂದು, ಶೀಲವತಿ ಎಂಬ ತನ್ನ ಅಕ್ಕನ ರಾಜಭವನವನ್ನು ಹೊಕ್ಕು – ಅವಳೊಡನೆ "ಅಕ್ಕಾ, ಈಕೆ

ರಾಮದೇವರ ಧರ್ಮಪತ್ನಿ, ಧರ್ಮಪ್ರಕಾರ ನನ್ನ ಒಡ ಹುಟ್ಟಿದವಳು, ಇವಳನ್ನು ನಿನ್ನ ಅಣ್ಣನಂತೆ ಸಾಕುತ್ತೇನೆ' ಎಂದು ಹೇಳಿ ಕರಕೊಂಡು ಬಂದೆ'' ಎಂದುಸಿರಿ ತನ್ನರಮನೆಗೆ ಹೊರಟು ಹೋದನು. ಇತ್ತ ಕೃತಾಂತ ವಕ್ತ್ರನು, ಅಯೋಧ್ಯೆಗೆ ಹೋಗಿ, ರಾಮನೊಡನೆ ಸೀತೆಯ ಕುರಿತು ಎಲ್ಲವನ್ನು ಹೇಳಲು, ಅದನ್ನು ಕೇಳಿ ಲಕ್ಷ್ಮಣನ ಮನಸ್ಸಿಗೆ ಖೇದವಾಯಿತು.

ಸೀತೆಯು ಪುಂಡರೀಕಿಣೀಪುರದಲ್ಲಿ ಅವಳಿ ಮಕ್ಕಳನ್ನು ಹೆತ್ತಳು. ಅವರಿಗೆ ಲವಾಂಕುಶರೆಂದು ಹೆಸರಿಟ್ಟು, ಶಸ್ತ್ರಾಸ್ತ್ರ ವಿದ್ಯೆಗಳೆಲ್ಲವನ್ನು ಕಲಿಸಿದರು. ಯೌವ್ವನ ಪ್ರಾಪ್ತವಾದ ಒಡನೆ ಮದುವೆ ಮಾಡಿಸಿ ಲವಾಂಕುಶರು ದಿಗ್ವಿಜಯಕ್ಕೆ ಹೊರಟು ಜಯಶೀಲರಾಗಿ ಬಂದು ಪುಂಡರೀಕಿಣೀಪುರದಲ್ಲಿ ಸುಖದಿಂದಿದ್ದರು. ಇತ್ತ ನಾರದನು ಸೀತೆ ಇದ್ದೆಡೆಯನ್ನು ತಿಳಿದು ಅಲ್ಲಿಗೆ ಬಂದು, ಲವಾಂಕುಶರನ್ನು ಕಂಡು ''ರಾಮಲಕ್ಷ್ಮಣರಂತೆ ಕೀರ್ತಿವಂತರಾಗಿರಿ'' ಎಂದು ಹರಸಲು, ಲವಾಂಕುಶರು –

''ಅವರ ಕುಲವಾವುದು, ಅವರು ಯಾವ ರಾಜನ ಮಕ್ಕಳು? ಅವರ ಪೌರುಷವೇನು'', ಎಂದು ನಾರದರೊಡನೆ ಕೇಳಲು, ಆ ಜೋಗಿಯಾದ ನಾರದನು ಎಲ್ಲ ವಿವರಗಳನ್ನು ತಿಳಿಸಿ ಹೇಳಲು, ಕದನ ಕೇಳೀ ನಿರಂಕುಶನಾದ ಕುಶನು –

"ಯೋಗ್ಯರಾದವರ ಮಾತನ್ನು ಕೇಳದೆ, ಹೆಂಗಸು ಎಂಬ ಅನುಕಂಪವನ್ನೂ ತೋರದೆ, ಗುಣವತಿಯಾದ ಹೆಂಡತಿಯನ್ನು ತೊರೆದು ಪಾಪಕ್ಕೆ ಅಂಜದ ಮೂರ್ಖನನ್ನು ಹೊಗಳುವಿರಲ್ಲ! ಆತ ಗುಣವಿಲ್ಲದವನು – ಎಂದು ತನ್ನೆಲ್ಲ ಸೈನ್ಯವನ್ನು ಕೂಡಿಕೊಂಡು ಅಯೋಧ್ಯೆಗೆ ಬಂದು, ಹೊರವಲಯದಲ್ಲಿ ಬೀಡು ಬಿಟ್ಟಿರಲು, ನಾರದನು ಪ್ರಭಾಮಂಡಲನಲ್ಲಿಗೆ ಹೋಗಿ, ಲವಾಂಕುಶರ ಅವಾಂತರವನ್ನು ಬಿತ್ತರಿಸಿದನು. ಪ್ರಭಾಮಂಡಲನು, ತಂದೆಯೊಡನೆ, ರಾಮಲಕ್ಷ್ಮಣರಿಂದ ಮಕ್ಕಳಿಗೆ ತೊಂದರೆಯಾದೀತೆಂದು, ಪುಂಡರೀಕಿಣೀಪುರಕ್ಕೆ ಬರಲು ಸೀತೆಯು ಅವರನ್ನು ಕಂಡು ಇದಿರು ಬಂದು ನಮಸ್ಕರಿಸಿ ದುಃಖಿಸಿದಳು. ಆತ ತನ್ನ ವಿಮಾನದಲ್ಲಿ ಎಲ್ಲರನ್ನು ಕೂಡಿಸಿಕೊಂಡು ಅಯೋಧ್ಯೆಗೆ ಬರಲು – ಪರರಾಯರು ತನ್ನೊಡನೆ ಯುದ್ಧಕ್ಕೆ ಬಂದರೆಂದು ಬಗೆದು ಕೋಪಾವೇಶದಿಂದ ತಮ್ಮನ ಜತೆಗೂಡಿ ಯುದ್ಧಕ್ಕೆ ಸಿದ್ಧನಾದನು. ಕಾಳಗವು ತೊಡಗಿತು!

ಲವನ ಸೈನ್ಯದ ಬಾಣ ಹತಿಯಿಂದ ರಾಮನ ಸೈನ್ಯವು ಹಿಂದೋಡಿತು. ರಾಮನು ಕೋಪಿಸಿ ಲವನೊಡನೆ ಯುದ್ಧಕ್ಕೆ ನಿಂತನು. ರಾಮನ ಧನುಸ್ಸು, ರಥ, ಧ್ವಜಗಳನ್ನು ಲವನು ಮುರಿದು ರಾಮನನ್ನು ವಿರಥನನ್ನಾಗಿ ಮಾಡಿದನು. ರಾಮನನ್ನು ಹೀಗೆ ಇದಿರಿಸಿ ಯಮನಾದರೂ ಉಳಿದಾನೆ?

ಹೀಗೆ ಅದ್ಭುತವಾದ ಯುದ್ಧದಿಂದ, ಬಾಣವಿದ್ಯೆಯಲ್ಲಿ ರಾಮನಿಗಿಂತ ಸಾವಿರಪಾಲು ಮಿಗಿಲಾದ ಕೌಶಲ್ಯವನ್ನು ತೋರಿ, ಲವನನ್ನು ಗೆಲ್ಲಲು ರಾಮನಿಗೆ ಸಾಧ್ಯವಾಗದೆ ಆತ ಆಶ್ಚರ್ಯಚಕಿತ್ತನಾದನು.

ಇನ್ನೊಂದು ಕಡೆ, ಲಕ್ಷ್ಮಣನು ಪರಶುವನ್ನು ಹಿಡಿದು ಮುನ್ನುಗ್ಗಲು ಅನಂತವೀರ್ಯನಾದ ಲವನು ಅಂಕುಶವನ್ನುಹಿಡಿದು ಕಾದಿದನು. ಆಗ ಅವನಿಗೆ ಕಣ್ಣುಕತ್ತಲೆ ಬರಲು ಮೂರ್ಛಿತನಾಗಿ

ಪತಾಕೆಯದಂಡವನ್ನು ಹಿಡಿದುಕೊಂಡು ಸಾವರಿಸಿದನು. ಮತ್ತೆ ಎಚ್ಚತ್ತು ರಕ್ತಲೋಚನನಾಗಿ ಈತನನ್ನು ಸಾಮಾನ್ಯ ಬಾಣಗಳಿಂದ ಸೋಲಿಸಲು ಸಾಧ್ಯವಾಗದೆಂದು ಯೋಚಿಸಿ ಕೂಡಲೆ ಚಕ್ರಧಾರಿಯಾಗಿ ಚಕ್ರವನ್ನು ಪ್ರಯೋಗಿಸಿದನು.

ಚಕ್ರವು ಅವನ ಹತ್ತಿರ ಬಂದು ತಾಗಲೊಲ್ಲದೆ ಹಿಂದೆ ಮುಂದೆ ಹೋಗುತ್ತಿತ್ತು. ಸಾವು ಬರಲಾರದವನನ್ನು ಆಯುಧಗಳು ಚುಚ್ಚುವವೇ? ಹೀಗೆ ಚಕ್ರವು ಏನೂ ಮಾಡಲಾಗದೆ ನಿಂತಿರಲು -ಲಕ್ಷ್ಮಣನು ತನ್ನ ಮನಸ್ಸಿನಲ್ಲೆ-

''ನಮ್ಮ ಪುಣ್ಯಪ್ರಭಾವವು ನಮ್ಮನ್ನು ಬಿಟ್ಟು ತೊಲಗಿರುವುದು. ಈಗ ಈ ಮಕ್ಕಳೆ ಬಲದೇವ - ವಾಸುದೇವರಾಗಿರುವರು. ಇವರನ್ನು ಗೆಲ್ಲಲು ನಮಗಾಗದು. ಇವರು ಅಜೇಯರು'' ಎಂದು ಯುದ್ಧ ಮಾಡದೆ, ಸುಮ್ಮನೆ ನಿಂತಿರಲು, ಅತ್ತಲಿಂದ ನಾರದನು ಬಂದು ನಗುತ್ತ ''ಅಯ್ಯಾ ಇವರು ಸೀತಾದೇವಿಯ ಮಕ್ಕಳು, ಲವಾಂಕುಶರು. ತಮ್ಮ ತಾಯಿಯನ್ನು ವಿಚಾರಿಸದೆ ನಗರದಿಂದ ಹೊರಗಟ್ಟಿದಿರಿ ಎಂದು ತಿಳಿದು ಸಿಟ್ಟಿನಿಂದ ಸೆಣಸಲು ಬಂದರು'' ಎನ್ನಲು, ಲಕ್ಷ್ಮಣನು ಸಂತುಷ್ಟನಾಗಿ ತನ್ನ ಆಯುಧಬಾಣಗಳನ್ನು, ಕವಚಗಳನ್ನೂ ಕಳೆದು ಶ್ರೀರಾಮನಿರುವಲ್ಲಿಗೆ ಬಂದು ಕೈಮುಗಿದು ಹೀಗೆಂದನು -

''ಅಣ್ಣಾ ಇವರಿಬ್ಬರೂ ರೂಪಾತಿಶಯದಿಂದ, ಅಸಮಾನ ಶೌರ್ಯದಿಂದ ನಿಮ್ಮನ್ನು ಹೋಲುತ್ತಾರೆ. ಇವರು ಸೀತಾದೇವಿಯ ಮಕ್ಕಳು. ನಿಮ್ಮನ್ನು ಈ ರೀತಿಯಾಗಿ ಕಾಣಲು ಬಂದರು'' ಎಂದು ವಿವರವನ್ನು ತಿಳಿಸಲು, ರಾಮನು ವಿಸ್ಮಯ ಉತ್ಸುಕತೆಯಿಂದ ಮಕ್ಕಳನ್ನು ನೋಡಿ - ಆಗಲೆ ಅವರನ್ನು ಪಡೆದನೋ ಎಂಬಂತೆ ರಥದಿಂದ ಇಳಿದು ಬರುತ್ತಿರಲು ಪರಾಕ್ರಮಿಗಳಾದ ಅವರು ರಾಮಲಕ್ಷ್ಮಣರಿಬ್ಬರಿಗೂ ವಂದಿಸಿದರು. ರಾಮಲಕ್ಷ್ಮಣರು ಅವರಿಬ್ಬರನ್ನು ಅಪ್ಪಿಕೊಂಡು ಅಪ್ಪುಗೆಯ ಸುಖವನ್ನು ಅನುಭವಿಸುತ್ತ, ಅವರ ತೇಜಸ್ಸನ್ನು ಕಂಡು ಸಂತುಷ್ಟರಾದುದನ್ನು ಮೇಲೆ ವಿಮಾನಾರೂಢಳಾಗಿರುವ ಸೀತೆಯು ಕಂಡಳು. ಕಂಡು ಸಂತೋಷಗೊಂಡು ಪುಂಡರೀಕಿಣೀಪುರಕ್ಕೆ ಮರಳಿದಳು.

ಇತ್ತ, ರಾಮಲಕ್ಷ್ಮಣರು ಲವಾಂಕುಶರೊಡನೆ ಪುಷ್ಪಕವಿಮಾನವನ್ನೇರಿ ಸುಗ್ರೀವ, ವಿರಾಧಿತ, ಹನುಮಂತ, ಅಂಗದರೊಂದಿಗೆ ಸಾಕೇತಪುರವನ್ನು ಹೊಕ್ಕು ಸುಖದಿಂದಿದ್ದರು. ಒಂದು ದಿನ ಸುಗ್ರೀವ ಸುಷೇಣ, ಜಾಂಬವಂತ ಪ್ರಮುಖರು ಅಧಿರಾಜನಲ್ಲಿಗೆ ಅವಸರದಿಂದ ಬಂದು -

ಯಾರೋ ಹೇಳಿದರೆಂದು `ಜಾನಕೀದೇವಿಯ ಪಾತಿವ್ರತ್ಯವನ್ನು ಶಂಕಿಸುವುದು ತರವಲ್ಲ, ಇನ್ನಾದರೂ ಆಕೆಯನ್ನು ಬರಮಾಡಿಕೊಂಡು ನಮಗೆ ಸಮಾಧಾನವನ್ನುಂಟು ಮಾಡಿದರೆ ಒಳ್ಳೇದಲ್ಲವೆ' ಎಂದು ರಾಮನೊಡನೆ ಬಿನ್ನವಿಸಿದರು.

ಅವರ ಬಿನ್ನಹವನ್ನು ಕೇಳಿ ರಾಮನು -

ಲೋಕಾಪವಾದ ಭೀತಿಯಿಂದ ಜಾನಕಿಯನ್ನು ಹೀಗೆ ಕಳುಹಿಸಿದೆನಲ್ಲದೆ ಅವಗುಣದ ಆರೋಪಕ್ಕಲ್ಲ, ಆಕೆ ಸಚ್ಚರಿತ್ರೆ ಎಂಬುದನ್ನು ನನ್ನಂತೆ ಎಲ್ಲರೂ ಬಲ್ಲರು. ಎಲ್ಲರೂ ತಿಳಿವಂತೆ

ಅದನ್ನು ಸಾರ್ವತ್ರಿಕವಾಗಿ ತಿಳಿಸುವುದು ಒಳಿತಲ್ಲವೇ? ಎಂದನು. ಸೀತೆಯು ಪುಂಡರೀಕಿಣೀಪುರಕ್ಕೆ ಬಂದು ಒಂದು ಶುಭದಿನದಲ್ಲಿ ಶುದ್ಧೆಯಾಗಿ ಪುಷ್ಪಕವನ್ನೇರಿ ಅಯೋಧ್ಯೆಗೆ ತೆರಳಿ ರಾಮನನ್ನು ಕಂಡು -

"ನಿಮ್ಮ ಮನಸ್ಸಿನ ಅವಿಚಾರವನ್ನು ಕಳೆದುಕೊಂಡು, ನನಗಾದ ನೋವನ್ನು ಉಪಶಮಿಸಿದಿರಿ" ಎಂದು ಹೇಳಲು, ರಾಮನು "ಜನಾಪವಾದಕ್ಕಾಗಿ ಹೀಗೆ ಮಾಡಿದೆನಲ್ಲದೆ, ಭುವನಖ್ಯಾತವಾದ ನಿನ್ನ ಚರಿತ್ರೆಯಲ್ಲಿ ಕುಂದು ಕೊರತೆಗಳಿಲ್ಲ ಎಂಬುದು ಯಾರಿಗೆ ತಿಳಿಯದು? ಲೋಕದ ಜನರನ್ನು ಸಮಾಧಾನ ಪಡಿಸಲಿಕ್ಕೆ ಹೀಗೆ ಮಾಡಬೇಕಾಯಿತು" ಎಂದು ಹೇಳುತ್ತ, ಆಳವಾದ ಹೊಂಡವೊಂದನ್ನು ತೋಡಿಸಿ ಚಂದನದ ಅಗರನ್ನು ಅದರಲ್ಲಿ ತುಂಬಿಸಿ, ಸುಗಂಧ ದ್ರವ್ಯವನ್ನು ಸುರಿದರು. ಅದಕ್ಕೆ ಅಗ್ನಿಸ್ಪರ್ಶ ಮಾಡಿಸಿದರು. ಸೀತೆ ಅಗ್ನಿಕುಂಡದ ಏರಿಯನ್ನು ಮೆಟ್ಟಿ, ಅಲ್ಲಿ ನೆರೆದ ಖೇಚರ, ಅಮರ, ಮನುಷ್ಯರೆಲ್ಲರೂ ಕೇಳುವಂತೆ -

"ಈ ವಸುಂಧರೆಯ ಅಧಿರಾಜನಾದ ಶ್ರೀರಾಮನನ್ನಲ್ಲದೆ - ರಾವಣನೇ ಆದಿಯಾದ ಯಾರನ್ನಾದರೂ ಆಶಿಸಿದ್ದರೆ ಈ ಸುಡುವ ಬೆಂಕಿ ನನ್ನನ್ನು ಭಸ್ಮೀಕರಿಸಲಿ" ಎಂದು ಪಂಚಪರಮೇಷ್ಠಿಗಳಿಗೆ ನಮಸ್ಕರಿಸಿ, ಧಗಧಗಿಸುತ್ತಿದ್ದ ಬೆಂಕಿಯ ಜ್ವಾಲೆಯಲ್ಲಿ ತನ್ನ ದೇಹವನ್ನು ಈಡಾಡಿದಳು.

ಮರುದ್ಗಣಗಳು, ಪರಿಜನರು ಬೆಚ್ಚಿದರು. ದುಃಖದಿಂದ ಅತ್ತ ಜನರು ಉರಿದು ಹೋದಂತಾದರು. ಲವಾಂಕುಶರು ವಿಹ್ವಲರಾದರು. ರಾಮನಿಗೆ ದುಃಖವಾಯಿತು. ಲಕ್ಷ್ಮಣನಿಗೆ ಪರಿತಾಪವಾಯ್ತು.

ಜಲದೇವತೆ ತಂಪಾದ ತಿಳಿನೀರಿಗಿಳಿದಂತೆ, ಶೀಲವತಿಯಾದ ಸೀತೆ ಮನಸ್ಸಿನಲ್ಲಿ ಉಮ್ಮಳವಿಲ್ಲದೆ, ಜಿನಪತಿಯ ಸ್ಮರಣೆ ಮಾಡುತ್ತ ದಳ್ಳುರಿಯ ಮಧ್ಯದಲ್ಲಿ ಮುಳುಗಿದ್ದಳು!

ಆಗ, ದೇವೇಂದ್ರನ ಆಜ್ಞೆಯಂತೆ ರಚಿಸಲ್ಪಟ್ಟ ಸಹಸ್ರದಳ ತಾವರೆಯ ಕರ್ಣಿಕೆಯ ಮೇಲಿನ ಸಿಂಹಾಸನದಲ್ಲಿ ಕುಳಿತ ಸೀತೆಯ ಮೇಲೆ ಲೋಕವೆಲ್ಲ ಅಚ್ಚರಿಪಡುವಂತೆ ಹೂವಿನ ಮಳೆ ಸುರಿಯಿತು. ಕಂಡು ಜನರೆಲ್ಲ ಏಕಕಂಠದಿಂದ ಸೀತೆಯನ್ನು ಹೊಗಳಿದರು. ಆಕೆಯ ಪಕ್ಕದಲ್ಲಿ ಲವಾಂಕುಶರು ಕುಳಿತಿದ್ದರು. ಶ್ರೀರಾಮನು ರೋಮಾಂಚನಗೊಂಡನು. ಲಕ್ಷ್ಮಣನೂ ಬಂಧುವರ್ಗವೂ ಪ್ರೇಮದಿಂದ ನೋಡಿದರು. ಪರಿಜನರು ಹರ್ಷಿತರಾದರು. ದುಂದುಭಿ ಮೊಳಗಿತು. ಆಗ ರಾಮನು ಸೀತೆಯ ಹತ್ತಿರ ಬಂದು "ಸೀತೆ ನನ್ನನ್ನು ಕ್ಷಮಿಸು. ಮೊದಲಿನಂತೆ ನನ್ನ ವಲ್ಲಭೆಯಾಗಿ, ಚಂದಿರವದನೆ ಸಾಮ್ರಾಜ್ಞಿಯಾಗಿ ಸುಖಸಂಪದವನ್ನು ಪಡೆಯಬೇಕು" ಎಂದನು.

"ನಾನು ಮೊದಲು ಮಾಡಿದ ಕರ್ಮವನ್ನು ಅನುಭವಿಸುವುದಲ್ಲದೆ ಕೋಪಿಸಲಾರೆ. ಕೇಡಾಗುವ ಸಂಸಾರ ಸುಖಕ್ಕೆ ಮುಳಿವೆನಲ್ಲದೆ, ಕೇಡಿಲ್ಲದ ಮೋಕ್ಷ ಸುಖಕ್ಕೆ ಕಾರಣವಾಗುವ ತಪಸ್ಸನ್ನು ಕೈಗೊಳ್ಳುವೆನೆಂದು", ತನ್ನ ಸಾವಿರ ಸಾವಿರ ಕೂದಲುಗಳನ್ನು ಹರಿದು ಮಹೇಂದ್ರೋದ್ಯಾನದಲ್ಲಿ ಸಕಲ ಭೂಷಣಕೇವಲಿ ಭಟ್ಟಾರಕರ ಸಭೆಯಲ್ಲಿ ದೀಕ್ಷೆಗೊಂಡಳು.

ರಾಮಲಕ್ಷ್ಮಣರು ಅನೇಕ ವರ್ಷ ರಾಜ್ಯವಾಳುತ್ತ ರಾಜ್ಯಸುಖವನ್ನು ಅನುಭವಿಸಿ, ನಿರವಧಿ ಸಂಪತ್ತಿಗೆ ಒಡೆಯರಾಗಿ ನಲಿಯುತ್ತಿದ್ದರು. ಒಂದು ದಿನ ದೇವತೆಗಳ ಮಧ್ಯವರ್ತಿ ಸೌಧರ್ಮೇಂದ್ರನು, ಮನುಷ್ಯನಿಗೆ ಮನುಷ್ಯ ಜನ್ಮವೇ ಪಾವನವು, ಮಿಕ್ಕ ಗತಿಗಳು ಮೋಕ್ಷವನ್ನು ಕೊಡಲಾರವು. ಹೀಗಿದ್ದರೂ ರಾಮನು ಅದೇಕೆ ದೀಕ್ಷೆಗೊಳ್ಳಲಿಲ್ಲ ಎಂದು ಯೋಚಿಸುತ್ತಿರಲು, ಲಕ್ಷ್ಮಣನಲ್ಲಿ ರಾಮನಿಗಿರುವ ಸೋದರಭಾವವೇ ಅದಕ್ಕೆ ಕಾರಣವೆಂದು ತಿಳಿದು - ಪೂರ್ವಜನ್ಮದ ಸ್ನೇಹವು ತೊರೆಯಲಾರದ ಸ್ನೇಹ. ಲಕ್ಷ್ಮಣನ ವಿಯೋಗ ರಾಮನಿಗಾದರೆ ಆತ ಸಂತಾಪವನ್ನು ವಿಷಾದವನ್ನೂ ಹೊಂದುತ್ತಾನೆ ಎಂದು ಯೋಚಿಸಿ ಆಯೋಧ್ಯೆಗೆ ಬಂದು -

''ದಶರಥ ಸುತನು ಪರಲೋಕವನ್ನು ಸೇರಿದನು; ರಾಜಾಲಯವು ಶೋಕವೆಂಬ ಸಮುದ್ರದಲ್ಲಿ ಮುಳುಗಿತು'' - ಎಂದು ಅಂತಃಪುರದ ಹೆಂಗಸರು ಕೂಡಾ ಕೇಳುವಂತೆ ಕೈ ತಟ್ಟಿ ಹೇಳುತ್ತ, ಅದನ್ನು ಕೇಳಿ ಪಟ್ಟಣದ ಜನರೆಲ್ಲಾ ರೋದಿಸುವಂತೆ ವೈಕುರ್ವಣ ವಿದ್ಯೆಯ ಮೂಲಕ ಇಬ್ಬರು ದೇವತೆಗಳು ನಿರ್ಮಿಸಿದರು.

ಬಲದೇವನ ಆಕೃತಿಯನ್ನು ತಮ್ಮ ವಿದ್ಯಾಬಲದಿಂದ ನಿರ್ಮಿಸಿ ಅದರಲ್ಲಿ ಪ್ರಾಣವಿಲ್ಲ ದಂತೆ ಮಾಡಿದ್ದನ್ನು ಲಕ್ಷ್ಮಣನು ಕಂಡು ನಿಸ್ಸೀಮ ಶೋಕದಿಂದ ಧರೆಗೆ ಬಿದ್ದು ಗತಾಸುವಾದನು. ಆ ಕ್ಷಣದಲ್ಲಿ ರಾಮನು ಬಿದ್ದವನು ಎದ್ದು, ಲಕ್ಷ್ಮಣನ ಅಂತಃಪುರದ ಸ್ತ್ರೀಯರು ಅಳುವುದನ್ನು ಕಂಡು ಪ್ರಲಾಪಿಸುತ್ತ

''ಹಾ ತಮ್ಮಾ, ನಿನ್ನನ್ನು ಆ ಪಾತಕಿಯಾದ ವಿಧಿಯು ಕೊಂದು ಹೋದನೇಕೆ ಇನ್ನು ನಾನೇನು ಮಾಡಲಿ?'' ಏನ್ನುತ್ತ ಹಿಂದಿನ ಜನ್ಮದ ಪ್ರೀತಿಯಿಂದ ರಾಮನು ಶೋಕಿಸಿದನು.

ಈ ರೀತಿಯ ಶೋಕವನ್ನು ರಾಮನಲ್ಲಿ ಕಂಡ ವಿಭೀಷಣ ಸುಗ್ರೀವರು ''ಇದು ಸಂಸಾರದ ಅನಿತ್ಯತೆಯ ಲಕ್ಷಣ'' ಎಂದು ಲಕ್ಷ್ಮಣನ ಶವವನ್ನು ದಹಿಸಲು ಮುಂದಾದರು. ಆದರೆ - ಅವರನ್ನು ಹಲವು ರೀತಿಯಲ್ಲಿ ಬೈದು, ಭಂಗಿಸಿ, ಹೊಡೆದು ಲಕ್ಷ್ಮಣನ ಹೆಣವನ್ನು ಹೊತ್ತುಕೊಂಡು - ಇವರ ಸಮೀಪದಲ್ಲೇ ಇರಬಾರದೆಂದು ರಾಮನು ಹೊರಟು ಹೋದನು. ಈ ರೀತಿಯ ಮರುಳಾಟದಿಂದ ವಾಸುದೇವನು ಹೆಣಕ್ಕೆ ವಸ್ತ್ರಾಭರಣ, ಚಂದನಾಲೇಪ್ಯ ಸಾಮಗ್ರಿಯನ್ನೊದಗಿಸಿ ಅದನ್ನು ಹೊತ್ತುಕೊಂಡು ತಿರುಗಾಡುತ್ತಿದ್ದನು. ಇವರೇ ಹೀಗೆ ಮಾಡುತ್ತಿರುವಾಗ ಅಜ್ಞಾನಿಗಳಾದ ಸಾಮಾನ್ಯರು ಮೋಹ, ಮೂರ್ಛೆ, ಅತಿರೇಕಗಳನ್ನು ಹೊಂದುವುದು ಆಶ್ಚರ್ಯವಲ್ಲ!

ಸುಂದರಾಂಗನಾದ ಶ್ರೀರಾಮನು ಹೀಗೆ ಹೆಣವನ್ನು ಹೆಗಲಲ್ಲಿ ಹೊತ್ತು ಆರು ತಿಂಗಳ ಕಾಲ ಸುತ್ತಾಡುತ್ತಿದ್ದನು. ಆಗ ದೇವತೆಗಳು, ಧರ್ಮದ ಮೇಲಣ ಪ್ರೀತಿಯಿಂದ, ರಾಮನ ವಿಕಲ್ಪಗಳನ್ನು ಕಳೆಯಲು, ಅವನ ಕಣ್ಣಿಗೆ ಬೀಳದಡೆಯಲ್ಲಿ ನಿಂತು ಒಂದು ಪಾತ್ರೆಯಲ್ಲಿ ನೀರು ತುಂಬಿಸಿ, ಆ ನೀರನ್ನು ಮರಳಿಗೆ ಹೊಯ್ಯುತ್ತಲೂ, ಶಿಲೆಯ ಮೇಲೆ ಧಾನ್ಯವನ್ನು ಬಿತ್ತುತ್ತಲೂ, ಒಣಗಿದ ಮರ ಒಂದಕ್ಕೆ ನೀರು ಹೊಯ್ಯುತ್ತಲೂ ಇರಲು, ಈ ಫಲವಿಲ್ಲದ ಉದ್ಯೋಗವನ್ನು ಕಂಡು ಹೆಣವನ್ನು ಹೊತ್ತು ಸುತ್ತಾಡುವ ರಾಮನು ''ಇಂಥ ವ್ಯರ್ಥವಾದ ಕೆಲಸವನ್ನು ಯಾಕೆ ಮಾಡುತ್ತೀ'' ಎಂದು ಕೇಳಲು,

ದೇವತೆಯು "ಅಯ್ಯಾ ಬಲದೇವನಿಗೆ ಅಣ್ಣನಾದ ನೀನೇ ಆಸೆಯಿಂದ ಹೆಣವನ್ನು ಹೊತ್ತು ತಿರುಗಾಡುತ್ತೀಯಲ್ಲ - ಅದಕ್ಕೆ ಮತ್ತೆ ಜೀವ ಬರುವುದುಂಟೆ?" ಎಂದು ಕೇಳಿತು.

ರಾಮನು ಆ ಮಾತಿಗೆ ಕೋಪಿಸಿ - "ಇಂತಹ ಅಮಂಗಳಕರವಾದ ಮಾತನ್ನು ಯಾಕೆ ಹೇಳಿದಿರಿ?" ಎಂದು ಕೇಳುತ್ತಿರಲು, ಮತ್ತೊಬ್ಬನು ಇನ್ನೊಂದು ಹೆಣವನ್ನು ಹೊತ್ತು ಅವರ ಮುಂದೆ ಬರಲು, ರಾಮನು ಅದನ್ನು ಕಂಡು - "ಈ ಹೆಣವನ್ನೇಕೆ ಹೊತ್ತುಕೊಂಡಿದ್ದಿ? ಅದಕ್ಕಿನ್ನು ಜೀವ ಬರುವುದುಂಟೆ?" ಎಂದು ಪ್ರಶ್ನಿಸಿದನು. ಮತ್ತೊಬ್ಬನು ಕೂಡಲೇ "ನೀನೀ ಹೆಣವನ್ನು ಹೊತ್ತು ಸುತ್ತಾಡುವಿಯಲ್ಲ, ಅದೇಕೆ?" ಎಂದು ಪ್ರಶ್ನಿಸಿದನು.

ಹೀಗೆ ಹಲವು ದೃಷ್ಟಾಂತಗಳಿಂದ ರಾಮನ ಚಿತ್ತಭ್ರಾಂತಿಯನ್ನು, ಅಪಖ್ಯಾತಿಯನ್ನು ಹೋಗಲಾಡಿಸಿದನು.

ಮುಗಿಲಿನ ಮರೆಗೆ ಹೋದ ಸೂರ್ಯನಿಗೆ, ಕಲ್ಮಶಗಳನ್ನು ಕಳೆದ ಚಿನ್ನಕ್ಕೆ - ಹೊಗೆ ಕಳೆದ ಅಗ್ನಿಗೆ - ಈಗ ರಾಮನು ಸಮಾನನಾದನು. 'ನನ್ನನ್ನು ನಾನು ತಿಳಿದುಕೊಳ್ಳದೆ ಕಷ್ಟಕ್ಕೆ ಒಳಗಾದೆನಲ್ಲ!' ಎಂದು ತನ್ನನ್ನು ತಾನೆ ಹಳಿದುಕೊಂಡನು, ಮತ್ತು ತನ್ನನ್ನು ತನ್ನಿಂದ ಬೇರ್ಪಡಿಸಲು ಉತ್ಸುಕನಾದನು.

ಹೀಗೆ ವೈರಾಗ್ಯಪರಾಯಣನಾಗಿ, ಸರಯೂ ನದಿಯ ತೀರದಲ್ಲಿ ಲಕ್ಷ್ಮಣನ ಶವವನ್ನು ವಿಧಿವತ್ತಾಗಿ ಸಂಸ್ಕರಿಸಿ, ಸುವ್ರತರೆಂಬ ಚಾರಣರ ಪಕ್ಕದಲ್ಲಿ ಪರಮಾಗಮ ಪ್ರಣೀತಮಾರ್ಗದಿಂದ ಉಗ್ರತಪಸ್ಸಿಗೆ ಕುಳಿತು -

"ಕೇವಲ ಬೋಧೋದಯ" ಎಂಬ ವೈಭವವನ್ನು ಪಡೆದನು. ಸಕಲ ರೂಪವನ್ನು ಧರಿಸುವ ಸಂಪತ್ತನ್ನು ಗಳಿಸಿ ರಾಮನು 'ರಾಘವ ಪ್ರತಿಪತಿ' ಎಂದು ಕರೆಯಿಸಿಕೊಂಡನು. ಅವನನ್ನು ಆವರಿಸಿದ್ದ ಘಾತಿ, ಘನ, ಕಾಂಡಗಳು ನಾಶವಾದುವು. ದಿವ್ಯಭಾಷೆಯೆಂಬ ವಧುವಿಗೆ ಆತನು ಗಂಡನಾಗಲು, ಅವನಲ್ಲಿ ನಿರ್ಮಲವಾದ 'ಕೇವಲಬೋಧ'ವೆಂಬ ಮಣಿ ದರ್ಪಣವು ಉಜ್ವಲಿಸಿತು, ಜೀವ, ಅಜೀವ ಎಂಬ ಎಲ್ಲ ವಸ್ತುಗಳ ಗುಣಸ್ವಭಾವಗಳು ತಿಳಿದುವು.

ಅನಂತರ ಕೊನೆಗಾಲದಲ್ಲಿ ಸಕಲ ಸಂಸಾರ ಭಾರವೂ, ದುಃಖಭಾರವೂ ಇಲ್ಲದವನಾಗಿ ಆತನು ನಿರಂಜನನಾದನು.

ನಿಶ್ಶೇಷನಾಗಿ ಅಘಾತಿಗಳು ಕಳಚಿದುವು. ಅವನ ಎಂಟು ಗುಣಗಳು ಪ್ರಜ್ವಲಿಸಿದುವು. ಮೂರು ಲೋಕದಿಂದಲೂ ಮೇಲೆ ಬೆಳ್ಗೊಡೆಯಂತೆ ಕಾಣುವ ಸಿದ್ಧನಿಲಯಕ್ಕೆ, ಆನಂದದಿಂದ ಹೋಗಿ, ಮುಕ್ತಿ ವಧುವಿನ ಕೈಪಿಡಿದು ಶ್ರೀರಾಮ ಭಟ್ಟಾರಕರು ಶೋಭಿಸಿದರು.

ಈ ಹಿರಿದಾದ ರಾಮಕಥೆಯನ್ನು ಕಿರಿದಾಗುವಂತೆ ದೇಸಿ-ಮಾರ್ಗ ಎಂಬ ಎರಡೂ ರೀತಿಯಲ್ಲಿ, ಪಂಡಿತ ಮಂಡಳಿ ಮೆಚ್ಚುವಂತೆ ಸತ್ಕವಿನಾಗಚಂದ್ರನಂತೆ ಹೇಳಲು ಸರಸ್ವತಿಯ ವರಪ್ರಸಾದವನ್ನು ಯಾವ ಕವಿ ಪಡೆದಿರುವನು?

◆◆◆

ಪಂಪ ರಾಮಾಯಣದ ಬಗ್ಗೆ ಹೆಚ್ಚಿನ ಅಭ್ಯಾಸಕ್ಕೆ ಸಹಾಯಕವಾಗುವ ಪೂರಕ ಗ್ರಂಥಗಳು

* ಅಭಿನವ ಪಂಪನೆಂಬ ನಾಗಚಂದ್ರನ ರಾಮಚಂದ್ರ ಚರಿತ ಪುರಾಣಂ - ಸಂ. ಬಿ. ಎಲ್. ರೈಸ್ (ಪರಿಷ್ಕೃತ), ೧೮೯೨
* ರಾಮಚಂದ್ರಚರಿತ ಪುರಾಣ- ಸವಿಮರ್ಶೆ, ಬಿ. ಕೃಷ್ಣಪ್ಪ, ಕರ್ನಾಟಕ ಗ್ರಂಥಮಾಲೆ, ಮೈಸೂರು, ೧೯೨೩
* ಅಭಿನವಪಂಪ - ಕರ್ನಾಟಕ ಕಾಲೇಜು, ಧಾರವಾಡ, ೧೯೩೪
* ಪಂಪ ರಾಮಾಯಣ ಸಂಗ್ರಹ - ಸಂ. ಡಿ. ಎಲ್. ನರಸಿಂಹಾಚಾರ್, ಮೈಸೂರು ವಿ.ವಿ., ೧೯೫೧
* ನಾಗಚಂದ್ರ : ರಾಮಚಂದ್ರ ಚರಿತ ಪುರಾಣ, ಗದ್ಯಾನುವಾದ ಸಹಿತ, ಸಂ. ಆರ್. ಸಿ. ಹಿರೇಮಠ, ೧೯೭೫
* ರವಿಷೇಣನ ರಾಮಾಯಣ - ಅನು. ಮಿರ್ಜಿ ಅಣ್ಣಾರಾಯ, ಶಾಂತಿ ಸೇವಾ ಸದನ, ಸೇಡಬಾಳ, ೧೯೬೮
* ನಾಗಚಂದ್ರ, ಒಂದು ಅಧ್ಯಯನ - ಪಿಹೆಚ್. ಡಿ. ಮಹಾಪ್ರಬಂಧ, ಡಾ. ವಿಜಯಾ ದಬ್ಬೆ, ಕ. ಸಾ. ಪ., ೧೯೮೩
* ನಾಗಚಂದ್ರನ ಕಾಲ, ಸ್ಥಳ - ಡಾ. ಹಂಪನಾ, ಅನುಗ್ರಹ ಪ್ರಕಾಶನ, ೧೯೯೮
* ಕನ್ನಡ ಸಾಹಿತ್ಯ ಚರಿತ್ರೆ, ಡಾ. ರಂ. ಶ್ರೀ ಮುಗಳಿ
* ಸಾಮಾನ್ಯನಿಗೆ ಕನ್ನಡ ಸಾಹಿತ್ಯ ಚರಿತ್ರೆ - ಬೆಂ. ವಿ. ವಿ. ಸಂಪುಟ ೪, ಸಂ. ಡಾ. ಪಿ.ವಿ. ನಾರಾಯಣ
* ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ - ಬೆಂ. ವಿ. ವಿ.
* ನಾಗಚಂದ್ರ ಒಂದು ಅವಲೋಕನ - ಜಿ. ಎಸ್. ಭಟ್, ಚೇತನ ಬುಕ್ ಹೌಸ್, ಮೈಸೂರು
* ಪಂಪ ರಾಮಾಯಣ, ಗದ್ಯಾನುವಾದ (ಸಮಗ್ರ) - ಡಾ. ಪಿ. ವಿ. ನಾರಾಯಣ, ವಸಂತ ಪ್ರಕಾಶನ, ೨೦೦೫.



1920ರಲ್ಲಿ ಜನಿಸಿದ ರಾಮಚಂದ್ರ ಉಚ್ಚಿಲರು ಐವತ್ತು ವರ್ಷಕ್ಕೂ ಮೇಲ್ಪಟ್ಟು ಕನ್ನಡದ ಕಾರಣದಿಂದಾಗಿ ಮತ್ತು ಇನ್ನೂ ಹಲವಾರು ರೀತಿಯಲ್ಲಿ ಸೇವೆಸಲ್ಲಿಸಿದವರು. 'ನುಡಿ' ಪತ್ರಿಕೆಯಲ್ಲಿ ಮೊದಲಬಾರಿಗೆ ಆಟೋಟದ ಪುಟವನ್ನು ಆರಂಭಿಸಿದರು. ಮುದ್ದಣ ಹಾಗೂ ಯಕ್ಷಗಾನ ಈ ವಿಷಯಗಳಲ್ಲಿಯಂತೂ ಅವರಲ್ಲಿ ಅನೂಹ್ಯ ರೀತಿಯ ಅಭಿಮಾನವಿದ್ದಿತು. ಮುಂಬಯಿಯಲ್ಲಿ ಅವರು ಇದ್ದಷ್ಟು ವರ್ಷಗಳಲ್ಲಿಯೂ ರಾತ್ರಿ ಶಾಲೆಗಳಲ್ಲಿ ಕನ್ನಡವನ್ನು ಬೋಧಿಸಿದರು....

ಮುಂಬಯಿಗೆ ಅವರು ಬಂದದ್ದು ಹೊಟ್ಟೆಪಾಡಿಗಾಗಿ. ವಿದೇಶಿಯ ಬ್ಯಾಂಕ್‌ವೊಂದರಲ್ಲಿ ನೌಕರಿ. ಆಗ ಅವರಿಗೆ ಅಂಟಿಕೊಂಡ ಹಳಗನ್ನಡ ಕಾವ್ಯದ ಆಸ್ಥೆಯು ಅನೇಕ ಪ್ರೌಢಕಾವ್ಯಗಳನ್ನು ಆಳವಾಗಿ ಅಭ್ಯಸಿಸುವಂತೆ ಪ್ರೇರಿಸಿತು.

ಪಂಪ, ಕುಮಾರವ್ಯಾಸ ಹಾಗೂ ಮುದ್ದಣ ಇವರ ಕಾವ್ಯಗಳನ್ನಂತೂ ಅವರು ಕರತಲಾಮಲಕವಾಗಿ ಮಾಡಿಕೊಂಡಿದ್ದರು. ಹಳಗನ್ನಡ ವ್ಯಾಕರಣದಲ್ಲಿಯೂ ಎತ್ತಿದ ಕೈ.

– ಶ್ರೀನಿವಾಸ ಹಾವನೂರ